897

ಮೈಸೂರ ಗೆಜೆಟ್.

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಫಿಬ್ರುವರಿ ತಾ|| 23, ಸನ್ 1889.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೩ನೇ ಭಾಗ.

ಲೆಜಿಸ್ಲೇಟಿವ್ ಇಲಾಖಾ.

ಘನವನ್ನು ಹೊಂದಿದ ಶ್ರೀಮನ್ ಮೈಸೂರು ಮಹಾರಾಜರವರಿಂದ ಮಂಜೂರಾದ ಆಕ್ಟುಗಳು ವ ರೆಗ್ಯುಲೇಷನ್‍ಗಳು.

ಇದರಡಿ ಕಂಡ ರೆಗ್ಯುಲೇಷನ್ 1888ನೇ ಇಸವಿ ಅಕ್ಟೋಬರ 24ನೇ ಮುರ್ಕ್ಕುಮಿನಲ್ಲಿ ಘನವನ್ನು ಹೊಂದಿದ ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದ್ದೂರವರ ಮಂಜೂರಾತಿಯುಂ ಪಡೆದು ಸಕಲ ಜನಗಳ ತಿಳುವಳಿಕೆಯ ಬಗ್ಗೆ ಇದರಿಂದ ಪ್ರಾಯಿಷ್ ಮಾಡಲ್ಪಟ್ಟಿರುತಿದೆ.

ಸನ್ 1888ನೇ ಇಸವಿಯ 3ನೇ ರೆಗ್ಯುಲೇಷನ್.

ಬೆಂಗಳೂರು ಷಹರ್ ಮ್ಯುನಿಸಿಪೆಲ್ ರೆಗ್ಯುಲೇಷನ್‍ಗಳ ನಿಯಮಗಳು ಮೈಸೂರು ಷಹರಿಗೆ ಲಗಾವಾಗಲು ಹುಟ್ಟಿದ ರೆಗ್ಯುಲೇಷನ್.

ಮೈಸೂರು ಷಹರ್ ಮ್ಯುನಿಸಿಪೆಲ್ ಸರಹದ್ದುಗಳ ಬಗ್ಗೆ ಮ್ಯುನಿಸಿಪೆಲ್ ಕಮ್ಮಿಷನರ್‍ಗಳ ಮೊಕರರಾತಿಗೂ, ಮತ್ತು ಅದರ ಮ್ಯುನಿಸಿಪೆಲ್ ಆಡಳಿತಗಳ ನಿರ್ವಹಣೆಗೂ ಸಂಬಂಧಿಸಿದ ರೆಗ್ಯುಲೇಷನ್‍ಗಳ ಕೋಡನ್ನು ನಿಬಂಧಿಸಬೇಕಾದದ್ದೂ, ಸದರೀ ಮೈಸೂರು ಷಹರಿನ ಪೊಲೀಸ್ ಪಾಕೀಜಿ ಮತ್ತು ಅಭಿವೃದ್ಧಿಗಾಗಿ ಉತ್ತಮ ಏರ್ಪಾಡು ಮಾಡಬೇಕಾದದ್ದೂ, ಮತ್ತು ಮೇಲೆಕಂಡ ಷಹರಿನಲ್ಲಿ ಕಂದಾಯಗಳು, ತೀರ್ವೆಗಳು, ಷಹರ್ ಸುಂಕಗಳು ಮತ್ತು ತೆರಿಗೆಗಳನ್ನು ವಸೂಲ್ಮಾಡಲಿಕ್ಕೆ ಸದರೀ ಕಮ್ಮಿಷನರ್‍ಗಳನ್ನು ಸಮರ್ಥಪಡಿಸಬೇಕಾದದ್ದೂ ಸಹ ಯುಕ್ತವಾಗಿರುವದರಿಂದ ಘನವನ್ನು ಹೊಂದಿದ ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದ್ದೂರವರು ಇದರಡಿ ಕಂಡಂತೆ ನಿಬಂಧಿಸಿರುತ್ತಾರೆ:—

1. ಸನ್ 1883ನೇ ಇಸವಿ ಏಪ್ರೆಲ್ 6ನೇ ಮುರ್ಕ್ಕುಂ 108ನೇ ನಂಬರುಳ್ಳ ಮೈಸೂರು ದಿವಾನರವರ ಇಸ್ತಿಹಾರ್‍ನಾಮೆಯಿಂದ ತಿದ್ದುಪಡಿಯಾದ 1871ನೇ ಇಸವಿ ಮಾರ್ಚಿ 31ನೇ ಮುರ್ಕ್ಕುಂ 51ನೇ J. ನಂಬರುಳ್ಳ ಮಂತ್ರಾಲೋಚಕ ಸಮಾಜದೊಳಗಣ ಘನವನ್ನು ಹೊಂದಿದ ವೈಸರಾಯಿ ವ ಗವರ್ನರ ಜನರಲ್ಲವರ ಇಸ್ತಿಹಾರ್‍ನಾಮೆಯಲ್ಲಿ ಪ್ರಾಯಿಷಾದ ರೆಗ್ಯುಲೇಷನ್‍ಗಳ ಕೋಡು, ಲಗಾವಾಗುವ ಮಟ್ಟಿಗೂ, ಮತ್ತು ಅದರಲ್ಲಿ ಕಂಡ "ಬೆಂಗಳೂರು ಷಹರ್" ಎಂಬ ಮಾತುಗಳಿಗೆ ಬದಲಾಗಿ "ಮೈಸೂರು ಷಹರ್" ಎಂಬ ಮಾತುಗಳೂ, "ಬೆಂಗಳೂರು ಡೆಪ್ಯುಟಿ ಕಮ್ಮಿಷನರ್" ಎಂಬ ಮಾತುಗಳಿಗೆ ಬದಲಾಗಿ "ಮೈಸೂರು ಡೆಪ್ಯುಟಿ ಕಮ್ಮಿಷನರ್" ಎಂಬ ಮಾತುಗಳೂ ಸೇರಿಸಲ್ಪಟ್ಟಿದ್ದರೆ ಹ್ಯಾಗೋ ಆ ರೀತಿಯಾಗಿಯೂ, ಸನ್ 1888ನೇ ಇಸವಿ ಡಿಸಂಬರ್ ೧ನೇ ತಾರೀಖು ಮೊದಲು ಮೈಸೂರು ಷಹರ್ ಮ್ಯುನಿಸಿಪೆಲ್ ಸರಹದ್ದುಗಳೊಳಗೆ ಕಾನೂನ್ ತರೀಕ್ ಜಾರಿಯಲ್ಲಿ ಬರತಕ್ಕದ್ದು.

ಕೆ. ಶೇಷಾದ್ರಿಅಯ್ಯರ್,
ಮೈಸೂರ್ ಸಂಸ್ಥಾನದ ದಿವಾನ್.

THE BANGALORE TOWN MUNICIPAL REGULATIONS 1871.

1871ನೇ ಯಿಸವಿಯ ಬೆಂಗಳೂರ್ ಷಹರ್ ಮ್ಯುನಿಸಿಪೆಲ್ ರೆಗ್ಯುಲೇಷನ್‍ಗಳು.

...ಷಹರ್ ಮ್ಯುನಿಸಿಪೆಲ್ ಸರಹದ್ದುಗಳಿಗಾಗಿ ಮ್ಯುನಿಸಿಪೆಲ್ ಕಮ್ಮಿಷನರ್‍ಗಳನ್ನು ಮೊಕರರ್ ಮಾಡು... ...ರ ಮ್ಯುನಿಸಿಪೆಲ್ ಕೆಲಸಗಳನ್ನು ವಿಚಾರಣೆ ತೆಗೆದುಕೊಳ್ಳುವದು, ಸದರೀ ಷಹರಿನ ಪೊಲೀಸ್... ..., ಪಾಕೀಜಿ, ಅಭಿವೃದ್ಧಿ, ಯಿವುಗಳ ಬಗ್ಗೆ ಯಿನ್ನೂ ಹೊಳ್ಳೇ ಏರ್ಪಾಡುಗಳನ್ನು ಮಾಡುವ... ...ಸದರೀ ಷಹರ್‍ಗಳಲ್ಲಿ, ತೀರ್ವೆಗಳನ್ನೂ, ಸುಂಕಗಳನ್ನೂ, ಷಹರಿ ತೆರಿಗೆಗಳನ್ನೂ, ರಿವಾಜುಗಳ

ನ್ನೂ ವಸೂಲ್ ಮಾಡುವದಕ್ಕೆ ಸದರೀ ಕಮ್ಮಿಷನ್ನರುಗಳಿಗೆ ಶಕ್ತಿಯನ್ನುಂಟು ಮಾಡೋಣ, ಈ ವಿಷಯಗಳಿಗೆ ಸಂಬಂಧಪಟ್ಟ ಕೋಡ್ ಆಫ್ ರೆಗ್ಯುಲೇಷನ್ಸ ಯಾನೇ ಕಾನೂನ್ ಚಟ್ಟ.

1. ಸನ್ 1856ನೇ ಇಸವಿಯ 14ನೇ ಆಕ್ಟು, ಮತ್ತು ಸನ್ 1864ನೇ ಯಿಸವಿಯ 18ನೇ ಆಕ್ಟು ಸಹ ಸದರೀ ಬೆಂಗಳೂರು ಷಹರಿನಲ್ಲಿ ಜಾರಿಯಲ್ಲಿಲ್ಲದೆ ನಿಂತು ಹೋಗತಕ್ಕದ್ದು.

ಈ ಕಾನೂನ್ ಜಾರಿಯಲ್ಲಿ ಬರುವ ತಾರೀಖು ಲಾಗಾಯತು ಸನ್ 1856ನೇ ಇಸವಿಯ 14ನೇ ಆಕ್ಟು 1864ನೇ ಇಸವಿಯ 18ನೇ ಆಕ್ಟು ಸಹ ಜಾರಿಯಲ್ಲಿಲ್ಲದೆ ಹೋಗತಕ್ಕದ್ದು.

ಮೇಲೆ ಕಂಡ ಆಕ್ಟುಗಳನುಸರಿಸಿಯಾಗಲಿ, ನ್ಯಾಯವಾದ ಪುತ್ತ್ಯಾವ ಹುಕುಂ ಅನುಸರಿಸಿಯಾಗಲಿ, ಬಾಕಿಯಾದಂತಾ ಅಥವಾ ಬಾಕಿ ಆಗುವಂತಾ ಯಾವ ಹಣವಾದರೂ ಈ ಕಾನೂನಿನ ನಿಬಂಧನೆಗಳನುಸರಿಸಿ ಮ್ಯುನಿಸಿಪಲ್ ಕಮ್ಮಿಷನರವರಿಂದ ವಸೂಲ್ಮಾಡಲ್ಪಡಬಹುದು; ಮತ್ತು ಸದರೀ ಬೆಂಗಳೂರು ಷಹರಿನೊಳಗೆ ಕ್ರಮವಾದ ಅಧಿಕಾರವನ್ನು ಅನುಸರಿಸಿ ಹಾಲಿ ವಸೂಲಾಗುವ ವರೋಬಸ್ತು ತೆರಿಗೆಗಳೂ, ಈ ಕಾನೂನ್ ಅನುಸರಿಸಿ ವಿಮರ್ಶೆಮಾಡಲ್ಪಡುವ ಪರ್ಯಂತ ಅಥವಾ ರದ್ದಾಗುವ ಪರ್ಯಂತ ಸದರೀ ಮೇರೆ ವಸೂಲ್ಮಾಡಲ್ಪಡುತ್ತಾ ಯಿರ ಬಹುದು; ಮತ್ತು ಮ್ಯುನಿಸಿಪಲ್ ಕಮ್ಮಿಷನರ್‌ಗಳ ಸಂಗಡ ಮಾಡಲ್ಪಟ್ಟ ಯಾ ನಡೆದು ಪೂರ್ತಿಯಾಗದೆ ಯಿರುವ ವರೋಬಸ್ತು ಗುತ್ತಿಗೆಗಳೂ ಮತ್ತು ಮ್ಯುನಿಸಿಪಲ್ ಕಮ್ಮಿಷನರ್‌ಗಳ ಮೇಲೆ ಹಾಲಿ ಯಿರುವ ವರೋಬಸ್ತು ದಾವೆಗಳೂ, ಈ ಕಾನೂನು ಜಾರಿಯಾಗದೆ ಯಿದ್ದರೆ ಹ್ಯಾಗೋ ಅದೇ ಮೇರೆ ನಡೆಯತಕ್ಕದ್ದು, ಜಾರಿಯಲ್ಲಿರತಕ್ಕದ್ದು. ವಸೂಲ್ ಮಾಡಿಕೊಳ್ಳಲ್ಪಡತಕ್ಕದ್ದು ಮತ್ತು ನಡವಳಿತ ನಡಿಸಲ್ಪಟ್ಟು ಜಾರಿಯಲ್ಲಿರಲ್ಪಡ ಬಹುದು.

ಅರ್ಥ ವಿವರಣೆ.

2. ಈ ಕಾನೂನಿನಲ್ಲಿ ಪ್ರಯೋಗಿಸಲ್ಪಟ್ಟ ಈ ಕೆಳಗೆ ಬರುವ ಮಾತುಗಳಿಗೂ, ವಾಚಕಗಳಿಗೂ ಯಿದರ ದೆಸೆಯಿಂದ ತಿಳಿಸಲ್ಪಡುವ ಅರ್ಥಗಳಿರತಕ್ಕದ್ದು. ಆದರೆ, ಪ್ರಮೇಯದಿಂದಲೂ, ಸಂದರ್ಭದಿಂದಲೂ, ಅಂಥಾ ಅರ್ಥಕ್ಕೆ ವಿರುದ್ಧವಾಗಿ ಯೇನೂ ಇಲ್ಲದಾಗ, ಆ ಪ್ರಕಾರವೇ ಅರ್ಥವಾಗತಕ್ಕದ್ದು. (ಅವು ಯಾವವೆಂದರೆ.)

"ಪ್ರೆಸಿಡೆಂಟ್"

"ಪ್ರೆಸಿಡೆಂಟ್" ಯೆಂಬ ಮಾತು 11 ವ 12ನೇ ಸೆಕ್ಷನ್ನಲ್ಲಿ ವಿನಾ 11ನೇ ಸೆಕ್ಷನ್ ಅನುಸರಿಸಿ ಮೊಕರರ್ರಾಡಲ್ಪಟ್ಟ "ವೈಸ್ ಪ್ರೆಸಿಡೆಂಟರನ್ನೂ" ಅಡಗಿಸಿಕೊಂಡಿರತಕ್ಕದ್ದು.

"ಮ್ಯುನಿಸಿಪಲ್ ಸರಹದ್ದುಗಳು."

"ಮ್ಯುನಿಸಿಪಲ್ ಸರಹದ್ದುಗಳು" ಎಂಬ ವಾಚಕಕ್ಕೆ ಬೆಂಗಳೂರು ಷಹರ್ ಮ್ಯುನಿಸಿಪಲ್ ಸರಹದ್ದುಗಳೆಂತ ಹಾಲಿ ತಿಳಿಯಲ್ಪಟ್ಟ ಅಥವಾ ಮೈಸೂರು ಗೆಜೆಟ್‌ನಲ್ಲಿ ಪ್ರಕಟಿಸಲ್ಪಟ್ಟ ಇಸ್ತಿಹಾರನಾಮೇ ಮೂಲಕ ಶ್ರೀಮನ್ ಮೈಸೂರು ಮಹಾರಾಜಾ ಸರ್ಕಾರದವರಿಂದ ತತ್ಕಾಲಕ್ಕೆ ಮೊಕರರ್ ಮಾಡೋಣಾದ ಸರಹದ್ದುಗಳು ಯೆಂದು ಅರ್ಥವಾಗತಕ್ಕದ್ದು.

"ಮ್ಯುನಿಸಿಪಲ್ ಕಮ್ಮಿಷನರ್‌ಗಳು."

"ಮ್ಯುನಿಸಿಪಲ್ ಕಮ್ಮಿಷನರ್‌ಗಳು" ಮತ್ತು "ಕಮ್ಮಿಷನರ್‌ಗಳು" ಯೆಂಬ ವಾಕ್ಯಗಳಿಗೆ, ಈ ಕಾನೂನ್ ಅನುಸರಿಸಿ ಬೆಂಗಳೂರು ಷಹರ್ ಮ್ಯುನಿಸಿಪಲ್ ಕೆಲಸಗಳನ್ನು ನಡಿಸುವ ಬಗ್ಗೆ ಶ್ರೀಮನ್ ಮೈಸೂರು ಮಹಾರಾಜಾ ಸರ್ಕಾರದವರಿಂದ ಮೊಕರರ್ ಮಾಡೋಣಾದ ಜನಗಳೆಂದು ಅರ್ಥವಾಗತಕ್ಕದ್ದು.

"ಷಹರ್."

"ಷಹರ್" ಯೆಂಬ ಮಾತು, ಬೆಂಗಳೂರು ಷಹರನ್ನೂ ಮೇಲೆ ಕಂಡಂತೆ ಇಸ್ತಿಹಾರ್‌ನಾಮೆಗಳ ಮೂಲಕ ಶ್ರೀಮನ್ ಮೈಸೂರು ಮಹಾರಾಜಾ ಸರ್ಕಾರದವರಿಂದ ಸೇರಿಸಲ್ಪಡುವಂತಾ ಅದಕ್ಕೆ ಸೇರಿದ ಉಪ ಗ್ರಾಮಗಳು, ಇತರ ಹಳ್ಳಿಗಳು, ಸರಹದ್ದುಗಳು ಇವುಗಳನ್ನು ಅಡಗಿಸಿಕೊಂಡಿರತಕ್ಕದ್ದು.

"ಕಟ್ಟಡ."

"ಕಟ್ಟಡ" ಯೆಂಬ ಮಾತಿಗೆ, ಯಾವದಾದರೂ ಮನೆ, ಗುಡಿಸಲು, ಚಪ್ಪರ ಯಾ ಛಾವಣಿವುಳ್ಳ ಆವರಣ, ಇಂತಾದ್ದು ಮನುಷ್ಯರ ವಾಸಕ್ಕೋಸ್ಕರ ಉಪಯೋಗಿಸಲ್ಪಡಲಿ, ಇತರ ಕಾರ್ಯಕ್ಕೋಸ್ಕರವಾಗಲಿ ಅಂತಾದ್ದೆಂದು ಅರ್ಥವಾಗತಕ್ಕದ್ದು.

"ಬೀದಿ."

"ಬೀದಿ" ಯೆಂಬ ಮಾತಿಗೆ; ಸದರೀ ಬೆಂಗಳೂರು ಷಹರಿನ ಯಾವ ಭಾಗಗಳು ಶ್ರೀಮನ್ ಮೈಸೂರು ಮಹಾರಾಜಾ ಸರ್ಕಾರದವರ ಮಂಜೂರಾತಿಯ ಮೇಲೆ ಕಮ್ಮಿಷನರ್[illegible] ಆಗಿಂದಾಗ್ಯೆ ಮುಖ್ಯವಾಗಿ ವಿವರಿಸಲ್ಪಡುತವೋ ಅಂತಾ [illegible] ಪ್ರಜೆಗಳಿಗೆ ದಾರೀಹಕ್ಕು ವುಂಟಾದ ಮತ್ತು ಹೊರಗೆ ಹೋಗಲಿಕ್ಕೆ ಮಾರ್ಗವುಳ್ಳ ಅಥವಾ ಮಾರ್ಗ[illegible] ಬೀದಿ, ಚೌಕ, ಅಂಗಳ, ಸಂದು ಯಾ ಮಾರ್ಗ ಮತ್ತು ಯಾವದಾದರೂ ಬಹಿರಂಗವಾದ ಕ್ಷೇತ್ರ[illegible] ಯಿಂತಾದ್ದರ ಮೇಲೆ ಯಿರುವ ಭಾಟೆ ಯೆಂದು ಸಹ ಅರ್ಥವಾಗತಕ್ಕದ್ದು.

"ಯಾವದಾದರೂ ಬೀದಿಯಲ್ಲಿ ಯಾ ಅದರ ಬಳಿಯು."

"ಯಾವದಾದರೂ ಬೀದಿಯಲ್ಲಿ ಯಾ ಅದರ ಬಳಿಯು" ಯೆಂಬ ವಾಕ್ಯ ಸದರೀ ಷಹರಿನಲ್ಲಿ ವಿವರಿಸಲ್ಪಟ್ಟ ಅಂಥಾ ಭಾಗಗಳಲ್ಲಿರುವ ಯಾವ ಸ್ಥಳಕ್ಕಾಗಲಿ ಹೆಸರಾಗತಕ್ಕದ್ದು.

"ರಸ್ತೆ."

"ರಸ್ತೆ" ಯೆಂಬ ಮಾತು ಪ್ರಜೆಗಳಿಗೆ ಮಾರ್ಗದ ಹಕ್ಕುದಾರಿವುಳ್ಳ ಯಾವದಾದರೂ ರಸ್ತೆ ಅಥವಾ ಹೊರಗೆ ಹೋಗಲಿಕ್ಕೆ ದಾರಿವುಳ್ಳ ಸಂದಿಗೆ ಅಥವಾ ಹಾಗೆ ಮುಖ್ಯವಾಗಿ ವಿವರಿಸೋಣಾದ ಭಾಗಗಳೊಳಗೆ ಯಿಲ್ಲದ ಯಾವದಾದರೂ ಸೇತುವೆ ಕಟ್ಟೆ ಯಿಂಥಾದ್ದರ ಮೇಲೆ ಯಿರುವ ಬಾಟೆ ಯೆಂದು ಅರ್ಥವಾಗತಕ್ಕದ್ದು.

"ಜಮೀನ್."

"ಜಮೀನ್" ಯೆಂಬ ಮಾತು ಕಟ್ಟಡಗಳು, ಮನೆಗಳು, ಹೊಲಗಳು, ಯಾವದಾದರೂ ಮರಗಳುಳ್ಳ ಜಮೀನ್‌ಗಳು, ತೋಟಗಳು ಯಿಂಥಾವು ಯಾವ ರೀತಿಯಾಗಿ ಅಥವಾ ಯಾವ ನಿಬಂಧನೆ ಮೇಲೆ ಹಿಡುವಳಿಯಲ್ಲಿರಲಿ, ಯಾ ಅನುಭವಿಸಲ್ಪಡಲಿ ಅಂಥಾವುಗಳನ್ನು ಅಡಗಿಸಿಕೊಂಡಿರತಕ್ಕದ್ದು.

"ಸ್ವಂತಗಾರ."

"ಸ್ವಂತಗಾರ" ಯೆಂಬ ಮಾತಿಗೆ ಯಾವ ಜಮೀನ್ ಯಾ ಮಠಾರ ಯಾ ಜಾನವರ್ ಯಾ ಇನ್ಯಾವ ಪದಾರ್ಥದ ವಿಷಯದಲ್ಲಿ ಸದರೀ ಮಾತು ಪ್ರಯೋಗಿಸಲ್ಪಡುತ್ತೋ ಆ ಜಮೀನಿನ ಯಾ ಮಠಾರದ ಬಾಡಿಗೆಯನ್ನು ಯಾವ ಮನುಷ್ಯ ತತ್ಕಾಲಕ್ಕೆ ತನಗೋಸ್ಕರವಾಗಲಿ ಮತ್ತೊಬ್ಬನ ಮುತಾಲೀಕ ಯಾ ಟ್ರಸ್ಟಿ ಯಾನೇ ಪಾಲಕನೋಪಾದಿಯಲ್ಲಿ ತೆಗದುಕೊಳ್ಳುತ್ತಾನೋ ಅಥವಾ ಸದರೀ ಜಾನವರ್ ವಗೈರೇ ಸ್ವಾಧೀನದಲ್ಲಿ ವುಳ್ಳವನಾಗಿರುತಾನೋ ಅಥವಾ ಅಂತಾ ಜಮೀನ್ ಯಾ ಮಠಾರ ಒಬ್ಬ ಬಾಡಿಗೆದಾರನಿಗೆ ಬಾಡಿಗ್ಯೆ ಕೊಡಲ್ಪಟ್ಟಲ್ಲಿ ಆ ಬಾಬತು ಬಾಡಿಗೆಯನ್ನು ಯಾವನು ಹಾಗೆ ತೆಗದುಕೊಳ್ಳುತ್ತಾನೋ, ಅಂಥಾ ಮನುಷ್ಯನೆಂದರ್ಥವಾಗತಕ್ಕದ್ದು. ಪರಂತು, ಮತ್ತೊಬ್ಬನಿಗೆ ಮುತಾಲೀಕನಾಗಿ ಜಮೀನಿನ ಯಾ ಮಠಾರದ ಬಾಡಿಗೆಯನ್ನು ತೆಗದು ಕೊಳ್ಳುವ ಯಾವ ಮನುಷ್ಯನಾಗಲಿ, ಈ ಕಾನೂನ್ ದಿಶೆಯಿಂದ, ಅಂತಾ ಜಮೀನ್, ಯಾ ಮಠಾರದ ಸ್ವಂತಗಾರನು ಯಾವ ಕೆಲಸವನ್ನು ಮಾಡಬೇಕಾಗಿರುತ್ತೋ ಆ ಬಗ್ಯೆ ಸ್ವಂತಗಾರನ ಬಾಬತು ತನ್ನ ವಶದಲ್ಲಿರುವ ಮೊಬಲಗಿಗೆ ಜಾಸ್ತಿಯಾಗಿ ಯಾವ ಹಣವನ್ನೂ ವೆಚ್ಚ ಮಾಡುವದಕ್ಕೆ ಗುರಿಯಾಗತಕ್ಕದ್ದಿಲ್ಲವು. ಮತ್ತು ತನ್ನಲ್ಲಿ ಅಂಥಾ ಹಣ ಯೆಷ್ಟರ ಮಟ್ಟಿಗೆ ಇರುತ್ತೋ ಅಷ್ಟರ ಮಟ್ಟಿಗೆ ತಾನು ವೆಚ್ಚ ಮಾಡಿರುವದಾಗಿ ರುಜಾ ಮಾಡುವ ಪಕ್ಷಕ್ಕೆ ಯಾವ ಜುರ್ಮಾನೆಗೂ ಗುರಿಯಾಗಬೇಕಾದ್ದಿಲ್ಲವು.

"ಚಿಲ್ಲರೆ."

"ಚಿಲ್ಲರೆ" ಯೆಂಬ ಮಾತು ವೈನ್, ಸ್ಪಿರಿಟ್ಸ್ ಮತ್ತು ಬಿಯರ್ ಯೆಂಬ ಸಾರಾಯಿಗಳ ವ್ಯಾಪಾರ ಮಾಡತಕ್ಕವರ ವಿಷಯದಲ್ಲಿ ಪ್ರಯೋಗಿಸಲ್ಪಟ್ಟಾಗ ವೊಂದಾವರ್ತಿಗೆ ಯೆರಡು ಇಂಪೀರಿಯಲ್ ಗ್ಯಾಲನಿಗೆ ಮೀರದೆ ಯೆಷ್ಟನ್ನಾಗಲಿ ಅಂತಾ ಯಾವ ವ್ಯಾಪಾರಸ್ಥನಿಂದ ಮಾಡಲ್ಪಡುವ ಬಿಕ್ರಿಯೆಂದು ಅರ್ಥವಾಗತಕ್ಕದ್ದು.

ಬೆಂಗಳೂರು ಷಹರಿಗೆ ಮೊಕರರ್ ಆಗತಕ್ಕ ಮ್ಯುನಿಸಿಪಲ್ ಕಮಿಷನರ್‌ಗಳ ಸಮಾಜ.

ಬೆಂಗಳೂರು ಷಹರ್ ಮ್ಯುನಿಸಿಪಲ್ ತುಕಡಿ ಮತ್ತು ಕಮಿಷನರುಗಳನ್ನು ಮೊಕರರ್ ಮಾಡುವಿಕೆ.

3. ಈ ರೆಗ್ಯುಲೇಷನಿನ ಕೆಲಸಗಳಿಗೋಸ್ಕರ ಬೆಂಗಳೂರು ಷಹರ್ ಪ್ರತ್ಯೇಕ ಪ್ರತ್ಯೇಕವಾಗಿ ಶ್ರೀಮನ್ ಮೈಸೂರು ಮಹಾರಾಜಾ ಸರ್ಕಾರದವರು ಯೆಷ್ಟು ನಿಷ್ಕರ್ಷೆ ಮಾಡುತ್ತಾರೋ ಅಷ್ಟು ತುಕಡಿಗಳಾಗಿ ವಿಭಾಗಿಸಲ್ಪಡತಕ್ಕದ್ದು. ಪ್ರತಿ ತುಕಡಿಗೂ, ಆಯಾ ತುಕಡೀ ಸರಹದ್ದಿನೊಳಗೆ ವಾಸವಾಗಿರುವವರಿಬ್ಬರನ್ನು ಕಮಿಷನರ್‌ಗಳನ್ನಾಗಿ ಶ್ರೀಮನ್ ಮೈಸೂರು ಮಹಾರಾಜಾ ಸರ್ಕಾರದವರು ಮೊಕರರ್ ಮಾಡತಕ್ಕದ್ದು. ಅಂಥಾ ಮನುಷ್ಯರ ಪೈಕಿ ಪ್ರೊಬ್ಬೊಬ್ಬರು ಮೂರು ಸಂವತ್ಸರಗಳ ಕಾಲ ಕೆಲಸ ನೋಡತಕ್ಕದ್ದಲ್ಲದೆ ಕೆಟ್ಟ ನಡತೆಗೋಸ್ಕರವಾಗಲಿ, ಕೆಲಸದಲ್ಲಿ ಬೇಫಾಮಿಗೋಸ್ಕರವಾಗಲಿ ಶ್ರೀಮನ್ ಮೈಸೂರು ಮಹಾರಾಜಾ ಸರ್ಕಾರದವರಿಂದ ತಗೈರ್ ಮಾಡಲ್ಪಡುವದಕ್ಕೆ ಗುರಿಯಾಗಿರತಕ್ಕದ್ದು, ಮತ್ತು ಪುನಃ ಮೊಕರರ್ ಆಗಲಿಕ್ಕೆ ಅರ್ಹರಾಗಿರತಕ್ಕದ್ದು. ಈ ರೆಗ್ಯುಲೇಷನಿನ 11ನೇ ಸೆಕ್ಷನ್ ಅನುಸರಿಸಿ ಮೊಕರರ್ ಮಾಡಲ್ಪಟ್ಟ ಕಮಿಷನರುಗಳು, ಪ್ರೆಸಿಡೆಂಟರು ಮತ್ತು ವೈಸ್ ಪ್ರೆಸಿಡೆಂಟರು "ಬೆಂಗಳೂರ್ ಷಹರಿನ ಮ್ಯುನಿಸಿಪಲ್ ಕಮಿಷನರುಗಳೆಂದು" ಕರೆಯಲ್ಪಡತಕ್ಕದ್ದು ಮತ್ತು ಅಂಥಾ ಹೆಸರಿನಿಂದ ಸೇರಿಸಲ್ಪಟ್ಟ ಒಂದು ಸಂಘವಾಗಿ ಯೇರ್ಪಟ್ಟು ನಿಯತವಾದ ಪರಂಪರೆಯನ್ನುಳ್ಳಂಥಾಗಿ ಅಂತಾ ಹೆಸರಿನಿಂದ ದಾವೆ ಮಾಡತಕ್ಕದ್ದು ಮತ್ತು ಮಾಡಲ್ಪಡತಕ್ಕದ್ದು.

ಎಕಸ ಅಫಿಷಿಯೋ ಅಂದರೆ ಉದ್ಯೋಗ ಧರ್ಮ ಪ್ರಯುಕ್ತವಾದ ಮೆಂಬರುಗಳು.

4. ಮೇಲೆ ಕಂಡಂತೆ ಮೊಕರರ್ ಮಾಡಲ್ಪಟ್ಟ ಮೆಂಬರುಗಳು ಶಿವಾಯಿ ಜಾಸ್ತಿಯಾಗಿ ಮ್ಯುನಿಸಿಪೆಲ್ ಬೋರ್ಡಿಗೆ ಉದ್ಯೋಗ ಧರ್ಮ ಪ್ರಯುಕ್ತವಾದ ಮೆಂಬರುಗಳನ್ನು ಸರ್ಕಾರೀ ಗೆಜೆಟಿನಲ್ಲಿ ಪ್ರಕಟಿಸ ಮಾಡೋಣಾಗುವ ಇಸ್ತಿಹಾರ್‌ನಾಮೇ ಮೂಲಕ ಮೊಕರರ್ ಮಾಡಲಿಕ್ಕೆ ಶ್ರೀಮನ್ ಮೈಸೂರು ಮಹಾರಾಜಾ ಸರ್ಕಾರದವರಿಗೆ ಅಧಿಕಾರ ಉಂಟಾಗಿರತಕ್ಕದ್ದು. ಪರಂತು ಬೋರ್ಡಿನಲ್ಲಿ ಕುಲ್ ಯೆಷ್ಟು ಮಂದಿ ಕಮ್ಮಿಷನರುಗಳಿರುತ್ತಾರೋ ಅಷ್ಟು ಮಂದಿಯ ಪೈಕಿ ಮೂರರಲ್ಲಿ ಒಂದಂಶದ ಸಂಖ್ಯೆಗಿಂತ ಉದ್ಯೋಗ ಧರ್ಮ ಪ್ರಯುಕ್ತವಾದ ಮೆಂಬರ್‌ಗಳ ಸಂಖ್ಯೆ ಜಾಸ್ತಿಯಾಗಿರಕೂಡದು.

ಶ್ರೀಮನ್ ಮೈಸೂರು ಮಹಾರಾಜಾ ಸರಕಾರದವರಿಂದಾಗಲಿ ಜನಗಳ ಚುನಾವಣೆಯಿಂದ ಏರ್ಪಡಿಸುವದರ ಮೂಲಕವಾಗಿಯಾಗಲಿ ಕಮ್ಮಿಷನರುಗಳನ್ನು ಮೊಕರರ್ ಮಾಡೋಣ.

5. ಶ್ರೀಮನ್ ಮೈಸೂರು ಮಹಾರಾಜಾ ಸರ್ಕಾರದವರಿಗೆ ಯಾವಾಗಲಾಗಲಿ, ಯುಕ್ತ ತೋರಿದ ಪಕ್ಷಕ್ಕೆ ತಮ್ಮ ತಮ್ಮ ಅಧಿಕಾರ ಸರಹದ್ದುಗಳೊಳಗೆ ಈ ಕಾನೂನಿನ ಕಾರ್ಯಗಳನ್ನು ನೆರವೇರಿಸುವದಕ್ಕೋಸ್ಕರ ಮ್ಯುನಿಸಿಪೆಲ್ ಕಮ್ಮಿಷನರುಗಳನ್ನಾಗಿ ಬೆಂಗಳೂರು ಷಹರಿನ ಪ್ರಜೆಗಳ ಪೈಕಿ ಯೆಷ್ಟು ಮಂದಿಯನ್ನಾಗಲಿ ಯೇರ್ಪಡಿಸಿ ಯಾ ಯೇರ್ಪಡಿಸುವಂತೆ ನಿಯಮಿಸಿ ಯೆರಡು ವರುಷಗಳಿಗೆ ಜಾಸ್ತಿ ಇಲ್ಲದೆ ತಮಗೆ ಯುಕ್ತ ತೋರುವಷ್ಟು ಕಾಲಕ್ಕೆ ಮೊಕರರ್ ಮಾಡಬಹುದು. ಹಾಗೆ ಮೊಕರರ್ ಮಾಡೋಣಾದ ಜನಗಳು ಯೆರಡು ವರುಷಗಳ ಪರ್ಯಂತ ಅಥವಾ ತಮಗೆ ತರುವಾಯ ಬರತಕ್ಕವರು ಮೊಕರರ್ ಆಗುವ ಪರ್ಯಂತ ಉದ್ಯೋಗದಲ್ಲಿರತಕ್ಕದ್ದು. ಪುನಹ ಮೊಕರರ್ ಆಗಲಿಕ್ಕೂ ಅರ್ಹರಾಗಿರತಕ್ಕದ್ದು. ಅಧಿಕಾರಿಗಳನ್ನು ಯೇರ್ಪಡಿಸಿ ಮೊಕರರ್ ಮಾಡಬೇಕೆಂದು ಶ್ರೀಮನ್ ಮೈಸೂರು ಮಹಾರಾಜಾ ಸರ್ಕಾರದವರು ನಿಯಮಿಸುವ ಪಕ್ಷಕ್ಕೆ ಹಾಗೆ ಯೇರ್ಪಡಿಸತಕ್ಕ ಕಾಲ, ರೀತಿ, ಯೇರ್ಪಡಿಸುವಂಥಾವರ ಯೋಗ್ಯತೆ ಯಿವುಗಳನ್ನು ಗೊತ್ತು ಮಾಡಬಹುದು. ಮತ್ತು ಹಾಗೆ ಸಾಮಾನ್ಯವಾಗಿ ಯೇರ್ಪಡಿಸೋಣವನ್ನು ಕ್ರಮ ಪಡಿಸುವ ಬಗ್ಗೆ ತಮಗೆ ಯುಕ್ತ ತೋರುವಂಥಾ ನಿಬಂಧನೆಗಳನ್ನು ಕಲ್ಪಿಸಬಹುದು. ಹಾಗೆ ಮೊಕರರ್ ಮಾಡಲ್ಪಟ್ಟ ಮ್ಯುನಿಸಿಪೆಲ್ ಕಮ್ಮಿಷನರುಗಳ ಪೈಕಿ ಯಾವನು ಕೆಲಸದಿಂದ ನಿಖಾಲಸ್ ಆಗಬೇಕೆಂತ ಕೋರುತ್ತಾನೋ, ಕೆಲಸ ನೋಡುವದಕ್ಕೆ ನಿರಾಕರಿಸುತ್ತಾನೋ, ಅಥವಾ ಅಶಕ್ತನಾಗುತ್ತಾನೋ, ಅಥವಾ ಇಂಡಿಯನ್ ಪೆನೆಲ್ ಕೋಡ್ ಅನುಸರಿಸಿ ಆರು ತಿಂಗಳಿಗೆ ಕಡಿಮೆ ಯಿಲ್ಲದೆ ಒಂದು ವಾಯಿದೆ ಪರ್ಯಂತ ಖೈದ್ ಮೂಲಕ ಶಿಕ್ಷಿಸಲ್ಪಡತಕ್ಕ ತಕ್ಸೀರ್ ಸ್ಥಾಪಿಸಲ್ಪಡುತ್ತಾನೋ ಅಂಥಾ ಯಾವ ಮ್ಯುನಿಸಿಪೆಲ್ ಕಮ್ಮಿಷನರನ್ನೇಯಾಗಲಿ ಶ್ರೀಮನ್ ಮೈಸೂರು ಮಹಾರಾಜಾ ಸರ್ಕಾರದವರು ಆಗಿಂದಾಗ್ಯೆ ಕೆಲಸದಿಂದ ತೆಗದುಹಾಕಬಹುದು. ಮತ್ತು ಶ್ರೀಮನ್ ಮೈಸೂರು ಮಹಾರಾಜಾ ಸರ್ಕಾರದವರು ತಮಗೆ ಯುಕ್ತವೆಂದು ತೋರುವ ಪಕ್ಷಕ್ಕೆ ಮ್ಯುನಿಸಿಪೆಲ್ ಬೋರ್ಡಿನವರು ತಿಳಿಸಿದ್ದರ ಮೇಲೆ ಅವರ ಸಂಖ್ಯೆಗೆ ಹೆಚ್ಚು ಮಂದಿ ಸೇರಿಸಲೂಬಹುದು, ಅವರುಗಳಲ್ಲಿ ಕೆಲಸ ಖಾಲೀ ಯಿದ್ದಲ್ಲಿ ಅದಕ್ಕೆ ಭರ್ತಿಯೂ ಮಾಡಬಹುದು, ಹಾಗೆ ಮೊಕರರ್ ಆದ ಪ್ರತಿ ಮೆಂಬರೂ, ಈ ಕಾನೂನಿನ 3ನೇ ಕಲಮಿನ ನಿಬಂಧನೆಗಳನುಸರಿಸಿ ಮೊದಲೇ ಮೆಂಬರಾಗಿ ಮೊಕರರಾಗಿದ್ದರೆ ಹ್ಯಾಗೋ ಅದೇ ಮೇರೆಯೇ ಅಧಿಕಾರವನ್ನು ಪಡೆದಿರತಕ್ಕದ್ದು. ಅಂಥಾ ಜವಾಬ್‌ದಾರಿಗೇನೇ ಗುರಿಯಾಗಿರತಕ್ಕದ್ದು. ಮತ್ತು ತನ್ನ ಕೆಲಸ ಖಾಲೀ ಮಾಡತಕ್ಕದ್ದು, ಮತ್ತು ಪುನಹ ಮೊಕರರ್ ಆಗಲಿಕ್ಕೆ ಅರ್ಹನಾಗಿರತಕ್ಕದ್ದು.

ಮ್ಯುನಿಸಿಪೆಲ್ ಕಮ್ಮಿಷರುಗಳನ್ನು ಕೆಲಸದಿಂದ ನಿವರ್ತಿ ಮಾಡುವಿಕೆ.

ಕಮ್ಮಿಷನರ್‌ಗಳು ಸಮುದಾಯವಾದ ಮೊಹರ್ ಪಡೆದಿರತಕ್ಕದ್ದು ಮತ್ತು ಉಪಯೋಗಿಸತಕ್ಕದ್ದು.

6. ಮ್ಯುನಿಸಿಪೆಲ್ ಕಮ್ಮಿಷನರ್‌ಗಳು ಸಮುದಾಯವಾದ ಮೊಹರನ್ನು ಪಡೆದು ಉಪಯೋಗಿಸತಕ್ಕದ್ದು. ಅದರ ಮೇಲೆ ಇಂಗ್ಲಿಷ್ ಭಾಷೆಯಲ್ಲಿ ಸ್ಪಷ್ಟವಾದ ಅಕ್ಷರಗಳಿಂದ ಅವರುಗಳ ಹೆಸರು ಕೆತ್ತಲ್ಪಟ್ಟಿರತಕ್ಕದ್ದು. ಸದರೀ ಮೊಹರು ಪ್ರೆಸಿಡೆಂಟರ ವಶದಲ್ಲಿರತಕ್ಕದ್ದು. ನೂರು ರೂಪಾಯಿಗೆ ಮೀರಿ ಮಾಡೋಣಾದ ಯೆಷ್ಟರ ಮೊಬಲಗಿನದಾಗಲಿ ಅಂಥಾ ದರೋಬಸ್ತು ಕಂಟ್ರಾಕ್ಟುಗಳುಯಾನೆ ಮಖಾಬಡಿಕಗಳೂ ಬರವಣಿಗೆಯಲ್ಲೇ ಇರಬೇಕು. ಅದಕ್ಕೆ ಕಮ್ಮಿಷನರ್‌ಗಳ ಸಮುದಾಯವಾದ ಮೊಹರ್ ಹಾಕತಕ್ಕದ್ದಲ್ಲದೆ, ಪ್ರೆಸಿಡೆಂಟರ ದಸ್ತಖತ್ತೂ, ಮೂವ್ವರು ಕಮ್ಮಿಷನರ್‌ಗಳ ದಸ್ತಖತ್ತೂ ಆಗತಕ್ಕದ್ದು. ಅಂಥಾ ದರೋಬಸ್ತು ಕಂಟ್ರಾಕ್ಟುಗಳೂ ಬದಸ್ತೂರು ಬದಲಾಯಿಸಲ್ಪಡತಕ್ಕದ್ದು ಯಾ ಮನ್ನಾ ಮಾಡಲ್ಪಡತಕ್ಕದ್ದು.

ಈಗಿನ ಮ್ಯುನಿಸಿಪೆಲ್ ಕಮ್ಮಿಷನರ್‌ಗಳ ದರೋಬಸ್ತು ಸ್ವತ್ತು ವ್ಯಾಜ್ಯದ ಹಕ್ಕುಗಳು ಸಹ ಹೊಸ ಮ್ಯುನಿಸಿಪೆಲ್ ಕಮ್ಮಿಷನರ್‌ಗಳದಾಗಿರತಕ್ಕದ್ದು.

7. ಸನ್ 1856ನೇ ಇಸವಿಯ 14ನೇ ಆಕ್ಟು ಅನುಸರಿಸಿಯಾಗಲಿ, 1864ನೇ ಇಸವಿಯ 18ನೇ ಆಕ್ಟು ಅನುಸರಿಸಿಯಾಗಲಿ, ಅನ್ಯಥಾ ಆಗಲಿ ಲಭಿಸಿದ ದರೋಬಸ್ತು ಜಮೀನುಗಳೂ, ಕಟ್ಟಡಗಳೂ, ಕಾಮಗಾರಿಗಳೂ, ದಾಯಸ್ವತ್ತುಗಳೂ, ವಾಹನಗಳೂ, ಸಾಮಾನುಗಳೂ, ಪುಸ್ತಕಗಳೂ, ಪ್ಲ್ಯಾನ್‌ಯಾನೇ ನಕಷೆಗಳೂ, ಮ್ಯಾಪ್‌ಗಳೂ, ಕಾಗದಗಳೂ, ಚರಸ್ವತ್ತುಗಳೂ, ಪತ್ರಗಳೂ, ಹಣಗಳೂ,

ಮತ್ತು ಯಾವ ಮ್ಯುನಿಸಿಪೆಲ್ ಕಮ್ಮಿಷನರ್‌ಗಳು ಈ ಕಾನೂನಿನಲ್ಲಿ ಮುಂದೆ ಸಾಬಕು ಮ್ಯುನಿಸಿಪೆಲ್ ಕಮ್ಮಿಷನರ್‌ಗಳೆಂತ ಕರೆಯಲ್ಪಡುತ್ತಾರೋ ಅಂತಾ 1856ನೇ ಇಸವಿಯ 14ನೇ ಆಕ್ಟು, 1864ನೇ ಇಸವಿಯ 18ನೇ ಆಕ್ಟು ಇವುಗಳನುಸರಿಸಿಯಾಗಲಿ, ಅನ್ಯಥಾ ಆಗಲಿ ಮೊಕರರ್ ಮಾಡಲ್ಪಟ್ಟ ಮ್ಯುನಿಸಿಪೆಲ್ ಕಮ್ಮಿಷನರ್‌ಗಳಲ್ಲಿ ಈ ಕಾನೂನು ಜಾರಿಯಲ್ಲಿ ಬರುವ ತಾರೀಖಿನಲ್ಲಿ ಯಾವ ಸ್ವತ್ತುಗಳು ಕೊಡಲ್ಪಡುತ್ತವೋ ಅಥವಾ ಅವರಿಗೋಸ್ಕರ ಮತ್ತೊಬ್ಬರ ಅಧೀನದಲ್ಲಿಟ್ಟುಕೊಳ್ಳಲ್ಪಡುತ್ತವೋ ಅಥವಾ ಈ ಕಾನೂನು ಹುಟ್ಟದೇ ಇದ್ದರೆ ಯಾವವು ಅಂತಾ ಮ್ಯುನಿಸಿಪೆಲ್ ಕಮ್ಮಿಷನರ್‌ಗಳಲ್ಲಿಡಲ್ಪಟ್ಟಿರುವದೋ ಅಥವಾ ಅವರಿಗೋಸ್ಕರ ಮತ್ತೊಬ್ಬರ ಅಧೀನದಲ್ಲಿಡಲ್ಪಟ್ಟಿರುವವೋ ಅಂತಾ ಯಾವ ಸ್ವಭಾವದ್ದಾಗಲಿ ಯಾವ ಬಗೆಯದಾಗಲಿ ಇತರ ಸ್ಥಿರ ಚರಸ್ವತ್ತುಗಳು ಅದರಲ್ಲಿಯ ಎಲ್ಲಾ ಬಗೆ ಸಂಬಂಧವೂ ಅಸ್ತಿತ್ವವಾಗಿ ಲಭಿಸಿ ಇರಲಿ ಅವಶಿಷ್ಟಾಂಶವಾಗಿ ಲಭಿಸಿ ಇರಲಿ ಪರಂತು ಅಂತಾವೂ, ಮತ್ತು ಆಗ್ಯೆ ಸದರೀ ಮ್ಯುನಿಸಿಪೆಲ್ ಕಮ್ಮಿಷನರ್‌ಗಳಲ್ಲಾಗಲಿ, ಅವರ ಪೈಕಿ ಯಾರಲ್ಲಾಗಲಿ ಯಿರುವ ಯಾ ಇದ್ದಿರುವ ಅಥವಾ ಅವರಿಗೋಸ್ಕರ ಮತ್ತೊಬ್ಬರಲ್ಲಿಟ್ಟುಕೊಳ್ಳಲ್ಪಡುವ ಯಾ ಯಿಟ್ಟುಕೊಳ್ಳಲ್ಪಟ್ಟಿರಬಹುದಾದ ಅಂತಾ ವಗೈರೆ ಬಸ್ತು ಆಸ್ತಿಯೂ ಅದರೊಳಗಣ ಸಂಬಂಧವೂ ಸಹ, ಸದರಿ ಮ್ಯುನಿಸಿಪೆಲ್ ಕಮ್ಮಿಷನರುಗಳಿಂದ ಹಾಲೀ ಉಪಯೋಗಿಸಲ್ಪಡುವ ವ ಅನುಭವಿಸಲ್ಪಡುವ ವಗೈರೆ ಬಸ್ತು ಮಾರ್ಗಪಕ್ಕದಾರಿಗಳೊಂದಿಗೂ, ಯಿತರ ಹಕ್ಕುದಾರಿಗಳೊಂದಿಗೂ, ಸಹಾಯಗಳೊಂದಿಗೂ, ಈ ಕಾನೂನು ಅಮಲಿನಲ್ಲಿ ಬಂದ ತಾರೀಖಿನಲ್ಲಿ ವ ಆ ತಾರೀಖು ಲಾಗಾಯತು ಈ ಕಾನೂನು ಅನುಸರಿಸಿ ಮೊಕರರಾದ ಮ್ಯುನಿಸಿಪೆಲ್ ಕಮ್ಮಿಷನರುಗಳಿಗೂ ಅವರಿಗೆ ತರುವಾಯ ಅಧಿಕಾರಕ್ಕೆ ಬರತಕ್ಕವರಿಗೂ ಕೊಡಲ್ಪಡತಕ್ಕದ್ದು. ಮತ್ತು ಆಗ್ಯೆ ಸಾಬಕು ಮ್ಯುನಿಸಿಪೆಲ್ ಕಮ್ಮಿಷನರುಗಳಿಗಾಗಲಿ, ಅವರ ತರಫಿನಲ್ಲಿ ಯಾವ ಮನುಷ್ಯನಿಗಾಗಲಿ ಯಾವ ಮೊಬಲಗಾದರೂ ಬಾಕಿ ಕೊಡಬೇಕಾಗಿರುವ ವಗೈರೆ ಬಸ್ತು ..ನಗಳೂ ಈ ಕಾನೂನು ಅನುಸರಿಸಿ ಮೊಕರರಾದ ಮ್ಯುನಿಸಿಪೆಲ್ ಕಮ್ಮಿಷನರುಗಳಿಗಾಗಲಿ, ಅವರು ಆಜ್ಞಾಪಿಸುವ ಮೇರೆಗಾಗಲಿ ಸಂದಾಯವಾಗತಕ್ಕದ್ದು, ಮತ್ತು ಸಾಬಕು ಮ್ಯುನಿಸಿಪೆಲ್ ಕಮ್ಮಿಷನರುಗಳು ಆಗ್ಯೆ ಬಾಕಿ ಯಿರುವ ಮತ್ತು ಸಲ್ಲಿಸಬೇಕಾದ ಅಥವಾ ಅವರ ದೆಸೆಯಿಂದ ವಸೂಲ್ಮಾಡಲ್ಪಡತಕ್ಕ ವಗೈರೆ ಬಸ್ತು ಮೊಬಲಗುಗಳನ್ನು (ಹೊಸ) ಮ್ಯುನಿಸಿಪೆಲ್ ಕಮ್ಮಿಷನರುಗಳಿಗೇ ಸಂದಾಯವಾಗತಕ್ಕದ್ದು. ಅಥವಾ ಅವರುಗಳ ದೆಸೆಯಿಂದ ವಸೂಲ್ ಮಾಡಲ್ಪಡತಕ್ಕದ್ದು, ಸದರೀ ಮಾಜಿ ಮ್ಯುನಿಸಿಪೆಲ್ ಕಮ್ಮಿಷನರ್‌ಗಳಿಗೆ, ಅಥವಾ ಬೆಂಗಳೂರು ಷಹರಿಗಾಗಿ ಮೊಕರರ್ ಆಗಿದ್ದ ಯಾರಾದರು ಪೂರ್ವದ ಮ್ಯುನಿಸಿಪೆಲ್ ಕಮ್ಮಿಷನರ್‌ಗಳಿಗೆ, ಅಥವಾ ಅವರ ಪೈಕಿ ಯಾರಿಗಾಗಲಿ ಅಥವಾ ಅವರ ತರಫಿನಲ್ಲಿ ಯಾವನಾದರೊಬ್ಬನಿಗೆ ಯಾ ಸದರೀ ಮಾಜಿ ಮ್ಯುನಿಸಿಪೆಲ್ ಕಮ್ಮಿಷನರ್‌ಗಳು ಮತ್ತೊಂದವರೊಡನೆ ಯಾ ಅವರಿಗೋಸ್ಕರ ಇತರರೊಡನೆ ಅಥವಾ ಅವರುಗಳ ದೆಸೆಯಿಂದ ಯಾ ಅವರುಗಳಿಗೋಸ್ಕರ ಮತ್ತೊಬ್ಬರಿಂದ ಈ ಕಾನೂನು ಜಾರಿಯೊಳಗೆ ಬರುವದಕ್ಕೆ ಪೂರ್ವ ನಡೆದ ವಗೈರೆ ಬಸ್ತು ಗುತ್ತಿಗೆಗಳೂ, ಮಾಡಲ್ಪಟ್ಟ ವಗೈರೆ ಬಸ್ತು ಕರಾರ್‌ಗಳೂ, ಒಡಂಬಡಿಕೆಗಳೂ, ಪತ್ರಗಳೂ, ಪ್ರಾಮಿಸರಿ ನೋಟುಗಳೂ, ಜಾಮೀನು ಪತ್ರಗಳೂ, ಮತ್ತು ಗುತ್ತಿಗೆ ಯಾ ಯಿತರ ವಿಧದಿಂದ ಹುಟ್ಟುವ ವಗೈರೆ ಬಸ್ತು ಮಾಮೂಲಾದ ಯಿಂತಾವುಗಳನ್ನು ಮಾಡುವ ಹಕ್ಕುಗಳೂ, ಈ ಕಾನೂನು ಹುಟ್ಟ ಇರದೇ ಇದ್ದರೆ ಯಾವ ಮೇರೆ ಸದರೀ ಮಾಜಿ ಮ್ಯುನಿಸಿಪೆಲ್ ಕಮ್ಮಿಷನರ್‌ಗಳ ಯಾ ಅವರ ಪೈಕಿ ಯಾರಾಗಲಿ ಇಂತಾವರ ಪಕ್ಷವಾಗಿ, ಇವರ ದೆಸೆಯಿಂದ, ಯಿಂತಾವರ ಮೇಲೆ ವ ಇಂತಾವರನ್ನು ಕುರಿತು ಅಮಲಿನಲ್ಲಿ ಬಂದಿರುವದೋ ವ ನಡವಳಿತ ನಡಿಸಲ್ಪಟ್ಟಿರುವದೋ ವ ಅಮಲ್ ಚಲಾಯಿಸಲ್ಪಟ್ಟಿರುವದೋ ಅದೇರೀತಿಯಾಗಿ ಸಂಬಂಧ ಬಿದ್ದಂತೆ ಮ್ಯುನಿಸಿಪೆಲ್ ಕಮ್ಮಿಷನರ್‌ಗಳ ಪಕ್ಷವಾಗಿ, ಅವರ ದೆಸೆಯಿಂದ ಅವರ ಮೇಲೆ ಮತ್ತು ಅವರುಗಳನ್ನು ಕುರಿತು ಅಮಲಿನಲ್ಲಿ ಬರತಕ್ಕದ್ದು, ಮತ್ತು ನಡವಳಿತ ನಡಿಸಲ್ಪಡಬಹುದು ವ ಅಮಲ್ ಚಲಾಯಿಸಲ್ಪಡಬಹುದು.

ಕಮ್ಮಿಷನರ್‌ಗಳಿಂದಾಗಲಿ, ಕಮ್ಮಿಷನರ್‌ಗಳ ಮೇಲಾಗಲಿ ಆಗತಕ್ಕ ವ್ಯಾಜ್ಯಗಳು ವಗೈರೆ ತಗ್ಗತಕ್ಕದ್ದಿಲ್ಲವೆಂಬುದು ವಗೈರೆ.

8. ಈ ಕಾನೂನು ಅಮಲಿನಲ್ಲಿ ಬರುವದಕ್ಕೆ ಪೂರ್ವ ಸಾಬಕು ಮ್ಯುನಿಸಿಪೆಲ್ ಕಮ್ಮಿಷನರ್‌ಗಳಿಂದಾಗಲಿ, ಅವರ ಮೇಲಾಗಲಿ ಆರಂಭಿಸೋಣಾದ ಯಾ ಮಾಡೋಣಾದ ಯಾವ ದಾವೇಯಾಗಲಿ ಕ್ರಿಯೆಯಾಗಲಿ ಇತರ ನಡವಳಿತ ಯಾವದಾಗಲಿ, ತಗ್ಗತಕ್ಕದ್ದಲ್ಲ, ಯಾ ಮುನ್ನ ಆಗತಕ್ಕದ್ದಲ್ಲ, ಯಾ ಈ ಕಾನೂನಿನಿಂದ ಅನರ್ಥವನ್ನು ಹೊಂದತಕ್ಕದ್ದಲ್ಲ, ಪರಂತು ಈ ಕಾನೂನು ಹುಟ್ಟದೇ ಇದ್ದರೆ ಸರ್ವಾಂಶದೊಳಗೂ ಸಾಬಕು ಮ್ಯುನಿಸಿಪೆಲ್ ಕಮ್ಮಿಷನರ್‌ಗಳ ವಿಷಯದಲ್ಲಿಯಾಗಲಿ ಅವರ ಪೈಕಿ ಯಾರ ವಿಷಯದಲ್ಲಾಗಲಿ ಯಾವ ಮೇರೆ ನಡಿಸಲ್ಪಟ್ಟಿರುವದೋ ಮತ್ತು ಜಾರೀ ಮಾಡಲ್ಪಟ್ಟಿರುವದೋ ಅದೇ ಮೇರೆ ಮ್ಯುನಿಸಿಪೆಲ್ ಕಮ್ಮಿಷನರ್‌ಗಳ ಪಕ್ಷವಾಗಿಯೂ, ಅವರ ಮೇಲೆಯೂ ಸಹ ನಡಿಯತಕ್ಕದ್ದು, ವ ಜಾರೀಯಾಗತಕ್ಕದ್ದು; ಮತ್ತು ಈ ಕಾನೂನು ಜಾರೀಯಲ್ಲಿ ಬರುವದಕ್ಕೆ ಪೂರ್ವ ಮಾಡಲ್ಪಟ್ಟ ವಗೈರೆ ಬಸ್ತು ಡಿಕ್ರೀಗಳು, ಹುಕ್ಕುಂಗಳು, ಮೊಕರರ್ ಮಾಡೋಣಾದ ವ ತೆರಬೇಕಾದ ವಗೈರೆ ಬಸ್ತು ಜುರ್ಮಾನಗಳು ದಂಡಗಳು, ಅಮಲ್ ಜರಿಗಿಸಲ್ಪಡತಕ್ಕದ್ದು ವಸೂಲ್ಮಾಡಲ್ಪಡತ

ಕ್ಕದ್ದು, ವ ಬರವಮಾಡಿಕೊಳ್ಳತಕ್ಕದ್ದು, ನಡವಳಿತ ನಡಿಸಲ್ಪಡತಕ್ಕದ್ದು, ಮತ್ತು ಅಮಲ್ ಜರಿಗಿಸಲ್ಪಡಬಹುದು, ವಸೂಲ್ಮಾಡಲ್ಪಡಬಹುದು, ಬರವಮಾಡಿಕೊಳ್ಳಲ್ಪಡಬಹುದು, ವ ನಡವಳಿತ ನಡಿಸಲ್ಪಡಬಹುದು; ಈ ಕಾನೂನ್ ಜಾರೀಯಲ್ಲಿ ಬರುವದಕ್ಕೆ ಪೂರ್ವಷುರುವಾದಂತಾ ದರೋಬಸ್ತು ಸರ್ಕಾರಿ ನಡವಳಿತಗಳನ್ನು ಈ ಕಾನೂನ್ ಹುಟ್ಟದೆ ಇದ್ದರೆ ಹ್ಯಾಗೋ ಅದೇ ಮೇರೆಗೇನೇ ಜಾರೀಯಲ್ಲಿಟ್ಟಿರತಕ್ಕದ್ದು, ನಡಿಸತಕ್ಕದ್ದು, ಪೂರ್ತಿಮಾಡತಕ್ಕದ್ದು, ಮತ್ತು ಜಾರಿಯಲ್ಲಿಟ್ಟಿರಬಹುದುವ ನಡಿಸಲ್ಪಡಬಹುದು, ವ ಪೂರ್ತಿ ಮಾಡಬಹುದು, ಯಾತಕ್ಕಂದರೆ ಈ ಕಾನೂನ್ ಅನುಸರಿಸಿ ಏರ್ಪಟ್ಟ ಮ್ಯುನಿಸಿಪಲ್ ಕಮ್ಮಿಷನರುಗಳು ಸರ್ವಾಂಶದಿಂದಲೂ ಮೇಲೆ ಕಂಡ ವಿಷಯಗಳಲ್ಲಿ ಸಾಬಕು ಮ್ಯುನಿಸಿಪಲ್ ಕಮ್ಮಿಷನರುಗಳಿಗೆ ಬದಲಾಗಿರುತ್ತಾರೆ.

ಬೆಂಗಳೂರು ಷಹರ್ ಮ್ಯುನಿಸಿಪಲ್ ಫಂಡ ನಲ್ಲಿ ಏನೇನು ಸೇರಿ ಇರತಕ್ಕದ್ದು.

ಈ ಕಾನೂನ್ ಅನುಸರಿಸಿಯಾಗಲಿ ಇತರ ಮತ್ಯಾವ ಕಾನೂನ್ ಅನುಸರಿಸಿಯಾಗಲಿ ಬೆಂಗಳೂರು ಷಹರ್ ಮ್ಯುನಿಸಿಪಲ್ ಕಮ್ಮಿಷನರ್‌ಗಳಲ್ಲಿ ಬರುವ ದರೋಬಸ್ತು ಮೊಬಲಗ್‌ಗಳೂ, ಈ ಕಾನೂನ್ ಅನುಸರಿಸಿ ಅವರುಗಳಿಗೆ ತೆರಲ್ಪಟ್ಟ ಯಾ ಅವರಿಂದ ವಸೂಲ್ಮಾಡಲ್ಪಟ್ಟ ದರೋಬಸ್ತು ಜುಲ್ಮಾನೆಗಳೂ, ರುಸುಂಗಳೂ, ದಂಡಗಳೂ, ಮತ್ತು ಶ್ರೀಮನ್ ಮೈಸೂರು ಮಹಾರಾಜಾ ಸರ್ಕಾರದವರಿಂದ ಸದರೀ ಷಹರಿನಲ್ಲಿ ಪಾಕೀಜೆಗೋಸ್ಕರವಾಗಿಯೂ, ಅಭಿವೃದ್ಧಿಗೋಸ್ಕರವಾಗಿಯೂ, ಅವರ ಸುಪರ್ದು ಮಾಡಲ್ಪಡುವ ದರೋಬಸ್ತು ಹಣಗಳೂ ಸೇರಿ ಬೆಂಗಳೂರು ಷಹರ್ ಮ್ಯುನಿಸಿಪಲ್ ಫಂಡು ಯೆಂಬದಾಗಿ ಯೇರ್ಪಟ್ಟು ಸದರೀ ಷಹರ್ ಮ್ಯುನಿಸಿಪಲ್ ಕಮ್ಮಿಷನರ್‌ಗಳ ವಶದಲ್ಲಿ ಬರತಕ್ಕ ಯಾವ ಸ್ವಭಾವದ್ದಾಗಲಿ ಯಾವ ಬಗೇದಾಗಲಿ ದರೋಬಸ್ತು ಸ್ವತ್ತಿನೊಡನೆ ಇದರಲ್ಲಿ ಮುಂದೆ ವಿಧಿಸಲ್ಪಡುವ ರೀತಿಯಾಗಿ ಸದರೀ ಕಮ್ಮಿಷನರ್‌ಗಳ ಅಪ್ಪಣೆಯಲ್ಲಿಯೂ, ವಿಚಾರಣೆಯೊಳಗೂ, ಅಧಿಕಾರದಲ್ಲಿಯೂ, ಇರತಕ್ಕದ್ದು.

ಸದರೀ ಫಂಡ್ ಯಲ್ಲಿ ಇಡಲ್ಪಡತಕ್ಕದ್ದು ಯಾವ ರೀತಿಯಾಗಿ ಅದರಲ್ಲಿಂದ ಹಣ ತೆಗದುಕೊಳ್ಳತಕ್ಕದ್ದು.

10. ಮ್ಯುನಿಸಿಪಲ್ ಫಂಡಿನ ವಿಷಯವಾಗಿ ಮ್ಯುನಿಸಿಪಲ್ ಕಮ್ಮಿಷನರ್‌ಗಳಲ್ಲಿ ಬರತಕ್ಕ ದರೋಬಸ್ತು ಹಣಗಳೂ, ಈ ಕಾನೂನ್ ಅನುಸರಿಸಿ ಅವರುಗಳಿಂದಾಗಲಿ, ಅವರ ಕಡೆ ಆಫಿಸರ್‌ಗಳಿಂದಾಗಲಿ ವಸೂಲ್ ಮಾಡಲ್ಪಟ್ಟ ದರೋಬಸ್ತು ಜುಲ್ಮಾನೆಗಳೂ, ರುಸುಂಗಳೂ, ದಂಡಗಳೂ, ಶ್ರೀಮನ್ ಮೈಸೂರು ಮಹಾರಾಜಾ ಸರ್ಕಾರದವರಿಂದ ಖಯಿಂದ ನಿಯಮಿಸಲ್ಪಡುವ ಪ್ರಕಾರ ಬೆಂಗಳೂರಲ್ಲಿ ಸ್ಥಾಪಿಸಲ್ಪಟ್ಟಿರುವ ಮದರಾಸ್ ಬ್ಯಾಂಕಿಗೆ ಸೇರಿದ ಬ್ರಾಂಚ್ ಬ್ಯಾಂಕಿನಲ್ಲಾಗಲಿ, ಸರ್ಕಾರೀ ಖಜಾನೆಯಲ್ಲಾಗಲಿ ಇಡಲ್ಪಡತಕ್ಕದ್ದು. ಈ ಕಾನೂನ್ ಅನುಸರಿಸಿ ಇದರಲ್ಲಿ ಇನ್ನು ಮುಂದೆ ಮೊಕರರ್ ಮಾಡಲ್ಪಡುವ ಪ್ರಕಾರ ಮ್ಯುನಿಸಿಪಲ್ ಕಮ್ಮಿಷನ್ ಪ್ರೆಸಿಡೆಂಟರಿಗೆ ತಗಲುವ ಮತ್ತು ಅವರಿಂದ ಕೊಡಲ್ಪಡತಕ್ಕ ದರೋಬಸ್ತು ಖರ್ಚುಗಳೂ ಮ್ಯುನಿಸಿಪಲ್ ಫಂಡ್ಸ್ ಯಾನೇ ದ್ರವ್ಯದಿಂದ ಕೊಡಲ್ಪಡತಕ್ಕದ್ದು; ಮತ್ತು ಸದರೀ ದ್ರವ್ಯದ ಮೇಲೆ ಬರತಕ್ಕ ದರೋಬಸ್ತು ಹುಕುಂಗಳಿಗೆ ಯಾ ಚೆಕ್ಕುಗಳಿಗೆ ಪ್ರೆಸಿಡೆಂಟರ ದಸ್ತಖತ್ ಆಗತಕ್ಕದ್ದು. ಸದರೀ ಫಂಡಿನ ಮೇಲೆ ಬರುವ, ಹಾಗೆ ರುಜು ಮಾಡಲ್ಪಟ್ಟ ದರೋಬಸ್ತು ಆರ್ಡರ್‌ಗಳಿಗೂ, ಯಾ ಚೆಕ್ಕುಗಳಿಗೂ ಮೊಬಲಗ್ ಕೊಡುವದು ಸದರೀ ಬ್ಯಾಂಕಿಗಾಗಲಿ, ಖಜಾನೆಗಾಗಲಿ ನ್ಯಾಯವಾಗಿರತಕ್ಕದ್ದು.

ಈ ರೆಗ್ಯುಲೇಷನಿನ ಕಾರ್ಯಗಳಿಗೋಸ್ಕರ ಒಬ್ಬ ಎಗ್ಜಿಕ್ಯೂಟಿವ್ ಆಫಿಸರನ್ನು ಮೊಕರರ್ಮಾಡುವಿಕೆ.

"11. ತಾತ್ಕಾಲಿಕದ ಬೆಂಗಳೂರು ಡೆಪ್ಯುಟಿ ಕಮ್ಮಿಷನರ್‌ಯವರು ಬೆಂಗಳೂರು ಷಹರಿನ ಮ್ಯುನಿಸಿಪಲ್ ಕಮ್ಮಿಷನರ್‌ಗಳ ಎಕ್ಸ್ ಆಫಿಷಿಯೋ ಪ್ರೆಸಿಡೆಂಟರಾಗಿ ಇರತಕ್ಕದ್ದು ಮತ್ತು ಶ್ರೀಮನ್ ಮೈಸೂರು ಮಹಾರಾಜಾ ಸರ್ಕಾರದವರು ಆಗಿಂದಾಗ್ಯೆ "ಬೆಂಗಳೂರು ಷಹರಿನ ಮ್ಯುನಿಸಿಪಲ್ ಕಮ್ಮಿಷನರ್‌ಗಳ ವೈಸ್ ಪ್ರೆಸಿಡೆಂಟರೆಂದು" ಕರೆಯಲ್ಪಡುವ ಒಬ್ಬ ಆಫಿಸರರನ ಮೊಕರರ್ಮಾಡಬಹುದು. ಈ ರೆಗ್ಯುಲೇಷನ್‌ಗಳ ಕಾರ್ಯಗಳಿಗಾಗಿ ಸಂಪೂರ್ಣವಾದ ಕಾರ್‌ಬಾರ ಅಧಿಕಾರವೂ ಮತ್ತು ಜವಾಬ್‌ದಾರಿಯೂ ಪ್ರೆಸಿಡೆಂಟರಲ್ಲಿಯೂ ಮತ್ತು ಅವರ ಗೈರ್‌ಹಾಜರಿಯಲ್ಲಿ ಅಥವಾ ಅವರ ಮೇಲ್ವಿಚಾರಣೆಗೆ ಒಳಪಟ್ಟು ಮತ್ತು ಅವರ ಅಪ್ಪಣೆಗಳನುಸರಿಸಿ ವೈಸ್ ಪ್ರೆಸಿಡೆಂಟರಲ್ಲಿಯೂ ಇದ್ದಾಗಿ ಇರತಕ್ಕದ್ದು. ಮ್ಯುನಿಸಿಪಲ್ ಕಮ್ಮಿಷನರುಗಳಿಂದ ಮಾಡಲ್ಪಡತಕ್ಕದ್ದೆಂದು ಇದರಲ್ಲಿ ಮುಂದೆ ನಿಯಮಿಸಲ್ಪಡುವ ತಮಾಂ ಕಾರ್ಯಾರೀ ಕೆಲಸಗಳೂ, ಸಂದರ್ಭದ ದೆಶೆಯಿಂದ ವಿರುದ್ಧಾಭಿಪ್ರಾಯವೇನೂ ಕಾಣಬಾರದೆ ಇದ್ದಲ್ಲಿ, ಸದರೀ ಪ್ರೆಸಿಡೆಂಟರಿಂದಾಗಲಿ, ವೈಸ್ ಪ್ರೆಸಿಡೆಂಟರಿಂದಾಗಲಿ, ಮಾಡಲ್ಪಡತಕ್ಕದ್ದು: ಪರಂತು ಈ ಸೆಕ್ಷನಿನಲ್ಲಿ ಅಡಗಿರುವ ಯಾವ ಅಂಶವೂ ಸದರೀ ಪ್ರೆಸಿಡೆಂಟರ ಅಥವಾ ವೈಸ್ ಪ್ರೆಸಿಡೆಂಟರ ಯಾವ ಕಾರ್ಯವಾಗಲಿ, ಯಾವ ಮೀಟಿಂಗಿನಲ್ಲಾಗಲಿ ಹಾಜರಿರುವ ಮ್ಯುನಿಸಿಪಲ್ ಕಮ್ಮಿಷನರುಗಳಿಂದ ರದ್ದುಮಾಡಲ್ಪಡತಕ್ಕದ್ದನ್ನು ನಿರೋಧಿಸುವದಾಗಿ ಅಭಿಪ್ರಾಯಪಡತಕ್ಕದ್ದಲ್ಲ."

ಕಾರಬಾರೀ ಆಫಿಸರ ಅಧಿಕಾರ ಮತ್ತು ತಲಬ್.

" 12. ಈ ರೆಗ್ಯುಲೇಷರ್ನಗಳಿಂದ ಪ್ರೆಸಿಡೆಂಟರಿಗೆ ವುಂಟುಮಾಡಲ್ಪಟ್ಟ ತಮಾಂ ಅಧಿಕಾರಗಳೂ, ವಿಧಿಸಲ್ಪಟ್ಟ ತಮಾಂ ಕರ್ತವ್ಯಗಳೂ ವೈಸ್ ಪ್ರೆಸಿಡೆಂಟರಿಗೂ ಇದರ ದೆಶೆಯಿಂದ ವುಂಟ ಮಾಡಲ್ಪಟ್ಟಿರುತ್ತದೆ ಮತ್ತು ಕೊಡಲ್ಪಟ್ಟಿರುತ್ತದೆ, ವೈಸ್ ಪ್ರೆಸಿಡೆಂಟರವರು, ತಮ್ಮ ಕೆಲಸದಿಂದ ಶ್ರೀಮನ್ಮಹಾರಾಜಾ ಸರ್ಕಾರದವರ ಅಪ್ಪಣೇ ಮೇಲೆ ನಿವೃತ್ತಿ ಮಾಡಲ್ಪಡತಕ್ಕದ್ದು ಮತ್ತು ಈ ರೆಗ್ಯುಲೇಷರ್ನಗಳನುಸರಿಸಿ ವಸೂಲ್ಮಾಡಲ್ಪಡತಕ್ಕ ಮ್ಯುನಿಸಿಪೆಲ್ ಫಂಡಿನಿಂದ ಮತ್ತು ಯಾವ ದಾಮಾಷಾಯಿ ಮೇರೆ ಶ್ರೀಮನ್ಮಹಾರಾಜಾ ಸರ್ಕಾರದವರು ಆಗಿಂದಾಗ್ಯೆ ಅಪ್ಪಣೆ ಮಾಡುತ್ತಾರೋ ಅಂಥಾ ದಾಮಾಷಾಯಿ ಪ್ರಕಾರ ಪ್ರತಿ ಫಂಡಿನಿಂದ ಅಂಥಾ ಅಲೋವೆನ್ಸಗಳು ಅವರಿಗೆ ಕೊಡಲ್ಪಡತಕ್ಕದ್ದು."

ಎಗ್ಸಿಕ್ಯೂಟಿವ್ ಇಂಜನಿಯರರನ್ನೂ, ಮ್ಯುನಿಸಿಪೆಲ್ ತೆರಿಗೇ ಕಲೆಕ್ಟರ್‌ಯಾನೇ ವಸೂಲೀದಾರರನ್ನೂ, ಶಾನಿಟೇರೀ ಇನ್ಸ್ಪೆಕ್ಟರರನ್ನೂ ಮೊಕರರ್ರ್ಮಾಡುವಿಕೆ.

13. ಮೈಸೂರು ಶ್ರೀಮನ್ಮಹಾರಾಜಾ ಸರ್ಕಾರದವರು ಒಬ್ಬ ಎಗ್ಸಿಕ್ಯೂಟಿವ್ ಇಂಜನಿಯರರನ್ನೂ, ಒಬ್ಬ ಮ್ಯುನಿಸಿಪೆಲ್ ತೆರಿಗೇ ವಸೂಲೀದಾರರನ್ನೂ, ಒಬ್ಬ ಶಾನಿಟೇರೀ ಇನ್ಸ್ಪೆಕ್ಟರ ಯಾನೇ ಜನಗಳ ಆರೋಗ್ಯವನ್ನು ವಿಚಾರಣೆ ಮಾಡುವ ಅಧಿಕಾರಿಯನ್ನೂ ಮೊಕರರ್ರ್ಮಾಡತಕ್ಕದ್ದು. ಇವರುಗಳು ಮ್ಯುನಿಸಿಪೆಲ್ ದ್ರವ್ಯದ ದೆಶೆಯಿಂದ, ಮೈಸೂರು ಶ್ರೀಮನ್ಮಹಾರಾಜಾ ಸರ್ಕಾರದವರು ನಿಷ್ಕರ್ಷೆ ಮಾಡುವಂತಾ ತಲಬನ್ನು ಮತ್ತು ಅಷ್ಟರ ಪರಿಮಾಣಕ್ಕೆ ಪ್ರತಿ ಫಂಡಿನಿಂದಲೂ ತೆಗದು ಕೊಳ್ಳತಕ್ಕದ್ದು. ಅಂಥಾ ಆಫಿಸರು ಮೈಸೂರು ಶ್ರೀಮನ್ಮಹಾರಾಜಾ ಸರ್ಕಾರದವರ ಯಿಷ್ಟಪ್ರಕಾರ ತೆಗದು ಹಾಕಲ್ಪಡತಕ್ಕದ್ದು.

ಮ್ಯುನಿಸಿಪೆಲ್ ಆಫಿಸರ್‌ಗಳಿಗೆ ಗವರ್ನಮೆಂಟಿನವರು ರಜಾ ವಗೈರ ಕೊಡತಕ್ಕದ್ದು.

14. ಈ ಕಾನೂನಿನಲ್ಲಿ ಯಿದರ ಹಿಂದೆಕಡೇ ನಾಲ್ಕು ಸೆಕ್ಷರ್ನಗಳನುಸರಿಸಿ ಮೊಕರರ್ರ್ಮಾಡಲ್ಪಟ್ಟ ಆಫಿಸರಗಳ ಪೈಕಿ ಯಾರಿಗಾಗಲಿ, ಮೈಸೂರು ಶ್ರೀಮನ್ಮಹಾರಾಜಾ ಸರ್ಕಾರದವರು ತಮಗೆ ಯುಕ್ತ ತೋರುವಂಥಾ ರಜಾ ಕೊಡಬಹುದು, ಮತ್ತು ಅಂಥಾ ಯಾವ ಆಫಿಸರ್‌ಗಳಿಗಾಗಲಿ, ರಜಾ ಕೊಡುವ ಪಕ್ಷಕ್ಕೆ ಮೈಸೂರು ಶ್ರೀಮನ್ಮಹಾರಾಜಾ ಸರ್ಕಾರದವರು, ಅಂಥಾ ಆಫಿಸರ್‌ಗಳಿಗೆ ಬದಲಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಯಾವ ಮನುಷ್ಯನನ್ನಾಗಲಿ ಮೊಕರರ್ರ್ಮಾಡಬಹುದು, ಅಥವಾ ಅವರುಗಳು ರಜಾದ ಮೇಲೆ ಗೈರ್ ಹಾಜರಾಗಿರುವ ಕಾಲದಲ್ಲಿ ಅಂಥಾ ಆಫಿಸರರ ಕೆಲಸಗಳನ್ನು ನಡಿಸುವ ಬಗ್ಯೆ ಮೈಸೂರು ಶ್ರೀಮನ್ಮಹಾರಾಜಾ ಸರ್ಕಾರದವರಿಗೆ ಯುಕ್ತ ತೋರುವ ಏರ್ಪಾಡುಗಳನ್ನು ಮಾಡಬಹುದು. ಮತ್ತು ಮೈಸೂರು ಶ್ರೀಮನ್ಮಹಾರಾಜಾ ಸರ್ಕಾರದವರು ಈ ಕಾನೂನಿನ ಕಾರ್ಯಗಳಿಗೋಸ್ಕರ ವಿನಿಯೋಗಿಸಲ್ಪಡತಕ್ಕ ದ್ರವ್ಯದಲ್ಲಿಂದ ಮೇಲೆ ಕಂಡಂತಾ ಯಾವ ಆಫಿಸರುಗಳಿಗಾಗಲಿ, ರಜಾದ ಮೇಲೆ ಗೈರ ಹಾಜರಾಗಿರುವ ಕಾಲದಲ್ಲಿ ಮೈಸೂರು ಶ್ರೀಮನ್ಮಹಾರಾಜಾ ಸರ್ಕಾರದವರಿಗೆ ಯುಕ್ತವೆಂದು ತೋರುವ ತಲಬನ್ನು ಕೊಡುವಂತೆ ಅಪ್ಪಣೇ ಮಾಡಬಹುದು. ಪರಂತು ಸದರೀ ದ್ರವ್ಯದಲ್ಲಿಂದ ಯಾವ ಸಂಗತಿಯಲ್ಲಿಯೂ, ಈ ಸೆಕ್ಷರ್ನ ಅನುಸರಿಸಿ ಯಾವ ತಲಬಾಗಲಿ, ಕೊಡಲ್ಪಟ್ಟ ಸಬಬಿನ ಮೇಲೆ, ರಜಾ ಕೊಡಲ್ಪಡದೇ ಯಿದ್ದರೆ, ಕುಲ್ ಯೆಷ್ಟರ ಖರ್ಚು ತಗಲುವದೋ ಅದಕ್ಕಿಂತ ಜಾಸ್ತಿಯಾದ ಖರ್ಚು ಮಾಡತಕ್ಕದ್ದಲ್ಲವು.

ಮ್ಯುನಿಸಿಪೆಲ್ ಕಮ್ಮಿಷನಿನ ಪ್ರಸಿಡೆಂಟರು ಆಫಿಸರ್‌ಗಳನ್ನು ಮೊಕರರ ಮಾಡುವಿಕೆ.

15. ಬೆಂಗಳೂರು ಷಹರ್ ಮ್ಯುನಿಸಿಪೆಲ್ ಕಮ್ಮಿಷರ್ನಗಳ ಪ್ರೆಸಿಡೆಂಟರು ಈ ಕಾನೂನಿನ 12 ವ 13ನೇ ಸೆಕ್ಷರ್ನಗಳಲ್ಲಿ ನಮೂದಿರುವ ಆಫಿಸರ್‌ಗಳಲ್ಲದೆ ಯಿತರರಾಗಿಯೂ, ಈ ಕಾನೂನಿನ ಅಮಲ್ ನಡಿಸುವದರಲ್ಲಿ ಕುಮ್ಮಕ್ ಮಾಡಲಿಕ್ಕೆ ಜರೂರೆಂತಲೂ, ಯುಕ್ತವೆಂತಲೂ ಮ್ಯುನಿಸಿಪೆಲ್ ಕಮ್ಮಿಷನರ್‌ಗಳೆಣಿಸುವಂತಾ ದರೋಬಸ್ತು ಆಫಿಸರುಗಳನ್ನೂ ಆಗಿಂದಾಗ್ಯೆ ಮೊಕರರ್‌ಮಾಡಬಹುದು; ಮತ್ತು ಅಂತಾ ಆಫಿಸರ್‌ಗಳ ಪೈಕಿ ಯಾರನ್ನಾಗಲಿ ಆಗಿಂದಾಗ್ಯೆ ಕೆಲಸದಿಂದ ತೆಗದು ಹಾಕಿ ಅವನ ಸ್ಥಳದಲ್ಲಿ ಯಿತರರನ್ನು ಮೊಕರರ್‌ಮಾಡಿ, ಈ ಕಾನೂನಿನ ಕಾರ್ಯಗಳಿಗೋಸ್ಕರ ವಿನಿಯೋಗಿಸಲ್ಪಡತಕ್ಕ ದ್ರವ್ಯದ ದೆಶೆಯಿಂದ ಸದರೀ ಆಫಿಸರ್‌ಗಳಿಗೆ ಮಾಹೇಯಾನಾ ಮುನ್ನೂರು ರೂಪಾಯಿಗೆ ಮೀರದೆ ಯೆಷ್ಟರ ತಲಬ್‌ಗಳು ಯುಕ್ತವೆಂತ ಕಮ್ಮಿಷನರ್‌ಗಳು ಭಾವಿಸುತ್ತಾರೋ ಅಷ್ಟರ ತಲಬನ್ನು ಕೊಡಬಹುದು, ಪರಂತು ಮಾಹೇಯಾನಾ ನೂರಐವತ್ತು ರೂಪಾಯಿಗೆ ಮೀರಿ ತಲಬ್ ಸಲ್ಲುವಂತಾ ಯಾವ ಉದ್ಯೋಗಕ್ಕೂ ಮ್ಯುನಿಸಿಪೆಲ್ ಕಮ್ಮಿಷನರ್ ಮುಂಜೂರಾತೀ ಯಿಲ್ಲದೆ ಯಾವ ಮನುಷ್ಯನನ್ನೂ ಈ ಸೆಕ್ಷರ್ನ ಅನುಸರಿಸಿ ಮೊಕರರ್ ಮಾಡಕೂಡದು, ಯಾ ಅಂತಾ ಕೆಲಸದಿಂದ ತೆಗದು ಹಾಕಕೂಡದು.

ಗುತ್ತಿಗೆ ವಗೈರೆಯಲ್ಲಿ ಸಂಬಂಧ ಪಡುವ ಆಫೀಸರ ಮುಂತಾದವರಿಗೆ ದಂಡನೆ.

16. ಕಲಂ 1. ಈ ಕಾನೂನ್ ಅನುಸರಿಸಿ ಮೊಕರರ್ ಮಾಡಲ್ಪಟ್ಟ ಯಾವ ಪ್ರೆಸಿಡೆಂಟರಾಗಲಿ, ಕಮ್ಮಿಷನರಾಗಲಿ, ಆಫೀಸರಾಗಲಿ, ನೌಕರನಾಗಲಿ, ಕಮ್ಮಿಷನರ್‌ಗಳೊಡನೆ ಮಾಡಲ್ಪಟ್ಟ ಅಥವಾ ಅವರಿಗಾಗಿ ನೆರವೇರಿಸಲ್ಪಟ್ಟ ಯಾವ ಕಂಟ್ರಾಕ್ಟಿನಲ್ಲಾಗಲಿ, ಕಾಮಗಾರಿ ಯಲ್ಲಾಗಲಿ ಸಂಬಂಧ ಪಡಕೂಡದು, ಅಥವಾ ಪ್ರಯೋಜನಾಶೆಯನ್ನು ಪಡೆಯಕೂಡದು, ಯಾವ ಪ್ರೆಸಿಡೆಂಟರಾಗಲಿ, ಕಮ್ಮಿಷನರಾಗಲಿ, ಆಫೀಸರಾಗಲಿ, ನೌಕರನಾಗಲಿ ಹಾಗೆ ಸಂಬಂಧ ಪಟ್ಟಿದ್ದರೆ ಅಥವಾ ಪ್ರಯೋಜನಾಶೆಯುಳ್ಳವರಾಗಿದ್ದರೆ, ತರುವಾಯ ಸದರೀ ಕಮ್ಮಿಷನ್ನಲ್ಲಾಗಲಿ, ಕಮ್ಮಿಷನ್ ಕೆಳಗಾಗಲಿ, ಯಾವ ಅಧಿಕಾರವನ್ನಾದರೂ, ನೌಕರಿಯನ್ನಾದರೂ, ವಹಿಸುವದಕ್ಕೆ ಅಥವಾ ಉದ್ಯೋಗದಲ್ಲಿ ಯಾ ಕೆಲಸದಲ್ಲಿ ಯಿರುತ್ತಾ ಯಿರುವದಕ್ಕೆ ಅರ್ಹನಲ್ಲದೆ ಇರುವದು ಮಾತ್ರವಲ್ಲದೆ ಐನೂರು ರೂಪಾಯಿಗಳನ್ನು ದಂಡವಾಗಿ ತೆರತಕ್ಕದ್ದು; ಸದರೀ ದಂಡದ ಮೊಬಲಗ್ ಯಾವ ಮನುಷ್ಯನಿಂದಲಾಗಲಿ ವ್ಯಾಜ್ಯದ ಮೂಲಕ ಪೂರಾ ಕೋರ್ಟು ಖರ್ಚು ದೇಖೀಲು ಬರಮಾಡಿಕೊಳ್ಳಲ್ಪಡಬಹುದು. ಪರಂತು ಪಾರ್ಲಿಮೆಂಟಿನ ಯಾ ಇಂಡ್ಯ ಗವರ್ನಮೆಂಟಿನ, ಯಾ ಫೋರ್ಟ್ ಸೆಂಟ್ ಜಾರ್ಜ್ ಗವರ್ನರ್ ಇನ್ ಕೌನ್ಸೆಲ್ಲವರ, ಯಾವದಾದರೂ ಆಕ್ಟಿನ ದೆಸೆಯಿಂದ ಯಾ ಆಕ್ಟಿನ ನಿಬಂಧನೆಗಳನುಸರಿಸಿ ಅಥವಾ ಚಾರ್ಟರ್ ಯಂಬ ಶಾಸನದ ದೆಶೆಯಿಂದ ಸ್ಥಾಪಿಸಲ್ಪಟ್ಟ ಯಾವದಾದರೂ ಜಾಯಿಂಟ್‌ಸ್ಟಾಕ್ ಕಂಪೆನಿಯ ಹಿಸ್ಸೇದಾರನಾಗಿರುವ ಯಾವ ಮನುಷ್ಯನಾಗಲಿ, ಅಂತಾ ಕಂಪೆನಿಯವರಿಗೂ ಕಮ್ಮಿಷನರ್‌ಗಳಿಗೂ ಪರಸ್ಪರ ನಡದಿರುವ ಯಾವದಾದರೂ ಗುತ್ತಿಗೆ ಸಬಬ್ ಯಾ ಅಂತಾ ಕಂಪೆನಿಯವರಿಂದ ನೆರವೇರಿಸೋಣಾದ ಯಾವದಾದರೂ ಕಾಮಗಾರೀ ಸಬಬ್ ಮ್ಯುನಿಸಿಪೆಲ್ ಕಮ್ಮಿಷನಿನ ಪ್ರೆಸಿಡೆಂಟರಾಗಿ ಯಾ ಕಮ್ಮಿಷನರಾಗಿ ಯಾ ಆಫೀಸರಾಗಿ ಯಾ ನೌಕರ್‌ನಾಗಿ ಮೊಕರರ್ ಆಗುವದಕ್ಕೆ ಅಭ್ಯಂತರಪಡಿಸಲ್ಪಡಕೂಡದು.

ಅಧಿಕಾರವಿಲ್ಲದ ರುಸುಂಗಳನ್ನು ತೆಗದುಕೊಳ್ಳುವ ಆಫೀಸರುಗಳು ವಗೈರೆಗೆ ದಂಡನೆ.

ಕಲಂ. 2. ಇಂಡಿಯನ್ ಪೆನಲ್‌ಕೋಡಿನ 21ನೇ ಸೆಕ್ಷನ್ ಅರ್ಥದಲ್ಲಿ ಸರ್ಕಾರ್ ನೌಕರನಲ್ಲದೆ, ಕಮ್ಮಿಷನಿನಲ್ಲಾಗಲಿ, ಕಮ್ಮಿಷನ್ ಕೆಳಗಾಗಲಿ ಉದ್ಯೋಗವನ್ನು ಪಡದಿರುವ ಯಾವ ಮನುಷ್ಯನಾಗಲಿ ತನಗೆ ನ್ಯಾಯವಾಗಿ ಸಲ್ಲುವ ಮೋಜನತಾನಾಕಿಂತ ಬೇರೆಯಾಗಿ ತನ್ನ ಉದ್ಯೋಗ ಸಂಬಂಧವಾದ ಕಾರ್ಯಗಳನ್ನು ಮಾಡುವದಕ್ಕೋಸ್ಕರ ಯಾ ಮಾಡದೇ ಯಿರುವದಕ್ಕೋಸ್ಕರ ಅಥವಾ ತನ್ನ ಉದ್ಯೋಗ ಸಂಬಂಧವಾದ ಕಾರ್ಯಗಳನ್ನು ನೆರವೇರಿಸುವದರಲ್ಲಿ ಯಾವ ಮನುಷ್ಯನಿಗಾಗಲಿ ಯಿಹಸಾನನ್ನಾದರೂ, ಬೇಯಿಹಸಾನನ್ನಾದರೂ ತೋರಿಸುವದಕ್ಕೋಸ್ಕರ ಯಾ ತೋರಿಸದೇ ಬಿಡುವದಕ್ಕೋಸ್ಕರ ಅಥವಾ ತಾನು ಸರ್ಕಾರ ನೌಕರನಾಗಿದ್ದು ಕಮ್ಮಿಷನರಲ್ಲಾಗಲಿ, ಮತ್ಯಾವ ಸರ್ಕಾರ ನೌಕರರಲ್ಲಾಗಲಿ, ಯಾ ಮೈಸೂರು ಶ್ರೀಮನ್ ಮಹಾರಾಜಾ ಸರ್ಕಾರದವರಲ್ಲಾಗಲಿ ಯಾವ ಉಪಕಾರವನ್ನಾದರೂ ಅಪಕಾರವನ್ನಾದರೂ ಮಾಡಲಿಕ್ಕೋಸ್ಕರ ಯಾ ಮಾಡುವ ಬಗ್ಯೆ ಪ್ರಯತ್ನ ಮಾಡಲಿಕ್ಕೋಸ್ಕರ ತನಗಾಗಿಯೇ ಆಗಲಿ ಮತ್ಯಾವನಿಗೋಸ್ಕರವೇ ಆಗಲಿ ಯಾವ ಮನುಷ್ಯನಿಂದಾದರೂ, ಬಹುಮಾನವಾಗಿ ಯಾವ ಪ್ರಯೋಜನವನ್ನಾಗಲಿ ಅಂಗೀಕರಿಸಿದರೆ, ಯಾ ಪಡಕೊಂಡರೆ, ಯಾ ಅಂಗೀಕರಿಸಲಿಕ್ಕೆ ಸಮ್ಮತಿಸಿದರೆ, ಯಾ ಪಡೆಯಲಿಕ್ಕೆ ಯತ್ನಿಸಿದರೆ ಅವನು ಇಂಡಿಯನ್ ಪೆನಲ್‌ಕೋಡಿನ 161ನೇ ಸೆಕ್ಷನಿನಿಂದ ವಿಧಿಸೋಣಾದ ರೀತಿಯಾಗಿ ದಂಡಿಸಲ್ಪಡತಕ್ಕದ್ದು.

ಕಮ್ಮಿಷನರ್‌ಗಳು ಆಫೀಸ್‌ಗಳನ್ನು ಏರ್ಪಾಡು ಮಾಡಿಕೊಳ್ಳತಕ್ಕದ್ದು.

17. ಬೆಂಗಳೂರು ಷಹರ್ ಮ್ಯುನಿಸಿಪೆಲ್ ಕಮ್ಮಿಷನರ್‌ಗಳು ಷಹರಿನೊಳಗೆ ಕೆಲಸಗಳು ನಡಿಸುವ ಬಗ್ಯೆ ಒಂದು ಆಫೀಸನ್ನು ಯೇರ್ಪಡಿಸಿ ಯಿಟ್ಟುಕೊಳ್ಳತಕ್ಕದ್ದು.

ಕೆಲಸ ಜರಿಗಿಸತಕ್ಕ ವಿಧಾನ.

ಸಭೆ ಕೂಡುವದಕ್ಕೆ ಕಾಲ.

ಪ್ರತಿ ಸಂವತ್ಸರದಲ್ಲಿಯೂ ಸಾಮಾನ್ಯಗಳಾದ ಸಭೆಗಳು ಹನ್ನೆರಡು ನಡೆಯತಕ್ಕವು; ಅಂತಾ ಸಭೆಗಳಲ್ಲಿ ಸಾಧಾರಣ ಕೆಲಸಗಳನ್ನು ನಡಿಸುವದಕ್ಕೋಸ್ಕರ ಮ್ಯುನಿಸಿಪಲ್ ಕಮ್ಮಿಷನರುಗಳು ಸೇರತಕ್ಕದ್ದು. ಮತ್ತು ಅವುಗಳಲ್ಲಿ ನಡೆಯತಕ್ಕ ಕೆಲಸವನ್ನು ಕುರಿತು ನೋಟಿಸ ಕೊಡುವದು ಜರೂರಾಗಿರತಕ್ಕದ್ದು. ಸಾಮಾನ್ಯ ಸಭೆಗಳು ಪ್ರತಿ ತಿಂಗಳ ಮೊದಲನೇ ವಾರದಲ್ಲಿಯಾಗಲಿ, ಮ್ಯುನಿಸಿಪೆಲ್ ಕಮ್ಮಿಷನಿನ ಪ್ರೆಸಿಡೆಂಟರಿಗೆ ಯಾವದಿನ ಯುಕ್ತವೆಂತ ತೋರುತ್ತೋ ಆ ದಿನಗಳಲ್ಲಾಗಲಿ ನಡೆಯತಕ್ಕದ್ದು ಅಂತಾ ಸಭೆಗಳಲ್ಲಿ ನಡೆಯಲ್ಪಡತಕ್ಕ ಕಾರ್ಯವನ್ನು ಕುರಿತ ನೋಟಿಸು ಮೈಸೂರು ಗೆಜೆಟ್ಟಿನಲ್ಲಿಯೂ ಬೆಂಗಳೂರಲ್ಲಿ ಪ್ರಕಟಿಸಲ್ಪಡುವ ಸ್ಥಳದ ಇಂಗ್ಲಿಷ್ ವ ದೇಶ ಭಾಷೆಯ ಒಂದು ಯಾ ಅನೇಕ

ವೃತ್ತಾಂತ ಪತ್ರಿಕೆಗಳಲ್ಲಿಯೂ ಸಭೆ ನಡೆಯುವದಕ್ಕೆ ಅಧವ ಪಕ್ಷ ಏಳು ದಿನಗಳಿಗೆ ಮುಂಚಿತವಾಗಿ ಪ್ರಕಟಿಸಲ್ಪಡತಕ್ಕದ್ದು.

ಪ್ರೆಸಿಡೆಂಟರು ಪ್ರತಿಸಲ ಸಭೆ ಸೇರಿದಾಗಲೂ ಜಮಾ ಖರ್ಚು ತಖ್ತಾ ಹಾಜರ್‌ಮಾಡತಕ್ಕದ್ದು.

19. ಪ್ರತಿ ಸಲ ಸದರೀ ಸಾಧಾರಣ ಸಭೆ ಸೇರಿದಾಗಲೂ, ಪ್ರೆಸಿಡೆಂಟರು, ಮ್ಯುನಿಸಿಪೆಲ್ ಫಂಡನ್ನು ಕುರಿತು ಆ ಹಿಂದಿನ ತಿಂಗಳೊಳಗೆ ನಡೆದಿರುವ ಜಮಾ ಖರ್ಚಿನ ಒಂದು ತಖ್ತೆಯನ್ನು ಸಭೆಯವರ ಮುಂದೆ ಹಾಜರ್ ಮಾಡತಕ್ಕದ್ದು. ಅಂತಾ ತಖ್ತೆಯು, ಸಭೆಯು ನಡವಳಿತವನ್ನು ಕುರಿತ ಮಿನಿಟ್ಸ್‌ಯೆಂಬ ಅಭಿಪ್ರಾಯಗಳ ಒಂದು ನಕ್ಕಲ್ ಸಹಿತವಾಗಿ ಮೈಸೂರು ಶ್ರೀಮನ್ ಮಹಾರಾಜಾ ಸರ್ಕಾರದವರಿಗೆ ಕಳಿಹಿಸಲ್ಪಟ್ಟು ಮೈಸೂರು ಗೆಜೆಟನಲ್ಲಿ ಛಾಯಿಷ್ ಮಾಡಲ್ಪಡತಕ್ಕದ್ದು.

ವಿಶೇಷ ಸಭೆಗಳು ಸೇರಬಹುದು.

20. ಮ್ಯುನಿಸಿಪೆಲ್ ಕಮ್ಮಿಷನಿನ ಪ್ರೆಸಿಡೆಂಟರು ತಮಗೆ ಯುಕ್ತ ತೋರಿದಾಗ ಕಮ್ಮಿಷನರಗಳ ವೊಂದು ವಿಶೇಷ ಸಭೆ ಸೇರಿಸಬಹುದು, ಮತ್ತು ಯಾರಾದರೂ ಐದು ಮಂದಿ ಕಮ್ಮಿಷನರಗಳಿಂದ ದಸ್ತಖತ್ ಮಾಡಲ್ಪಟ್ಟ ಲಿಖಿತ ರೂಪವಾದ ಖಾಯಿಷಿನ ಮೇಲೆ ಬದಸ್ತೂರ ಕಮ್ಮಿಷನರಗಳ ವಿಶೇಷ ಸಭೆ ಸೇರಿಸತಕ್ಕದ್ದು. ಅಂತಾ ಯಾವ ಸಭೆಯಾಗಲಿ ಆಗುವದಕ್ಕೆ ಪೂರ್ವ ಹಾಗೆ ವುದ್ದೇಶಿಸಲ್ಪಟ್ಟ ಸಭೆ ಆಗುವ ಕಾಲ, ಸ್ಥಳ, ಅದರ ಉದ್ದೇಶ್ಯ, ಇವುಗಳನ್ನು ನಮೂದಿಸಿ ಅಧವ ಪಕ್ಷ ಏಳು ದಿನಗಳಿಗೆ ಮುಂಚಿತವಾಗಿ, ಮೈಸೂರು ಗೆಜೆಟನಲ್ಲಿಯೂ, ಬೆಂಗಳೂರಲ್ಲಿ ಪ್ರಕಟಿಸಲ್ಪಡುವ ಇಂಗ್ಲಿಷ್ ವ ದೇಶ ಭಾಷೆಯ ಸ್ಥಳದ ನ್ಯೂಸ್ ಪೇಪರ್ಸ್‌ಯಾನೇ ವೃತ್ತಾಂತ ಪತ್ರಿಕೆಗಳಲ್ಲಿಯೂ ಛಾಯಿಷ್ ಮಾಡಿ ನೋಟಿಸ್ ಕೊಡತಕ್ಕದ್ದು.

ಸಭೆಗಳಲ್ಲಿ ಯಾವ ಯಾವ ಕೆಲಸಗಳು ನಡಿಸಲ್ಪಡತಕ್ಕದ್ದು.

21. ಸೆಕ್ಷನ್ 18 ವ 20 ಇವುಗಳನ್ನನುಸರಿಸಿ ಕೊಡೋಣಾದ ನೋಟಿಸಗಳಲ್ಲಿ ನಮೂದಿಸೋಣಾದ ಕೆಲಸಕ್ಕಿಂತ ಯಿತರವಾದ ಕೆಲಸವನ್ನು ಯಾವ ಸಭೆಯಲ್ಲಿಯೂ ತರತಕ್ಕದ್ದಲ್ಲವು, ಮತ್ತು ನಡಿಸತಕ್ಕದ್ದಲ್ಲವು. ಪರಂತು ಯಾವ ಕಮ್ಮಿಷನರಾಗಲಿ ಅಂತಾ ಸಭೆ ಸೇರುವದನ್ನು ಕುರಿತು ಕೊಡಲ್ಪಟ್ಟ ನೋಟಿಸ್‌ನಲ್ಲಿ ನಮೂದಿರುವ ವಿಷಯವಲ್ಲದೆ ಮತ್ಯಾವ ಹೆಚ್ಚುಗಟ್ಲೆ ನಿರ್ಣಯವನ್ನಾಗಲಿ ಸಭೆಯವರಿಗೆ ಶ್ರುತಪಡಿಸಬೇಕೆಂಬ ತನ್ನ ಇರಾದೆಯನ್ನು ಕುರಿತು ಮುಂದಾಗಿ ನೋಟಿಸ್ ಕೊಟ್ಟಿದ್ದ ಪಕ್ಷಕ್ಕೆ ಅಂತಾ ನೋಟಿಸು ಸದರೀ ಸಭೆ ಸೇರುವದಕ್ಕೆ ಮುಂಚೆ ನಾಲ್ಕು ದಿನಗಳಿಗೆ ಕಮ್ಮಿ ಇಲ್ಲದಂತೆ ಬೆಂಗಳೂರಲ್ಲಿ ಪ್ರಕಟಿಸಲ್ಪಡುವ ಒಂದು ಯಾ ಜಾಸ್ತೀ ಇಂಗ್ಲಿಷ್ ವೃತ್ತಾಂತ ಪತ್ರಿಕೆಗಳಲ್ಲಿ ಪ್ರಕಟಿಸಲ್ಪಟ್ಟು ಸದರೀ ನಿರ್ಣಯದ ಒಂದು ನಕ್ಕಲ್ ಕಮ್ಮಿಷನರವರ ಆಫಿಸ್‌ನಲ್ಲಿ ಇಡಲ್ಪಡುವದರ ದೆಶೆಯಿಂದ ಯಾವ ಅಭಿಪ್ರಾಯವನ್ನಾಗಲಿ ಸಭೆಗೆ ಆಲೋಚನೆಯ ಬಗ್ಯೆ ತರಬಹುದು.

ದರೋಬಸ್ತು ಅಂಶಗಳೂ, ಸಭೆಗಳಲ್ಲಿ ಅಧಿಕ ಸಂಖ್ಯೆಯವರ ಅಭಿಪ್ರಾಯಗಳನ್ನು ಅನುಸರಿಸಿ ನಿರ್ಣಯಿಸಲ್ಪಡತಕ್ಕವು.

22. ಕಮ್ಮಿಷನರಗಳು ಮಾಡುವಂತೆ ಅಧಿಕಾರ ಕೊಡಲ್ಪಟ್ಟ ಯಾ ನಿಯಮಿಸಲ್ಪಟ್ಟ ದರೋಬಸ್ತು ಕೆಲಸಗಳೂ, ನಿರ್ಣಯದ ಬಗ್ಯೆ ಅವರುಗಳ ಮುಂದೆ ಬರತಕ್ಕ ದರೋಬಸ್ತು ಅಂಶಗಳೂ ಇದರಲ್ಲಿ ಅನ್ಯಥಾ ವಿಧಿಸಲ್ಪಟ್ಟ ಪ್ರಕಾರ ಹೊರತು, ಯಾವ ಸಭೆಯವರ ಮುಂದೆ ಸದರೀ ಅಂಶ ತರಲ್ಪಡುತ್ತೋ ಅಂತಾ ಯಾವ ಸಾಧಾರಣ ಯಾ ವಿಶೇಷ ಸಭೆಯೊಳಗೆ ಹಾಜರಿರುವ ಮತ್ತು ಅಭಿಪ್ರಾಯ ತಿಳಿಸುವ ಕಮ್ಮಿಷನರಗಳ ಪೈಕಿ ಹೆಚ್ಚು ಸಂಖ್ಯೆಯುಳ್ಳವರ ದೆಶೆಯಿಂದ ಮಾಡಲ್ಪಡತಕ್ಕದ್ದು ಮತ್ತು ನಿರ್ಣಯಿಸಲ್ಪಡತಕ್ಕದ್ದು.

ಮ್ಯುನಿಸಿಪೆಲ್ ಕಮ್ಮಿಷನರಗಳ ಸಭೆಯಲ್ಲಿ ಅಗ್ರಾಸನಾಧಿಪತಿಯಾಗಿರತಕ್ಕವರು.

23. ಮ್ಯುನಿಸಿಪೆಲ್ ಕಮ್ಮಿಷನರಗಳ ಪ್ರೆಸಿಡೆಂಟರು ಅಂತಾ ಪ್ರತಿ ಸಭೆಯಲ್ಲಿಯೂ, ಅಗ್ರಾಸನಾಧಿಪತಿಯಾಗಿದ್ದು ಸಮಾನಾಭಿಪ್ರಾಯಗಳುಂಟಾಗುವ ದರೋಬಸ್ತು ಸಂಗತಿಗಳಲ್ಲಿಯೂ, ಯೆರಡನೆಯ ಅಭಿಪ್ರಾಯವನ್ನಾಗಲಿ, ಪರಿಷ್ಕರಿಸತಕ್ಕ ಅಭಿಪ್ರಾಯವನ್ನಾಗಲಿ ಹೇಳುವ ಅಧಿಕಾರವನ್ನು ಪಡೆದಿರತಕ್ಕದ್ದು. 14ನೇ ಸೆಕ್ಷನ್ ಪ್ರಕಾರ ಕೊಡಲ್ಪಡುವ ರಜಾ ಶಿವಾಯಿ ಅನ್ಯಥಾ ಪ್ರೆಸಿಡೆಂಟರ ಗೈರ್ ಹಾಜರೀಯಲ್ಲಿ, ಯಾವ ಸಭೆಯೊಳಗಾದರೂ ಹಾಜರಿರುವ ಕಮ್ಮಿಷನರಗಳು ತಮ್ಮ ಪೈಕಿ ಒಬ್ಬರನ್ನು ಸಭಾಧ್ಯಕ್ಷರಾಗಿ ನಿಯಮಿಸಿ ಕೊಳ್ಳತಕ್ಕದ್ದು. ಸದರೀ ಅಧ್ಯಕ್ಷರು ಆ ಸಭೆಗಾಗಿ ಅರ್ಜಿ ಪ್ರೆಸಿಡೆಂಟರ ಅಧಿಕಾರವನ್ನೆಲ್ಲ ಪಡೆಯತಕ್ಕದ್ದು. ಯಾವ ಸಭೆಯಲ್ಲಿ ಕಾರ್ಯವನ್ನು ನಡಿಸಲಿಕ್ಕೆ ಸಾಕಾದಷ್ಟು ಮಂದಿ ಕಮ್ಮಿಷನರಗಳು ಇರುತ್ತಾರೋ ಅಂತಾ ಯಾವದಾದರೂ ಸಭೆಯ ಪ್ರೆಸಿಡೆಂಟರು, ಸಭೆಯವರ ಅನುಮತಿಯ ಮೇಲೆ, ಸಭೆಯಾಗುವದನ್ನು ಆಗಿಂದಾಗ್ಯೆ ವ ಒಂದು ಸ್ಥಳದಿಂದ

ಮತ್ತೊಂದು ಸ್ಥಳಕ್ಕೆ ನಿಲ್ಲಿಸಿ ಇಡ ಬಹುದು. ಆದರೆ, ಹಾಗೆ ನಿಲ್ಲಿಸಿ ಇಡೋಣಾದ ಸಭೆಯುಲ್ಲಿ ಪೂರೈಸದೆ ಬಾಕೀ ಇಡೋಣಾದ ಕೆಲಸ ಹೊರತು ಇತರ ಯಾವ ಕೆಲಸವೂ ಹಾಗೆ ನಿಲ್ಲಿಸಿ ಇಡಲ್ಪಟ್ಟ ಯಾವ ಸಭೆಯಲ್ಲಿಯೂ, ಜರಿಗಿಸಲ್ಪಡತಕ್ಕದ್ದಲ್ಲವು.

ಎಷ್ಟು ಮಂದಿ ಸೇರಿಯಿದ್ದರೆ ಕೆಲಸ ಜರಿಗಿಸಲಿಕ್ಕೆ ಸಾಕಾದ ಸಂಖ್ಯೆಯುಳ್ಳವರಾಗುತ್ತಾರೆ.

24. ಯಾವ ಸಭೆಯೊಳಗಾಗಲಿ ಕೆಲಸ ಜರಿಗಿಸಲಿಕ್ಕೆ ಸಾಕಾದಷ್ಟುಮಂದಿ ಕಮ್ಮಿಷನರುಗಳು ಹಾಜರು ಯಿಲ್ಲದೇ ಯಿದ್ದಪಕ್ಷಕ್ಕೆ ಅಂದರೆ, ವೊಂದು ಸಾಧಾರಣ ಸಭೆಯಲ್ಲಿ ಅಥವುಪಕ್ಷ ಆರುಮಂದಿ ಕಮ್ಮಿಷನರ್‌ಗಳು ಹಾಜರ್ ಯಿಲ್ಲದಿದ್ದರೆ, ಮತ್ತು ಒಂದು ವಿಶೇಷ ಸಭೆಯಲ್ಲಿ ಅಥವುಪಕ್ಷ ಹನ್ನೆರಡುಮಂದಿ ಕಮ್ಮಿಷನರ್‌ಗಳು ಯಿಲ್ಲದಿದ್ದರೆ ಯಾವ ಸಭೆಯೊಳಗೂ, ಯಾವ ವ್ಯವಹಾರವೂ ಜರಿಗಿಸಲ್ಪಡತಕ್ಕದ್ದಲ್ಲವು. ಪರಂತು ಕಮ್ಮಿಷನರ್‌ಗಳ ಯಾವ ಸಭೆಯಲ್ಲಾಗಲಿ ಕೆಲಸ ನಿರ್ವಹಿಸುವದಕ್ಕೆ, ಬೇಕಾದಷ್ಟುಮಂದಿ, ಇಲ್ಲದೇ ಇದ್ದ ಪಕ್ಷಕ್ಕೆ, ಪ್ರೆಸಿಡೆಂಟರು (ಮ್ಯುನಿಸಿಪಲ್ ಕಮ್ಮಿಷನಿನ ಪ್ರೆಸಿಡೆಂಟರಾಗಿರಲಿ ಅಲ್ಲದೇ ಯಿರಲಿ) ಪರಂತು ತಮಗೆ ಯುಕ್ತ ತೋರುವ ಅನುಕೂಲವಾದ ಕಾಲದಲ್ಲಿ ಮತ್ತು ಅಂತಾ ಸ್ಥಳದಲ್ಲಿ ಸಭೆ ನಡಿಯುವಂತೆ ನಿಲ್ಲಿಸಿ ಯಿಡತಕ್ಕದ್ದು; ಮತ್ತು ಸಾಕಾದಷ್ಟುಮಂದಿ ಕಮ್ಮಿಷನರಗಳು ಹಾಜರ್‌ಯಿದ್ದಿದ್ದರೆ ಯಾವ ಕೆಲಸ ಮೊದಲನೇ ಸಭೆಯುವರ ಮುಂದೆ ತರಲ್ಪಟ್ಟಿರುವದೋ ಆ ಕೆಲಸವು ನಿಲ್ಲಿಸಿ ಇಡೋಣಾದ ಸಭೆಯಲ್ಲಿ ಸಾಕಾದಷ್ಟುಮಂದಿ ಕಮ್ಮಿಷನರ್‌ಗಳು ಹಾಜರ್ ಇರಲಿ ಇಲ್ಲದೇ ಇರಲಿ, ಪರಂತು ಮಾಮೂಲ್ ಮೇರೆ ನಿಲ್ಲಿಸಿ ಯಿಡೋಣಾದ ಸಭೆಯುವರ ಮುಂದೆ ತರಲ್ಪಟ್ಟ ವ್ಯವಸ್ಥೆ ಮಾಡಲ್ಪಡತಕ್ಕದ್ದು.

ಕಮ್ಮಿಷನರಗಳು ಕಮ್ಮಿಟಿಯಾನೇ ವಿಚಾರಣೆ ಸಭೆಗಳನ್ನು ಮೊಕರರ್ ಮಾಡಬಹುದು.

25. ಬೆಂಗಳೂರು ಷಹರಿ ಅಭಿವೃದ್ಧಿ, ಪಾಕೀಜೀ ಇವುಗಳಿಗೆ ಸಂಬಂಧಪಟ್ಟ ಯಾವ ಅಂಶವನ್ನಾಗಲಿ ವಿಚಾರಿಸಲಿಕ್ಕೆ, ವ ಅದನ್ನು ಕುರಿತು ರಿಪೋರ್ಟು ಮಾಡಲಿಕ್ಕೆ ತಮಗೆ ಯುಕ್ತ ತೋರುವಷ್ಟು ಮಂದಿ ಜನಗಳುಳ್ಳ ತಮಗೆ ಯುಕ್ತ ತೋರುವಂತಾ ವ ಅಷ್ಟು ಕಮ್ಮಿಟೀಗಳನ್ನು ತಮ್ಮ ಸಂಖ್ಯೆಯೊಳಗಿಂದ ಆಗಿಂದಾಗ್ಯೆ ಮೊಕರರ್ ಮಾಡುವದು ಮ್ಯುನಿಸಿಪಲ್ ಕಮ್ಮಿಷನರ್‌ಗಳಿಗೆ ನ್ಯಾಯವಾಗಿರತಕ್ಕದ್ದು ಪರಂತು ಅಂತಾ ಪ್ರತಿ ಕಮ್ಮಿಟಿಯ ನಡವಳಿತಗಳು ಮ್ಯುನಿಸಿಪಲ್ ಕಮ್ಮಿಷನರ್‌ಗಳಿಗೆ ಕಳುಹಿಸಲ್ಪಡತಕ್ಕದ್ದು.

ಕಮ್ಮಿಷರನಗಳ ನಡವಳಿತಗಳ ಬಾಬತು ಮಿನ್ಯುಟ್ಸ್ ಎಂಬ ಅಭಿಪ್ರಾಯಗಳು ಬರದು ಇಡಲ್ಪಟ್ಟು ನೋಡುವ ಬಗ್ಯೆ ಸಿದ್ಧವಾಗಿರತಕ್ಕದ್ದು.

26. ಕಮ್ಮಿಷನರ್‌ಗಳ ದರೋಬಸ್ತು ಸಭೆಗಳ ನಡವಳಿತಗಳ ಬಾಬತು ಮಿನಿಟ್ಸ್ ಬರೆಯಲ್ಪಟ್ಟು ಆ ಬಗ್ಯಾಗಿ ಇಡಲ್ಪಡುವ ಒಂದು ವಹಿಯಲ್ಲಿ ಚನ್ನಾಗಿ ದಾಖಲ್ ಮಾಡತಕ್ಕದ್ದಲ್ಲದೆ ಪ್ರತಿ ಸಭೆಯಾದ ತರುವಾಯ ಅದಕ್ಕೆ ಪ್ರೆಸಿಡೆಂಟರಿಂದ ದಸ್ತಖತ್ ಮಾಡಲ್ಪಡತಕ್ಕದ್ದು ಮತ್ತು ಸದರೀ ಮಿನಿಟಗಳು ಯುಕ್ತಗಳಾದ ಯೆಲ್ಲಾ ಕಾಲಗಳಲ್ಲಿಯೂ ಯಾವ ಕಮ್ಮಿಷನರಾಗಲಿ ಬಗರ್ ರುಸುಂ ನೋಡಬಹುದು ಮತ್ಯಾವ ಮನುಷ್ಯನಾಗಲಿ ಯೆಂಟು ಆಣೆ ರುಸುಂ ಕೊಟ್ಟಲ್ಲಿ ನೋಡುವ ಬಗ್ಯೆ ಕಮ್ಮಿಷನರ್‌ಗಳ ಆಫೀಸನಲ್ಲಿ ಸಿದ್ಧವಾಗಿರತಕ್ಕದ್ದು.

ಕಮ್ಮಿಷನರ್‌ಗಳಿಂದ ಅಥವಾ ಅವರ ತರಫಿನಲ್ಲಿ ಗುತ್ತಿಗೆ ಮಾಡಿಕೊಳ್ಳುವ ವಿಧ.

27. ಮ್ಯುನಿಸಿಪಲ್ ಕಮ್ಮಿಷನಿನ ಪ್ರೆಸಿಡೆಂಟರು, ಕಮ್ಮಿಷನರ್‌ಗಳ ತರಫಿನಲ್ಲಿ ಮತ್ತು ಸಾಧಾರಣ ಯಾ ವಿಶೇಷವಾದ ಸಭೆಯೊಳಗೆ ಅವರ ಅಂಗೀಕಾರವನ್ನು ಮುಂದಾಗಿ ಪಡೆದು, ಇದರಲ್ಲಿ ಮುಂದೆ ವಿಧಿಸಲ್ಪಟ್ಟ ರೀತಿಗನುಸಾರ, ಕಮ್ಮಿಷನರ್‌ಗಳಿಂದ ನಡಿಸಲ್ಪಡತಕ್ಕದ್ದೆಂತ ಈ ಕಾನೂನು ದೆಸೆಯಿಂದ ನಿಯಮಿಸಲ್ಪಟ್ಟ ಯಾ ಅಧಿಕಾರ ಕೊಡಲ್ಪಟ್ಟ ಯಾವ ಕೆಲಸಗಳನ್ನಾಗಲಿ, ಈ ಕಾನೂನು ಕೆಲಸಗಳಿಗೆ ಜರೂರಾದ ಯಿತರ ಯಾವ ವಿಷಯುಗಳನ್ನಾಗಲಿ, ನೆರವೇರಿಸಲಿಕ್ಕೆ ಯಾವ ಮನುಷ್ಯನ ಸಂಗಡಲಾಗಲಿ ಗುತ್ತಿಗೆಗಳನ್ನು ಮಾಡಬಹುದು.

ಜಮಾ ಖರ್ಚುಗಳ ಅಂದಾಜಾ, ಮತ್ತು ಆಡಿಟಿಯಾನೇ ಲೆಕ್ಕ ತನಖೀ ಈ ವಿಷಯುಗಳು.

ಪ್ರೆಸಿಡೆಂಟರು ಜಮಾ ಖರ್ಚಿನಬಗ್ಯೆ ಸಾಲೀಯಾನಾ ಬಡ್‌ಜಟ್ ಲೆಕ್ಕ ಕಮ್ಮಿಷನರ್‌ಗಳಲ್ಲಿ ಹಾಜರ್‍ಮಾಡತಕ್ಕದ್ದು.

28. ಈ ಕಾನೂನು ಅನುಸರಿಸಿ ಪ್ರತಿ ಸಂವತ್ಸರ ಫೆಬ್ರುವರಿ ಮಾಹೆಯಲ್ಲಿ ಶೇರತಕ್ಕ ಮ್ಯುನಿಸಿಪಲ್ ಇಲಾಖೆಯ ಕಮ್ಮಿಷನರ್‌ಗಳ ಸಾಧಾರಣ ಸಭೆಯಲ್ಲಿ ಮ್ಯುನಿಸಿಪಲ್ ಕಮ್ಮಿಷನರ್‌ಗಳ ಪ್ರೆಸಿಡೆಂಟರು ಮುಂದಿನ ಏಪ್ರಿಲ್ ಗುರ್ರೇ ಲಾಗಾಯತು ಷುರುವಾಗುವ ಸಾಲಿಗೆ ಮ್ಯುನಿಸಿಪಲ್ ಇಲಾಖೆಯ ಜಮಾಖರ್ಚಿನ ಬಾಬತು ತಮ್ಮಿಂದ ತಯಾರ್‍ಮಾಡಲ್ಪಟ್ಟ ಒಂದು ಬಡ್ಜಟ್ ಯಾ ಅಂದಾಜನ್ನೂ

ಕಮ್ಮಿಷನರಗಳು ಅಗಿಂದಾಗ್ಯೆ, ಸಾಧಾರಣ ಸಭೆಯಲ್ಲಿ ಕೊಡೋಣಾದ ಹುಕುಂ ಮೂಲಕ ನಿಯಮಿಸುವ ತಪಶೀಲಿಗೆ ಸರಿಯಾಗಿ ಮತ್ತು ಅಂತಾ ನಮೂನೆಯಲ್ಲಿ ಕಮ್ಮಿಷನರಗಳ ಮುಂದೆ ಇಡತಕ್ಕದ್ದು, ಪರಂತು ಅಂತಾ ಬಡ್ಜೆಟ ಲೆಕ್ಕ ಪೂರ್ತಿಮಾಡಿ ಛಾಪಾ ಹಾಕಲ್ಪಟ್ಟು ಅದರ ಒಂದು ನಕಲು ಟಪ್ಪಾಲ್ ಮೂಲಕವಾಗಲಿ ಇತರ ವಿಧದಿಂದಾಗಲಿ ಪ್ರತಿ ಮ್ಯುನಿಸಿಪೆಲ್ ಕಮ್ಮಿಷನರಗಳಿಗೂ ಕಳುಹಿಸಲ್ಪಡತಕ್ಕದ್ದಲ್ಲದೆ ಯಾವ ಸಭೆಯ ಮುಂದೆ ಸದರೀ ಬಡ್ಜೆಟ ಹಾಜರ್‌ಮಾಡಬೇಕಾಗಿರುತ್ತೋ ಆ ಸಭೆ ನಡಿಯುವದಕ್ಕೆ ಅಧಮ ಪಕ್ಷ ಏಳು ದಿನಗಳಿಗೆ ಮುಂಚಿತವಾಗಿ ಮೈಸೂರು ಗೆಜೆಟಿನಲ್ಲಿ ಪ್ರಕಟಿಸಲ್ಪಡತಕ್ಕದ್ದು.

ಬಡ್ಜೆಟ ಖರ್ಚಿನ ಅಂದಾಜ್ ಲೆಕ್ಕ.

29. ಸದರೀ ಬಡ್ಜೆಟ್ಟು ಯಾವ ಕಾಲಕ್ಕೆ ಸಂಬಂಧಪಟ್ಟಿರುತ್ತೋ ಆಕಾಲದೊಳಗೆ ಯೆಷ್ಟರ ಖರ್ಚು ಆಗಬೇಕೆಂತ ತಿಳಿಸಲ್ಪಡುತ್ತೋ ಅದನ್ನೂ, ಅಂತಾ ಖರ್ಚು ಯಾವ ರೀತಿಯಿಂದ ಮಾಡಬೇಕೆಂತ ಉದ್ದೇಶಿಸಲ್ಪಡುತ್ತೋ ಅದನ್ನೂ ಕಾಣಿಸತಕ್ಕದ್ದು.

ಅಂದಾಜ್ ಲೆಕ್ಕಗಳನ್ನೂ ಪರಿಷ್ಕರಿಸಿ, ಮಂಜೂರ್‌ಮಾಡುವಿಕೆ.

30. ಬಡ್ಜೆಟ ಲೆಕ್ಕದಲ್ಲಿ ದಾಖಲ್ ಮಾಡೋಣಾದ ರಖಂಗಳ ಪೈಕಿ ವಿಸಿಷ್ಟವನ್ನಾಗಲಿ, ಯಾವದನ್ನಾಗಲಿ ಮಂಜೂರ್‌ಮಾಡುವದು, ಯಾ ನಿರಾಕರಿಸುವದು, ಯಾ ತಿದ್ದುಪಡೀ ಮಾಡುವದು ಕಮ್ಮಿಷನರ್‌ಗಳ ಯೆಖ್ತ್ಯಾರೀ ಯಲ್ಲಿರತಕ್ಕದ್ದು. ಪರಂತು ಈ ಕಾನೂನ ನಿಬಂಧನೆಗಳಿಗೆ ವ್ಯತಿರಿಕ್ತವಾಗಿ ಯಾವ ತಿದ್ದುಪಾಟುಗಳೂ ನಡೆಯ ತಕ್ಕದ್ದಲ್ಲವು.

ಅಂದಾಜಗಳು ಮೈಸೂರ ಶ್ರೀಮನ್ಮಹಾರಾಜಾ ಸರ್ಕಾರದವರಿಂದ ಮಂಜೂರ್‌ಮಾಡಲ್ಪಡತಕ್ಕವು.

31. ಸದರೀ, ಬಡ್ಜೆಟ್ಟು ಅಂದಾಜು ಮ್ಯುನಿಸಿಪೆಲ್ ಕಮ್ಮಿಷನರಗಳಿಂದ ಮಂಜೂರ್‌ಮಾಡಲ್ಪಟ್ಟ ಬಳಿಕ ಮೈಸೂರು ಶ್ರೀಮನ್ಮಹಾರಾಜಾ ಸರ್ಕಾರದವರಿಗೆ ಕಳುಹಿಸಲ್ಪಡತಕ್ಕದ್ದು, ಅಂದಾಜಿನಲ್ಲಿ ದಾಖಲಿರುವ ರಖಂಗಳ ಪೈಕಿ ವಿಶಿಷ್ಟವನ್ನಾಗಲಿ, ಯಾವದನ್ನಾಗಲಿ ಮಂಜೂರ್‌ಮಾಡುವದು, ಯಾ ನಿರಾಕರಿಸುವದು, ಯಾ ತಿದ್ದುಪಡೀಮಾಡುವದು ಮೈಸೂರು ಶ್ರೀಮನ್ಮಹಾರಾಜಾಸರ್ಕಾರದವರಿಗೆ ಆರ್ಹವಾಗಿರತಕ್ಕದ್ದು; ಪರಂತು ಈ ಕಾನೂನಿನ ನಿಬಂಧನೆಗಳಿಗೆ ವಿರುದ್ಧವಾಗಿ ಯಾವ ತಿದ್ದುಪಡಿಯೂ ಮಾಡಲ್ಪಡತಕ್ಕದ್ದಲ್ಲವು.

ಜರೂರಾಗಿದ್ದಾಗ ಸಪ್ಲಿಮೆಂಟಲ್ ಬಡ್ಜೆಟ ಎಂಬ ಉಪ ಅಂದಾಜ್ ಲೆಕ್ಕವನ್ನು ಪ್ರಸಿಡೆಂಟರು ಕಳುಹಿಸತಕ್ಕದ್ದು.

32. ಮ್ಯುನಿಸಿಪೆಲ್ ಕಮ್ಮಿಷನಿನ ಪ್ರೆಸಿಡೆಂಟರು ಸಪ್ಲಿಮೆಂಟಲ್ ಬಡ್ಜೆಟ ಯೆಂಬ ಉಪ ಬಡ್ಜೆಟ ಲೆಕ್ಕವನ್ನು ಯಾವಾಗಲಾಗಲಿ ತಯಾರ್‌ಮಾಡುವದು ಅವರಿಗೆ ನ್ಯಾಯವಾಗಿರತಕ್ಕದ್ದು. ಅದು ಮ್ಯುನಿಸಿಪೆಲ್ ಕಮ್ಮಿಷನರಗಳ ಮತ್ತು ಮೈಸೂರು ಶ್ರೀಮನ್ಮಹಾರಾಜಾ ಸರ್ಕಾರದವರ ಮಂಜೂರಾತಿಯ ಬಗ್ಯೆ ಈ ಕಾನೂನಿನ 30, 31ನೇ ಸೆಕ್ಷನ್‌ಗಳಿಂದ ನಿಯಮಿಸಲ್ಪಟ್ಟ ರೀತಿಯಾಗಿ ಕಳುಹಿಸಲ್ಪಡತಕ್ಕದ್ದು, ಪರಂತು ಅಂತಾ ಉಪ ಬಡ್ಜೆಟ ಪೂರೈಸಿ ಅಚ್ಚು ಹಾಕಲ್ಪಟ್ಟು ಟಪ್ಪಾಲ್ ಮೂಲಕವಾಗಲಿ, ಇತರ ರೀತಿಯಿಂದಲಾಗಲಿ ಅದರ ಒಂದು ನಕಲು ಪ್ರತಿ ಮ್ಯುನಿಸಿಪೆಲ್ ಕಮ್ಮಿಷನರ್‌ಗಳಿಗೂ ಕಳುಹಿಸಲ್ಪಡತಕ್ಕದ್ದಲ್ಲದೆ ಯಾವ ಸಭೆಯ ಮುಂದೆ ಸದರೀ ಬಡ್ಜೆಟ ಹಾಜರ್‌ಮಾಡಲ್ಪಡತಕ್ಕದ್ದೋ ಆ ಸಭೆ ಶೇರುವದಕ್ಕೆ ಅಧಮ ಪಕ್ಷ ಏಳುದಿನಗಳಿಗೆ ಮುಂಚಿತವಾಗಿ ಮೈಸೂರು ಗೆಜೆಟಿನಲ್ಲಿ ಪ್ರಕಟಿಸಲ್ಪಡತಕ್ಕದ್ದು.

ಲೆಕ್ಕಗಳು ವಿಮರ್ಶೆಯಿಂದ ತನಖೀ ಮಾಡಲ್ಪಡತಕ್ಕದ್ದು.

33. ಕಮ್ಮಿಷನರ್‌ಗಳು ಪ್ರತಿ ಸಾಲ್ ಏಪ್ರೆಲ್ ಗುರ್ರೇ ತಾರೀಖಿಗೆ ತರುವಾಯ ಅನುಕೂಲಿಸಿದಷ್ಟು ತ್ವರೆಯಲ್ಲಿ, ಆ ಹಿಂದಿನ ಸಂವತ್ಸರಕ್ಕೆ ಆದ ಮ್ಯುನಿಸಿಪೆಲ್ ಫಂಡು ಬಾಬತು ಜಮಾ ಖರ್ಚುಗಳ ಸ್ವರೂಪವನ್ನೂ ಮೊಬಲಗನ್ನೂ ಕಾಣಿಸಿ ತಪಶೀಲ್‌ವಾರ್ ತಖ್ತೆಯನ್ನೂ ಆ ಸಂವತ್ಸರಕ್ಕೆ ಅವರ ನಡವಳಿತಗಳ ಒಂದು ರಿಪೋರ್ಟನ್ನೂ ತಯಾರ್‌ಮಾಡತಕ್ಕದ್ದು. ಅಂತಾ ತಖ್ತೆಯೂ ರಿಪೋರ್ಟೂ ಸಹ ಛಾಪಾ ಹಾಕಲ್ಪಟ್ಟು ಸಕಲ ಜನಗಳಿಗೂ ತಿಳಿಯತಕ್ಕಬಗ್ಯೆ ಪ್ರಕಟಿಸಲ್ಪಡತಕ್ಕದ್ದು. ಮ್ಯುನಿಸಿಪೆಲ್ ಕಮ್ಮಿಷನರ್‌ಗಳ ಲೆಕ್ಕಗಳು ಮೈಸೂರು ಶ್ರೀಮನ್ಮಹಾರಾಜಾ ಸರ್ಕಾರದವರು ನೌಕರರ್‌ಮಾಡುವಂತಾವನಿಂದ ಯಾ ಮಾಡುವಂತಾವರಿಂದ ಸಾಲಿಯಾನಾ ತನಖೀ ಯಾಗತಕ್ಕದ್ದು.

ತೆರಿಗೆಗಳು, ಸುಂಕಗಳು, ತೀರ್ವೆಗಳು ಇವುಗಳನ್ನು ವಸೂಲ್ ಮಾಡುವಿಕೆ.

ವಸೂಲ್ ಮಾಡಲ್ಪಡತಕ್ಕ ತೆರಿಗೆಗಳು, ಸುಂಕಗಳು, ತೀರ್ವೆಗಳು ಇವುಗಳನ್ನು ಕುರಿತು.

34. ಮೈಸೂರು ಶ್ರೀಮನ್ಮಹಾರಾಜಾ ಸರ್ಕಾರದವರ ಅಂಗೀಕಾರದ ಮೇಲೆ, ಮ್ಯುನಿಸಿಪೆಲ್ ಕಮಿಷ್ನರುಗಳು ಈ ಕಾನೂನಿನ ಕಾರ್ಯಗಳಗೋಸ್ಕರ ತಮ್ಮ ಮ್ಯುನಿಸಿಪೆಲ್ ಸರಹದ್ದುಗಳೊಳಗೆ ಸಾಮಾನುಗಳು, ಬಂಡಿಗಳು, ಕುದುರೆ ಮತ್ತು ಇತರ ಜಾನವರಗಳು ಇವುಗಳ ಮೇಲೆ ಈ ಕಾನೂನಿಗೆ ಶೇರಿಸೋಣಾಗಿರುವ A ಗುರುತು ಪಟ್ಟಿಯಲ್ಲಿ ವಿವರಿಸೋಣಾದ ಮತ್ತು ಆಗಿಂದಾಗ್ಯೆ ಸರ್ಕಾರೀ ಗೆಜೆಟಿನಲ್ಲಿ ಪ್ರಕಟಿಸಲ್ಪಡತಕ್ಕ ರಿವಾಜ್‌ಗಳಿಗೆ ಜಾಸ್ತಿ ಇಲ್ಲದ ತೆರಿಗೆಗಳನ್ನಾಗಲಿ, ಬಂಡಿಗಳು ರಿಜಿಸ್ಟರ್ ಮಾಡುವಬಗ್ಗೆ ರುಸುಂಗಳನ್ನಾಗಲಿ, ಮ್ಯುನಿಸಿಪೆಲ್ ಸರಹದ್ದುಗಳೊಳಗೆ ಪ್ರವೇಶಿಸುವ ಸಾಮಾನುಗಳು, ಬಂಡಿಗಳು, ಜಾನವರಗಳು ಇಂತಾವುಗಳ ಮೇಲೆ ಸುಂಕಗಳನ್ನಾಗಲಿ ಶಿಲ್ಪಗಳು, ಕಸಬ್‌ಗಳು, ವ್ಯಾಪಾರಗಳು, ಯಾ ಜೀವನೋಪಾಯಗಳು, ಇಂತಾವುಗಳ ಮೇಲೆ ತೀರ್ವೆಯನ್ನಾಗಲಿ, ಸಾರಾಯಿ ಸ್ವಭಾವವುಳ್ಳ ನಿಷಾ ಉಂಟುಮಾಡುವ ಷರಾಬ್‌ಗಳ ವಿಕ್ರಯದ ಮೇಲೆ ತೀರ್ವೆಯನ್ನಾಗಲಿ ಯಾವ ಷಹರ್ ತೆರಿಗೆ ಯಾ ರಿವಾಜ್‌ಗಳು, ಮನೆಗಳ ಮೇಲೂ, ಕಟ್ಟಣಗಳ ಮೇಲೂ, ಜಮೀನುಗಳ ಮೇಲೂ, ಅವುಗಳ ಸಾಲಿಯಾನಾ ಕಿಮ್ಮತ್ತಿನ ಸೇಕಡಾ ಹತ್ತಕ್ಕೆ ಮೀರದೆ ಒಂದು ಮೊಬಲಗ್ ವುಳ್ಳವಾಗಿರುತ್ತೋ ಅಂತಾ ಷಹರ್ ತೆರಿಗೆ ಯಾ ರಿವಾಜ್‌ಗಳನ್ನಾಗಲಿ ವಸೂಲ್ ಮಾಡುವದು ಸದರೀ ಕಮಿಷ್ನರುಗಳಿಗೆ ನ್ಯಾಯವಾಗಿರತಕ್ಕದ್ದು. ಮೇಲೆ ಕಂಡಂತೆ, ಮೈಸೂರು ಶ್ರೀಮನ್ಮಹಾರಾಜಾ ಸರ್ಕಾರದವರ ಅಂಗೀಕಾರನಿಶಿ ಈ ಕಾನೂನಿನ ಕಾರ್ಯಗಳಗೋಸ್ಕರ ಬೇಕಾದ ಫಂಡ್ಸ್ ಯಾನೇ ದ್ರವ್ಯವನ್ನು ಸದರೀಯವರು ನಿರ್ಣಯಿಸುವಮೇರಿಗೆ ಮೇಲೆ ಕಂಡ ಬಾಬುಗಳ ಪೈಕಿ ವಿಶಿಷ್ಟದ ಮೂಲಕವಾಗಲಿ, ಕೆಲವು ಮೂಲಕವಾಗಲಿ ಜಮಾಯಿಸುವದು ನ್ಯಾಯವಾಗಿರತಕ್ಕದ್ದು. ಮತ್ತು ಯಾವ ಮನುಷ್ಯನಾಗಲಿ ಬಡತನದ ದೆಶೆಯಿಂದ ಸದರೀ ತೆರಿಗೆಯನ್ನು ಕೊಡಲಿಕ್ಕೆ ಅಶಕ್ತನಾಗಿರುತ್ತಾನೋ ಅಂತಾ ಮನುಷ್ಯನಿಗೆ ಈ ಕಾನೂನು ಅನುಸರಿಸಿ ಯಾವ ರಿವಾಜ್ ಯಾ ತೆರಿಗೆಯನ್ನು ತೆರುವ ವಿಷಯದಲ್ಲಿ ಪೂರಾ ಆಗಲಿ, ಕೆಲ ಪ್ರಮಾಣಕ್ಕಾಗಲಿ ಕಮಿಷ್ನರುಗಳು ಮಾಫ್ ಮಾಡಬಹುದು.

ಯಾವಕಾಲಕ್ಕಾಗಿ ಪೂರ್ವವೇ ತೆರಿಗೆ ವಗೈರೆ ಪಾವತಿಯಾಗಿರುತ್ತೋ ಆ ಕಾಲಕ್ಕೆ ತೆರಿಗೆ ವಗೈರೆ ಕೊಡಬೇಕಾದ್ದಿಲ್ಲವು.

35. ಸನ್ 1856ನೇ ಇಸವಿ 14ನೇ ಆಕ್ಟು 1864ನೇ ಇಸವಿಯ 17ನೇ ಆಕ್ಟು ಅನುಸರಿಸಿಯಾಗಲಿ ಇತರ ನಿಬಂಧನೆಗಳನುಸರಿಸಿಯಾಗಲಿ, ಯಾವ ಕಾಲಕ್ಕೆ ಮೊಬಲಗ್ ಪಾವತೀ ಯಾಗಿರುತ್ತೋ ಅಂತಾ ಯಾವ ಕಾಲಕ್ಕಾಗಲಿ ಈ ಕಾನೂನು ಅನುಸರಿಸಿ ಯಾವ ತೆರಿಗೆ ಯಾ ರಿವಾಜ್, ಸುಂಕ, ರುಸುಂ, ಯಾ ಕಂದಾಯ ಇಂತಾದ್ದನ್ನು ತೆರಬೇಕಾದ್ದಿಲ್ಲವು.

ಸವಾರೀ ಬಂಡಿಗಳು, ಕುದುರೆಗಳು ವ ಇತರ ಜಾನವರಗಳು ಇಂತಾವುಗಳ ಮೇಲೆ ತೆರಿಗೆಗಳು.

ಸವಾರೀ ಬಂಡಿಗಳು ವಗೈರೆ ಮೇಲೆ ನಿಬಂಧನೆ ಮಾಡಲ್ಪಟ್ಟಿರುವ ಪ್ರಕಾರ ವಸೂಲ್ ಮಾಡಲ್ಪಡತಕ್ಕ ತೆರಿಗೆಗಳು.

36. ಮೇಲೆ ಕಂಡಂತೆ ಮೈಸೂರು ಶ್ರೀಮನ್ಮಹಾರಾಜಾ ಸರ್ಕಾರದವರ ಅಂಗೀಕಾರನಿಶಿ ಈ ಕಾನೂನಿನ ಕಾರ್ಯಗಳಗೋಸ್ಕರ ಸವಾರೀ ಬಂಡಿಗಳ ಮೇಲೂ, ಕುದುರೆಗಳ ಮೇಲೂ, ಇತರ ಜಾನವರಗಳ ಮೇಲೂ, ತೆರಿಗೆಗಳು ವಸೂಲ್ ಮಾಡುವಂತೆ ಮ್ಯುನಿಸಿಪೆಲ್ ಕಮಿಷ್ನರುಗಳಿಂದ ನಿಶ್ಚಯಿಸಲ್ಪಟ್ಟಲ್ಲಿ ಅಂತಾ ತೆರಿಗೆಗಳು, ಈ ಕಾನೂನಿನ 37ರಿಂದ 43ರ ವರಿಗೆ ಇರತಕ್ಕ ಸೆಕ್ಷನ್‌ಗಳಲ್ಲಿ ವಿಧಿಸಲ್ಪಟ ಪ್ರಕಾರ ವಸೂಲ್ ಮಾಡಲ್ಪಡತಕ್ಕವು.

ಸವಾರೀ ಬಂಡಿಗಳು, ಕುದುರೆಗಳು ವಗೈರೆ ಮೇಲೆ ತೆರಿಗೆಗಳು.

ಸದರೀ ಬಂಡಿಗಳ ಮೇಲೂ ಜಾನವರಗಳ ಮೇಲೂ, ತೆರಿಗೆ ಮಾಫ್ ಮಾಡುವಿಕೆ.

37. ಈ ಕಾನೂನಿಗೆ ಶೇರಿಸೋಣಾದ A ಗುರುತು ಪಟ್ಟಿಯಲ್ಲಿ ನಮೂದಿಸುವದಕ್ಕೆ ಜಾಸ್ತೀ ಇಲ್ಲದ ರಿವಾಜ್ ಪ್ರಕಾರ ಒಂದು ತೆರಿಗೆಯು, ಷಹರ್‌ನಲ್ಲಿ ಇಟ್ಟುಕೊಳ್ಳಲ್ಪಡುವ ಪ್ರತಿ ಸವಾರೀ ಬಂಡಿ, ಕುದುರೆ, ಹೇಸರಕತ್ತೆ, ಕತ್ತೆ, ನಾಯಿ, ಗೂಳಿ ಯೆತ್ತು, ಕೋಣ, ಒಂಟೆ, ಆನೆ ಇಂಥಾದ್ದಕ್ಕೆ ಮೊಕರರ್ ಮಾಡಲ್ಪಟ್ಟು, ಮುಂದಾಗಿ ಪಾವತೀ ಮಾಡಲ್ಪಡತಕ್ಕದ್ದು. ಪರಂತು, ಫಿರಂಗಿ ಬಂಡಿಗಳಿಗೆ ಯಾ ಆರ್ಡಿನನ್ಸ್ ಕಾರ್ಟಿಸ್ (ಎಂಬ ಸರ್ಕಾರದ ಚಕ್ಕಡಾ ಬಂಡಿಗಳು) ಯಾ ವ್ಯಾಗನ್ ಬಂಡಿಗಳು ಕ್ಯಾವಲ್‌ರಿ ಕುದುರೆಗಳು ಯಾ ಪೊಲೀಸ್ ಸವಾರರ ಕುದುರೆಗಳು, ಮಿಲಿಟರಿ ಆಫೀಸರ್‌ಗಳು ಹತ್ತುವ ಕುದುರೆಗಳು, ಸರಕಾರದವರ ಅಥವಾ ಅವರ ನೌಕರಿಯಲ್ಲಿರುವ, ಅಥವಾ ಮ್ಯುನಿಸಿಪೆಲ್ ಕಮಿಷನಿಗೆ ಸಂಬಂಧಪಟ್ಟ ಸವಾರೀ ಬಂಡಿಗಳು, ಬಂಡಿಗಳು, ಕುದುರೆಗಳು, ಹೇಸರ ಕತ್ತೆಗಳು, ಎತ್ತುಗಳು ಮತ್ತು ಸವಾರಿಗಳು ವಾಸ್ತವ್ಯ

ಕಾರ್ಬಾರೀ ಆಫಿಸರ ಅಧಿಕಾರ ಮತ್ತು ತಲಬ್.

“12. ಈ ರೆಗ್ಯುಲೇಷನ್‌ಗಳಿಂದ ಪ್ರೆಸಿಡೆಂಟರಿಗೆ ವುಂಟುಮಾಡಲ್ಪಟ್ಟ ತಮಾಂ ಅಧಿಕಾರಗಳೂ, ವಿಧಿಸಲ್ಪಟ್ಟ ತಮಾಂ ಕರ್ತವ್ಯಗಳೂ ವೈಸ್ ಪ್ರೆಸಿಡೆಂಟರಿಗೂ ಇದರ ದೆಶೆಯಿಂದ ವುಂಟ ಮಾಡಲ್ಪಟ್ಟಿರುತ್ತದೆ ಮತ್ತು ಕೊಡಲ್ಪಟ್ಟಿರುತ್ತದೆ, ವೈಸ್ ಪ್ರೆಸಿಡೆಂಟರವರು, ತಮ್ಮ ಕೆಲಸದಿಂದ ಶ್ರೀಮನ್ಮಹಾರಾಜಾ ಸರ್ಕಾರದವರ ಅಪ್ಪಣೇ ಮೇಲೆ ನಿವೃತ್ತಿ ಮಾಡಲ್ಪಡತಕ್ಕದ್ದು ಮತ್ತು ಈ ರೆಗ್ಯುಲೇಷನ್‌ಗಳನುಸರಿಸಿ ವಸೂಲ್ಮಾಡಲ್ಪಡತಕ್ಕ ಮ್ಯುನಿಸಿಪೆಲ್ ಫಂಡಿನಿಂದ ಮತ್ತು ಯಾವ ದಾಮಾಷಾಯಿ ಮೇರೆ ಶ್ರೀಮನ್ಮಹಾರಾಜಾ ಸರ್ಕಾರದವರು ಆಗಿಂದಾಗ್ಯೆ ಅಪ್ಪಣೆ ಮಾಡುತ್ತಾರೋ ಅಂಥಾ ದಾಮಾಷಾಯಿ ಪ್ರಕಾರ ಪ್ರತಿ ಫಂಡಿನಿಂದ ಅಂಥಾ ಅಲೋವೆನ್ಸಗಳು ಅವರಿಗೆ ಕೊಡಲ್ಪಡತಕ್ಕದ್ದು.”

ಎಗ್ಜಿಕ್ಯೂಟಿವ ಇಂಜನಿಯರನ್ನೂ, ಮ್ಯುನಿಸಿಪೆಲ್ ತೆರಿಗೇ ಕಲೆಕ್ಟರ್‌ಯಾನೇ ವಸೂಲೀದಾರರನ್ನೂ, ಶಾನಿಟೇರೀ ಇನ್ಸ್‌ಪೆಕ್ಟರನ್ನೂ ಮೊಕರರ್ಮಾಡುವಿಕೆ.

13. ಮೈಸೂರು ಶ್ರೀಮನ್ಮಹಾರಾಜಾ ಸರ್ಕಾರದವರು ಒಬ್ಬ ಎಗ್ಜಿಕ್ಯುಟಿವ್ ಇಂಜನಿಯರನ್ನೂ, ಒಬ್ಬ ಮ್ಯುನಿಸಿಪೆಲ್ ತೆರಿಗೇ ವಸೂಲೀದಾರನನ್ನೂ, ಒಬ್ಬ ಶಾನಿಟೆರೀ ಇನ್ಸ್‌ಪೆಕ್ಟರ್ ಯಾನೇ ಜನಗಳ ಆರೋಗ್ಯವನ್ನು ವಿಚಾರಣೆ ಮಾಡುವ ಅಧಿಕಾರಿಯನ್ನೂ ಮೊಕರರ್ಮಾಡತಕ್ಕದ್ದು. ಇವರುಗಳು ಮ್ಯುನಿಸಿಪೆಲ್ ದ್ರವ್ಯದ ದೆಶೆಯಿಂದ, ಮೈಸೂರು ಶ್ರೀಮನ್ಮಹಾರಾಜಾ ಸರ್ಕಾರದವರು ನಿಷ್ಕರ್ಷೇ ಮಾಡುವಂತಾ ತಲಬನ್ನು ಮತ್ತು ಅಷ್ಟರ ಪರಿಮಾಣಕ್ಕೆ ಪ್ರತಿ ಫಂಡಿನಿಂದಲೂ ತೆಗದು ಕೊಳ್ಳತಕ್ಕದ್ದು. ಅಂಥಾ ಆಫಿಸರು ಮೈಸೂರು ಶ್ರೀಮನ್ಮಹಾರಾಜಾ ಸರ್ಕಾರದವರ ಯಿಷ್ಟಪ್ರಕಾರ ತೆಗದು ಹಾಕಲ್ಪಡತಕ್ಕದ್ದು.

ಮ್ಯುನಿಸಿಪೆಲ್ ಆಫಿಸರ್‌ಗಳಿಗೆ ಗವರ್ನಮೆಂಟಿನವರು ರಜಾ ವಗೈರೆ ಕೊಡತಕ್ಕದ್ದು.

14. ಈ ಕಾನೂನಿನಲ್ಲಿ ಯಿದರ ಹಿಂದೆಕಡೇ ನಾಲ್ಕು ಸೆಕ್ಷನ್‌ಗಳನುಸರಿಸಿ ಮೊಕರರ್ಮಾಡಲ್ಪಟ್ಟ ಆಫಿಸರಗಳ ಪೈಕಿ ಯಾರಿಗಾಗಲಿ, ಮೈಸೂರು ಶ್ರೀಮನ್ಮಹಾರಾಜಾ ಸರ್ಕಾರದವರು ತಮಗೆ ಯುಕ್ತ ತೋರುವಂಥಾ ರಜಾ ಕೊಡಬಹುದು, ಮತ್ತು ಅಂಥಾ ಯಾವ ಆಫಿಸರ್‌ಗಳಿಗಾಗಲಿ, ರಜಾ ಕೊಡುವ ಪಕ್ಷಕ್ಕೆ ಮೈಸೂರು ಶ್ರೀಮನ್ಮಹಾರಾಜಾ ಸರ್ಕಾರದವರು, ಅಂಥಾ ಆಫಿಸರ್‌ಗಳಿಗೆ ಬದಲಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಯಾವ ಮನುಷ್ಯನನ್ನಾಗಲಿ ಮೊಕರರ್ಮಾಡಬಹುದು, ಅಥವಾ ಅವರುಗಳು ರಜಾದ ಮೇಲೆ ಗೈರ್ ಹಾಜರಾಗಿರುವ ಕಾಲದಲ್ಲಿ ಅಂಥಾ ಆಫಿಸರರ ಕೆಲಸಗಳನ್ನು ನಡಿಸುವ ಬಗ್ಯೆ ಮೈಸೂರು ಶ್ರೀಮನ್ಮಹಾರಾಜಾ ಸರ್ಕಾರದವರಿಗೆ ಯುಕ್ತ ತೋರುವ ಏರ್ಪಾಡುಗಳನ್ನು ಮಾಡಬಹುದು. ಮತ್ತು ಮೈಸೂರು ಶ್ರೀಮನ್ಮಹಾರಾಜಾ ಸರ್ಕಾರದವರು ಈ ಕಾನೂನಿನ ಕಾರ್ಯಗಳಿಗೋಸ್ಕರ ವಿನಿಯೋಗಿಸಲ್ಪಡತಕ್ಕ ದ್ರವ್ಯದಲ್ಲಿಂದ ಮೇಲೆ ಕಂಡಂತಾ ಯಾವ ಆಫಿಸರುಗಳಿಗಾಗಲಿ, ರಜಾದ ಮೇಲೆ ಗೈರ್ ಹಾಜರಾಗಿರುವ ಕಾಲದಲ್ಲಿ ಮೈಸೂರು ಶ್ರೀಮನ್ಮಹಾರಾಜಾ ಸರ್ಕಾರದವರಿಗೆ ಯುಕ್ತವೆಂದು ತೋರುವ ತಲಬನ್ನು ಕೊಡುವಂತೆ ಅಪ್ಪಣೇ ಮಾಡಬಹುದು. ಪರಂತು ಸದರೀ ದ್ರವ್ಯದಲ್ಲಿಂದ ಯಾವ ಸಂಗತಿಯಲ್ಲಿಯೂ, ಈ ಸೆಕ್ಷನ್ ಅನುಸರಿಸಿ ಯಾವ ತಲಬಾಗಲಿ, ಕೊಡಲ್ಪಟ್ಟ ಸಬಬಿನ ಮೇಲೆ, ರಜಾ ಕೊಡಲ್ಪಡದೇ ಯಿದ್ದರೆ, ಕುಲ್ ಯೆಷ್ಟರ ಖರ್ಚು ತಗಲುವದೋ ಅದಕ್ಕಿಂತ ಜಾಸ್ತಿಯಾದ ಖರ್ಚು ಮಾಡತಕ್ಕದ್ದಲ್ಲವು.

ಮ್ಯುನಿಸಿಪೆಲ್ ಕಮ್ಮಿಷನಿನ ಪ್ರಸಿಡೆಂಟರು ಆಫಿಸರಗಳನ್ನು ಮೊಕರರ ಮಾಡುವಿಕೆ.

15. ಬೆಂಗಳೂರು ಷಹರ್ ಮ್ಯುನಿಸಿಪೆಲ್ ಕಮ್ಮಿಷನ್‌ಗಳ ಪ್ರೆಸಿಡೆಂಟರು ಈ ಕಾನೂನಿನ 12 ವ 13ನೇ ಸೆಕ್ಷನ್‌ಗಳಲ್ಲಿ ನಮೂದಿರುವ ಆಫಿಸರ್‌ಗಳಲ್ಲದೆ ಯಿತರರಾಗಿಯೂ, ಈ ಕಾನೂನಿನ ಅಮಲ್ ನಡಿಸುವದರಲ್ಲಿ ಕುಮ್ಮಕ್ ಮಾಡಲಿಕ್ಕೆ ಜರೂರೆಂತಲೂ, ಯುಕ್ತವೆಂತಲೂ ಮ್ಯುನಿಸಿಪೆಲ್ ಕಮ್ಮಿಷನರ್‌ಗಳೆಣಿಸುವಂತಾ ದರೋಬಸ್ತು ಆಫಿಸರುಗಳನ್ನೂ ಆಗಿಂದಾಗ್ಯೆ ಮೊಕರರಮಾಡಬಹುದು; ಮತ್ತು ಅಂತಾ ಆಫಿಸರ್‌ಗಳ ಪೈಕಿ ಯಾರನ್ನಾಗಲಿ ಆಗಿಂದಾಗ್ಯೆ ಕೆಲಸದಿಂದ ತೆಗದು ಹಾಕಿ ಅವರ ಸ್ಥಳದಲ್ಲಿ ಯಿತರರನ್ನು ಮೊಕರರ್ಮಾಡಿ, ಈ ಕಾನೂನ್ ಕಾರ್ಯಗಳಿಗೋಸ್ಕರ ವಿನಿಯೋಗಿಸಲ್ಪಡತಕ್ಕ ದ್ರವ್ಯದ ದೆಶೆಯಿಂದ ಸದರೀ ಆಫಿಸರ್‌ಗಳಿಗೆ ಮಾಹೇಯಾನಾ ಮುನ್ನೂರು ರೂಪಾಯಿಗೆ ಮಿರದೆ ಯೆಷ್ಟರ ತಲಬ್‌ಗಳು ಯುಕ್ತವೆಂತ ಕಮ್ಮಿಷನರ್‌ಗಳು ಭಾವಿಸುತ್ತಾರೋ ಅಷ್ಟರ ತಲಬನ್ನು ಕೊಡಬಹುದು, ಪರಂತು ಮಾಹೇಯಾನಾ ನೂರಐವತ್ತು ರೂಪಾಯಿಗೆ ಮೀರಿ ತಲಬ್ ಸಲ್ಲುವಂತಾ ಯಾವ ಉದ್ಯೋಗಕ್ಕೂ ಮ್ಯುನಿಸಿಪೆಲ್ ಕಮ್ಮಿಷನರ್ ಮುಂಜೂರಾತೀ ಯಿಲ್ಲದೆ ಯಾವ ಮನುಷ್ಯನನ್ನೂ ಈ ಸೆಕ್ಷನ್ ಅನುಸರಿಸಿ ಮೊಕರರ್ ಮಾಡಕೂಡದು, ಯಾ ಅಂತಾ ಕೆಲಸದಿಂದ ತೆಗದು ಹಾಕಕೂಡದು.

ಗುತ್ತಿಗೆ ವಗೈರೆಯಲ್ಲಿ ಸಂಬಂಧ ಪಡುವ ಆಫೀಸರ್ ಮುಂತಾದವರಿಗೆ ದಂಡನೆ.

16. ಕಲಂ 1. ಈ ಕಾನೂನ್ ಅನುಸರಿಸಿ ಮೊಕರರ್ ಮಾಡಲ್ಪಟ್ಟ ಯಾವ ಪ್ರೆಸಿಡೆಂಟರಾಗಲಿ, ಕಮ್ಮಿಷನರಾಗಲಿ, ಆಫೀಸರಾಗಲಿ, ನೌಕರನಾಗಲಿ, ಕಮ್ಮಿಷನರ್‍ಗಳೊಡನೆ ಮಾಡಲ್ಪಟ್ಟ ಅಥವಾ ಅವರಿಗಾಗಿ ನೆರವೇರಿಸಲ್ಪಟ್ಟ ಯಾವ ಕಂಟ್ರಾಕ್ಟಿನಲ್ಲಾಗಲಿ, ಕಾಮಗಾರಿಯಲ್ಲಾಗಲಿ ಸಂಬಂಧ ಪಡಕೂಡದು, ಅಥವಾ ಪ್ರಯೋಜನಾಶೆಯನ್ನು ಪಡೆಯಕೂಡದು, ಯಾವ ಪ್ರೆಸಿಡೆಂಟರಾಗಲಿ, ಕಮ್ಮಿಷನರಾಗಲಿ, ಆಫೀಸರಾಗಲಿ, ನೌಕರನಾಗಲಿ ಹಾಗೆ ಸಂಬಂಧ ಪಟ್ಟಿದ್ದರೆ ಅಥವಾ ಪ್ರಯೋಜನಾಶೆವುಂಟಾಗಿದ್ದರೆ, ತರುವಾಯ ಸದರೀ ಕಮ್ಮಿಷರ್ನಲ್ಲಾಗಲಿ, ಕಮ್ಮಿಷರ್ಕೆಳಗಾಗಲಿ, ಯಾವ ಅಧಿಕಾರವನ್ನಾದರೂ, ನೌಕರಿಯನ್ನಾದರೂ, ವಹಿಸುವದಕ್ಕೆ ಅಥವಾ ಉದ್ಯೋಗದಲ್ಲಿ ಯಾ ಕೆಲಸದಲ್ಲಿ ಯಿರುತ್ತಾ ಯಿರುವದಕ್ಕೆ ಅರ್ಹನಲ್ಲದೆ ಇರುವದು ಮಾತ್ರವಲ್ಲದೆ ಐನೂರು ರೂಪಾಯಿಗಳನ್ನು ದಂಡವಾಗಿ ತೆರತಕ್ಕದ್ದು. ಸದರೀ ದಂಡದ ಮೊಬಲಗ್ ಯಾವ ಮನುಷ್ಯನಿಂದಲಾಗಲಿ ವ್ಯಾಜ್ಯದ ಮೂಲಕ ಪೂರಾ ಕೋರ್ಟ್ ಖರ್ಚು ಸಹಿತ ವಸೂಲು ಬರಮಾಡಿಕೊಳ್ಳಲ್ಪಡಬಹುದು. ಪರಂತು ಪಾರ್ಲಿಮೆಂಟಿನ ಯಾ ಇಂಡ್ಯಾ ಗವರ್ನ್‍ಮೆಂಟಿನ, ಯಾ ಫೋರ್ಟ್ ಸೆಂಟ್ ಜಾರ್ಜ್ ಗವರ್ನರ್ ಇನ್‍ಕೌನ್ಸೆಲ್ಲವರ, ಯಾವದಾದರೂ ಆಕ್ಟಿನ ದೆಸೆಯಿಂದ ಯಾ ಆಕ್ಟಿನ ನಿಬಂಧನೆಗಳನುಸರಿಸಿ ಅಥವಾ ಚಾರ್ಟರ್ ಯೆಂಬ ಶಾಸನದ ದೆಸೆಯಿಂದ ಸ್ಥಾಪಿಸಲ್ಪಟ್ಟ ಯಾವದಾದರೂ ಜಾಯಿಂಟ್‍ಸ್ಟಾಕ್ ಕಂಪೆನಿಯ ಹಿಸ್ಸೇದಾರನಾಗಿರುವ ಯಾವ ಮನುಷ್ಯನಾಗಲಿ, ಅಂತಾ ಕಂಪೆನಿಯವರಿಗೂ ಕಮ್ಮಿಷನರ್‍ಗಳಿಗೂ ಪರಸ್ಪರ ನಡದಿರುವ ಯಾವದಾದರೂ ಗುತ್ತಿಗೆ ಸಬಬ್ ಯಾ ಅಂತಾ ಕಂಪೆನಿಯವರಿಂದ ನೆರವೇರಿಸೋಣಾದ ಯಾವದಾದರೂ ಕಾಮಗಾರೀ ಸಬಬ್ ಮ್ಯುನಿಸಿಪಲ್ ಕಮ್ಮಿಷನಿನ ಪ್ರೆಸಿಡೆಂಟರಾಗಿ ಯಾ ಕಮ್ಮಿಷನರಾಗಿ ಯಾ ಆಫೀಸರಾಗಿ ಯಾ ನೌಕರನಾಗಿ ಮೊಕರರ್ ಆಗುವದಕ್ಕೆ ಅಭ್ಯಂತರಪಡಿಸಲ್ಪಡಕೂಡದು.

ಅಧಿಕಾರವಿಲ್ಲದ ರುಸುಂಗಳನ್ನು ತೆಗದುಕೊಳ್ಳುವ ಆಫೀಸರುಗಳು ವಗೈರೆಗೆ ದಂಡನೆ

ಕಲಂ. 2. ಇಂಡಿಯನ್ ಪೆನಲ್‍ಕೋಡಿನ 21ನೇ ಸೆಕ್ಷನ್ ಅರ್ಥದಲ್ಲಿ ಸರ್ಕಾರ್ ನೌಕರನಲ್ಲದೆ, ಕಮ್ಮಿಷನಿನಲ್ಲಾಗಲಿ, ಕಮ್ಮಿಷನ್ ಕೆಳಗಾಗಲಿ ಉದ್ಯೋಗವನ್ನು ಪಡದಿರುವ ಯಾವ ಮನುಷ್ಯನಾಗಲಿ ತನಗೆ ನ್ಯಾಯವಾಗಿ ಸಲ್ಲುವ ಮೊಬಲಗಿಗಿಂತ ಬೇರೆಯಾಗಿ ತನ್ನ ಉದ್ಯೋಗ ಸಂಬಂಧವಾದ ಕಾರ್ಯಗಳನ್ನು ಮಾಡುವದಕ್ಕೋಸ್ಕರ ಯಾ ಮಾಡದೇ ಯಿರುವದಕ್ಕೋಸ್ಕರ ಅಥವಾ ತನ್ನ ಉದ್ಯೋಗ ಸಂಬಂಧವಾದ ಕಾರ್ಯಗಳನ್ನು ನೆರವೇರಿಸುವದರಲ್ಲಿ ಯಾವ ಮನುಷ್ಯನಿಗಾಗಲಿ ಯೆಹಸಾನನ್ನಾದರೂ, ಬೇ ಯೆಹಸಾನನ್ನಾದರೂ ತೋರಿಸುವದಕ್ಕೋಸ್ಕರ ಯಾ ತೋರಿಸದೇ ಬಿಡುವದಕ್ಕೋಸ್ಕರ ಅಥವಾ ತಾನು ಸರ್ಕಾರ ನೌಕರನಾಗಿದ್ದು ಕಮ್ಮಿಷರಲ್ಲಾಗಲಿ, ಮತ್ಯಾವ ಸರ್ಕಾರ ನೌಕರರಲ್ಲಾಗಲಿ, ಯಾ ಮೈಸೂರು ಶ್ರೀಮನ್ ಮಹಾರಾಜಾ ಸರ್ಕಾರದವರಲ್ಲಾಗಲಿ ಯಾವ ಉಪಕಾರವನ್ನಾದರೂ ಅಪಕಾರವನ್ನಾದರೂ ಮಾಡಲಿಕ್ಕೋಸ್ಕರ ಯಾ ಮಾಡುವ ಬಗ್ಯೆ ಪ್ರಯತ್ನ ಮಾಡಲಿಕ್ಕೋಸ್ಕರ ತನಗಾಗಿಯೇ ಆಗಲಿ ಮತ್ಯಾವನಿಗೋಸ್ಕರವೇ ಯಾಗಲಿ ಯಾವ ಮನುಷ್ಯನಿಂದಾದರೂ, ಬಹುಮಾನವಾಗಿ ಯಾವ ಪ್ರಯೋಜನವನ್ನಾಗಲಿ ಅಂಗೀಕರಿಸಿದರೆ, ಯಾ ಪಡಕೊಂಡರೆ, ಯಾ ಅಂಗೀಕರಿಸಲಿಕ್ಕೆ ಸಮ್ಮತಿಸಿದರೆ, ಯಾ ಪಡೆಯಲಿಕ್ಕೆ ಯತ್ನಿಸಿದರೆ ಅವನು ಇಂಡಿಯನ್ ಪೆನಲ್‍ಕೋಡಿನ 161ನೇ ಸೆಕ್ಷನಿನಿಂದ ವಿಧಿಸೋಣಾದ ರೀತಿಯಾಗಿ ದಂಡಿಸಲ್ಪಡತಕ್ಕದ್ದು.

ಕಮ್ಮಿಷನರ್‍ಗಳು ಆಫೀಸಗಳನ್ನು ಏರ್ಪಾಡು ಮಾಡಿಕೊಳ್ಳತಕ್ಕದ್ದು.

17. ಬೆಂಗಳೂರು ಷಹರ ಮ್ಯುನಿಸಿಪಲ್ ಕಮ್ಮಿಷನರ್‍ಗಳು ಷಹರಿನೊಳಗೆ ಕೆಲಸಗಳು ನಡಸುವ ಬಗ್ಯೆ ಒಂದು ಆಫೀಸನ್ನು ಯೇರ್ಪಡಿಸಿ ಯಿಟ್ಟುಕೊಳ್ಳತಕ್ಕದ್ದು.

ಕೆಲಸ ಜರಿಗಿಸತಕ್ಕ ವಿಧಾನ.

ಸಭೆ ಕೂಡುವದಕ್ಕೆ ಕಾಲ.

ಪ್ರತಿ ಸಂವತ್ಸರದಲ್ಲಿಯೂ ಸಾಮಾನ್ಯಗಳಾದ ಸಭೆಗಳು ಹನ್ನೆರಡು ನಡೆಯತಕ್ಕವು. ಅಂತಾ ಸಭೆಗಳಲ್ಲಿ ಸಾಧಾರಣ ಕೆಲಸಗಳನ್ನು ನಡಿಸುವದಕ್ಕೋಸ್ಕರ ಮ್ಯುನಿಸಿಪಲ್ ಕಮ್ಮಿಷನರ್‍ಗಳು ಸೇರತಕ್ಕದ್ದು. ಮತ್ತು ಅವುಗಳಲ್ಲಿ ನಡೆಯತಕ್ಕ ಕೆಲಸವನ್ನು ಕುರಿತು ನೋಟಿಸ ಕೊಡುವದು ಜರೂರಾಗಿರತಕ್ಕದ್ದು. ಸಾಮಾನ್ಯ ಸಭೆಗಳು ಪ್ರತಿ ತಿಂಗಳ ಮೊದಲನೇ ವಾರದಲ್ಲಿಯಾಗಲಿ, ಮ್ಯುನಿಸಿಪಲ್ ಕಮ್ಮಿಷನಿನ ಪ್ರೆಸಿಡೆಂಟಿಗೆ ಯಾವದಿನ ಯುಕ್ತವೆಂತ ತೋರುತ್ತೋ ಆ ದಿನಗಳಲ್ಲಾಗಲಿ ನಡೆಯತಕ್ಕದ್ದು ಅಂತಾ ಸಭೆಗಳಲ್ಲಿ ನಡೆಯಲ್ಪಡತಕ್ಕ ಕಾರ್ಯವನ್ನು ಕುರಿತ ನೋಟಿಸು ಮೈಸೂರು ಗೆಜೆಟ್ಟಿನಲ್ಲಿಯೂ ಬೆಂಗಳೂರಲ್ಲಿ ಪ್ರಕಟಿಸಲ್ಪಡುವ ಸ್ಥಳದ ಇಂಗ್ಲಿಷ್ ವ ದೇಶ ಭಾಷೆಯ ಒಂದು ಯಾ ಅನೇಕ

ವೃತ್ತಾಂತ ಪತ್ರಿಕೆಗಳಲ್ಲಿಯೂ ಸಭೆ ನಡಿಯುವದಕ್ಕೆ ಅಥವಾಪಕ್ಷ ಏಳುದಿನಗಳಿಗೆ ಮುಂಚಿತವಾಗಿ ಪ್ರಕಟಿಸಲ್ಪಡತಕ್ಕದ್ದು.

ಪ್ರೆಸಿಡೆಂಟರು ಪ್ರತಿಸಲ ಸಭೆ ಕೇರಿದಾಗಲೂ ಜಮಾ ಖರ್ಚು ತಖ್ತಾ ಹಾಜರಮಾಡತಕ್ಕದ್ದು.

19. ಪ್ರತಿ ಸಲ ಸದರೀ ಸಾಧಾರಣ ಸಭೆ ಕೇರಿದಾಗಲೂ, ಪ್ರೆಸಿಡೆಂಟರು, ಮ್ಯುನಿಸಿಪೆಲ್ ಫಂಡನ್ನು ಕುರಿತು ಆ ಹಿಂದಿನ ತಿಂಗಳೊಳಗೆ ನಡೆದಿರುವ ಜಮಾ ಖರ್ಚಿನ ಒಂದು ತಖ್ತೆಯನ್ನು ಸಭೆಯವರ ಮುಂದೆ ಹಾಜರ್ ಮಾಡತಕ್ಕದ್ದು. ಅಂತಾ ತಖ್ತೆಯು, ಸಭೆಯ ನಡವಳತವನ್ನು ಕುರಿತ ಮಿಸಿಟ್ಸಯೆಂಬ ಅಭಿಪ್ರಾಯಗಳ ಒಂದು ನಕ್ಕಲ್ ಸಹಿತವಾಗಿ ಮೈಸೂರು ಶ್ರೀಮನ್ಮಹಾರಾಜಾ ಸರ್ಕಾರದವರಿಗೆ ಕಳಹಿಸಲ್ಪಟ್ಟು ಮೈಸೂರು ಗೆಜೆಟನಲ್ಲಿ ಛಾಯಿಷ್ ಮಾಡಲ್ಪಡತಕ್ಕದ್ದು.

ವಿಶೇಷ ಸಭೆಗಳು ಸೇರಬಹುದು.

20. ಮ್ಯುನಿಸಿಪೆಲ್ ಕಮ್ಮಿಷನಿನ ಪ್ರೆಸಿಡೆಂಟರು ತಮಗೆ ಯುಕ್ತ ತೋರಿದಾಗ ಕಮ್ಮಿಷನರಗಳ ಒಂದು ವಿಶೇಷ ಸಭೆ ಕೇರಿಸಬಹುದು, ಮತ್ತು ಯಾರಾದರೂ ಐದು ಮಂದಿ ಕಮ್ಮಿಷನರಗಳೊಂದ ದಸ್ತಖತ್ ಮಾಡಲ್ಪಟ್ಟ ಲಿಖಿತ ರೂಪವಾದ ಖಾಯಿಷಿನ ಮೇಲೆ ಬದಸ್ತೂರ ಕಮ್ಮಿಷನರಗಳ ವಿಶೇಷ ಸಭೆ ಕೇರಿಸತಕ್ಕದ್ದು. ಅಂತಾ ಯಾವ ಸಭೆಯಾಗಲಿ ಆಗುವದಕ್ಕೆ ಪೂರ್ವ ಹಾಗೆ ವುದ್ದೇಶಿಸಲ್ಪಟ್ಟ ಸಭೆ ಆಗುವ ಕಾಲ, ಸ್ಥಳ, ಅದರ ಉದ್ದೇಶ್ಯ, ಇವುಗಳನ್ನು ನಮೂದಿಸಿ ಅಥವ ಪಕ್ಷ ಏಳು ದಿನಗಳಿಗೆ ಮುಂಚಿತವಾಗಿ, ಮೈಸೂರು ಗೆಜೆಟನಲ್ಲಿಯೂ, ಬೆಂಗಳೂರಲ್ಲಿ ಪ್ರಕಟಿಸಲ್ಪಡುವ ಇಂಗ್ಲಿಷ್ ವ ದೇಶ ಭಾಷೆಯ ಸ್ಥಳದ ನ್ಯೂಸ್ ಪೇಪರ್ಸಯಾನೇ ವೃತ್ತಾಂತ ಪತ್ರಿಕೆಗಳಲ್ಲಿಯೂ ಛಾಯಿಷ್ ಮಾಡಿ ನೋಟಿಸ ಕೊಡತಕ್ಕದ್ದು.

ಸಭೆಗಳಲ್ಲಿ ಯಾವ ಯಾವ ಕೆಲಸಗಳು ನಡಿಸಲ್ಪಡತಕ್ಕದ್ದು.

21. ಸೆಕ್ಷನ್ 18 ವ 20 ಇವುಗಳನ್ನನುಸರಿಸಿ ಕೊಡೋಣಾದ ನೋಟಿಸಗಳಲ್ಲಿ ನಮೂದಿಸೋಣಾದ ಕೆಲಸಕ್ಕಿಂತ ಯಿತರವಾದ ಕೆಲಸವನ್ನು ಯಾವ ಸಭೆಯಲ್ಲಿಯೂ ತರತಕ್ಕದ್ದಲ್ಲವು, ಮತ್ತು ನಡಿಸತಕ್ಕದ್ದಲ್ಲವು. ಪರಂತು ಯಾವ ಕಮ್ಮಿಷನರಾಗಲಿ ಅಂತಾ ಸಭೆ ಕೇರುವದನ್ನು ಕುರಿತು ಕೊಡಲ್ಪಟ್ಟ ನೋಟಿಸನಲ್ಲಿ ನಮೂದಿರುವ ವಿಷಯವಲ್ಲದೆ ಮತ್ಯಾವ ಹೆಚ್ಚುಗಟ್ಲೆ ನಿರ್ಣಯವನ್ನಾಗಲಿ ಸಭೆಯವರಿಗೆ ಶ್ರುತಪಡಿಸಬೇಕೆಂಬ ತನ್ನ ಇರಾದೆಯನ್ನು ಕುರಿತು ಮುಂದಾಗಿ ನೋಟಿಸ ಕೊಟ್ಟಿದ್ದ ಪಕ್ಷಕ್ಕೆ ಅಂತಾ ನೋಟಿಸು ಸದರೀ ಸಭೆ ಕೇರುವದಕ್ಕೆ ಮುಂಚೆ ನಾಲ್ಕು ದಿನಗಳಿಗೆ ಕಮ್ಮಿ ಇಲ್ಲದಂತೆ ಬೆಂಗಳೂರಲ್ಲಿ ಪ್ರಕಟಿಸಲ್ಪಡುವ ಒಂದು ಯಾ ಜಾಸ್ತೀ ಇಂಗ್ಲಿಷ ವೃತ್ತಾಂತ ಪತ್ರಿಕೆಗಳಲ್ಲಿ ಪ್ರಕಟಿಸಲ್ಪಟ್ಟು ಸದರೀ ನಿರ್ಣಯದ ಒಂದು ನಕ್ಕಲ್ ಕಮ್ಮಿಷನರವರ ಆಫಿಸನಲ್ಲಿ ಇಡಲ್ಪಡುವದರ ದೆಶೆಯಿಂದ ಯಾವ ಅಭಿಪ್ರಾಯವನ್ನಾಗಲಿ ಸಭೆಗೆ ಆಲೋಚನೆಯ ಬಗ್ಗೆ ತರಬಹುದು.

ದರೋಬಸ್ತು ಅಂಶಗಳೂ, ಸಭೆಗಳಲ್ಲಿ ಅಧಿಕ ಸಂಖೆಯವರ ಅಭಿಪ್ರಾಯಗಳನ್ನು ಅನುಸರಿಸಿ ನಿರ್ಣಯಿಸಲ್ಪಡತಕ್ಕವು.

22. ಕಮ್ಮಿಷನರಗಳು ಮಾಡುವಂತೆ ಅಧಿಕಾರ ಕೊಡಲ್ಪಟ್ಟ ಯಾ ನಿಯಮಿಸಲ್ಪಟ್ಟ ದರೋಬಸ್ತು ಕೆಲಸಗಳೂ, ನಿರ್ಣಯದ ಬಗ್ಗೆ ಅವರುಗಳ ಮುಂದೆ ಬರತಕ್ಕ ದರೋಬಸ್ತು ಅಂಶಗಳೂ ಇದರಲ್ಲಿ ಅನ್ಯಥಾ ವಿಧಿಸಲ್ಪಟ್ಟ ಪ್ರಕಾರ ಹೊರತು, ಯಾವ ಸಭೆಯವರ ಮುಂದೆ ಸದರೀ ಅಂಶ ತರಲ್ಪಡುತ್ತೋ ಅಂತಾ ಯಾವ ಸಾಧಾರಣ ಯಾ ವಿಶೇಷ ಸಭೆಯೊಳಗೆ ಹಾಜರಿರುವ ಮತ್ತು ಅಭಿಪ್ರಾಯ ತಿಳಿಸುವ ಕಮ್ಮಿಷನರಗಳ ಪೈಕಿ ಹೆಚ್ಚು ಸಂಖೆಯುಳ್ಳವರ ದೆಶೆಯಿಂದ ಮಾಡಲ್ಪಡತಕ್ಕದ್ದು ಮತ್ತು ನಿರ್ಣಯಿಸಲ್ಪಡತಕ್ಕದ್ದು.

ಮ್ಯುನಿಸಿಪೆಲ್ ಕಮ್ಮಿಷನರಗಳ ಸಭೆಯಲ್ಲಿ ಅಗ್ರಾಸನಾಧಿಪತಿಯಾಗಿರತಕ್ಕವರು.

23. ಮ್ಯುನಿಸಿಪೆಲ್ ಕಮ್ಮಿಷನರಗಳ ಪ್ರೆಸಿಡೆಂಟರು ಅಂತಾ ಪ್ರತಿ ಸಭೆಯಲ್ಲಿಯೂ, ಅಗ್ರಾಸನಾಧಿಪತಿಯಾಗಿದ್ದು ಸಮಾನಾಭಿಪ್ರಾಯಗಳುಂಟಾಗುವ ದರೋಬಸ್ತು ಸಂಗತಿಗಳಲ್ಲಿಯೂ, ಯೆರಡನೆಯ ಅಭಿಪ್ರಾಯವನ್ನಾಗಲಿ, ಪರಿಷ್ಕರಿಸತಕ್ಕ ಅಭಿಪ್ರಾಯವನ್ನಾಗಲಿ ಹೇಳುವ ಅಧಿಕಾರವನ್ನು ಪಡೆದಿರತಕ್ಕದ್ದು. 14ನೇ ಸೆಕ್ಷನ್ ಪ್ರಕಾರ ಕೊಡಲ್ಪಡುವ ರಜಾ ಶಿವಾಯಿ ಅನ್ಯಥಾ ಪ್ರೆಸಿಡೆಂಟರ ಗ್ಯೆರ್ ಹಾಜರೀಯಲ್ಲಿ, ಯಾವ ಸಭೆಯೊಳಗಾದರೂ ಹಾಜರಿರುವ ಕಮ್ಮಿಷನರಗಳು ತಮ್ಮ ಪೈಕಿ ಒಬ್ಬರನ್ನು ಸಭಾಧ್ಯಕ್ಷರಾಗಿ ನಿಯಮಿಸಿ ಕೊಳ್ಳತಕ್ಕದ್ದು. ಸದರೀ ಅಧ್ಯಕ್ಷರು ಆ ಸಭೆಗಾಗಿ ಅರ್ಯಿ ಪ್ರೆಸಿಡೆಂಟರ ಅಧಿಕಾರವನ್ನೆಲ್ಲ ಪಡೆಯತಕ್ಕದ್ದು. ಯಾವ ಸಭೆಯಲ್ಲಿ ಕಾರ್ಯವನ್ನು ನಡಿಸಲಿಕ್ಕೆ ಸಾಕಾದಷ್ಟು ಮಂದಿ ಕಮ್ಮಿಷನರಗಳು ಇರುತ್ತಾರೋ ಅಂತಾ ಯಾವದಾದರೂ ಸಭೆಯ ಪ್ರೆಸಿಡೆಂಟರು, ಸಭೆಯವರ ಅನುಮತಿಯ ಮೇಲೆ, ಸಭೆಯಾಗುವದನ್ನು ಆಗಿಂದಾಗ್ಯೆ ವ ಒಂದು ಸ್ಥಳದಿಂದ

ಮತ್ತೊಂದು ಸ್ಥಳಕ್ಕೆ ನಿಲ್ಲಿಸಿ ಇಡ ಬಹುದು. ಆದರೆ, ಹಾಗೆ ನಿಲ್ಲಿಸಿ ಇಡೋಣಾದ ಸಭೆಯಲ್ಲಿ ಪೂರೈಸದೆ ಬಾಕೀ ಇಡೋಣಾದ ಕೆಲಸ ಹೊರತು ಇತರ ಯಾವ ಕೆಲಸವೂ ಹಾಗೆ ನಿಲ್ಲಿಸಿ ಇಡಲ್ಪಟ್ಟ ಯಾವ ಸಭೆಯಲ್ಲಿಯೂ, ಜರಿಗಿಸಲ್ಪಡತಕ್ಕದ್ದಲ್ಲವು.

ಎಷ್ಟು ಮಂದಿ ಸೇರಿಯಿದ್ದರೆ ಕೆಲಸ ಜರಿಗಿಸಲಿಕ್ಕೆ ಸಾಕಾದ ಸಂಖ್ಯೆಯುಳ್ಳವರಾಗುತ್ತಾರೆ.

24. ಯಾವ ಸಭೆಯೊಳಗಾಗಲಿ ಕೆಲಸ ಜರಿಗಿಸಲಿಕ್ಕೆ ಸಾಕಾದಷ್ಟುಮಂದಿ ಕಮ್ಮಿಷನರುಗಳು ಹಾಜರು ಯಿಲ್ಲದೇ ಯಿದ್ದಪಕ್ಷಕ್ಕೆ ಅಂದರೆ, ಒಂದು ಸಾಧಾರಣ ಸಭೆಯಲ್ಲಿ ಅಥಮಪಕ್ಷ ಆರುಮಂದಿ ಕಮ್ಮಿಷನರ್‌ಗಳು ಹಾಜರ್ ಯಿಲ್ಲದಿದ್ದರೆ, ಮತ್ತು ಒಂದು ವಿಶೇಷ ಸಭೆಯಲ್ಲಿ ಅಥಮಪಕ್ಷ ಹನ್ನೆರಡುಮಂದಿ ಕಮ್ಮಿಷನರ್‌ಗಳು ಯಿಲ್ಲದಿದ್ದರೆ ಯಾವ ಸಭೆಯೊಳಗೂ, ಯಾವ ವ್ಯವಹಾರವೂ ಜರಿಗಿಸಲ್ಪಡತಕ್ಕದ್ದಲ್ಲವು. ಪರಂತು ಕಮ್ಮಿಷನರ್‌ಗಳ ಯಾವ ಸಭೆಯಲ್ಲಾಗಲಿ ಕೆಲಸ ನಿರ್ವಹಿಸುವದಕ್ಕೆ ಬೇಕಾದಷ್ಟುಮಂದಿ, ಇಲ್ಲದೇ ಇದ್ದ ಪಕ್ಷಕ್ಕೆ, ಪ್ರೆಸಿಡೆಂಟರು (ಮ್ಯುನಿಸಿಪೆಲ್ ಕಮ್ಮಿಷನಿನ ಪ್ರೆಸಿಡೆಂಟರಾಗಿರಲಿ ಅಲ್ಲದೇ ಯಿರಲಿ) ಪರಂತು ತಮಗೆ ಯುಕ್ತ ತೋರುವ ಅನುಕೂಲವಾದ ಕಾಲದಲ್ಲಿ ಮತ್ತು ಅಂತಾ ಸ್ಥಳದಲ್ಲಿ ಸಭೆ ನಡಿಯುವಂತೆ ನಿಲ್ಲಿಸಿ ಯಿಡತಕ್ಕದ್ದು; ಮತ್ತು ಸಾಕಾದಷ್ಟುಮಂದಿ ಕಮ್ಮಿಷನರ್‌ಗಳು ಹಾಜರಿಯಿದ್ದಿದ್ದರೆ ಯಾವ ಕೆಲಸ ಮೊದಲನೇ ಸಭೆಯವರ ಮುಂದೆ ತರಲ್ಪಟ್ಟಿರುವದೋ ಆ ಕೆಲಸವು ನಿಲ್ಲಿಸಿ ಇಡೋಣಾದ ಸಭೆಯಲ್ಲಿ ಸಾಕಾದಷ್ಟುಮಂದಿ ಕಮ್ಮಿಷನರ್‌ಗಳು ಹಾಜರ್ ಇರಲಿ ಇಲ್ಲದೇ ಇರಲಿ, ಪರಂತು ಮಾಮೂಲ್ ಮೇರೆ ನಿಲ್ಲಿಸಿ ಯಿಡೋಣಾದ ಸಭೆಯವರ ಮುಂದೆ ತರಲ್ಪಟ್ಟ ವ್ಯವಸ್ಥೆ ಮಾಡಲ್ಪಡತಕ್ಕದ್ದು.

ಕಮ್ಮಿಷನರ್‌ಗಳು ಕಮ್ಮಿಟಿಯಾನೇ ವಿಚಾರಣೆ ಸಭೆಗಳನ್ನು ಮೊಕರರ್ ಮಾಡಬಹುದು.

25. ಬೆಂಗಳೂರು ಷಹರಿ ಅಭಿವೃದ್ಧಿ, ಪಾಕೀಜೀ ಇವುಗಳಿಗೆ ಸಂಬಂಧಪಟ್ಟ ಯಾವ ಅಂಶವನ್ನಾಗಲಿ ವಿಚಾರಿಸಲಿಕ್ಕೆ, ವ ಅದನ್ನು ಕುರಿತು ರಿಪೋರ್ಟ್ ಮಾಡಲಿಕ್ಕೆ ತಮಗೆ ಯುಕ್ತ ತೋರುವಷ್ಟು ಮಂದಿ ಜನಗಳುಳ್ಳ ತಮಗೆ ಯುಕ್ತ ತೋರುವಂತಾ ವ ಅಷ್ಟು ಕಮ್ಮಿಟೀಗಳನ್ನು ತಮ್ಮ ಸಂಖ್ಯೆಯೊಳಗಿಂದ ಆಗಿಂದಾಗ್ಯೆ ಮೊಕರರ್ ಮಾಡುವದು ಮ್ಯುನಿಸಿಪೆಲ್ ಕಮ್ಮಿಷನರ್‌ಗಳಿಗೆ ನ್ಯಾಯವಾಗಿರತಕ್ಕದ್ದು ಪರಂತು ಅಂತಾ ಪ್ರತಿ ಕಮ್ಮಿಟಿಯ ನಡವಳಿತಗಳು ಮ್ಯುನಿಸಿಪೆಲ್ ಕಮ್ಮಿಷನರ್‌ಗಳಿಗೆ ಕಳುಹಿಸಲ್ಪಡತಕ್ಕದ್ದು.

ಕಮ್ಮಿಷನರ್‌ಗಳ ನಡವಳಿತಗಳ ಬಾಬತು ಮಿನ್ಯುಟ್ಸ್ ಎಂಬ ಅಭಿಪ್ರಾಯಗಳು ಬರದು ಇಡಲ್ಪಟ್ಟ ನೋಡುವ ಬಗ್ಯೆ ಸಿದ್ಧವಾಗಿರತಕ್ಕದ್ದು.

26. ಕಮ್ಮಿಷನರ್‌ಗಳ ದರೋಬಸ್ತು ಸಭೆಗಳ ನಡವಳಿತಗಳ ಬಾಬತು ಮಿನಿಟ್ಸ್ ಬರೆಯಲ್ಪಟ್ಟು ಆ ಬಗ್ಯಾಗಿ ಇಡಲ್ಪಡುವ ಒಂದು ವಹಿಯಲ್ಲಿ ಚನ್ನಾಗಿ ದಾಖಲ್ ಮಾಡತಕ್ಕದ್ದಲ್ಲದೆ ಪ್ರತಿ ಸಭೆಯಾದ ತರುವಾಯ ಅದಕ್ಕೆ ಪ್ರೆಸಿಡೆಂಟರಿಂದ ದಸ್ತಖತ್ ಮಾಡಲ್ಪಡತಕ್ಕದ್ದು ಮತ್ತು ಸದರೀ ಮಿನಿಟ್‌ಗಳು ಯುಕ್ತಗಳಾದ ಯೆಲ್ಲಾ ಕಾಲಗಳಲ್ಲಿಯೂ ಯಾವ ಕಮ್ಮಿಷನರಾಗಲಿ ಬಗೆರ್ ರುಸುಂ ನೋಡಬಹುದು ಮತ್ಯಾವ ಮನುಷ್ಯನಾಗಲಿ ಯೆಂಟು ಆಣೆ ರುಸುಂ ಕೊಟ್ಟಲ್ಲಿ ನೋಡುವ ಬಗ್ಯೆ ಕಮ್ಮಿಷನರ್‌ಗಳ ಆಫಿಸನಲ್ಲಿ ಸಿದ್ಧವಾಗಿರತಕ್ಕದ್ದು.

ಕಮ್ಮಿಷನರ್‌ಗಳಿಂದ ಅಥವಾ ಅವರ ತರಫಿನಲ್ಲಿ ಗುತ್ತಿಗೆ ಮಾಡಿಕೊಳ್ಳುವ ವಿಧ.

27. ಮ್ಯುನಿಸಿಪೆಲ್ ಕಮ್ಮಿಷನಿನ ಪ್ರೆಸಿಡೆಂಟರು, ಕಮ್ಮಿಷನರ್‌ಗಳ ತರಫಿನಲ್ಲಿ ಮತ್ತು ಸಾಧಾರಣ ಯಾ ವಿಶೇಷವಾದ ಸಭೆಯೊಳಗೆ ಅವರ ಅಂಗೀಕಾರವನ್ನು ಮುಂದಾಗಿ ಪಡೆದು, ಇದರಲ್ಲಿ ಮುಂದೆ ವಿಧಿಸಲ್ಪಟ್ಟ ರೀತಿಯಾಗಿ, ಕಮ್ಮಿಷನರ್‌ಗಳಿಂದ ನಡಿಸಲ್ಪಡತಕ್ಕದ್ದೆಂತ ಈ ಕಾನೂನ್ ದೆಶೆಯಿಂದ ನಿಯಮಿಸಲ್ಪಟ್ಟ ಯಾ ಅಧಿಕಾರ ಕೊಡಲ್ಪಟ್ಟ ಯಾವ ಕೆಲಸಗಳನ್ನಾಗಲಿ, ಈ ಕಾನೂನ್ ಕೆಲಸಗಳಿಗೆ ಜರೂರಾದ ಯಿತರ ಯಾವ ವಿಷಯಗಳನ್ನಾಗಲಿ, ನೆರವೇರಿಸಲಿಕ್ಕೆ ಯಾವ ಮನುಷ್ಯನ ಸಂಗಡಲಾಗಲಿ ಗುತ್ತಿಗೆಗಳನ್ನು ಮಾಡಬಹುದು.

ಜಮಾ ಖರ್ಚುಗಳ ಅಂದಾಜಾ, ಮತ್ತು ಆಡಿಟಿಯಾನೇ ಲೆಕ್ಕ ತನಖೀ ಈ ವಿಷಯಗಳು.

ಪ್ರೆಸಿಡೆಂಟರು ಜಮಾ ಖರ್ಚಿನಬಗ್ಯೆ ಸಾಲೀಯಾನಾ ಬಡಜಟ್ ಲೆಕ್ಕ ಕಮ್ಮಿಷನರ್‌ಗಳಲ್ಲಿ ಹಾಜರ್‌ಮಾಡತಕ್ಕದ್ದು.

28. ಈ ಕಾನೂನ್ ಅನುಸರಿಸಿ ಪ್ರತಿ ಸಂವತ್ಸರ ಫೆಬ್ರವರಿ ಮಾಹೆಯಲ್ಲಿ ಸೇರತಕ್ಕ ಮ್ಯುನಿಸಿಪೆಲ್ ಇಲಾಖೆಯ ಕಮ್ಮಿಷನರ್‌ಗಳ ಸಾಧಾರಣ ಸಭೆಯಲ್ಲಿ ಮ್ಯುನಿಸಿಪೆಲ್ ಕಮ್ಮಿಷನರ್‌ಗಳ ಪ್ರೆಸಿಡೆಂಟರು ಮುಂದಿನ ಏಪ್ರೆಲ್ ಗುರ್ರೇ ಲಾಗಾಯತು ಷುರುವಾಗುವ ಸಾಲಿಗೆ ಮ್ಯುನಿಸಿಪೆಲ್ ಇಲಾಖೆಯ ಜಮಾಖರ್ಚಿನ ಬಾಬತು ತಮ್ಮಿಂದ ತಯಾರ್‌ಮಾಡಲ್ಪಟ್ಟ ಒಂದು ಬಡ್ಜೆಟ್ ಯಾ ಅಂದಾಜನ್ನೂ

ಕಮ್ಮಿಷನರುಗಳು ಆಗಿಂದಾಗ್ಯೆ, ಸಾಧಾರಣ ಸಭೆಯಲ್ಲಿ ಕೊಡತಕ್ಕಾದ ಹುಕುಂ ಮೂಲಕ ನಿಯಮಿಸುವ ತಪಶೀಲಿಗೆ ಳನಿಸೀ ಮತ್ತು ಅಂತಾ ನಮೂನೆಯಲ್ಲಿ ಕಮ್ಮಿಷನರಗಳ ಮುಂದೆ ಇಡತಕ್ಕದ್ದು, ಪರಂತು ಅಂತಾ ಬಡ್ಜೆಟ್ ಲೆಕ್ಕ ಪೂರ್ತಿಮಾಡಿ ಛಾಪಾ ಹಾಕಲ್ಪಟ್ಟು ಅದರ ಒಂದು ನಕಲು ಟಪ್ಪಾಲ್ ಮೂಲಕವಾಗಲಿ ಇತರ ವಿಧದಿಂದಾಗಲಿ ಪ್ರತಿ ಮ್ಯುನಿಸಿಪೆಲ್ ಕಮ್ಮಿಷನರಗಳಿಗೂ ಕಳುಹಿಸಲ್ಪಡತಕ್ಕದ್ದಲ್ಲದೆ ಯಾವ ಸಭೆಯ ಮುಂದೆ ಸದರೀ ಬಡ್ಜೆಟ್ ಹಾಜರ್ಮಾಡಬೇಕಾಗಿರುತ್ತೋ ಆ ಸಭೆ ನಡಿಯುವದಕ್ಕೆ ಅಥಮ ಪಕ್ಷ ಏಳು ದಿನಗಳಿಗೆ ಮುಂಚಿತವಾಗಿ ಮೈಸೂರು ಗೆಜೆಟಿನಲ್ಲಿ ಪ್ರಕಟಿಸಲ್ಪಡತಕ್ಕದ್ದು.

ಬಡ್ಜೆಟ ಖರ್ಚಿನ ಅಂದಾಜ್ ಲೆಕ್ಕ.

29. ಸದರೀ ಬಡ್ಜೆಟ್ಟು ಯಾವ ಕಾಲಕ್ಕೆ ಸಂಬಂಧಪಟ್ಟಿರುತ್ತೋ ಆಕಾಲದೊಳಗೆ ಯೆಷ್ಟರ ಖರ್ಚು ಆಗಬೇಕೆಂತ ತಿಳಿಸಲ್ಪಡುತ್ತೋ ಅದನ್ನೂ, ಅಂತಾ ಖರ್ಚು ಯಾವ ರೀತಿಯಿಂದ ಮಾಡಬೇಕೆಂತ ಉದ್ದೇಶಿಸಲ್ಪಡುತ್ತೋ ಅದನ್ನೂ ಕಾಣಿಸತಕ್ಕದ್ದು.

ಅಂದಾಜ್ ಲೆಕ್ಕಗಳನ್ನೂ ಪರಿಷ್ಕರಿಸಿ, ಮಂಜೂರ್ಮಾಡುವಿಕೆ.

30. ಬಡ್ಜೆಟ ಲೆಕ್ಕದಲ್ಲಿ ದಾಖಲ್ ಮಾಡತಕ್ಕಾದ ರಖಂಗಳ ಪೈಕಿ ವಿಶಿಷ್ಟವನ್ನಾಗಲಿ, ಯಾವದನ್ನಾಗಲಿ ಮಂಜೂರ್ಮಾಡುವದು, ಯಾ ನಿರಾಕರಿಸುವದು, ಯಾ ತಿದ್ದುಪಡೀ ಮಾಡುವದು ಕಮ್ಮಿಷನರ್ಗಳ ಯೆಖ್ತ್ಯಾರೀ ಯಲ್ಲಿರತಕ್ಕದ್ದು. ಪರಂತು ಈ ಕಾನೂನು ನಿಬಂಧನೆಗಳಿಗೆ ವ್ಯತಿರಿಕ್ತವಾಗಿ ಯಾವ ತಿದ್ದುಪಾಟುಗಳೂ ನಡೆಯ ತಕ್ಕದ್ದಲ್ಲವು.

ಅಂದಾಜ್‌ಗಳು ಮೈಸೂರ ಶ್ರೀಮನ್ಮಹಾರಾಜಾ ಸರ್ಕಾರದವರಿಂದ ಮಂಜೂರ್ಮಾಡಲ್ಪಡತಕ್ಕವು.

31. ಸದರೀ, ಬಡ್ಜೆಟ್ಟು ಅಂದಾಜು ಮ್ಯುನಿಸಿಪೆಲ್ ಕಮ್ಮಿಷನರಗಳಿಂದ ಮಂಜೂರ್ಮಾಡಲ್ಪಟ್ಟ ಬಳಿಕ ಮೈಸೂರು ಶ್ರೀಮನ್ಮಹಾರಾಜಾ ಸರ್ಕಾರದವರಿಗೆ ಕಳುಹಿಸಲ್ಪಡತಕ್ಕದ್ದು, ಅಂದಾಜಿನಲ್ಲಿ ದಾಖಲಿರುವ ರಖಂಗಳ ಪೈಕಿ ವಿಶಿಷ್ಟವನ್ನಾಗಲಿ, ಯಾವದನ್ನಾಗಲಿ ಮಂಜೂರ್ಮಾಡುವದು, ಯಾ ನಿರಾಕರಿಸುವದು, ಯಾ ತಿದ್ದುಪಡೀಮಾಡುವದು ಮೈಸೂರು ಶ್ರೀಮನ್ಮಹಾರಾಜಾಸರ್ಕಾರದವರಿಗೆ ಅರ್ಹವಾಗಿರತಕ್ಕದ್ದು; ಪರಂತು ಈ ಕಾನೂನಿನ ನಿಬಂಧನೆಗಳಿಗೆ ವಿರುದ್ಧವಾಗಿ ಯಾವ ತಿದ್ದುಪಡಿಯೂ ಮಾಡಲ್ಪಡತಕ್ಕದ್ದಲ್ಲವು.

ಜರೂರಾಗಿದ್ದಾಗ ಸಪ್ಲಿಮೆಂಟಲ್ ಬಡ್ಜೆಟ ಎಂಬ ಉಪ ಅಂದಾಜ್ ಲೆಕ್ಕವನ್ನು ಪ್ರಸಿಡೆಂಟರು ಕಳುಹಿಸತಕ್ಕದ್ದು.

32. ಮ್ಯುನಿಸಿಪೆಲ್ ಕಮ್ಮಿಷನಿನ ಪ್ರಸಿಡೆಂಟರು ಸಪ್ಲಿಮೆಂಟಲ್ ಬಡ್ಜೆಟ ಯೆಂಬ ಉಪ ಬಡ್ಜೆಟ್ ಲೆಕ್ಕವನ್ನು ಯಾವಾಗಲಾಗಲಿ ತಯಾರ್ಮಾಡುವದು ಅವರಿಗೆ ನ್ಯಾಯವಾಗಿರತಕ್ಕದ್ದು. ಅದು ಮ್ಯುನಿಸಿಪೆಲ್ ಕಮ್ಮಿಷನರಗಳ ಮತ್ತು ಮೈಸೂರು ಶ್ರೀಮನ್ಮಹಾರಾಜಾ ಸರ್ಕಾರದವರ ಮಂಜೂರಾತಿಯ ಬಗ್ಯೆ ಈ ಕಾನೂನಿನ 30, 31ನೇ ಸೆಕ್ಷನ್‌ಗಳಿಂದ ನಿಯಮಿಸಲ್ಪಟ್ಟ ರೀತಿಯಾಗಿ ಕಳುಹಿಸಲ್ಪಡತಕ್ಕದ್ದು, ಪರಂತು ಅಂತಾ ಉಪ ಬಡ್ಜೆಟ ಪೂರೈಸಿ ಅಚ್ಚು ಹಾಕಲ್ಪಟ್ಟು ಟಪ್ಪಾಲ್ ಮೂಲಕವಾಗಲಿ, ಇತರ ರೀತಿಯಿಂದಲಾಗಲಿ ಅದರ ಒಂದು ನಕಲು ಪ್ರತಿ ಮ್ಯುನಿಸಿಪೆಲ್ ಕಮ್ಮಿಷನರಗಳಿಗೂ ಕಳುಹಿಸಲ್ಪಡತಕ್ಕದ್ದಲ್ಲದೆ ಯಾವ ಸಭೆಯ ಮುಂದೆ ಸದರೀ ಬಡ್ಜೆಟ ಹಾಜರ್ಮಾಡಲ್ಪಡತಕ್ಕದ್ದೋ ಆ ಸಭೆ ಸೇರುವದಕ್ಕೆ ಅಥಮ ಪಕ್ಷ ಏಳುದಿನಗಳಿಗೆ ಮುಂಚಿತವಾಗಿ ಮೈಸೂರು ಗೆಜೆಟಿನಲ್ಲಿ ಪ್ರಕಟಿಸಲ್ಪಡತಕ್ಕದ್ದು.

ಲೆಕ್ಕಗಳು ವಿಮರ್ಶೆಯಿಂದ ತನಖೀ ಮಾಡಲ್ಪಡತಕ್ಕದ್ದು.

33. ಕಮ್ಮಿಷನರಗಳು ಪ್ರತಿ ಸಾಲ್ ಏಪ್ರೆಲ್ ಗುರ್ರೆ ತಾರೀಖಿಗೆ ತರುವಾಯ ಅನುಕೂಲಿಸಿದಷ್ಟು ತ್ವರೆಯಲ್ಲಿ, ಆ ಹಿಂದಿನ ಸಂವತ್ಸರಕ್ಕೆ ಆದ ಮ್ಯುನಿಸಿಪೆಲ್ ಫಂಡು ಬಾಬತು ಜಮಾ ಖರ್ಚುಗಳ ಸ್ವರೂಪವನ್ನೂ ಮೊಬಲಗನ್ನೂ ಕಾಣಿಸಿ ತಪಶೀಲವಾರು ತಖ್ತೆಯನ್ನೂ ಆ ಸಂವತ್ಸರಕ್ಕೆ ಅವರ ನಡವಳಿತಗಳ ಒಂದು ರಿಪೋರ್ಟನ್ನೂ ತಯಾರ್ಮಾಡತಕ್ಕದ್ದು. ಅಂತಾ ತಖ್ತೆಯೂ ರಿಪೋರ್ಟೂ ಸಹ ಛಾಪಾ ಹಾಕಲ್ಪಟ್ಟು ಸಕಲ ಜನಗಳಿಗೂ ತಿಳಿಯತಕ್ಕ ಬಗ್ಯೆ ಪ್ರಕಟಿಸಲ್ಪಡತಕ್ಕದ್ದು. ಮ್ಯುನಿಸಿಪೆಲ್ ಕಮ್ಮಿಷನರಗಳ ಲೆಕ್ಕಗಳು ಮೈಸೂರು ಶ್ರೀಮನ್ಮಹಾರಾಜಾ ಸರ್ಕಾರದವರು ಮೊಕರರ್ಮಾಡುವಂತಾವರಿಂದ ಯಾ ಮಾಡುವಂತಾವರಿಂದ ಸಾಲಿಯಾನಾ ತನಖೀ ಯಾಗತಕ್ಕದ್ದು.

ತೆರಿಗೆಗಳು, ಸುಂಕಗಳು, ತೀರ್ವೆಗಳು ಇವುಗಳನ್ನು ವಸೂಲ್ ಮಾಡುವಿಕೆ.

ವಸೂಲ್ ಮಾಡಲ್ಪಡತಕ್ಕ ತೆರಿಗೆಗಳು, ಸುಂಕಗಳು, ತೀರ್ವೆಗಳು ಇವುಗಳನ್ನು ಕುರಿತು.

34. ಮೈಸೂರು ಶ್ರೀಮನ್ಮಹಾರಾಜಾ ಸರ್ಕಾರದವರ ಅಂಗೀಕಾರದ ಮೇಲೆ, ಮ್ಯುನಿಸಿಪಲ್ ಕಮಿಷನರಗಳು ಈ ಕಾನೂನಿನ ಕಾರ್ಯಗಳಗೋಸ್ಕರ ತಮ್ಮ ಮ್ಯುನಿಸಿಪಲ್ ಸರಹದ್ದುಗಳೊಳಗೆ ಸಾರ್ವಾಟಗಳು, ಬಂಡಿಗಳು, ಕುದುರೆ ಮತ್ತು ಇತರೆ ಜಾನವರಗಳು ಇವುಗಳ ಮೇಲೆ ಈ ಕಾನೂನಿಗೆ ಶೇರಿಸೋಣಾಗಿರುವ A ಗುರುತು ಪಟ್ಟಿಯಲ್ಲಿ ವಿವರಿಸೋಣಾದ ಮತ್ತು ಆಗಿಂದಾಗ್ಯೆ ಸರ್ಕಾರೀ ಗೆಜೆಟಿನಲ್ಲಿ ಪ್ರಕಟಿಸಲ್ಪಡತಕ್ಕ ರಿವಾಜ್‌ಗಳಿಗೆ ಜಾಸ್ತಿ ಇಲ್ಲದ ತೆರಿಗೆಗಳನ್ನಾಗಲಿ, ಬಂಡಿಗಳು ರಿಜಿಸ್ಟರ್ ಮಾಡುವಬಗ್ಯೆ ರುಸುಂಗಳನ್ನಾಗಲಿ, ಮ್ಯುನಿಸಿಪಲ್ ಸರಹದ್ದುಗಳೊಳಗೆ ಪ್ರವೇಶಿಸುವ ಸಾರ್ವಾಟುಗಳು, ಬಂಡಿಗಳು, ಜಾನವರಗಳು ಇಂತಾವುಗಳ ಮೇಲೆ ಸುಂಕಗಳನ್ನಾಗಲಿ ಶಿಲ್ಪಗಳು, ಕಸಬ್‌ಗಳು, ವ್ಯಾಪಾರಗಳು, ಯಾ ಜೀವನೋಪಾಯಗಳು, ಇಂತಾವುಗಳ ಮೇಲೆ ತೀರ್ವೆಯನ್ನಾಗಲಿ, ಸಾರಾಯಿ ಸ್ವಭಾವವುಳ್ಳ ನಿಶಾ ಉಂಟುಮಾಡುವ ಷರಾಬ್‌ಗಳ ವಿಕ್ರಯದ ಮೇಲೆ ತೀರ್ವೆಯನ್ನಾಗಲಿ ಯಾವ ಷಹರ್ ತೆರಿಗೆ ಯಾ ರಿವಾಜ್‌ಗಳು, ಮನೆಗಳಮೇಲೂ, ಕಟ್ಟಡಗಳಮೇಲೂ, ಜಮೀನ್‌ಗಳಮೇಲೂ, ಅವುಗಳ ಸಾಲಿಯಾನಾ ಕಿಮ್ಮತ್ತಿನ ಸೇಕಡಾ ಹತ್ತಕ್ಕೆ ಮೀರದೆ ಒಂದು ಮೊಬಲಗ್ ವುಳ್ಳವಾಗಿರುತ್ತೋ ಅಂತಾ ಷಹರ್ ತೆರಿಗೆ ಯಾ ರಿವಾಜ್‌ಗಳನ್ನಾಗಲಿ ವಸೂಲ್‌ಮಾಡುವದು ಸದರೀ ಕಮಿಷನರಗಳಿಗೆ ನ್ಯಾಯವಾಗಿರತಕ್ಕದ್ದು. ಮೇಲೆ ಕಂಡಂತೆ, ಮೈಸೂರು ಶ್ರೀಮನ್ಮಹಾರಾಜಾ ಸರ್ಕಾರದವರ ಅಂಗೀಕಾರನಿಶೀ ಈ ಕಾನೂನಿನ ಕಾರ್ಯಗಳಗೋಸ್ಕರ ಬೇಕಾದ ಫಂಡ್ಯಯಾನೇ ದ್ರವ್ಯವನ್ನು ಸದರೀಯವರು ನಿರ್ಣಯಿಸುವಮೇರಿಗೆ ಮೇಲ್‌ಕಂಡ ಬಾಬುಗಳ ಪೈಕಿ ವಿಶಿಷ್ಟದ ಮೂಲಕವಾಗಲಿ, ಕೆಲವು ಮೂಲಕವಾಗಲಿ ಜಮಾಯಿಸುವದು ನ್ಯಾಯವಾಗಿರತಕ್ಕದ್ದು. ಮತ್ತು ಯಾವ ಮನುಷ್ಯನಾಗಲಿ ಬಡತನದ ದೆಶೆಯಿಂದ ಸದರೀ ತೆರಿಗೆಯನ್ನು ಕೊಡಲಿಕ್ಕೆ ಅಶಕ್ತನಾಗಿರುತ್ತಾನೋ ಅಂತಾ ಮನುಷ್ಯನಿಗೆ ಈ ಕಾನೂನ್ ಅನುಸರಿಸಿ ಯಾವ ರಿವಾಜ್ ಯಾ ತೆರಿಗೆಯನ್ನು ತೆರುವ ವಿಷಯದಲ್ಲಿ ಪೂರಾಆಗಲಿ, ಕೆಲವುಮುಟ್ಟಿಗಾಗಲಿ ಕಮಿಷನರಗಳು ಮಾಫ್ ಮಾಡಬಹುದು.

ಯಾವಕಾಲಕ್ಕಾಗಿ ಪೂರ್ವವೇ ತೆರಿಗೇ ವಗೈರೆ ಪಾವತಿಯಾಗಿರುತ್ತೋ ಆ ಕಾಲಕ್ಕೆ ತೆರಿಗೇ ವಗೈರೆ ಕೊಡಬೇಕಾದ್ದಿಲ್ಲವು.

35. ಸನ್ 1856ನೇ ಇಸವಿ 14ನೇ ಆಕ್ಟು 1864ನೇ ಇಸವಿಯ 17ನೇ ಆಕ್ಟು ಅನುಸರಿಸಿಯಾಗಲಿ ಇತರ ನಿಬಂಧನೆಗಳನುಸರಿಸಿಯಾಗಲಿ, ಯಾವ ಕಾಲಕ್ಕೆ ಮೊಬಲಗ್ ಪಾವತೀ ಯಾಗಿರುತ್ತೋ ಅಂತಾ ಯಾವ ಕಾಲಕ್ಕಾಗಲಿ ಈ ಕಾನೂನ್ ಅನುಸರಿಶಿ ಯಾವ ತೆರಿಗೆ ಯಾ ರಿವಾಜ್, ಸುಂಕ, ರುಸುಂ, ಯಾ ಕಂದಾಯ ಇಂತಾದ್ದನ್ನು ತೆರಬೇಕಾದ್ದಿಲ್ಲವು.

ಸವಾರೀ ಬಂಡಿಗಳು, ಕುದುರೆಗಳು ವ ಇತರ ಜಾನವರಗಳು ಇಂತಾವುಗಳ ಮೇಲೆ ತೆರಿಗೆಗಳು.

ಸವಾರೀ ಬಂಡಿಗಳು ವಗೈರೆ ಮೇಲೆ ನಿಬಂಧನೆ ಮಾಡಲ್ಪಟ್ಟಿರುವ ಪ್ರಕಾರ ವಸೂಲ್ ಮಾಡಲ್ಪಡತಕ್ಕ ತೆರಿಗೆಗಳು.

36. ಮೇಲೆ ಕಂಡಂತೆ ಮೈಸೂರು ಶ್ರೀಮನ್ಮಹಾರಾಜಾ ಸರ್ಕಾರದವರ ಅಂಗೀಕಾರನಿಶಿ ಈ ಕಾನೂನಿನ ಕಾರ್ಯಗಳಗೋಸ್ಕರ ಸವಾರೀ ಬಂಡಿಗಳ ಮೇಲೂ, ಕುದುರೆಗಳಮೇಲೂ, ಇತರ ಜಾನವರಗಳಮೇಲೂ, ತೆರಿಗೆಗಳು ವಸೂಲ್ ಮಾಡುವಂತೆ ಮ್ಯುನಿಸಿಪಲ್ ಕಮಿಷನರಗಳಿಂದ ನಿಶ್ಚಯಿಸಲ್ಪಟ್ಟಲ್ಲಿ ಅಂತಾ ತೆರಿಗೆಗಳು, ಈ ಕಾನೂನಿನ 37ರಿಂದ 43ರ ವರಿಗೆ ಇರತಕ್ಕ ಸೆಕ್ಷನ್‌ಗಳಲ್ಲಿ ವಿಧಿಸಲ್ಪಟ ಪ್ರಕಾರ ವಸೂಲ್ ಮಾಡಲ್ಪಡತಕ್ಕವು.

ಸವಾರೀ ಬಂಡಿಗಳು, ಕುದುರೆಗಳು ವಗೈರೆ ಮೇಲೆ ತೆರಿಗೆಗಳು.

ಸದರೀ ಬಂಡಿಗಳ ಮೇಲೂ ಜಾನವರಗಳ ಮೇಲೂ, ತೆರಿಗೆ ಮಾಫ್ ಮಾಡುವಿಕೆ.

37. ಈ ಕಾನೂನಿಗೆ ಶೇರಿಸೋಣಾದ A ಗುರುತು ಪಟ್ಟಿಯಲ್ಲಿ ನಮೂದಿಸುವದಕ್ಕೆ ಜಾಸ್ತೀ ಇಲ್ಲದ ರಿವಾಜ್ ಪ್ರಕಾರ ಒಂದು ತೆರಿಗೆಯು, ಷಹರ್‌ನಲ್ಲಿ ಇಟ್ಟುಕೊಳ್ಳಲ್ಪಡುವ ಪ್ರತಿ ಸವಾರೀ ಬಂಡಿ, ಕುದುರೆ, ಹೇಸರಕತ್ತೆ, ಕತ್ತೆ, ನಾಯಿ, ಗೂಳಿ ಯೆತ್ತು, ಕೋಣ, ವೊಂಟೆ, ಆನೆ ಇಂಥಾದ್ದಕ್ಕೆ ಮೊಕರರ್ ಮಾಡಲ್ಪಟ್ಟು, ಮುಂದಾಗಿ ಪಾವತೀ ಮಾಡಲ್ಪಡತಕ್ಕದ್ದು. ಪರಂತು, ಫಿರಂಗಿ ಬಂಡಿಗಳಿಗೆ ಯಾ ಆರ್ಡಿನಾನ್ಸ್ ಕಾರ್‌ಪೆಸ್ (ಎಂಬ ಸರ್ಕಾರದ ಚಕ್ಕಡಾ ಬಂಡಿಗಳು) ಯಾ ವ್ಯಾಗನ್ ಬಂಡಿಗಳು ಕ್ಯಾವಲ್‌ರಿ ಕುದುರೆಗಳು ಯಾ ಪೋಲೀಸ್ ಸವಾರರ ಕುದುರೆಗಳು, ಮಿಲಿಟರಿ ಆಫೀಸರಗಳು ಹತ್ತುವ ಕುದುರೆಗಳು, ಸರಕಾರದವರ ಅಥವಾ ಅವರ ನೌಕರಿಯಲ್ಲಿರುವ, ಅಥವಾ ಮ್ಯುನಿಸಿಪಲ್ ಕಮಿಷನಿಗೆ ಸಂಬಂಧಪಟ್ಟ ಸವಾರೀ ಬಂಡಿಗಳು, ಬಂಡಿಗಳು, ಕುದುರೆಗಳು, ಹೇಸರ ಕತ್ತೆಗಳು, ಎತ್ತುಗಳು ಮತ್ತು ಸವಾರಿಗಳು ವಾಸ್ತವ್ಯ

ವಾಗಿ ವ್ಯಾಪಾರ ಮಾಡುವವರ ಸ್ವತ್ತಾಗಿಯೂ, ಅವರಿಂದ ಇಡಲ್ಪಟ್ಟದ್ದಾಗಿಯೂ ಇದ್ದಲ್ಲಿ, ಮಾರುವದಕ್ಕಾಗಿಯೂ, ಮತ್ಯಾವ ಕೆಲಸಕ್ಕೂ ಉಪಯೋಗಿಸಲ್ಪಡದೇಯೂ ಇರುವ ಅಂತಾ ಸವಾರಿಗಳು, ಇಂತಾವುಗಳಿಗೆ ಈ ಸೆಕ್ಷನ್ ಲಗಾವಾಗತಕ್ಕದ್ದಲ್ಲವು. ಅಥವಾ ಇಂತಾವುಗಳನ್ನು ಅಡಗಿಸಿಕೊಳ್ಳುವದಿಲ್ಲವು.

ಸವಾರೀ ಬಂಡಿಗಳು ವಗೈರೇಗಳ ಸ್ವಂತಗಾರು ಲೈಸೆನ್ಸುಗಳನ್ನು ತೆಗದುಕೊಳ್ಳತಕ್ಕದ್ದು.

38. ಕಲಂ. 1. ಷಹರನೊಳಗೆ ಇಟ್ಟುಕೊಳ್ಳಲ್ಪಡುವ ಪ್ರತಿ ಸವಾರೀ ಬಂಡಿ, ಕುದುರೆ, ಹೇಸರ ಕತ್ತೆ, ಕತ್ತೆ, ನಾಯಿ, ಗೂಳಿ, ಎತ್ತು, ಕೋಣ, ಒಂಟೆ ಯಾ ಆನೆ ಇಂತಾದ್ದರ ಸ್ವಂತಗಾರನಾಗಲಿ, ಇವುಗಳನ್ನು ಸ್ವವಶದಲ್ಲಿ ಇಟ್ಟುಕೊಂಡಿರುವವ ಮನುಷ್ಯನಾಗಲಿ 36ನೇ ಸೆಕ್ಷನಿನಲ್ಲಿ ಕಂಡ ಮೈಸೂರು ಗವರ್ನಮೆಂಟಿನವರ ಮಂಜೂರಾತಿಯುಂಟಾದಂತೆ ಮೈಸೂರು ಗೆಜೆಟಿನಲ್ಲಿ ಫಾಯಿಷ್ ಮಾಡಲ್ಪಟ್ಟ ತಾರೀಖ್ ಲಾಗಾಯತ್ ಒಂದು ತಿಂಗಳೊಳಗಾಗಿಯೂ, ಅಲ್ಲಿಂದ ಆಚೆಗೆ ಪ್ರತಿ ಸಂವತ್ಸರ ಏಪ್ರಿಲ್ ಗುರ್ರೇ ಲಾಗಾಯತ್ ಮತ್ತು ಅಕ್ಟೋಬರ್ ಗುರ್ರೇ ತಾರೀಖು ಲಾಗಾಯತ್ ಅರವತ್ತು ದಿನಗಳೊಳಗಾಗಿಯೂ, ತೆರಿಗೆ ಕೊಡಬೇಕಾಗಿರುವ ಮತ್ತು ಲೈಸೆನ್ಸು ತೆಗದುಕೊಳ್ಳಬೇಕಾಗಿ ಖಾಯಿಷ್ ಪಡುವ ಸವಾರಿಗಳು ಜಾನವರಗಳು ಇವುಗಳ ತಪಶೀಲ್ ನಮೂದಿಸಿ ಬರವಣಿಗೆಯುಳ್ಳಿರತಕ್ಕ ಒಂದು ತಖ್ತೆಯನ್ನು ತಾನು ರುಜು ಮಾಡಿ ಕಮಿಶ್ನರಗಳ ಆಫಿಸಿಗೆ ಕಳುಹಿಸತಕ್ಕದ್ದು. ಇದಲ್ಲದೆ ಸದರೀ ಸ್ವಂತಗಾರನು, ಈ ಕಾನೂನಿಗೆ ಸೇರಿಸೋಣಾದ A ಗುರ್ತಿನ ಷೆಡ್ಯೂಲ್‌ನಲ್ಲಿ ಕಂಡ ರಿವಾಜ್‌ಗಳಪ್ರಕಾರ ತಾನು ತೆರಬೇಕಾದ ಚಷ್‌ಮಾಹೇ ತೆರಿಗೆಯನ್ನು ಮ್ಯುನಿಸಿಪೆಲ್ ಕಮಿಶ್ನರಗಳಿಗೆ ಪಾವತೀಮಾಡತಕ್ಕದ್ದು. ಯಾವ ಮನುಷ್ಯನಾಗಲಿ ಏಪ್ರಿಲ್ ಗುರ್ರೇ ತಾರೀಖಿಗೂ ಅಕ್ಟೋಬರ್ ಗುರ್ರೇ ತಾರೀಖಿಗೂ ಮಧ್ಯೆ ಅಥವಾ ಅಕ್ಟೋಬರ್ 1ನೇ ತಾರೀಖಿಗೂ, ಮೇ ಮೊದಲನೇ ತಾರೀಖಿಗೂ ಮಧ್ಯೆ ಆಮೇರೆ ಯಿಡೋಣಾದ ಒಂದು ಸವಾರೀ ಬಂಡಿಯನ್ನಾಗಲಿ ಜಾನವರನ್ನಾಗಲಿ ಪಡೆದಿದ್ದರೆ, ಹಾಗೆ ತಾನು ಪಡೆದ ತಾರೀಖ್ ಲಾಗಾಯತ್ ಅರವತ್ತು ದಿನಗಳೊಳಗೆ ಬದಸ್ತೂರ್ ತಖ್ತೆಯನ್ನೂ, ಸದರೀ ಷೆಡ್ಯೂಲ್ ಪ್ರಕಾರ ಆಗ್ಯೆ ಚಾಲ್ತೀ ಚಷ್‌ಮಾಹೆಗೆ ಕೊಡತಕ್ಕ ಪೂರಾ ಮೊಬಲಗ್ ಸಹಿತವಾಗಿ ಮ್ಯುನಿಸಿಪೆಲ್ ಕಮಿಶ್ನರಗಳ ಆಫಿಸಿಗೆ ಕಳುಹಿಸತಕ್ಕದ್ದು. ಪರಂತು ಯಾವ ಮನುಷ್ಯನೂ, ಯಾವ ಚಷ್‌ಮಾಹೆಯುಲ್ಲಾಗಲಿ ಅರವತ್ತು ದಿನಗಳು ಮಾತ್ರವಾದರೂ, ಅದಕ್ಕೆ ಕಮ್ಮಿಯಾಗಿ ಯಿಷ್ಟು ದಿನಗಳಾದರೂ, ತನ್ನ ವಶದಲ್ಲಿರಬಹುದಾದ ಯಾವ ಸವಾರೀ ಬಂಡಿಗಳಿಗೋಸ್ಕರವಾಗಲಿ ಜಾನವರಗೋಸ್ಕರವಾಗಲಿ, ಅಥವಾ ಸದರೀ ಈ ತೆರಿಗೆ ಮೊದಲೇ ತೆತ್ತಿರುವ ಬಾಡಿಗ್ಯೆ ಯಿಟ್ಟುಕೊಂಡಿರುವ ಯಾವದಾದರೂ ಸವಾರೀ ಬಂಡಿಗೋಸ್ಕರವಾಗಲಿ ಜಾನವರಿಗೋಸ್ಕರವಾಗಲಿ ತೆರಿಗೇ ವಿಧಿಸಲ್ಪಡುವದಕ್ಕೆ ಗುರಿಯಾಗತಕ್ಕದ್ದಲ್ಲವು.

ಲೈಸೆನ್ಸ್ ಇಲ್ಲದೆ ಸವಾರೀ ಬಂಡಿ ವಗೈರೆಯನ್ನು ಇಟ್ಟುಕೊಂಡರೆ ದಂಡನೆ.

ಕಲಂ. 2. ಮೇಲೆ ಕಂಡಂತೆ ಯಿಟ್ಟುಕೊಳ್ಳೋಣಾದ ಯಾವದಾದರೂ ಸವಾರೀ ಬಂಡಿಯ ಯಾ ಜಾನವರಿನ ಸ್ವಂತಗಾರನಾಗಲಿ ತನ್ನ ಸುಪರ್ದಿನಲ್ಲಿಟ್ಟುಕೊಂಡಿರುವವನಾಗಲಿ, ಇದರ ಹಿಂದಿನ ಕಡೇ ಸೆಕ್ಷನ್ ಅನುಸರಿಸಿ ಕ್ರಮಪ್ರಕಾರ ಲೈಸೆನ್ಸ್ ತೆಗದುಕೊಳ್ಳದೇ ಯಿದ್ದರೆ ಅವನು ಮಾಜಿಸ್ಟ್ರೇಟಿನ ಮುಂದೆ ತಕ್ಸೀರ್ ಸ್ಥಾಪನೆಯಿಂದ ಅಂತಾ ಸವಾರೀ ಬಂಡಿ ಯಾ ಜಾನವರ್ ವಿಷಯದಲ್ಲಿ ತೆರಬೇಕಾದ ಪೂರಾ ಮೊಬಲಗೂ ಮತ್ತು ಯಿಪ್ಪತ್ತು ರೂಪಾಯಿಗೆ ಮೀರದೆ ಮಾಜಿಸ್ಟ್ರೇಟು ನಿಯಮಿಸುವ ಜಾಸ್ತೀ ಮೊಬಲಗೂ ಅವನಿಗೆ ಜುರ್ಮಾನೆ ವಿಧಿಸಲ್ಪಡುವದು; ಇದು ಶಿವಾಯಿ ಅವನು ತಕ್ಸೀರ್ ಸ್ಥಾಪನೆ ಆದಮೇಲೆ ಯಾವ ದಿನದಲ್ಲಿ ಅಂತಾ ಲೈಸೆನ್ಸ್ ತೆಗದುಕೊಳ್ಳಲಿಕ್ಕೆ ಉಪೇಕ್ಷಿಸುತ್ತಾನೋ ಅಂತಾ ಪ್ರತಿ ದಿನಕ್ಕೂ ಐದು ರೂಪಾಯಿ ಮೇರೆ ಜುರ್ಮಾನೆ ತೆರುವದಕ್ಕೂ ಗುರಿಯಾಗತಕ್ಕದ್ದು.

ತೆರಿಗೇ ಪಾವತೀ ಮಾಡಿದ ಮೇಲೆ ಪ್ರಸಿಡೆಂಟರು ಲೈಸೆನ್ಸ್ ಕೊಡತಕ್ಕದ್ದು.

39. ಮೇಲೆಕಂಡಂತೆ ತೆರಿಗೆಗಳ ಮೊಬಲಗ್ ಪಾವತೀ ಮಾಡಿಸಿಕೊಂಡಮೇಲೆ ಮ್ಯುನಿಸಿಪೆಲ್ ಕಮಿಶ್ನನಿನ ಪ್ರೆಸಿಡೆಂಟರಾಗಲಿ ಆಬಗ್ಯೆ ಕ್ರಮಪ್ರಕಾರ ಅಧಿಕಾರ ಕೊಡಲ್ಪಟ್ಟ ಯಾವನಾಗಲಿ ಅಂತಾ ತೆರಿಗೇ ಕೊಡತಕ್ಕ ಮನುಷ್ಯನಿಗೆ, ಯಾವ ಕಾಲಕ್ಕಾಗಿ ಮೊಬಲಗ್ ತೆಗದುಕೊಳ್ಳೋಣಾಗುತ್ತೋ ಆ ಕಾಲಕ್ಕೆ ಪ್ರತಿ ಸವಾರಿಗೂ, ಜಾನವರಿಗೂ, ಒಂದು ಲೈಸೆನ್ಸ್ ಕೊಡತಕ್ಕದ್ದು. ಮೇಲೆ ಕಂಡ ಪ್ರತಿ ಸವಾರೀ ಬಂಡಿ ವ ಜಾನವರಿನ ಸ್ವಂತಗಾರನಾಗಿ ಅವುಗಳ ಬಗ್ಯೆ ಲೈಸೆನ್ಸ್ ಪಡೆದಿರುವ ಮನುಷ್ಯನು ಸದರೀ ಕಾಲದೊಳಗೆ ಯುಕ್ತಗಳಾದ ಸಮಯಗಳಲ್ಲೆಲ್ಲಾ ಮ್ಯುನಿಸಿಪೆಲ್ ಕಮಿಶ್ನನಿನ, ಪ್ರೆಸಿಡೆಂಟರಿಂದಾಗಲಿ, ಅಂತಾ ಲೈಸೆನ್ಸನ್ನು ಹಾಜರ್ ಮಾಡುವಂತೆ ಕೇಳುವ ಬಗ್ಯೆ ಅವರ ದೆಶೆಯಿಂದ ಕ್ರಮವಾಗಿ ಲಿಖಿತರೂಪವಾಗಿ ಅಧಿಕಾರ ಉಂಟುಮಾಡಲ್ಪಟ್ಟ ಯಾವ ಮನುಷ್ಯನಿಂದಾಗಲಿ ಆಮೇರೆ ಲೈಸೆನ್ಸ್ ಹಾಜರ್‌ಮಾಡುವಂತೆ ಕೋರಿದಾಗ ಹಜರ್ಮಾಡಲಿಕ್ಕೆ ಬದ್ಧನಾಗಿರತಕದ್ದು. ಹಾಗೆ ಅವನು ಹಾಜರ್ಮಾಡದೆ ಹೋದರೆ ಐದು ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಒಳಪಡತಕ್ಕದ್ದು.

ಬಾಡಿಗ್ಯೆ ಇಡೋಣಾಗಿರುವ ಸವಾರೀ ಬಂಡಿಗಳ ಮೇಲೆ ರಿಜಿಸ್ಟ್ರೇಷರ್ನ ನಂಬರ ಇರತಕ್ಕದ್ದು.

40. ದಿನಕ್ಕಿಷ್ಟೆಂತಲಾಗಲಿ, ಬಂದುಸಲ ಸವಾರೀ ಹೋಗಿ ಬರಲಿಕ್ಕೆಯಿಷ್ಟೆಂತಲಾಗಲಿ, ಬಾಡಿಗ್ಯೆ ಹೊಡಿಯುವಬಗ್ಯೆ ಇಡಲ್ಪಟ್ಟಿರುವ ದರೋಬಸ್ತು ಸವಾರೀ ಬಂಡಿಗಳೂ ಜಿರಿಸ್ಟರ ಮಾಡಲ್ಪಟ್ಟ ಮೇಲೂ ಮ್ಯುನಿಸಿಪಲ್ ಕಮ್ಮಿಷನರಗಳು ಹುಕುಂಮಾಡುವ ಪ್ರಕಾರ ವೊಂದು ರಿಜಿಸ್ಟ್ರೇಷರ್ನ ನಂಬರ ಅದರಮೇಲೆ ಯಿರತಕ್ಕದ್ದು. ಮತ್ತು ಅಂತಾ ಸವಾರೀ ಬಂಡಿಗೆ ನಿರ್ಣಯಿಸಲ್ಪಟ್ಟ ರಿಜಿಸ್ಟ್ರೇಷರ್ನ ನಂಬರ ಹಾಕದೇ ತಪ್ಪಿಹೋಗುವ ಅಂತಾ ಸವಾರೀ ಬಂಡಿಯ ಯಾವ ಸ್ವಂತಗಾರನಾಗಲಿ ಹತ್ತು ರೂಪಾಯಿಗೆ ಮಿಾರದ ವೊಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಪ್ರೆಸಿಡೆಂಟರು ಲಾಯಗಳನ್ನು ಇಟ್ಟುಕೊಂಡಿರುವವರೊಂದಿಗೂ, ಇತರರೊಂದಿಗೂ ಸವಾರೀ ಬಂಡಿಗಳಿಗಾಗಿ ಒಡಂಬಡಿಕೆ ಮಾಡಿಕೊಳ್ಳಬಹುದು.

41. ಮ್ಯುನಿಸಿಪಲ್ ಕಮ್ಮಿಷನಿನ ಪ್ರೆಸಿಡೆಂಟರು, ಮೇಲೆ ಕಂಡ ಸವಾರೀ ಬಂಡಿಗಳನ್ನಾಗಲಿ ಜಾನವರಗಳನ್ನಾಗಲಿ ಬಾಡಿಗ್ಯೆ ಯಿಟ್ಟಿರುವ ಬಾಡಿಗೇ ಕುದುರೇ ಲಾಯದವರು ವಯಿತರ ಮನುಷ್ಯರು ಯಿಂತವರ ಸಂಗಡ, A. ಗುರ್ತು ಪಟ್ಟಿಯಲ್ಲಿ ವಿವರಿಸೋಣಾದ ತೆರಿಗೆಗೆ ಬದಲಾಗಿ ಅಂತಾ ಮನುಷ್ಯರಿಂದ ಆ ಮೇರೆ ಯಿಡಲ್ಪಟ್ಟ ಸವಾರೀ ಬಂಡಿಗಳಗಾಗಲಿ, ಜಾನವರಗಳಗಾಗಲಿ, ಕೊಡತಕ್ಕ ಇಷ್ಟು ಮೊಬಲಗೆಂತ ಬಂದು ವರುಷಕ್ಕೆ ಮಿಾರದೆ ಯಿಷ್ಟುರಕಾಲಕ್ಕಾಗಲಿ ತಮ್ಮ ಯಿಷ್ಟಪ್ರಕಾರ ವೊಡಂಬಡಿಕೆ ಮಾಡಿಕೊಳ್ಳಬಹುದು.

ಷಹರನೊಳಗಿರುವ ಬಂಡಿಗಳು ವಗ್ಯೆರೆ ಷಹರನೊಳಗೆ ವಾಸಮಾಡದೆ ಇರುವ ಜನಗಳ ಸ್ವಂತವಾಗಿದ್ದಾಗ್ಯೂ ಅವುಗಳತೆರಿಗೆ ತೆರಲಿಕ್ಕೆ ಗುರಿಯಾಗತಕ್ಕದ್ದು.

42. ಬೆಂಗಳೂರು ಷಹರಿನಲ್ಲಿ ಯಿರತಕ್ಕ ಜಾಗಗಳಲ್ಲಿ ತತ್ಕಾಲಕ್ಕೆ ಮೇಲೆ ಕಂಡ ಪ್ರಕಾರ ಯಿಡಲ್ಪಟ್ಟಿರುವ ವೊಂದು ಸವಾರೀ ಬಂಡಿ ಯಾ ಜಾನವರ್ ಯಿಂತಾದ್ದರ ಸ್ವಂತಗಾರನು ಸದರೀ ಷಹರಿನಲ್ಲಿ ವಾಸಮಾಡದೇ ಯಿದ್ದಲ್ಲಿ ಅಂತಾ ಸವಾರೀ ಬಂಡಿಗಾದರೂ ಜಾನವರಿಗಾದರೂ ತೆರತಕ್ಕ ತೆರಿಗೆಯು ಯಾವ ಮನುಷ್ಯನ ಜಾಗಾದಲ್ಲಿ ಅದು ತತ್ಕಾಲಕ್ಕೆ ಯಿಡಲ್ಪಟ್ಟಿರುತ್ತೋ ಆ ಮನುಷ್ಯನಿಂದ ವಸೂಲ್ ಮಾಡಲ್ಪಡತಕ್ಕದ್ದು.

38ನೇ ಸೆಕ್ಷರ್ನ ಅನುಸರಿಸಿ ಲೈಸೆನ್ಸುಕೊಡಲ್ಪಟ್ಟ ಜನಗಳ ಪಟ್ಟಿಯು ಬಂದು ವಹಿಯಲ್ಲಿ ದಾಖಿಲ್ ಮಾಡಲ್ಪಡತಕ್ಕದ್ದು.

43. ಕಮ್ಮಿಷನರಗಳು, ಈ ಕಾನೂನಿನ 38ನೇ ಸೆಕ್ಷರ್ನ ಅನುಸರಿಸಿ, ಆಗ್ಯೆ ಚಾಲ್ತಿಯಲ್ಲಿರುವ ಚಿಷ್ ಮಾಹೆ ಕಾಲದೊಳಗೆ ಲೈಸೆನ್ಸ್ ಹೊಂದಿರುವ ಜನಗಳು ಮತ್ತು ಯಾವಬಗ್ಯೆ ಅವರು ತೆರಿಗೆ ಕೊಟ್ಟಿರುತ್ತಾರೋ ಆ ಬಾಬತು ಸವಾರಿಗಳುವ ಜಾನವರಗಳು ಇವುಗಳ ವೊಂದು ಪಟ್ಟಿಯನ್ನು ಆಗಿಂದಾಗ್ಯೆ ತಯಾರಮಾಡಿಸಿ ಕಮ್ಮಿಷನರಗಳ ಆಫೀಸಿನಲ್ಲಿ ಇಡಲ್ಪಡತಕ್ಕ ವೊಂದು ಬುಕ್ಕಿನಲ್ಲಿ ಪ್ರತ್ಯೇಕ ಪ್ರತ್ಯೇಕ ಮದಗಳಲ್ಲಿ ದಾಖಿಲ್ ಮಾಡಿಸಿ ಇಡುವದಲ್ಲದೆ ಅದನ್ನು ನೋಡುವ ಬಗ್ಯೆ ಅಪ್ಪಣೆ ಕೇಳುವ ಯಾವ ಮನುಷ್ಯನಿಗಾಗಲಿ ನೋಡಲಿಕ್ಕೆ ಸಿದ್ಧವಾಗಿರತಕ್ಕದ್ದು.

ಕವರ್ಗಳಿಲ್ಲದ ಬಂಡಿಗಳು ವ ಇತರ ಸವಾರಿಗಳನ್ನು ರಿಜಿಸ್ಟರ ಮಾಡುವಿಕೆ.

ನಿಬಂಧನೆ ಮಾಡಲ್ಪಟ್ಟಿರುವ ಪ್ರಕಾರ ಬಂಡಿಗಳು ವಗ್ಯೆರೆ ರಿಜಿಸ್ಟರ ಮಾಡುವಿಕೆ.

44. ಮೈಸೂರು ಶ್ರೀಮನ್ಮಹಾರಾಜಾ ಸರ್ಕಾರದವರ ಅಂಗೀಕಾರದಮೇಲೆ ಈ ಕಾನೂನ್ ಕಾರ್ಯಗಳಿಗೋಸ್ಕರ, ಬಂಡಿಗಳು, ಚಕ್ರಗಳುಳ್ಳ ಕವರ್ ಇಲ್ಲದ ಇತರ ಸವಾರಿಗಳು ಇಂತಾವುಗಳನ್ನು ರಿಜಿಸ್ಟರ್ಮಾಡುವ ಬಗ್ಯೆ ರುಸುಂಗಳನ್ನು ಮೊಕರರ್ಮಾಡುವಂತೆ ಮ್ಯುನಿಸಿಪಲ್ ಕಮ್ಮಿಷನರಗಳಿಂದ ನಿಶ್ಚೈಸಲ್ಪಟ್ಟ ಪಕ್ಷಕ್ಕೆ ಈ ಕಾನೂನಿನ 45, 46 ಈ ಸೆಕ್ಷರ್ನಗಳಲ್ಲಿ ವಿಧಿಸಲ್ಪಟ್ಟ ಪ್ರಕಾರವಾಗಿ ಅಂತಾ ರಿಜಿಸ್ಟ್ರೇಷರ್ನ ಆಗತಕ್ಕದ್ದಲ್ಲದೆ ರುಸುಂಗಳು ವಸೂಲ್ಮಾಡಲ್ಪಡತಕ್ಕದ್ದು.

ಬಂಡಿಗಳು ವಗ್ಯೆರೆಯನ್ನು ರಿಜಿಸ್ಟರಮಾಡುವದು ಮತ್ತು ಅವುಗಳಿಗೆ ನಂಬರ ಹಾಕುವಿಕೆ.

45. ಷಹರಿನೊಳಗೆ ಇಡಲ್ಪಟ್ಟಿರುವ ಕವರ್ ಇಲ್ಲದ ಪ್ರತಿ ಬಂಡಿಯೂ ಇತರ ಚಕ್ರಗಳುಳ್ಳ ಸವಾರಿಯೂ, ಅದರ ಸ್ವಂತಗಾರನ ಹೆಸರು ಸ್ಥಳ ಇವುಗಳು ದೇಖಿಲು ಕಮ್ಮಿಷನರಗಳ ಆಫೀಸಿನಲ್ಲಿ ರಿಜಿಸ್ಟರ್ಮಾಡಲ್ಪಟ್ಟು, ಕಮ್ಮಿಷನರಗಳು ನಿಯಮಿಸುವ ರೀತಿಯಾಗಿ ಅಂತಾ ರಿಜಿಸ್ಟ್ರೇಷರ್ನ ನಂಬರ ಹಾಕಲ್ಪಡತಕ್ಕದ್ದು, ಪರಂತು ಫಿರಂಗಿ ಬಂಡಿಗಳು ಆರ್ಡಿನಾನ್ಸ ಕಾರ್ಖಾನೇ ಫಿರಂಗಿ

ಸಾರ್ವರ್ಜ ಬಂಡಿಗಳು ಅಥವಾ ಫಿರಂಗೀ ದೊಡ್ಡ ಸಾರ್ವರ್ಜ ಬಂಡಿಗಳು ಮತ್ತು ಸರ್ಕಾರದವರ ಸ್ವತ್ತಾದ ಯಾ ಅವರಿಂದ ಇಟ್ಟುಕೊಳ್ಳಲ್ಪಡುವ ಇತರ ಬಂಡಿಗಳು, ಅಥವಾ ಕನ್‌ಸರ್ವಾನ್ಸಿ ಇಲಾಖೆಯ ಬಂಡಿಗಳು, ಅಥವಾ ಕಮ್ಮಿಷನಿಗೆ ಸೇರಿದ ಯಾ ಅವರಿಂದ ಇಟ್ಟುಕೊಳ್ಳಲ್ಪಡುವ ಅಂತಾ ಇತರ ಸವಾರಿಗಳು ಇಂತಾವುಗಳಿಗೆ ಈ ಸೆಕ್ಷನ್ ಲಗಾವಾಗತಕ್ಕದ್ದಲ್ಲವು ಅಥವಾ ಇಂತಾವುಗಳನ್ನು ಅದು ಅಡಗಿಸಿಕೊಂಡಿರುವದಿಲ್ಲವು.

ರಿಜಿಸ್ಟರ್ ಮಾಡಿಸುವದಕ್ಕೆ ರುಸುಂ.

46. ಇದರ ಹಿಂದಿನ ಕಡೇ ಸೆಕ್ಷನ್ ಅನುಸರಿಸಿ ಬಂಡಿಗಳು ವ ಇತರ ಸವಾರಿಗಳು, ಮ್ಯುನಿಸಿಪಲ್ ಕಮ್ಮಿಷನಿನ ಪ್ರೆಸಿಡೆಂಟರು ಪ್ರಕಟಿಸುವ ದಿನದಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಪ್ರತಿ ಚಷ್ಮಾಹೆಗೂ ನಂಬರುಗಳನ್ನು ಕೊಡುತ್ತಾ ಹೋಗತಕ್ಕದ್ದು. ಮತ್ತು ಅಂತಾ ಪ್ರತಿ ರಿಜಿಸ್ಟ್ರೇಷನಿಗೂ ಎರಡು ರೂಪಾಯಿಗೆ ಮೀರದ ಸದರೀ ಪ್ರೆಸಿಡೆಂಟರು ಠರಾಯಿಸುವ ರುಸುಮನ್ನು ಕೊಡತಕ್ಕದ್ದು. ಏಪ್ರಿಲ್ ಗುರ್ರೇ ತಾರೀಖಿಗೂ, ಅಕ್ಟೋಬರ್ ಗುರ್ರೇ ತಾರೀಖಿಗೂ ಮಧ್ಯೆ ಅಥವಾ ಅಕ್ಟೋಬರ್ ಗುರ್ರೇ ತಾರೀಖಿಗೂ, ಏಪ್ರಿಲ್ ಗುರ್ರೇ ತಾರೀಖಿಗೂ ಮಧ್ಯೆ, ಆಗ್ಯೆ ಚಾಲ್ತಿಯಲ್ಲಿರುವ ಚಷ್ಮಾಹೆಗೆ ರಿಜಿಸ್ಟರ್ ಮಾಡಿಸಲ್ಪಡದೇ ಇರುವ ಅಂತಾ ಯಾವ ಬಂಡಿಯನ್ನಾಗಲಿ, ಇತರ ಸವಾರಿಯನ್ನಾಗಲಿ, ಇಟ್ಟುಕೊಂಡಿರುವ ಯಾವ ಮನುಷ್ಯನಾಗಲಿ ಹಾಗೆ ಅವುಗಳನ್ನು ಪಡೆದ ಹದಿನೈದು ದಿನಗಳೊಳಗಾಗಿ ಅವುಗಳನ್ನು ರಿಜಿಸ್ಟರ್ ಮಾಡಿಸತಕ್ಕದ್ದು. ಅಂತಾ ಪ್ರತಿ ಸಂಗತಿಯಲ್ಲಿಯೂ, ಚಾಲ್ತಿ ಚಷ್ಮಾಹೆಗೆ ಕೊಡತಕ್ಕ ರುಸುಂ ಕೊಟ್ಟ ಮೇಲೆ ಪ್ರೆಸಿಡೆಂಟರು ರಿಜಿಸ್ಟರ್ ಮಾಡತಕ್ಕದ್ದು. ರಿಜಿಸ್ಟರ್ ಮಾಡಲ್ಪಟ್ಟ ಯಾವದಾದರೂ ಬಂಡಿ ಅಥವಾ ಇತರ ಸವಾರೀ ಯಾವ ಚಷ್ಮಾಹೆಯಲ್ಲಿಯಾದರೂ ವರ್ಗಾವಣೆ ಮಾಡಲ್ಪಟ್ಟಲ್ಲಿ ಹಾಗೆ ಪರಭಾರೆ ಮಾಡಲ್ಪಟ್ಟವನ ಹೆಸರನ್ನು ಹೊಸದಾಗಿ ರಿಜಿಸ್ಟರ್ ಮಾಡಲ್ಪಡತಕ್ಕದ್ದು. ಇಂತಾ ಪ್ರತಿ ರಿಜಿಸ್ಟ್ರೇಷನಿಗೆ ನಾಲ್ಕು ಆಣೆಗೆ ಮೀರದ ಒಂದು ರುಸುಂ ಕೊಡತಕ್ಕದ್ದು. ಕರ್ವಾಗಳಿಲ್ಲದೇ ಇರುವ ಬಂಡಿಗಳು, ವ ಚಕ್ರಗಳುಳ್ಳ ಸವಾರಿಗಳ ಬಾಬತು ರಿಜಿಸ್ಟರು ಬುಕ್ಕು ಯಲ್ಲಾ ಕಾಲಗಳೊಳಗೂ ಜನಗಳು ನೋಡಲಿಕ್ಕೆ ಬಗೈರ್ ರುಸುಂ ಸಿದ್ಧವಾಗಿರತಕ್ಕದ್ದು.

47. ಈ ಕಾನೂನು ಅನುಸರಿಸಿ ತೆರಿಗೆ ತೆರಲಿಕ್ಕೆ ಗುರಿಯಾದ ಯಾವದಾದರೂ ಸವಾರಿಬಂಡಿ, ಬಂಡಿ, ಸವಾರಿಯೂ ಜಾನವರ್ ಇಂತಾದ್ದರ ಬಾಬತು ಸ್ವಂತಗಾರ ಯಾ ಅದನ್ನು ಸ್ವಾಧೀನದಲ್ಲಿಟ್ಟುಕೊಂಡಿರತಕ್ಕ ಯಾವ ಮನುಷ್ಯನು, ಸದರೀ ಬಂಡಿ ವಗೈರೆ ವಿಷಯದಲ್ಲಿ ಕೊಡಬೇಕಾಗುವ ತೆರಿಗೆ ವ ರುಸುಮನ್ನಾಗಲಿ, ಮ್ಯುನಿಸಿಪಲ್ ಕಮ್ಮಿಷನಿನ ಪ್ರೆಸಿಡೆಂಟರೊಡನೆ ಮಾಡಿಕೊಳ್ಳುವ ಒಡಂಬಡಿಕೆ ಅನುಸರಿಸಿ ಗುತ್ತಿಗೆ ಮಾಡಿಕೊಂಡಿರುವ ಯಾವ ಮೊಬಲಗನ್ನಾಗಲಿ ಕೊಡಲಿಕ್ಕೆ ನ್ಯಾಯವಾದ ಸಬಬು ಇಲ್ಲದೆ ತಪ್ಪುತ್ತಾನೋ, ಅಥವಾ ಹಾಗೆ ಮೊಬಲಗು ಪಾವತೀ ಬಗ್ಗೆ ಯಾ ರಿಜಿಸ್ಟ್ರೇಷನ್ ಬಗ್ಗೆ ಈ ಕಾನೂನಿನಿಂದ ಮೊಕರರ್ ಆದ ಕಾಲದೊಳಗಾಗಿ ಯಾವನು ಖಾಯಿಷ್ ಮಾಡುವದಕ್ಕೆ ತಪ್ಪುತ್ತಾನೋ, ಅಥವಾ ಯಾವದಾದರೂ ರಿಜಿಸ್ಟರ್ ಮಾಡಲ್ಪಟ್ಟ ಬಂಡಿ ಯಾ ಸವಾರೀ ಬಂಡಿ ಅಥವಾ ಇತರ ಸವಾರಿಯ ಸ್ವಂತಗಾರನಾಗಿ ಯಾ ಅಂತಾದ್ದನ್ನು ಸ್ವಾಧೀನದಲ್ಲಿಟ್ಟುಕೊಂಡಿರತಕ್ಕವನಾಗಿ ಅದಕ್ಕೆ ಮ್ಯುನಿಸಿಪಲ್ ಕಮ್ಮಿಷನರುಗಳು ನಿಯಮಿಸುವ ರೀತಿಯಾಗಿ ಸರಿಯಾದ ರಿಜಿಸ್ಟರ್ ನಂಬರ್ ಹಾಕಲಿಕ್ಕೆ ತಪ್ಪುತ್ತಾನೋ ಆ ಮನುಷ್ಯನು ತಕಸೀರ್ ಸ್ಥಾಪನೆ ಆದ ಮೇಲೆ ಇಪ್ಪತ್ತು ರೂಪಾಯಿಗೆ ಮೀರದ ಒಂದು ಜುರ್ಮಾನೆಗೂ, ಇದು ಶಿವಾಯಿ ಹಾಗೆ ತಕಸೀರ್ ಸ್ಥಾಪನೆ ಆದ ಮೇಲೆ ಅಂತಾ ಲೈಸೆನ್ಸ್ ತೆಗೆದುಕೊಳ್ಳಲಿಕ್ಕೆ ಉಪೇಕ್ಷಿಸುವ ಪ್ರತಿ ದಿವಸಕ್ಕೂ ಹೆಚ್ಚಿಗೆ ಐದು ರೂಪಾಯಿಗಳ ಜುರ್ಮಾನೆಗೂ ಸಹ ಗುರಿಯಾಗತಕ್ಕದ್ದು.

ಷಹರಿನೊಳಗೆ ಪ್ರವೇಶಿಸುವ ಸವಾರೀ ಬಂಡಿಗಳು ಜಾನವರುಗಳು ಇವುಗಳ ಮೇಲೆ ತೀರ್ವೆಗಳು.

ಸವಾರೀ ಬಂಡಿಗಳ ವಗೈರೇ ಮೇಲೆ ನಿರ್ಣಯಿಸಲ್ಪಟ್ಟ ಮೇರೆ ತೆರ್ಗೇ ವಸೂಲ್ ಮಾಡಲ್ಪಡತಕ್ಕದ್ದು.

48. ಮೈಸೂರು ಶ್ರೀಮನ್ ಮಹಾರಾಜಾ ಸರ್ಕಾರದವರ ಅಂಗೀಕಾರದ ಮೇಲೆ, ಮೇಲೆ ಕಂಡಂತೆ ಈ ಕಾನೂನಿನ ಕಾರ್ಯಗಳಿಗೋಸ್ಕರ, ಮ್ಯುನಿಸಿಪಲ್ ಸರಹದ್ದುಗಳೊಳಗೆ ಪ್ರವೇಶಿಸುವ ಸವಾರೀ ಬಂಡಿಗಳು, ಬಂಡಿಗಳು, ಜಾನವರುಗಳು ಇವುಗಳ ಮೇಲೆ ತೀರ್ವೆ ವಸೂಲ್ ಮಾಡಲಿಕ್ಕೆ ಮ್ಯುನಿಸಿಪಲ್ ಕಮ್ಮಿಷನರುಗಳಿಂದ ನಿಷ್ಕರ್ಷೆಯಿಸಲ್ಪಟ್ಟ ಪಕ್ಷಕ್ಕೆ, ಅಂತಾ ತೀರ್ವೆಗಳು, ಈ ಕಾನೂನಿನ 49ರ ಲಾಗಾಯತು 56ರ ವರೆಗೆ ಇರತಕ್ಕ ಸೆಕ್ಷನ್‌ಗಳಲ್ಲಿ ವಿಧಿಸಲ್ಪಟ್ಟ ಪ್ರಕಾರ ವಸೂಲ್ ಮಾಡಲ್ಪಡತಕ್ಕದ್ದು.

ಮ್ಯುನಿಸಿಪಲ್ ಸರಹದ್ದುಗಳೊಳಗೆ ಪ್ರವೇಶಿಸುವ ಸವಾರೀಬಂಡಿಗಳು, ಬಂಡಿಗಳು, ಜಾನವರಗಳು ಇಂತಾವುಗಳ ಮೇಲೆ ತೀರ್ವೆ ವಸೂಲ ಮಾಡಲ್ಪಡತಕ್ಕದ್ದು.

49. ಈ ಕಾನೂನಿಗೆ ಶೇರಿಸೋಣಾಗಿರುವ B ಗುರ್ತು ಷೆಡ್ಯೂಲ್ ಪಟ್ಟಿಯಲ್ಲಿ ಕಂಡ ರಿವಾಜುಗಳ ಪ್ರಕಾರ ತೀರ್ವೆಗಳನ್ನು ಮ್ಯುನಿಸಿಪಲ್ ಸರಹದ್ದುಗಳೊಳಗೆ ಪ್ರವೇಶಿಸುವ ದರೋಬಸ್ತು ಸವಾರೀ ಬಂಡಿಗಳು, ಬಂಡಿಗಳು, ಕುದುರೆಗಳು, ಇತರ ಜಾನವರುಗಳು, ಇಂತಾವುಗಳ ಮೇಲೆ ವಸೂಲ್ಮಾಡಲ್ಪಡತಕ್ಕದ್ದು. ಮತ್ತು ಮ್ಯುನಿಸಿಪಲ್ ಕಮ್ಮಿಷನಿನ ಪ್ರೆಸಿಡೆಂಟರು, ಸುಂಕದ ಚಾವಡಿಗಳು, ದರವಾಜೆಗಳು, ದರವಾಜೇ ಕಾವಲ್‌ಗಾರರ ಸ್ಟೇಷನ್‌ಗಳು, ಇಂತಾವುಗಳನ್ನು ಮ್ಯುನಿಸಿಪಲ್ ಕಮ್ಮಿಷನರ್‌ಗಳಿಂದ ಮಂಜೂರ್ಮಾಡಲ್ಪಡತಕ್ಕ ಆಯಾ ಸ್ಥಳಗಳಲ್ಲಿ ಕಟ್ಟಿಸಬಹುದು. ಮತ್ತು ತಮಿಗೆ ಯುಕ್ತವೆಂದು ತೋರುವ ಮನುಷ್ಯರ ವಿಚಾರಣೆಯಲ್ಲಿ ಅಂತಾ ತೆರಿಗೆ ವಸೂಲೀ ಕೆಲಸವನ್ನು ನೇಮಿಸಬಹುದು. ಅಥವಾ ಗುತ್ತಿಗೆ ಕೊಡಬಹುದು; ಮತ್ತು ಮ್ಯುನಿಸಿಪಲ್ ಕಮ್ಮಿಷನರ್‌ಗಳ ಮಂಜೂರಾತಿಗೆ ಒಳಪಟ್ಟು ಅಂತಾ ತೆರಿಗೆ ವಸೂಲೀದಾರರು ನಡದುಕೊಳ್ಳತಕ್ಕ ಬಗ್ಯೆ "ಬೈಲಾಸ" ಎಂಬ ಉಪ ನಿಬಂಧನೆಗಳನ್ನು ಏರ್ಪಡಿಸತಕ್ಕದ್ದು; ಮತ್ತು ಅಂತಾ ತೀರ್ವೆಗಳನ್ನು ವಿಚಾರಣೆ ಮಾಡುವದು, ವಸೂಲ್ಮಾಡುವದು ಇಂತಾ ಕೆಲಸಗಳಲ್ಲಿ ನೇಮಿಸಲ್ಪಟ್ಟಿರುವ ದರೋಬಸ್ತು ಜನಗಳು ಈ ಕಾನೂನನುಸರಿಸಿ ಯಾವ ಕಂದಾಯವನ್ನಾಗಲಿ, ತೆರಿಗೆಯನ್ನಾಗಲಿ, ವಸೂಲ್ಮಾಡುವ ವಿಷಯದಲ್ಲಿ ಮೊಕರರಾಗಿದ್ದರೆ ಅವನಿಗೆ ಎಷ್ಟು ಜವಾಬ್ದಾರಿ ಉಂಟಾಗಿರುವದೋ ಅಷ್ಟು ಜವಾಬ್ದಾರಿಗೆ ಗುರಿಯಾಗಿರತಕ್ಕದ್ದು. ಪರಂತು ಗವರ್ನ್‌ಮೆಂಟಿನ ಯಾ ಮ್ಯುನಿಸಿಪಲ್ ಕಮ್ಮಿಷನಿನ ಸ್ವತ್ತಾಗಿರುವ ಅಥವಾ ಇಂತಾವರಿಂದ ಇಟ್ಟುಕೊಳ್ಳಲ್ಪಡುವ ಅಥವಾ ಸದರೀ ಕಮ್ಮಿಷನ್ನಿಂದ ಲೈಸೆನ್ಸ ಕೊಡಲ್ಪಟ್ಟ ಯಾ ರಿಜಿಸ್ಟರ್ ಮಾಡಲ್ಪಟ್ಟ ಸವಾರೀ ಬಂಡಿಗಳಿಗೆ, ವ ಜಾನವರ್‌ಗಳಿಗೆ ಬಂಡಿಗಳಿಗೆ ಈ ಸೆಕ್ಷನ್ ಲಗಾವಾಗತಕ್ಕದ್ದಲ್ಲ. ಮತ್ತು ಒಂದು ಅರ್ಧರಾತ್ರಿ ಮೊದಲು ಮತ್ತೊಂದು ಅರ್ಧರಾತ್ರಿ ವರಿಗೂ ಇಪ್ಪತ್ತು ನಾಲ್ಕು ಘಂಟೆಗಳ ಪರಿಮಾಣವುಳ್ಳ ಯಾವದಾದರೂ ಒಂದು ಕಾಲದೊಳಗೆ ಯಾವದಾದರೂ ಸವಾರೀ ಬಂಡಿ, ಬಂಡಿ, ಜಾನವರ್ ಇಂತಾದ್ದಕ್ಕೋಸ್ಕರವಾಗಿಯೂ ಇಂತಾದ್ದರ ವಿಷಯದಲ್ಲಿಯೂ ಒಂದು ಸಲ ಕೊಡತಕ್ಕ ತೀರ್ವೆಗಿಂತ ಜಾಸ್ತಿಯಾಗಿ ವಸೂಲ್ಮಾಡಲ್ಪಡತಕ್ಕದ್ದಲ್ಲ.

ತೀರ್ವೆ ಕೊಡದ ಪಕ್ಷದಲ್ಲಿ ಸವಾರೀ ವಗೈರೆಗಳನ್ನು ಹಿಡಿದುಕೊಳ್ಳಬಹುದು.

50. ಅಂತಾ ಯಾವ ತೀರ್ವೆಯನ್ನಾಗಲಿ ಕೇಳಿದಕೂಡಲೆ ಪಾವತೀ ಮಾಡದೇ ಯಿದ್ದ ಪಕ್ಷಕ್ಕೆ ಸದರೀ ತೀರ್ವೆಯನ್ನು ವಸೂಲ್ಮಾಡಲಿಕ್ಕೆ ಮೊಕರರಾಗಿರುವ ಆಫಿಸರುಗಳು ಯಾವದಕ್ಕೆ ಸದರೀ ತೀರ್ವೆ ಮೊಕರರಾಗಿರುತ್ತೋ ಆ ಬಾಬತು ಯಾವ ಸವಾರೀ ಬಂಡಿಯನ್ನಾಗಲಿ ಜಾನವರನ್ನಾಗಲಿ ಸದರೀ ತೀರ್ವೆಯು ಮೊಬಲಗು ಹೊರಡುವದಕ್ಕೆ ಸಾಕಾದಷ್ಟು ಬೋಜೆಯು ಪೈಕಿ ಯೆಷ್ಟನ್ನಾಗಲಿ ಹಿಡಿದುಕೊಳ್ಳಬಹುದು, ಯಾವ ತೀರ್ವೆಯಾದರೂ ಹಾಗೆ ಹಿಡಿದುಕೊಳ್ಳುವ ಬಗ್ಯೆ ಆಗುವ ಖರ್ಚು ದೇಖೀಲು ನಲವತ್ತೆಂಟು ಘಂಟೆವರಿಗೂ ಪಾವತಿಯಾಗದೆ ಯಿದ್ದ ಪಕ್ಷಕ್ಕೆ ಮ್ಯುನಿಸಿಪಲ್ ಕಮ್ಮಿಷನ್ ಪ್ರೆಸಿಡೆಂಟರು ಸದರೀ ತೀರ್ವೆ ಮತ್ತು ತೀರ್ವೆ ಮೊಬಲಗು ಕೊಡದೆ ಹೋದ್ದರಿಂದಲೂ, ಸಾಮಾನು ವಗೈರೆ ಹಿಡದುಕೊಳ್ಳುವದರಿಂದಲೂ, ಹರಾಜ್ ಮಾಡಿಸುವದರಿಂದಲೂ ವುಂಟಾದ ದರೋಬಸ್ತು ಖರ್ಚುಗಳನ್ನೂ ಕೊಡಲಿಕ್ಕೋಸ್ಕರ ಹಿಡದುಕೊಳ್ಳೋಣಾದ ಸ್ವತ್ತನ್ನೂ ಮಾರಿ ಬಿಡಬಹುದು. ಹೀಗೆ ಖರ್ಚು ಜಾತಾ ಬಾಕೀ ವುಳಿಯುವ ಯಾವ ಮೊಬಲಗನ್ನಾಗಲಿ ಸ್ವತ್ತಿನ ಮಾಲೀಕನು ೬ ತಿಂಗಳೊಳಗಾಗಿ ಬಂದು ಕೇಳಿದರೆ ಕೊಡತಕ್ಕದ್ದೇ ಹೊರ್ತು ಅನ್ಯಥಾ ಕೊಡತಕ್ಕದ್ದಲ್ಲ; ಮೇಲೆ ಕಂಡಂತೆ ಸ್ವತ್ತು ಹಿಡಿದುಕೊಂಡ ತರುವಾಯ ಪ್ರೆಸಿಡೆಂಟರು ಕೂಡ್ಲೆ ವೊಂದು ನೋಟಿಸ ಕೊಡತಕ್ಕದ್ದಲ್ಲದೆ ಸದರೀ ನೋಟಿಸನ್ನು ಮ್ಯುನಿಸಿಪಲ ಇಲಾಖೆಯ ಆಫಿಸಗಳಲ್ಲಿ ಚಿಕಟಾಯಿಸತಕ್ಕದ್ದು ಆ ನೋಟಿಸಿನಲ್ಲಿ ಆದಿತ್ಯವಾರ ವಿನಾ ೨ ದಿನ ಕಳದ ತರುವಾಯ ಸದರೀ ಸ್ವತ್ತನ್ನು ನೋಟಿಸನಲ್ಲಿ ಕಂಡ ಜಾಗಾದಲ್ಲಿ ಹರಾಜ್ ಮೂಲಕ ವಿಕ್ರಯಿಸಲ್ಪಡತಕ್ಕದ್ದೆಂತ ನಮೂದಿಸತಕ್ಕದ್ದು. ಪರಂತು ಹಿಡಿದುಕೊಳ್ಳಲ್ಪಟ್ಟ ಸ್ವತ್ತಿನ ಮಾಲೀಕನು ಆ ವಿಷಯದಲ್ಲಿ ತಗಲಿದ ದರೋಬಸ್ತು ಖರ್ಚುಗಳನ್ನೂ ತಾನು ಕೊಡತಕ್ಕ ತೀರ್ವೆಯನ್ನೂ ಸದರೀ ಹರಾಜ್ ಆರಂಭವಾಗಲಿಕ್ಕೆ ಪೂರ್ವವೇ ಪ್ರೆಸಿಡೆಂಟರಿಗಾಗಲಿ ಅವರಿಂದ ಮೊಕರರ್ಮಾಡಲ್ಪಟ್ಟ ಇತರ ಆಫಿಸರರಿಗಾಗಲಿ ಪಾವತೀ ಮಾಡಿದಲ್ಲಿ ಹಿಡಿದುಕೊಳ್ಳಲ್ಪಟ್ಟ ಸ್ವತ್ತನ್ನು ಪ್ರೆಸಿಡೆಂಟರು ಕೂಡ್ಲೇ ಖುಲಾಸೇ ಮಾಡತಕ್ಕದ್ದು.

51. ದಾರೀ ನಡಿಯುವ ತುರುಪುಗಳು ಮಿಲಿಟರಿ ಯಾ ಗವರ್ನ್‌ಮೆಂಟ ಸಾಮಾನುಗಳು ಮತ್ತು ವಾಹನಗಳು ನೌಕರೀ ಮೇಲಿರುವ ಮಿಲಿಟರಿ, ಸಿವಿಲ್ ಯಾ ಪೋಲೀಸ ಆಫಿಸರ್‌ಗಳು

ಫೌಜುಗಳು ವ ಗವರ್ನ್‌ಮೆಂಟ ಸ್ಟೋರ್ಸ

ಯಾನೇ ಸಾಮಾನುಗಳು ಪೊಲೀಸಿನವರು ಇಂತಾವರು ವಿನಾಯಿಸಲ್ಪಡತಕ್ಕದ್ದು.

ಅಥವಾ ಅವರ ವಶದಲ್ಲಿರುವ ಯಾವ ಮನುಷ್ಯನಾಗಲಿ, ಯಾ ಸ್ವತ್ತಾಗಲಿ ಇಂತಾವುಗಳಿಗೋಸ್ಕರ ತೀರ್ವೆ ಕೊಡತಕ್ಕದ್ದಲ್ಲ ಆದರೆ ಈ ಕಾನೂನು ಪ್ರಕಾರ ವಸೂಲ್ಮಾಡತಕ್ಕ ಯಾವ ತೆರಿಗೆಯನ್ನಾಗಲಿ ಕೊಡುವ ವಿಷಯದಲ್ಲಿ ಮತ್ತ್ಯಾವ ಬಾಬುಗಳಿಗೂ ಮನ್ನಾ ಆಗುವದಿಲ್ಲ.

ಪ್ರೆಸಿಡೆಂಟರು ಮ್ಯುನಿಸಿಪೆಲ್ ಸರಹದ್ದುಗಳಿಗೆ ಹೊರಗೆ ವಾಸಮಾಡುವ ಜನಗಳೊಡನೆ ತೀರ್ವೆಗಳಿಗೆ ಬದಲಾಗಿ ಒಟ್ಟು ಮೊಬಲಗು ಪಾವತೀ ಮಾಡುವಂತೆ ಒಡಂಬಡಿಕೆ ಮಾಡಿಕೊಳ್ಳಬಹುದು.

52. ಮ್ಯುನಿಸಿಪೆಲ್ ಕಮಿಷನರ್ ಪ್ರೆಸಿಡೆಂಟರು ಮ್ಯುನಿಸಿಪೆಲ್ ಸರಹದ್ದುಗಳೊಳಗೆ ಪ್ರವೇಶಿಸುವ ಸವಾರೀ ಬಂಡಿಗಳು, ಬಂಡಿಗಳು ಯಾ ಜಾನವರಗಳು ಇವುಗಳ ವಿಷಯದಲ್ಲಿ ಈ ಕಾನೂನು ನಿಬಂಧನೆಗಳನುಸರಿಸಿ ಕೊಡತಕ್ಕ ದರೋಬಸ್ತು ತೀರ್ವೆಗಳಿಗೂ ಬದಲಾಗಿ ಸಾಲಿಯಾನಾ ಯಾ ಪ್ರತಿ ಚಷ್ಮಾಹೆಗೂ ಕೊಡತಕ್ಕ ಮೊಬಲಗಿಗಾಗಿ ಮ್ಯುನಿಸಿಪೆಲ್ ಸರಹದ್ದುಗಳ ಹೊರಗೆ ವಾಸ ಮಾಡುವ ಜನಗಳೊಡನೆ ಒಡಂಬಡಿಕೆ ಮಾಡಿಕೊಳ್ಳುವದು ಸದರೀ ಪ್ರೆಸಿಡೆಂಟರಿಗೆ ನ್ಯಾಯವಾಗಿರತಕ್ಕದ್ದು. ಮತ್ತು ಪ್ರೆಸಿಡೆಂಟರು ಅಂತಾ ಸವಾರೀ ಬಂಡಿಗಳು, ಬಂಡಿಗಳು, ಯಾ ಜಾನವರಗಳು ಇಂಥಾವುಗಳಿಗೋಸ್ಕರ ಲೈಸೆನ್ಸಗಳನ್ನು ಕೊಡತಕ್ಕದ್ದು ; ಮತ್ತು ಅಂತಾ ಲೈಸೆನ್ಸುಗಳು ಜಾರಿಯಲ್ಲಿರುವಲ್ಲಿ ಅಂತಾ ಸವಾರೀ ಬಂಡಿಗಳು, ಬಂಡಿಗಳು ವ ಜಾನವರಗಳು ಇವುಗಳು ಮ್ಯುನಿಸಿಪೆಲ್ ಸರಹದ್ದುಗಳನ್ನು ಪ್ರವೇಶಿಸುವಲ್ಲಿ ಮೇಲೆ ಕಂಡಂತೆ ಕೊಡತಕ್ಕ ದರೋಬಸ್ತು ತೀರ್ವೆಗಳೂ ವಿನಾಯಿಸಲ್ಪಡತಕ್ಕದ್ದು. ಪರಂತು ಯಾವಾಗ್ಯೂ ಅಂತಾ ಒಡಂಬಡಿಕೆ ಮಾಡಿಕೊಳ್ಳುವ ಮನುಷ್ಯನು ಪಡೆದಿರುವ ದರೋಬಸ್ತು ಸವಾರೀ ಬಂಡಿಗಳು, ಬಂಡಿಗಳು, ಜಾನವರಗಳು ಇಂತಾವುಗಳನ್ನು ಅಡಗಿಸಿಕೊಂಡಿರತಕ್ಕದ್ದು.

ತೀರ್ವೆ ವಸೂಲಿದಾರರಿಗೆ ಪೊಲೀಸಿನವರು ಕುಮ್ಮಕ್ ಮಾಡತಕ್ಕದ್ದು.

53. ತೀರ್ವೆ ವಸೂಲಿದಾರ್ರು ನ್ಯಾಯವಾದ ಅಧಿಕಾರಕ್ಕೆ ಪ್ರತಿರೋಧಿಸುವ ದರೋಬಸ್ತು ಸಂಗತಿಗಳಲ್ಲಿ ಯಾ ತೀರ್ವೆ ವಸೂಲಿದಾರ್ರು ಅಪೇಕ್ಷಿಸಿದಾಗ ಕುಮ್ಮಕ್ ಮಾಡಲಿಕ್ಕೆ ದರೋಬಸ್ತು ಪೊಲೀಸ ಆಫಿಸರಗಳೂ ಬದ್ಧರಾಗಿರತಕ್ಕದ್ದು. ಮತ್ತು ಅವರುಗಳು ತಮ್ಮ ಸಾಮಾನ್ಯಗಳಾದ ಪೊಲೀಸ್ ಕೆಲಸಗಳನ್ನು ನಡಿಸುವಲ್ಲಿ ಯಾವ ಅಧಿಕಾರವಿರುತ್ತೋ ಅದೇ ಅಧಿಕಾರವೇ ಅವರಿಗೆ ಸದರೀ ಬಗ್ಯೆ ಉಂಟಾಗಿರತಕ್ಕದ್ದು.

ತೀರ್ವೆಗಳನ್ನು ಅಕ್ರಮವಾಗಿ ವಸೂಲ್ ಮಾಡೋಣ.

54. ಈ ಕಾನೂನ್ ಅನುಸರಿಸಿ ತೀರ್ವೆ ವಸೂಲಿಗಾಗಿ ನೊಕರರ ಮಾಡಲ್ಪಟ್ಟ ಜನಗಳು ಶಿವಾಯಿ ಯಾವ ತೀರ್ವೆಯನ್ನಾಗಲಿ ವಸೂಲ್ ಮಾಡುವ ಯಾ ಕೇಳುವ ಇತರ ಪ್ರತಿ ಮನುಷ್ಯನೂ ಮತ್ತು ನ್ಯಾಯ ಸಮ್ಮತವಾದ ತೀರ್ವೆಯಲ್ಲದೆ ಯಾವದಾದರೂ ಇತರ ತೀರ್ವೆಯನ್ನಾಗಲಿ ಜಾಸ್ತೀ ತೀರ್ವೆಯನ್ನಾಗಲಿ ಅಕ್ರಮವಾಗಿ ಅಥವಾ ಜುಲ್ಮಿಯಿಂದ ಕೇಳುವ ಯಾ ತೆಗದುಕೊಳ್ಳುವ ಯಾ ಈ ಕಾನೂನಿನ ನೆವದಿಂದ ಯಾವ ಆಸ್ತಿಯನ್ನಾಗಲಿ ಹಿಡಿಯುವದು ವಿಕ್ರಯಿಸುವದು ಇಂತಾದ್ದು ಅಕ್ರಮವೆಂದು ತಿಳಿದೂ ಹಿಡಿಯುವ ಯಾ ವಿಕ್ರಯಿಸುವ ಯಾ ಈ ಕಾನೂನಿನ ನೆವದಿಂದ ಯಾವ ಮನುಷ್ಯನಿಂದಾಗಲಿ, ಹಣವನ್ನಾಗಲಿ, ಬೆಲೆಯುಳ್ಳ ಯಾವ ಪದಾರ್ಥವನ್ನಾಗಲಿ ಜುಲ್ಮಿಯಿಂದ ತೆಗದುಕೊಳ್ಳುವ ಪ್ರತಿ ಮನುಷ್ಯನೂ ಆಯಾ ಸಂಗತಿಗೆ ತಕ್ಕಂತೆ ದಗಾಮಾಡೋಣ ಯಾ ಜುಲ್ಮಿಯಿಂದ ತೆಗದುಕೊಳ್ಳೋಣ ಯೆಂಬ ತಕ್ಸೀರ ಮಾಡಿದವನೆಂತ ಯೆಣಿಸಲ್ಪಟ್ಟು ಆಯಾ ತಕ್ಸೀರಿಗೆ ಇಂಡಿಯನ್ ಪೆನಲ್‌ಕೋಡಿನ ದೆಶೆಯಿಂದ ವಿಧಿಸಲ್ಪಟ್ಟ ಶಿಕ್ಷೆಗೆ ಪಾತ್ರನಾಗತಕ್ಕದ್ದು.

ತೀರ್ವೆ ಪಟ್ಟಿ ಕಾಣಿಸಲ್ಪಡತಕ್ಕದ್ದು.

55. ತೀರ್ವೆ ವಸೂಲ್‌ಮಾಡುವ ಯಾವದಾದರೂ ದರ್ವಾಜೆಯಲ್ಲಿ ಅಥವಾ ಸ್ಟೇಷನಿನಲ್ಲಿ ತೆಗದುಕೊಳ್ಳುವಂತೆ ಅಧಿಕಾರ ಕೊಡಲ್ಪಟ್ಟ ತೀರ್ವೆಗಳ ಪಟ್ಟಿಯನ್ನು ಇಂಗ್ಲಿಷ್ ಮಾತುಗಳಿಂದಲೂ, ಅಂಕಿಗಳಿಂದಲೂ, ಅರವ, ಕನ್ನಡ, ಹಿಂದುಸ್ತಾನಿ ಈ ಭಾಷೆಗಳಲ್ಲಿಯೂ ಸ್ಪಷ್ಟವಾಗಿ ಬರೆಯಿಸಿ ಅಥವಾ ಬಣ್ಣದಿಂದ ಬರೆಯಿಸಿ ಅಂಥಾ ದರವಾಜೆ ಯಾ ಸ್ಟೇಷನ್‌ಗಳ ಪ್ರಕಟವಾದ ಸ್ಥಳದಲ್ಲಿ ಚಿಕಟಾಯಿಸತಕ್ಕದ್ದು.

ಶಿಲ್ಪಗಳು, ಕಸಬುಗಳು, ವ್ಯಾಪಾರಗಳು, ಯಾ ಜೀವನೋಪಾಯಗಳು, ಇವುಗಳ ಮೇಲೆ ತೆರಿಗೆ ಮತ್ತು ಷರಾಬ್ ಲೈಸೆನ್ಸ.

ಶಿಲ್ಪಗಳು ವಗೈರೆಮೇಲೂ, ಸಾರಾ

56. ಮೇಲೆ ಕಂಡಂತೆ ಶ್ರೀಮನ್ ಮೈಸೂರು ಮಹಾರಾಜಾ ಸರಕಾರದವರ ಅನುಮತಿಯ ಮೇಲೆ ಈ ಕಾನೂನಿನ ಕಾರ್ಯಗಳಿಗೋಸ್ಕರ, ಶಿಲ್ಪಗಳು, ಕಸಬ್‌ಗಳು, ವ್ಯಾಪಾರಗಳು, ಜೀವನೋಪಾಯಗಳು, ಇಂಥಾವುಗಳ ಮೇಲೆ ತೆರಿಗೆಯನ್ನಾಗಲಿ,

ಸ್ವಭಾವವುಳ್ಳ ಯಾ ನಿಷಾ ವುಂಟುಮಾಡುವ ಷರಾಬ್ ಬಿಕ್ರಿಗೂ ತೆರಿಗೆ.

ಸಾರಾ ಸ್ವಭಾವವುಳ್ಳ ಯಾ ನಿಷಾ ವುಂಟುಮಾಡುವ ಷರಾಬುಗಳ ಬಿಕ್ರೀ ಮೇಲೆ ಒಂದು ತೆರಿಗೆಯನ್ನಾಗಲಿ, ಅಥವಾ ಯೆರಡರನ್ನಾಗಲಿ, ವಸೂಲ್ ಮಾಡುವಂತೆ ಮ್ಯುನಿಸಿಪೆಲ್ ಕಮಿಷ್ನರ್‌ಗಳಿಂದ ನಿಷ್ಕಯಿಸಲ್ಪಟ್ಟ ಪಕ್ಷಕ್ಕೆ ಅಂಥಾ ತೆರಿಗೆ ಯಾ ತೆರಿಗೆಗಳು, ಈ ಕಾನೂನಿನ 57ರ ಲಾಗಾಯತು 62ರ ವರಿಗೆ ಇರುವ ಸೆಕ್ಷನ್‌ಗಳಲ್ಲಿ ವಿಧಿಸೋಣಾದ ಪ್ರಕಾರ ವಸೂಲ್ಮಾಡಲ್ಪಡತಕ್ಕದ್ದು.

ಪ್ರತಿ ಮನುಷ್ಯನೂ ತನ್ನ ಜೀವನೋಪಾಯವನ್ನು ರಿಜಿಸ್ಟರ್ ಮಾಡಿಸಿಕೊಂಡು ಸರ್ಟಿಫಿಕೇಟ್ ತೆಗದುಕೊಂಡು ಸಾಲಿಯಾನಾ ಮೊಬಲಗು ಪಾವತಿ ಮಾಡತಕ್ಕದ್ದು.

57. ಈ ಕಾನೂನಿಗೆ ಸೇರಿಸೋಣಾಗಿರುವ Cಗುರ್ತು ಪಟ್ಟಿಯಲ್ಲಿ ವಿವರಿಸೋಣಾದ ಶಿಲ್ಪಿಗಳು, ಕಸಬ್‌ಗಳು, ವ್ಯಾಪಾರಗಳು ಯಾ ಜೀವನೋಪಾಯಗಳು ಇಂಥಾವುಗಳ ಪೈಕಿ ಯಾವದನ್ನಾಗಲಿ, ಬೆಂಗಳೂರು ಷಹರಿನೊಳಗೆ ನಡಿಸುತ್ತಾ ಇರುವ ಪ್ರತಿ ಮನುಷ್ಯನೂ, ಮ್ಯುನಿಸಿಪೆಲ್ ಕಮಿಷನರ್‌ಗಳ ಆಫೀಸಿನಲ್ಲಿ ತನ್ನ ಹೆಸರನ್ನು ರಿಜಿಸ್ಟರ್ ಮಾಡಿಸಿ ಅಂಥಾ ಸಾಲಿಯಾನಾ ರಿಜಿಸ್ಟ್ರೇಷನ್ ಬಾಬತು ಒಂದು ಸರ್ಟಿಫಿಕೇಟನ್ನು ಪಡೆಯತಕ್ಕದ್ದು. ಸರಟಿಫಿಕೇಟ್ ಪಡೆಯಬೇಕಾದ ಪ್ರತಿ ಮನುಷ್ಯನೂ ಆ ಬಗ್ಯೆ ಸದರೀ C ಗುರ್ತು ಪಟ್ಟಿಯಲ್ಲಿ ಕಂಡ ಸಾಲಿಯಾನಾ ಮೊಬಲಗನ್ನು ಕೊಡತಕ್ಕದ್ದು. ಪರಂತು ಅಂಥಾ ಸಾಲಿಯಾನಾ ಕೊಡತಕ್ಕ ಮೊಬಲಗು ಪ್ರತಿಸಾಲ್ ಜೂನ್ ಗುರ್‍ರೇ ತಾರೀಖಿನಲ್ಲಾಗಲಿ ಅದಕ್ಕೆ ಮುಂಚೆಯಾಗಲಿ ಡಿಶಂಬರ್ ಗುರ್‍ರೇ ತಾರೀಖಿನಲ್ಲಾಗಲಿ ತತ್ಪೂರ್ವವೆ ಯಾಗಲಿ ಯೆರಡು ಚಷ್‌ಮಾಹೆ ವಾಯಿದೆಯಲ್ಲಿ ಪಾವತಿ ಮಾಡತಕ್ಕದ್ದು. ಅಂಥಾ ಸರ್ಟಿಫಿಕೇಟ್ ಬಗ್ಯೆ ಖಾಯಿಷ್ ಮಾಡುವಮನುಷ್ಯನು ಗುರಿಯಾಗತಕ್ಕ ಮೊದಲನೇ ಚಷ್‌ಮಾಹೆ ಕಿಸ್ತಿನ ಮೊಬಲಗು ಪಾವತಿಮಾಡುವ ಪರ್ಯಂತ ಅಂತಾ ಸರಟಿಫಿಕೇಟ್ ಕೊಡಲ್ಪಡಕೂಡದು.

ಸಾರಾ ಸ್ವಭಾವವುಳ್ಳ ಷರಾಬ್ ಬಿಕ್ರಿಮಾಡುವ ಪ್ರತಿ ಜಾಗಾವೂ ರಿಜಿಸ್ಟರ್ ಮಾಡಲ್ಪಡತಕ್ಕದ್ದು.

58. ಈ ಕಾನೂನ್ ಜಾರೀಲಿ ಬರುವ ದಿನದಲ್ಲಿಯೂ, ಆ ತರುವಾಯದಲ್ಲೂ, ಸಾರಾ ಸ್ವಾಭಾವವುಳ್ಳ ಯಾ ನಿಷಾ ಉಂಟುಮಾಡುವ ಷರಾಬುಗಳ ಚಿಲ್ಲರೇ ವ್ಯಾಪಾರದಾರನಾದ ಪ್ರತಿ ಮನುಷ್ಯನೂ ಅಂಥಾ ಬಿಕ್ರೀಬಗ್ಯೆ ತಾನು ಉಪಯೋಗಿಸುವ ಪ್ರತ್ಯೇಕ ಪ್ರತ್ಯೇಕವಾದ ಸ್ಥಳವನ್ನು ಸಾಲಿಯಾನಾ ಮ್ಯುನಿಸಿಪೆಲ್ ಕಮಿಷನರ್‌ಗಳ ಆಫೀಸಿನಲ್ಲಿ ರಿಜಿಸ್ಟರ್ ಮಾಡಿಸಿ ಅಂಥಾ ಪ್ರತಿ ವ್ಯಾಪಾರ ಸ್ಥಳಕ್ಕಾಗಿ ಸಾಲಿಯಾನಾ ರಿಜಿಸ್ಟ್ರೇಷನ್ ಬಾಬತು ಪ್ರತ್ಯೇಕ ಸರ್ಟಿಫಿಕೇಟನ್ನು ಪಡೆಯತಕ್ಕದ್ದು. ಮತ್ತು ಅಂಥಾ ಪ್ರತಿ ಸರ್ಟಿಫಿಕೇಟಿಗೂ, ಈ ಕಾನೂನಿಗೆ ಸೇರಿಸೋಣಾದ 2ನೇ C ಗುರ್ತಿನ ಪಟ್ಟಿಯಲ್ಲಿ ವಿವರಿಸೋಣಾದ ಸಾಲಿಯಾನಾ ಕೊಡತಕ್ಕಂಥಾ ಮೊಬಲಗನ್ನು ಕೊಡತಕ್ಕದ್ದು.

ಪ್ರೆಸಿಡೆಂಟರು ತರಗತಿಗಳನ್ನು ವಿಂಗಡಿಸತಕ್ಕದ್ದು.

59. ಈ ಕಾನೂನಿಗೆ ಸೇರಿಸೋಣಾದ, C ಗುರ್ತಿನ ಬಾಬತು ಮತ್ತು ೨ನೇ C ಗುರ್ತಿನ ಬಾಬತು ಪಟ್ಟಿಗಳಲ್ಲಿ ನಮೂದಿರುವ ತರಗತಿಗಳ ಪೈಕಿ ಯಾವ ತರಗತಿಯ ಕೆಳಗೆ ತೀರ್ವೆ ಮೊಕರರ್ಮಾಡಲ್ಪಡಲಿಕ್ಕೆ ಗುರಿಯಾದ ಪ್ರತಿ ಮನುಷ್ಯನೂ ಯಾ ಪ್ರತಿ ಷರಾಬ್ ಅಂಗಡಿಯೂ ರಿಜಿಸ್ಟರ್ ಆಗತಕ್ಕದ್ದೋ ಅದು ಫಲಾನೆದೆಂದು ಮ್ಯುನಿಸಿಪೆಲ್ ಕಮಿಷನ್ ಪ್ರೆಸಿಡೆಂಟರು ನಿಷ್ಕರ್ಷೆ ಮಾಡತಕ್ಕದ್ದಲ್ಲದೆ ಈ ಕಾನೂನಿನ ಅರ್ಥಕ್ಕೆ ವಳತವಾಗಿ ಯಾವದು ಬಜಾರಗಳೆಂತ ಯಾ ಮಾರ್ಕೆಟ್ಟುಗಳೆಂತ ಎಣಿಸಬಹುದೋ ಅವುಗಳು ಫಲಾನೆವೆಂದು ಆಗಿಂದಾಗ್ಯೆ ತ್ರಿಪಸತಕ್ಕದ್ದು. ಪರಂತು ಈ ಸೆಕ್ಷನ್ ಅನುಸರಿಸಿ ಪ್ರೆಸಿಡೆಂಟರು ಮಾಡುವ ತರಗತಿ ಯೇರ್ಪಾಡನ್ನು ಕುರಿತು ಸಮಾಧಾನ ಪಡದೇ ಇರುವ ಪ್ರತಿ ಮನುಷ್ಯನೂ, ಅಂಥಾ ತರಗತಿ ಏರ್ಪಾಡನ್ನು ಪುನಃ ವಿಮರ್ಶೇ ಮಾಡುವಂತೆ ಸದರೀ ಪ್ರೆಸಿಡೆಂಟರಿಗೆ ತಿಳಿಸಿಕೊಳ್ಳಬಹುದು. ಅಂಥಾ ಅರ್ಜಿಗಳನ್ನು ಫೈಸಲ್ ಮಾಡುವಲ್ಲಿ ಪ್ರೆಸಿಡೆಂಟರು ಕಮಿಷನರ್‌ಗಳ ಪೈಕಿ ಬಬ್ಬನಿಂದಾಗಲಿ ಹೆಚ್ಚುಮಂದಿಯಿಂದಲಾಗಲಿ ಕುಮ್ಮಕ್ ಮಾಡಲ್ಪಡತಕ್ಕದ್ದು. ಅವರುಗಳು ಅಧಿಕ್ಯದ ದೆಶೆಯಿಂದ ಪಸಂದು ಮಾಡಲ್ಪಟ್ಟು ಅರ್ಜಿದಾರ ವಾಸಮಾಡುವ ಯಾ ವ್ಯಾಪಾರ ನಡಿಸುವ ಡಿವಿಜನಿನಿಂದ ಸಮ್ಮರ್ ಮಾಡಲ್ಪಡತಕ್ಕದ್ದು. ಕಮಿಷನರ್ ಯಾ ಕಮಿಷನರ್‌ಗಳು ಯಾವದಿನ ಯಾವ ಘಳಿಗೆಯಲ್ಲಿ ಹಾಜರಾಗಬೇಕೋ ಆದಿನ ಆಘಳಿಗೆ ನಮೂದಿಸಿ ಕಮಿಷನರ್ ಯಾ ಕಮಿಷನರ್‌ಗಳನ್ನು ಸಮ್ಮರ್ ಮಾಡತಕ್ಕದ್ದು. ಹಾಗೆ ಸಮ್ಮರ್ ಮಾಡಲ್ಪಟ್ಟ ಕಮಿಷನರ ಯಾ ಕಮಿಷನರಗಳು ಹಾಜರು ಆಗಲಿಕ್ಕೆ ಬದ್ಧರಾಗತಕ್ಕದ್ದು. ಪ್ರತಿ ದಿನ ಹಾಜರಾಗಲಿಕ್ಕೆ ಹತ್ತು ರೂಪಾಯಿಗೆ ಮೀರದೆ ಪ್ರತ್ಯೇಕ ಪ್ರತ್ಯೇಕ ಒಂದು ರುಸುಂ ತೆಗದುಕೊಳ್ಳಲಿಕ್ಕೆ ಅರ್ಹರಾಗಿರತಕ್ಕದ್ದು. ಪರಂತು ಫೈಸಲೆಂಬದು ಪ್ರೆಸಿಡೆಂಟರ ಫೈಸಲಾಗಿರತಕ್ಕದ್ದು.

ಸರ್ಟಿಫಿಕೇಟಿನಲ್ಲಿ ತಾರೀಖು, ಹೆಸರು, ಮೊಬಲಗು ಇವುಗಳು ವಿವರಿಸಲ್ಪಡತಕ್ಕದ್ದು.

60. ಸೆಕ್‌ಷನ್ 57 ಯಾ 58 ಅನುಸರಿಸಿ ಆಗತಕ್ಕ ರಿಜಿಸ್ಟ್ರೇಷನ್ ಬಾಬತು ಪ್ರತಿ ಸರ್ಟಿಫಿಕೇಟೂ, ಮ್ಯುನಿಸಿಪಲ್ ಕಮ್ಮಿಷನ್ ಪ್ರೆಸಿಡೆಂಟರಿಂದಾಗಲಿ, ಅಬಗ್ಯೆ ಅವರಿಂದ ಕ್ರಮಪ್ರಕಾರ ಅಧಿಕಾರ ವುಂಟುಮಾಡಲ್ಪಟ್ಟ ಮತ್ತೊಬ್ಬರಿಂದಾಗಲಿ ಕೊಡಲ್ಪಡತಕ್ಕದ್ದಲ್ಲದೆ ಅದರಲ್ಲಿ ಹಾಗೆ ಕೊಡತಕ್ಕ ತಾರೀಖು, ಸರ್ಟಿಫಿಕೇಟ್ ಕೊಡುವ ಮನುಷ್ಯನ ಹೆಸರು, ಅಂಥಾ ಸರ್ಟಿಫಿಕೇಟ್ ಬಗ್ಯೆ ಕೊಡಬೇಕಾಗುವ ಮೊಬಲಗು ಇವುಗಳನ್ನು ವಿವರಿಸತಕ್ಕದ್ದು.

ಸರ್ಟಿಫಿಕೇಟು ಯಾವ ತಾರೀಖು ವರಿಗೆ ಅಮಲ್‌ನಲ್ಲಿ ಇರತಕ್ಕದ್ದು.

61. ಪ್ರತಿ ಸಂವತ್ಸರ ಡಿಸೆಂಬರ್ 31ನೇ ಮರ್‍ಖುಮಿಗೆ ಮುಂಚಿತವಾಗಿ ಕೊಡಲ್ಪಡುವ, ರಿಜಿಸ್ಟ್ರೇಷನ್ ಬಾಬತು ಪ್ರತಿ ಸರ್ಟಿಫಿಕೇಟೂ ಅದರ ತಾರೀಖು ಲಾಗಾಯತು ಸದರೀ ಡಿಸೆಂಬರ್ 31ನೇ ಮರ್‍ಖುಮ್ಮಿನಹೂ ಜಾರಿಯಲ್ಲಿರತಕ್ಕದ್ದು. ಮತ್ತು ಅಮಲ್‌ನಲ್ಲಿ ನಡೆಯತಕ್ಕದ್ದು. ಆ ತಾರೀಖಿಗೆ ತರುವಾಯ ಯಾವ ಕಾಲದಲ್ಲಾಗಲಿ ಅನಂತರವಾಗಲಿ ಕೊಡಲ್ಪಡುವ ಅಂಥಾ ಪ್ರತಿ ಸರ್ಟಿಫಿಕೇಟೂ, ಅದು ಕೊಡಲ್ಪಟ್ಟ ತಾರೀಖಿಗೆ ತರುವಾಯ ಬರುವ ಡಿಸೆಂಬರ್ 31ನೇ ಮರ್‍ಖುಮಿನಲ್ಲಿ ಪೂರೈಸತಕ್ಕದ್ದು.

ರಿಜಿಸ್ಟರ್ ಮಾಡಿಸದೆ ವ್ಯಾಪಾರ ನಡಿಸಿದರೆ ದಂಡನೆ.

62. 57 ವ 58 ಈ ಸೆಕ್‌ಷನ್‌ಗಳಿಂದ ನಿಯಮಿಸಲ್ಪಟ್ಟ ಪ್ರಕಾರ ಯಾವ ಮನುಷ್ಯನಾಗಲಿ ತನ್ನ ಹೆಸರನ್ನು ಕ್ರಮವಾಗಿ ರಿಜಿಸ್ಟರ್ ಮಾಡಿಸಿ, ಆ ರಿಜಿಸ್ಟ್ರೇಷನ್ ಬಾಬತು ಸರ್ಟಿಫಿಕೇಟ್ ಪಡೆಯುದೇನೇ ಯಾವ ಕ್ಯಾಲಂಡರ್ ಸಂವತ್ಸರದಲ್ಲಾಗಲಿ ಯರಡು ತಿಂಗಳಕಾಲ ಷಹರಿನೊಳಗೆ ತನ್ನ ಶಿಲ್ಪಕೆಲಸ, ಕಸಬು, ವ್ಯಾಪಾರ, ಯಾ ಜೀವನೋಪಾಯ ಇಂತಾದ್ದನ್ನ ನಡಿಸಿದರೆ ಅಥವಾ ಸಾರಾ ಸ್ವಭಾವವುಳ್ಳ ಯಾ ನಿಷಾ ವುಂಟುಮಾಡುವ ಷರಾಬುಗಳನ್ನು ಚಿಲ್ಲರೇ ಬಿಕರೀ ಮಾಡಿದರೆ ಅಂಥಾ ಮನುಷ್ಯನು ಯಾವ ಮಾಜಿಸ್ಟ್ರೇಟಿನ ಮುಂದೆಯಾಗಲಿ ತಕ್ಸೀರ್ ಸ್ಥಾಪನೆ ಮಾಡಲ್ಪಟ್ಟು ಮೇಲೆ ಕಂಡಂತೆ ಪೂರಾ ಸಂವತ್ಸರಕ್ಕೆ ಕ್ರಮ ಪ್ರಕಾರ ಪಡಕೊಂಡ ಸರ್ಟಿಫಿಕೇಟ್ ಬಗ್ಯೆ ಅವನು ಅಂಥಾ ಮಾಜಿಸ್ಟ್ರೇಟಿನ ಅಭಿಪ್ರಾಯದಲ್ಲಿ ಯೆಷ್ಟು ಮೊಬಲಗು ಕೊಡಬೇಕಾಗಿರುವದೋ ಅಷ್ಟರ ಮೊಬಲಗಿಗೆ ಮೂರರಷ್ಟಕ್ಕೆ ಜಾಸ್ತಿ ಇಲ್ಲದಂತೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಮನೆಗಳು, ಕಟ್ಟಣಗಳು, ವ ಜಮೀನುಗಳು ಇಂಥಾವುಗಳ ಮೇಲೆ ರಿವಾಜುಗಳು.

ಮನೆಗಳು ಮುಂತಾದವುಗಳ ಮೇಲೆ ನಿಜಂಧನೆ ಆಗಿರುವ ಮೇರೆ ರಿವಾಜ್ ವಸೂಲ್ಮಾಡಲ್ಪಡತಕ್ಕದ್ದು.

63. ಮೈಸೂರು ಶ್ರೀಮನ್ ಮಹಾರಾಜಾ ಸರಕಾರದವರ ಅನುಮತಿಯ ಮೇಲೆ ಈ ಕಾನೂನಿನ ಕಾರ್ಯಗಳಿಗೋಸ್ಕರ ಮನೆಗಳು, ಕಟ್ಟಣಗಳು, ಜಮೀನುಗಳು ಇಂಥಾವುಗಳ ಮೇಲೆ ಅವುಗಳ ಸಾಲಿಯಾನಾ ಕಿಮ್ಮತ್ತಿನ ಪ್ರಕಾರ ರಿವಾಜ್ ವಸೂಲ್ಮಾಡತಕ್ಕದ್ದೆಂತ ಮ್ಯುನಿಸಿಪಲ್ ಕಮ್ಮಿಷನರ್‌ಗಳಿಂದ ನಿಶ್ಚಯಿಸಲ್ಪಟ್ಟ ಪಕ್ಷಕ್ಕೆ ಅಂಥಾ ರಿವಾಜ್‌ಗಳು, ಈ ಕಾನೂನಿನ 64ರ ಲಾಗಾಯತು 77ರ ವರಿಗೆ ಇರುವ ಸೆಕ್‌ಷನ್‌ಗಳಲ್ಲಿ ವಿಧಿಸಲ್ಪಟ್ಟ ಪ್ರಕಾರ ವಸೂಲ್ಮಾಡಲ್ಪಡತಕ್ಕದ್ದು.

ಷಹರಿನಲ್ಲಿರುವ ದರೋಬಸ್ತು ಮನೆಗಳೂ ಕಟ್ಟಣಗಳೂ ವ ಜಮೀನುಗಳೂ ಇಂಥಾವುಗಳ ಮೇಲೆ ರಿವಾಜುಗಳು.

64. ದೀಪ ಹಚ್ಚುವದು ನೀರು ಕೊಡುವದು ಇಂತಾದ್ದು ಶಿವಾಯಿ ಈ ಕಾನೂನಿನ ಮಿಕ್ಕ ಸಾಧಾರಣ ಕೆಲಸಗಳಿಗೋಸ್ಕರ, ಬೆಂಗಳೂರು ಷಹರಿನಲ್ಲಿ ಇರುವ ದರೋಬಸ್ತು ಮನೆಗಳ ಮೇಲೂ, ಕಟ್ಟಣಗಳ ಮೇಲೆಯೂ, ಜಮೀನುಗಳ ಮೇಲೆಯೂ, ಅವುಗಳ ಸಾಲಿಯಾನಾ ಮೆಬಲಿನ ಪೈಕಿ ಸೇಕಡಾ ಐದಕ್ಕೆ ಜಾಸ್ತಿ ಇಲ್ಲದಂತೆ ಕಮ್ಮಿಷನರ್‌ಗಳಿಂದ ಸಾಲಿಯಾನಾ ರಿವಾಜು ಮುಕರರ್ಮಾಡಲ್ಪಟ್ಟು ಇದರಲ್ಲಿ ಮುಂದೆ ವಿವರಿಸಲ್ಪಟ್ಟ ಪ್ರಕಾರ ತೀರ್ವೆ ಹಾಕತಕ್ಕದ್ದು. ಪರಂತು ಅಂತಾ ರಿವಾಜಿಗೆ ಬದಲಾಗಿ ಯಾವದಾದರೂ ಕಟ್ಟಣ ಯಾ ವಠಾರ ಇಂಥಾದ್ದಕ್ಕಾಗಿ ಉಪಯೋಗಿಸಲ್ಪಡದೆ ಇರುವ ಯಾವ ಜಮೀನುಗಳ ಮೇಲೆ,ಅಥವಾ ನೇಟಿವ್‌ಗಳು ಯಾವದಾದರೂ ಗುಡಿಸಲು ಅವುಗಳಿಗೆ ಸೇರಿದವುಗಳು ಇವುಗಳ ಮೇಲೂ, ಮೈಸೂರು ಶ್ರೀಮನ್ ಮಹಾರಾಜಾ ಸರಕಾರದವರು ನಿಯಮಿಸುವಂತಾ ಸಾಲಿಯಾನಾ ಕಾಯಂ ರಿವಾಜನ್ನು ವಸೂಲ್ ಮಾಡುವದು ಮ್ಯುನಿಸಿಪಲ್ ಕಮ್ಮಿಷನ್ ಪ್ರಸಿಡೆಂಟರ ಇಷ್ಟಪ್ರಕಾರ ಇರತಕ್ಕದ್ದು. ಈ ಸೆಕ್‌ಷನ್ ಅನುಸರಿಸಿ ವಸೂಲ್ ಮಾಡಲ್ಪಡುವ ಯಾವ ರಿವಾಜಾಗಲಿ ಒಂದು ಸಂವತ್ಸರದ ಮೊದಲನೇ ಶೀ ಮಾಹೆ ಏಪ್ರೈಲ್ ಲಾಗಾಯತು ಸದರೀ ಮನೆಗಳು, ಕಟ್ಟಣಗಳು ಜಮೀನುಗಳು ವ ಗುಡಿಸಲುಗಳು ಇವುಗಳ ಮಾಲೀಕರಿಂದ ಬಾಕಿಯಾಗಿ ಸಲ್ಲತಕ್ಕದ್ದು. ಯಾವ ಮನೆ ಯಾ ಕಟ್ಟಣ ಯಾ ಜಮೀನಾಗಲಿ ಮಾಲೀಕನ ಬಾಬತು ರಿವಾಜ್ ಕೊಡತಕ್ಕ ಒಂದೇ ಆಸ್ತಿಯಾಗಿ ಮಾತ್ರ ಇದ್ದಪಕ್ಷಕ್ಕೆ ಹದಿನಾಲ್ಕು ರೂಪಾಯಿಗೆ ಕಮ್ಮಿಯಾದ ಸಾಲಿಯಾನಾ ಕಿಮ್ಮತುಳ್ಳ ಅಂಥಾ ಮನೆ ಮುಂತಾದ್ದರ ಮೇಲೆ ತೆರಿಗೆ ಹಾಕದಂತೆ ಮಾಫ್ ಮಾಡಬಹುದು.

ನಿಯಮ.

65. ಮಿಲಿಟರಿ ಯಾನೇ ಫೌಜಿನ ಕಾರ್ಯಗಳಿಗೋಸ್ಕರವಾಗಿಯೇ ಫಕ್ತ್ ಉಪಯೋಗಿಸಲ್ಪಡುವ ಕಟ್ಟಗಳೂ, ಜಮೀನೂ, ಸರ್ವಜನಗಳೂ ಪೂಜೆ ಮಾಡುವ ಸ್ಥಳವೆಂತ ಸಾಧಾರಣವಾಗಿ ಉಪಯೋಗಿಸಲ್ಪಡುವ ಕಟ್ಟಗಳೂ ಸರಕಾರದ ಕಚೇರಿಗಳಿಗಾಗಿ ಉಪಯೋಗಿಸಲ್ಪಡುವ ಕಟ್ಟಗಳೂ ಮತ್ತು ಮೈಸೂರ್ ಮಹಾರಾಜರವರ ಸ್ವಂತವಾಸದ ಬಗ್ಗೆ ಗೊತ್ತಾಗಿರುವ ಕಟ್ಟಗಳೂ, ಇದರ ಹಿಂದಿನಕಡೇ ಸೆಕ್ಷನ್ ಅನುಸರಿಸಿ ಯಾವ ರಿವಾಜಿಗೂ ಗುರಿಯಾಗತಕ್ಕದ್ದಲ್ಲವು.

ಮಿಲಿಟರಿ ಕೆಲಸಗಳಿಗೂ ಜನಗಳ ದೇವತಾರಾಧನೆ ನಡೆಯುವಬಗ್ಗೆ ಉಪಯೋಗಿಸಲ್ಪಡುವ ಕಟ್ಟಗಳು ವಿನಾಯಿಸಲ್ಪಡತಕ್ಕದ್ದು.

66. ಯಾವ ಸಂವತ್ಸರದಲ್ಲಾಗಲಿ ಕ್ರಮವಾಗಿ ಅರವತ್ತು ದಿನಗಳು ಯಾವ ಮನೆಯಾಗಲಿ ಖಾಲಿಯಾಗಿದ್ದ ಪಕ್ಷಕ್ಕೆ, ಮ್ಯುನಿಸಿಪಲ್ ಕಮಿಷನರ್ಸ ಪ್ರೆಸಿಡೆಂಟರು ಸದರೀ ಮನೆ ಯೆಷ್ಟು ದಿನಗಳು ಖಾಲಿಯಾಗಿರುತ್ತೋ ಅವಕ್ಕೆ ತಕ್ಕಷ್ಟು ಅರ್ಧಕ್ಕೆ ಮಿಂಚದಂತೆ ಆ ಸಂವತ್ಸರದ ತೆರಿಗೆಯಲ್ಲಿ ಮುಜರೆ ಕೊಡತಕ್ಕದ್ದು. ಪರಂತು ಅಂಥಾ ಮನೆಯ ಯಜಮಾನನಾಗಲಿ, ಅವನ ಮುತಾಲೀಕನಾಗಲಿ ಸದರೀ ಮನೆ ಖಾಲೀ ಇರುವ ಸಂಗತಿಯನ್ನು ಕುರಿತು ಬರವಣಿಗೆಯಲ್ಲಿ ಪ್ರೆಸಿಡೆಂಟರಿಗೆ ನೋಟಿಸ್ ಕೊಟ್ಟಿರತಕ್ಕದ್ದು. ಮತ್ತು ಮುಜರೆ ಕೊಡಬೇಕಾದ ರಿವಾಜ್ ಮೊಬಲಗ್ ಅಂಥಾ ನೋಟಿಸ್ ಪಾವತೀ ತಾರೀಖು ಲಾಗಾಯತು ಗಣಿಸಲ್ಪಡತಕ್ಕದ್ದು.

ಖಾಲೀ ಮನೆಗಳಿಗೆ ಮುಜರೆ.

67. ಈ ಕಾನೂನ್ ಅನುಸರಿಸಿ ಮನೆಗಳು, ಕಟ್ಟಗಳು, ವ ಜಮೀನ್‌ಗಳು ಇವುಗಳ ಸಾಲಿಯಾನಾ ಕಿಮ್ಮತಿನ ಪ್ರಕಾರ ಮೊಕರರ್ ಆದ ರಿವಾಜ್ ಯಾ ರಿವಾಜುಗಳಿಗೆ ಗುರಿಯಾದ ಸದರೀ ಮನೆಗಳು, ಕಟ್ಟಗಳು, ಜಮೀನ್‌ಗಳು ಸಾಲಾಬಾದಾಗಿ ಯುಕ್ತವಾಗಿ ಯೆಷ್ಟರ ಬಾಡಿಗ್ಯೆ ಕೊಡಲ್ಪಡಬಹುದೆಂತ ಯೆಣಿಸಬಹುದೋ ಅಷ್ಟರ ಬಾಬತು ಸಾಲಿಯಾನಾ ಬಾಡಿಗ್ಯೆ ಅಂದಾಜ್ ಬಟ್ಟು ಮೊಬಲಗು, ಈ ಕಾನೂನ್ ಅನುಸರಿಸಿ ವಸೂಲ್ ಮಾಡತಕ್ಕ ರಿವಾಜುಗಳ ಕಾರ್ಯಗಳಿಗೋಸ್ಕರ ಅಂತಾ ಮನೆಗಳು, ಕಟ್ಟಗಳು, ಜಮೀನುಗಳು ಇಂಥಾವುಗಳ ಸಾಲಿಯಾನಾ ಕಿಮ್ಮತೆಂತ ಭಾವಿಸಿ ಗ್ರಹಿಸತಕ್ಕದ್ದು, ಹಾಗೆ ಅಂದಾಜು ಹಾಕಲ್ಪಟ್ಟ ಒಂದು ಮನೆಯ ಯಾ ಕಟ್ಟದ ಕಿಮ್ಮತಿಗೆ ಅದರಲ್ಲಿರುವ ಯಾವದಾದರೂ ಯೆಂತ್ರದ ಕಿಮ್ಮತು ಶೇರತಕ್ಕದ್ದಲ್ಲವು.

ಮನೆಗಳು, ಕಟ್ಟಗಳು, ಜಮೀನ್‌ಗಳು ಇವುಗಳ ಸಾಲಿಯಾನಾ ಕಿಮ್ಮತು ಯಾವ ಮೇರೆ ನಿಶ್ಚಯಿಸಲ್ಪಡತಕ್ಕದ್ದು.

68. ಜಮೀನ್‌ಗಳು, ಮನೆಗಳು, ಕಟ್ಟಗಳು ಯಾ ಗುಡಿಸಲುಗಳು ಅವುಗಳೊಡನೆ ಶೇರಿದವುಗಳು ದೇಖೀಲ್ ಯಾವ ಪ್ರಕಾರ ತೆರಿಗೆ ಕಟ್ಟಲ್ಪಡತಕ್ಕದ್ದೋ ಅಂಥಾ ಸಾಲಿಯಾನಾ ಕಿಮ್ಮತಾಗಲಿ ಈ ಕಾನೂನ್ ಅನುಸರಿಸಿ ಯಾವದರ ಮೇಲೆ ಅವುಗಳಿಗೆ ರಿವಾಜ್ ಯೇರ್ಪಾಡು ಮಾಡಬೇಕಾಗಿರುತ್ತೋ ಅಂಥಾ ಜಮೀನ್ ವಿಸ್ತೀರ್ಣವಾಗಲಿ, ಪ್ರೆಸಿಡೆಂಟರು, ಕಮಿಷನರ್‌ಗಳ ಪೈಕಿ ಇಬ್ಬರ ಕುಮಕೀನಿಶೀ ನಿಷ್ಕರ್ಷೆ ಮಾಡತಕ್ಕದ್ದು. ಮತ್ತು ಅಂಥಾ ಜಮೀನ್‌ಗಳು, ಮನೆಗಳು ಕಟ್ಟಗಳು ವ ಗುಡಿಸಲುಗಳು ಅವುಗಳೊಡನೆ ಶೇರಿದವುಗಳು ದೇಖೀಲ್ ಹಾಗೆ ನಿಷ್ಕರ್ಷೆ ಮಾಡಲ್ಪಟ್ಟ ಕಿಮ್ಮತಿನ ಮೇಲೆ ಅಥವಾ ಪ್ರದೇಶದ ವಿಸ್ತೀರ್ಣದ ಮೇಲೆ ತೆರಿಗೆ ಹಾಕಲ್ಪಡತಕ್ಕದ್ದು ಯಾ ರಿವಾಜ್ ಯೇರ್ಪಡಿಸಲ್ಪಡತಕ್ಕದ್ದು.

ಸಾಲಿಯಾನಾ ಕಿಮ್ಮತು ಕಮಿಷನರ್‌ಗಳಿಂದ ಕಟ್ಟಲ್ಪಡತಕ್ಕದ್ದು.

69. ಇದರಲ್ಲಿ ಹಿಂದೆ ವಿಧಿಸಲ್ಪಟ್ಟ ಪ್ರಕಾರ ಕಮಿಷನರ್‌ಗಳಿಂದ ಕಟ್ಟೋಣಾದ ಸಾಲಿಯಾನಾ ಕಿಮ್ಮತು ಅಥವಾ ನಿಷ್ಕರ್ಷೆ ಮಾಡೋಣಾದ ವಿಸ್ತೀರ್ಣ ಕಮಿಷನರ್‌ಗಳ ಆಫೀಸಿನಲ್ಲಿ ಇಡಲ್ಪಡತಕ್ಕ ಒಂದು ಬುಕ್ಕಿನಲ್ಲಿ ದಾಖಲ್ ಮಾಡಲ್ಪಡತಕ್ಕದ್ದು; ಅದೇ ಬುಕ್ಕಿನಲ್ಲಿ ಸ್ವತ್ತಿನ ಮಾಲೀಕನ ಹೆಸರು ಅಥವಾ ಸದರೀ ರಿವಾಜನ್ನು ಕೊಡಲಿಕ್ಕೆ ಮಾಲೀಕನಲ್ಲದೇ ವಾಸ ಮಾಡುವವನು ಗುರಿಯಾದವನಾಗಿದ್ದ ಪಕ್ಷಕ್ಕೆ ಅಂಥಾ ವಾಸ ಮಾಡುವವನ ಹೆಸರು, ಸ್ವತ್ತು ಯಾವ ಬೀದಿ ಯಾ ಡಿವಿಜನಿನಲ್ಲಿರುತ್ತೋ ಅಂಥಾದ್ದರ ಹೆಸರು ದೇಖೀಲ್ ಹೆಸರಿನಿಂದಾಗಲಿ ನಂಬರಿನಿಂದಾಗಲಿ ಸ್ವತ್ತು ಫಲಾನೆದೆಂದು ತಿಳಿಯಲಿಕ್ಕೆ ಸಾಕಾದಂಥಾ ಸ್ವತ್ತಿನ ಹೆಸರು ಮತ್ತು ಅದರ ಮೇಲೆ ಕಟ್ಟಲ್ಪಟ್ಟ ಯಾ ನಿಷ್ಕರ್ಷೆ ಮಾಡಲ್ಪಟ್ಟ ರಿವಾಜ್ ಮೊಬಲಗು ಇಂಥಾದ್ದು ಪ್ರತ್ಯೇಕ ಮದ್ದಿನಲ್ಲಿ ಬರೆಯಲ್ಪಡತಕ್ಕದ್ದು.

ಕಟ್ಟಲ್ಪಟ್ಟ ಕಿಮ್ಮತು ಮಾಲೀಕನ ಹೆಸರು ವಗೈರೆ ವೊಂದು ಬುಕ್ಕಿನಲ್ಲಿ ದಾಖಲ್ ಮಾಡಲ್ಪಡತಕ್ಕದ್ದು.

70. ಈ ಕಾನೂನ್ ಜಾರೀಲಿ ಬರುವ ತಾರೀಖಿನಲ್ಲಿ, ಜಮೀನ್‌ಗಳು, ಮನೆಗಳು, ಕಟ್ಟಗಳು ಯಾ ಗುಡಿಸಲುಗಳು ಅವುಗಳಿಗೆ ಶೇರಿದವುಗಳು ದೇಖೀಲ್ ಯಾವ ಕಿಮ್ಮತ್ತಿನಮೇಲೆ ತೆರಿಗೆ ಕಟ್ಟಲ್ಪಡುತ್ತೋ ಆ ಕಿಮ್ಮತು ಗವರ್ನರ್ ಜನರಲ್ಲವರ ನ್ಯಾಯ

ಮ್ಯುನಿಸಿಪಲ್ ಕಮಿಷನರ್‌ಗಳ ಬುಕ್ಕಿನಲ್ಲಿ ಹಾಲಿ ದಾಖಲ್ ಇರುವ ಅಂದಾಜ್ ಹೊಸ

ಅಂದಾಜ್, ಯೇರ್ಪಡಿಸುವ ಪರಿಯಂತ ಈ ಕಾನೂನುಗಳನುಸರಿಸಿ ಮೊದಲನೇ ಅಂದಾಜ್ ಯಂತ ಯೆಣಿಸತಕ್ಕದ್ದು.

ವಿಧಾಯಕ ಸಭೆಯುವರ 1864ನೇ ಇಸವಿಯ 18ನೇ ಆಕ್ಟ್ ಅನುಸರಿಸಿಯಾಗಲಿ, ಇತರ ಪ್ರಮಾಣವನ್ನು ಅನುಸರಿಸಿಯಾಗಲಿ ಮ್ಯುನಿಸಿಪೆಲ್ ಕಮ್ಮಿಷನರ್‌ಗಳ ಆಫೀಸಿನಲ್ಲಿ ಇಡಲ್ಪಟ್ಟಿರುವ ಬುಕ್ಕಿನಲ್ಲಿ ದಾಖಲ್ ಮಾಡಲ್ಪಟ್ಟ ಈ ಕಾನೂನುಗಳ 68ನೇ ಸೆಕ್ಷನ್ ಅನುಸರಿಸಿ ಕಮ್ಮಿಷನರ್‌ಗಳು ಹೊಸ ಅಂದಾಜ್ ಯೇರ್ಪಡು ಮಾಡಿಸುವ ಪರ್ಯಂತ ಈ ಕಾನೂನುಗಳನುಸರಿಸಿ ಮಾಡಲ್ಪಟ್ಟ ಮೊದಲನೇ ಅಂದಾಜ್ ಯಂತ ತಿಳಿಯತಕ್ಕದ್ದು.

ಮಾಲೀಕ ಯಾ ಅನುಭವದಾರನ ಹೆಸರು ತಿಳಿಯದೆ ಇದ್ದರೆ ಅವನ ಹೆಸರನ್ನು ಯಾವ ಮೇರೆ ದಾಖಲ್ಮಾಡತಕ್ಕದ್ದು.

71. ಮಾಲೀಕ ಯಾ ಅನುಭವದಾರನ ಹೆಸರು ಗೊತ್ತಿಲ್ಲದೆ ಇದ್ದರೆ, ಸದರೀ ಬುಕ್ಕಿನಲ್ಲಿಯೂ, ಈ ಕಾನೂನ್ ಅನುಸರಿಸಿ ಕೊಡತಕ್ಕಾಗುವ ಯಾವದಾದರೂ ನೋಟಿಸ್ ಯಾ ಇತರ ನಡವಳಿತ ಇಂಥಾದ್ದರಲ್ಲಿ ಕೂಡ ಮತ್ಯಾವ ತಪಶೀಲೂ ಇಲ್ಲದೆ ರಿವಾಜ್ ಕಟ್ಟೋಣಾದ ಸ್ವತ್ತಿನ "ಮಾಲೀಕ" ಯಾ "ಅನುಭವದಾರ" ಎಂತಾ ದಾಖಲ್ಮಾಡುವದು ಸಾಕಾಗಿರತಕ್ಕದ್ದು.

ಅಂದಾಜ್ ಮತ್ತು ಮೋಜಣಿಯನ್ನು ಕುರಿತು ಬಹಿರಂಗವಾಗಿ ನೋಟಿಸ್ ಕೊಡತಕ್ಕದ್ದು.

72. ಬೆಂಗಳೂರು ಷಹರಿನ ಡಿವಿಜನ್‌ಗಳ ಪೈಕಿ ಯಾವದಾದರೂ ಡಿವಿಜನಿನ ಅಂದಾಜು ವ ಮೋಜಣಿಯು ಪೂರೈಸಿದಲ್ಲಿ ಮುನಿಸಿಪೆಲ್ ಕಮ್ಮಿಷನ್ ಪ್ರೆಸಿಡೆಂಟರು ಅದನ್ನು ಕುರಿತೂ, ಸದರೀ ಅಂದಾಜ್ ವ ಮೋಜಣಿ ವ ಕಟ್ಟಲ್ಪಟ್ಟ ರಿವಾಜು ಇವುಗಳು ಅಡಗಿ ಯಿರುವ ಸದರೀ ಬುಕ್ಕು, ಅಥವಾ ಸದರೀಬುಕ್ಕಿನ ಒಂದು ನಕಲು ಸಹ ಯಾವ ಸ್ಥಳದಲ್ಲಿ ನೋಡಬಹುದೋ ಅಂತಾ ಸ್ಥಳವನ್ನು ಕುರಿತು, ಮೈಸೂರು ಗೆಜೆಟ್ಟಿನಲ್ಲಿಯೂ, ಬೆಂಗಳೂರೊಳಗೆ ಪ್ರಕಟಿಸಲ್ಪಡತಕ್ಕ ಸ್ಥಳದ ಒಂದು ಯಾ ಜಾಸ್ತೀ ಇಂಗ್ಲೀಷ್ ವ ದೇಶಭಾಷೆ ನ್ಯೂಸ್‌ಪೇಪರಗಳಲ್ಲಿಯೂ ಇಸ್ತಿಹಾರ್ ಮೂಲಕ ಮತ್ತು ಷಹರಿನ ಅಂತಾ ಡಿವಿಜನಿನಲ್ಲಿ ಸರ್ವತ್ರ ಪ್ರಸಿದ್ಧಗಳಾದ ಸ್ಥಳಗಳಲ್ಲಿ ಇಸ್ತಿಹಾರುಗಳನ್ನು ಚಿಕಟಾಯಿಸುವದರ ದ್ವಾರಾ ಸಹ ಬಹಿರಂಗವಾಗಿ ನೋಟಿಸ್ ಕೊಡತಕ್ಕದ್ದು ಮತ್ತು ಯಾವನ ವಶದಲ್ಲಿ ಅಂತಾ ಬುಕ್ಕು ಇರುತ್ತೋ ಆ ಮನುಷ್ಯನು, ತೆರಿಗೆ ಯಾ ಮೋಜಣಿಗೆ ಸೇರಿದ ಸ್ವತ್ತಿನ ಮಾಲೀಕನೆಂತ ಯಾ ಅನುಭವದಾರನೆಂತ ಕೇಳುವ ಪ್ರತಿ ಮನುಷ್ಯನಿಗಾಗಲಿ ಅಂತಾ ಮಾಲೀಕ ಯಾ ಅನುಭವದಾರನ ಮುತಾಲೀಕನಿಗಾಗಲಿ ಸದರೀ ಬುಕ್ಕನ್ನು ನೋಡಲಿಕ್ಕೂ, ಯಾವ ರುಸುಮೂ ಕೊಡದೇನೇ ಅಂತಾ ಬುಕ್ಕಿನಿಂದ (ಯಾವ ಅಂಶವನ್ನಾಗಲಿ) ತೆಗೆದು ಬರಕೊಳ್ಳುವಬಗ್ಯೆ ಅಪ್ಪಣೇ ಕೊಡಬಹುದು. ಮತ್ತು ತಾನು ಅಂತಾ ಮಾಲೀಕ ಯಾ ಅನುಭವದಾರನಲ್ಲವೆಂ ತಯಾವನು ಹೇಳುತ್ತಾನೋ ಅಂತಾವನು ಒಂದು ರೂಪಾಯಿ ರುಸುಂ ಕೊಟ್ಟಮೇಲೆ ಅದೇ ಮೇರೆ ಬುಕ್ಕು ನೋಡಲಿಕ್ಕೂ ಅದರಿಂದ ಯಾವ ಅಂಶವನ್ನಾಗಲಿ ತೆಗದು ಬರಕೊಳ್ಳಲಿಕ್ಕೂ ಅಪ್ಪಣೇ ಕೊಡಬಹುದು.

ಕಟ್ಟಲ್ಪಟ್ಟ ತೆರಿಗೆ ಪುನರ್ವಿಮರ್ಶೆ ಮಾಡುವ ಕಾಲವನ್ನು ಕುರಿತು ನೋಟಿಸ್.

73. ಮ್ಯುನಿಸಿಪೆಲ್ ಕಮ್ಮಿಷನ್‌ಗಳ ಪ್ರೆಸಿಡೆಂಟರು, ಹಿಂದಿನ ಸೆಕ್ಷನಿನಲ್ಲಿ ನಮೂದಿರುವ ಕಾಲದಲ್ಲಿಯೂ, ಮತ್ತು ಆ ರೀತಿಯಾಗಿಯೂ ಸದರೀ ಅಂದಾಜ್, ಯಾ ಮೋಜಣೀ ಮತ್ತು ಕಟ್ಟೋಣಾದ ತೆರಿಗೇ ಯಿಂಥಾದ್ದನ್ನು ಪುನರ್ವಿಮರ್ಶೆ ಮಾಡುವದಕ್ಕೆ ಅವರು ಪ್ರವರ್ತಿಸುವ ಒಂದು ದಿನವನ್ನು ಕುರಿತು ನೋಟೀಸ ಘಾಯಿಷ್ ಮಾಡುವದಕ್ಕೆ ಹದಿನೈದು ದಿನಗಳಿಗೆ ಕಡಿಮೆ ಯಿಲ್ಲದಂತೆ ಬಹಿರಂಗವಾಗಿ ನೋಟೀಸ ಕೊಡತಕ್ಕದ್ದು. ಯಾವ ಸಂಗತಿಯಲ್ಲಿ ಯಾವದಾದರೂ ಸ್ವತ್ತು ಪ್ರಥಮತಃ ತೆರಿಗೆ ಕಟ್ಟಲ್ಪಡುತ್ತೋ ಅಥವಾ ಪೂರ್ವ ತೆರಿಗೇ ಕಟ್ಟೋಣಾದ ಯಾವದಾವರು ಸ್ವತ್ತಿನ ಅಂದಾಜ್ ಯಾ ಮೋಜಣೀಯು ಜಾಸ್ತೀ ಮಾಡಲ್ಪಡುತ್ತೋ ಅಂಥಾ ದರೊಬಸ್ತು ಸಂಗತಿಗಳಲ್ಲಿಯೂ, ಅಂಥಾ ಸ್ವತ್ತಿನ ಮಾಲೀಕ ಯಾ ಅನುಭವದಾರನಿಗೆ ಅದನ್ನು ಕುರಿತು ಮುಖ್ಯವಾಗಿ ನೋಟೀಸ್ ಕೊಡತಕ್ಕದ್ದು. ಸದರೀ ಅಂದಾಜ್ ಯಾ ಮೋಜಣೀ ಮತ್ತು ಕಟ್ಟೋಣಾದ ತೆರಿಗೆ ಇಂಥಾದ್ದನ್ನು ಪುನರ್ವಿಮರ್ಶೆ ಮಾಡುವ ಬಗ್ಯೆ ಸದರೀ ಬಹಿರಂಗವಾದ ನೋಟೀಸಿನಲ್ಲಿ ಗೊತ್ತು ಮಾಡಲ್ಪಟ್ಟ ದಿನಕ್ಕೆ ಮೂರು ದಿನಗಳಿಗೆ ಮುಂಚಿತವಾಗಿ ಕಮ್ಮಿಷನರ್‌ಗಳ ಆಫೀಸಿನಲ್ಲಿ ಬರವಣಿಗೆಯಲ್ಲಿ ಕೊಡೋಣಾದ ದರಖಾಸ್ತು ಮೂಲಕ ಅಂಥಾ ಅಂದಾಜ್ ಯಾ ಮೋಜಣೀ ವ ಕಟ್ಟಲ್ಪಟ್ಟ ತೆರಿಗೆ ಇಂಥಾದ್ದನ್ನು ಪುನರ್ವಿಮರ್ಶೆ ಬಗ್ಯೆ ಕೊಡೋಣಾಗುವ ವಿಶಿಷ್ಟ ಅರ್ಜಿಗಳನ್ನೂ ಪ್ರೆಸೀಡೆಂಟರಿಗೆ ಕೊಡತಕ್ಕದ್ದು. ಮತ್ತು ಪ್ರೆಸೀಡೆಂಟರು ಅಂಥಾ ಅರ್ಜಿಗಳನ್ನೂ ಸುನಾವಣೀ ತೆಗದುಕೊಂಡ ಮೇಲೆ ಸದರೀ ಕಟ್ಟಲ್ಪಟ್ಟ ತೆರಿಗೆಯಲ್ಲಿಯೂ ಬುಕ್ಕಿನಲ್ಲಿಯೂ ಯಾವದಾದರೂ ತಿದ್ದು ಪಡೀ ಮಾಡಬೇಕಾಗಿದ್ದಲ್ಲಿ ಅದನ್ನು ತಮಗೆ ಯುಕ್ತ ತೋರುವ ಮೇರೆ ಮಾಡತಕ್ಕದ್ದು.

ಪ್ರೆಸಿಡೆಂಟರು ಒಬ್ಬ ಯಾ ಜಾಸ್ತಿ ಮಂದಿ ಕಮ್ಮಿಷನರಗಳ ಕುಮ್ಮಕೀ ಮೇಲೆ ಅಪ್ಪೀಲ್ ಗಳನ್ನು ವಿಚಾರಣೆ ಮಾಡತಕ್ಕದ್ದು.

74. ಇದರ ಹಿಂದಿನ ಸೆಕ್ಷನ್ನ ಅನುಸರಿಸಿ ಕೊಡೋಣಾದ ಪ್ರತಿ ಅರ್ಜಿಯೂ ಮ್ಯುನಿಸಿಪಲ್ ಕಮ್ಮಿಷನ್ನಗಳ ಪ್ರೆಸಿಡೆಂಟರಿಂದ, ಮುವ್ವರು ಯಾ ಹೆಚ್ಚುಮಂದಿ ಕಮ್ಮಿನರಗಳ ಕುಮ್ಮಕನಿಂ ವಿಚಾರಣೇ ಮಾಡಲ್ಪಡತಕ್ಕದ್ದು. ಸದರೀ ಕಮ್ಮಿಷನರಗಳ ಪೈಕಿ ಒಬ್ಬರು ತೆರಿಗೇ ಕಟ್ಟಲ್ಪಡತಕ್ಕ ವ.ನೆ ಯಾವ ಡಿವಿಜನ್ನಲ್ಲಿ ಇರುತ್ತೋ ಆ ಡಿವಿಜನ್ನಿಂದ ಅಧಿಕ್ಯದ ಮೇಲೆ ಸಮ್ಮನ್ನ ಮಾಡಲ್ಪಡತಕ್ಕದ್ದು. ಪ್ರೆಸಿಡೆಂಟರು ಕಮ್ಮಿಷನರ ಯಾ ಕಮ್ಮಿಷನರ್ಗಳಿಗೆ, ಯಾವ ದಿನ ಯಾವ ಘಳಿಗೆಯಲ್ಲಿ ಆತನು ಯಾ ಅವರು ಹಾಜರಾಗಬೇಕೋ ಆ ದಿನ ಆ ಘಳಿಗೆ ನಮೂದಿಸಿ ಸಮ್ಮನ್ನ ಕೊಡತಕ್ಕದ್ದು. ಹಾಗೆ ಸಮ್ಮನ್ನ ಮಾಡಲ್ಪಟ್ಟ ಕಮ್ಮಿಷನರ್ ಯಾ ಕಮ್ಮಿಷನರಗಳು ಹಾಜರಾಗಲಿಕ್ಕೆ ಬದ್ಧರಾಗಿರತಕ್ಕದ್ದಲ್ಲದೆ, ಪ್ರತಿ ದಿನ ಹಾಜರಾಗಲಿಕ್ಕೆ ತಲಾ ಹತ್ತು ರೂಪಾಯಿಗೆ ಮಿಾರದೆ ಒಂದು ರುಸುಮಿಗೆ ಅರ್ಹರಾಗಿರತಕ್ಕದ್ದು. ಪರಂತು ಯಾವಾಗ್ಯೂ ಫೈಸಲೆಂಬದು ಪ್ರೆಸಿಡೆಂಟರದಾಗಿಯೇ ಇರತಕ್ಕದ್ದು.

ಪುನರ್ವಿಮರ್ಶೆ ಆದ ತರುವಾಯ ತಿದ್ದುಪಡಿಯು ಕಮ್ಮಿಷನರ್ಗಳ ಮೊಹರನಿಂದ ನಿಜಪಡಿಸತಕ್ಕದ್ದು.

75. ಸದರೀ ಅರ್ಜಿಗಳು ವಿಮರ್ಶಿಸಲ್ಪಟ್ಟ ಬಳಿಕಲೂ, ಅಂದಾಜ್ ಯಾ ಮೋಜಣೀ ಮತ್ತು ಕಟ್ಟಲ್ಪಟ್ಟ ತೆರಿಗೆ ಇವುಗಳನ್ನು ಪುನರ್ವಿಮರ್ಶೆ ಮಾಡೋಣ ಪೂರೈಸಿದ ಬಳಿಕಲೂ, ಸದರೀ ಪುಸ್ತಕದಲ್ಲಿ ಮಾಡೋಣಾದ ತಿದ್ದುಪಡಿ ಯಾವದಾದರೂ ಇದ್ದ ಪಕ್ಷಕ್ಕೆ ಅದು ಕಮ್ಮಿಷನರ್ಗಳ ಮೊಹರನಿಂದ ನಿಜಪಡಿಸಲ್ಪಡತಕ್ಕದ್ದು. ಮತ್ತು ಪ್ರೆಸಿಡೆಂಟರು ಆದರಲ್ಲಿ ಕಾಣಿಸಲ್ಪಟ್ಟ ರೀತಿಯಾಗಿ ತಿದ್ದುಪಡೀ ಮಾಡಲ್ಪಟ್ಟಿರುವ ಸಂಗತಿಯಲ್ಲಿ ವಿನಾ ಸದರೀ ಬುಕ್ಕಿನಲ್ಲಿ ದಾಖಲ್ಮಾಡಲ್ಪಟ್ಟ ಅಂದಾಜನ್ನು ಕುರಿತೂ ಕಟ್ಟಲ್ಪಟ್ಟ ತೆರಿಗೆಯನ್ನು ಕುರಿತೂ ಊರ್ಜಿತವಾದ ಆಕ್ಷೇಪಣೆ ಯಾವದೂ ವುಂಟಾಗಿರುವದಿಲ್ಲವೆಂದು ಸಹ ಬರೆದು ತಿಳಿಸತಕ್ಕದ್ದು, ಮತ್ತು ಆ ಮೇಲೆಯೂ, ಆ ತರುವಾಯ ಕ್ರಮ ಪ್ರಕಾರ ಮಾಡಲ್ಪಡುವಂತಾ ಬದಲಾವಣಿ ಮತ್ತು ತಿದ್ದುಪಡಿ ಇಂತಾವುಗಳಿಗೆ ವೊಳಪಟ್ಟು ಆ ಮೇರೆ ಕಟ್ಟಲ್ಪಟ್ಟ ರಿವಾಜು ಯಾವ ಸಂವತ್ಸರಕ್ಕೆ ಸದರೀ ತೆರಿಗೆ ಕಟ್ಟೋಣಾಯಿತೋ ಆ ಸಂವತ್ಸರದ ರಿವಾಜೆಂತ ಭಾವಿಸತಕ್ಕದ್ದು. ಮತ್ತು ಇಂತಾ ಕಾಲವನ್ನು ಯಾವ ಸಂವತ್ಸರದಲ್ಲಿ ಅಂತಾ ಪುನರ್ವಿಮರ್ಶೆ ಅಮಲ್ನಲ್ಲಿ ತರಲ್ಪಟ್ಟಿತೋ ಆ ಸಂವತ್ಸರದ ಷುರೂ ಲಾಗಾಯತ್ ಗಣಿಸತಕ್ಕದ್ದು.

ಕಟ್ಟೋಣಾದ ರಿವಾಜ್ ಒಂದು ಸಂವತ್ಸರದ ರಿವಾಜ್ ಯೆಂತ ಯೆಣಿಸಲ್ಪಡತಕ್ಕದ್ದು.

ಕಟ್ಟೋಣಾದ ತೆರಿಗೇ ಬದಲಾಯಿಸೋಣ ಯಾ ತಿದ್ದುಪಡೀ ಮಾಡೋಣ.

76. ಪರಂತು, ಪ್ರೆಸಿಡೆಂಟರು ಯಾವಾಗ್ಯೂ ಅಂಥಾ ನೋಟಿಸ ಜಾರೀಯಾದ ತಾರಿಖು ಲಾಗಾಯತು ಹದಿನೈದು ದಿನಗಳಿಗೆ ಕಡಮೆ ಯಿಲ್ಲದಂತೆ ಅಂಥಾ ತಿದ್ದುಪಡಿಮಾಡಬೇಕಾದ ದಿನವನ್ನು ಕುರಿತು ಸದರೀ ತಿದ್ದುಪಡೀ ಮಾಡುವದರಲ್ಲಿ ಸಂಬಂಧವುಳ್ಳಂತಾ ಮನುಷ್ಯನಿಗೆ ನೋಟೀಸ ಕೊಟ್ಟಬಳಿಕ, ಯಾವನ ಹೆಸರು ಮಧ್ಯೆ ಸೇರಿಸತಕ್ಕದ್ದೋ ಅಂಥಾ ಯಾವ ಮನುಷ್ಯನ ಹೆಸರನ್ನಾಗಲಿ, ರಿವಾಜ್ ಹಾಕಲಿಕ್ಕೆ ಗುರಿಯಾದ ಯಾವ ಸ್ವತ್ತನ್ನಾಗಲಿ ಮಧ್ಯೇ ಸೇರಿಸುವದರ ಮೂಲಕ, ಯಾವ ಮನುಷ್ಯನ ಹೆಸರನ್ನಾಗಲಿ, ರಿವಾಜಿಗೆ ಗುರಿಯಾಗದೆಯಿರುವ ಯಾವ ಸ್ವತ್ತನ್ನಾಗಲಿ, ತೆಗದು ಹಾಕುವದರ ದ್ವಾರಾ ; ಆಥವಾ ಬಗರೆ ನೋಟೀಸ್ ರಿವಾಜ್ ಮೊಬಲಗ್ ಕಮ್ಮಿ ಮಾಡುವದರ ದೆಶೆಯಿಂದ ಸದರೀ ಬುಕ್ಕನ್ನು ಯಾವಾಗಲಾದರೂ ತಿದ್ದುಪಡೀ ಮಾಡಬಹುದು. ಮತ್ತು ನೋಟೀಸ ಜರೂರಿರುವ ಸಂಗತಿಗಳಲ್ಲಿ ಯಾವದಾದರೂ ತಿದ್ದುಪಡಿ ಮಾಡಲ್ಪಟ್ಟಿದ್ದ ಪಕ್ಷಕ್ಕೆ, ಅದು ಸದರೀ ನೋಟೀಸ್ ಜಾರೀ ಮಾಡೋಣಾದ ಬಳಿಕ ಹದಿನೈದು ದಿನಗಳು ಕಳೆದ ಮೇಲೆ ಮಾಡಲ್ಪಟ್ಟಂತೆ ಯೆಣಿಸತಕ್ಕದ್ದು. ಮತ್ತು ಅಂಥಾ ತಿದ್ದು ಪಡಿಯಲ್ಲಿ ಸಂಬಂಧವುಳ್ಳಯಾವ ಮನುಷ್ಯನಾಗಲಿ ಅಂಥಾ ತಿದ್ದುಪಡಿ ಮಾಡುವ ಬಗ್ಯೆ ಸದರೀ ನೋಟೀಸಿನಲ್ಲಿ ಗೊತ್ತು ಮಾಡಲ್ಪಟ್ಟಿರುವ ದಿನಕ್ಕೆ ಮೂರು ದಿನಗಳಿಗೆ ಮುಂಚಿತವಾಗಿ ಕಮ್ಮಿಷನರ್ಗಳ ಆಫೀಸಿನಲ್ಲಿ ಕೊಡೋಣಾದ ಬರವಣಿಗೇ ಮೂಲಕವಾದ ಅರ್ಜಿಯು ದ್ವಾರಾ ಪ್ರೆಸಿಡೆಂಟರಿಗೆ ಅಪ್ಪೀಲ್ ಮಾಡಬಹುದು.

ಕಟ್ಟಲ್ಪಟ್ಟ ತೆರಿಗೇ ದಾಖಲ್ಮಾಡತಕ್ಕ ಹೊಸ ಬುಕ್ಕನ್ನು ಪ್ರತಿ ಸಂವತ್ಸರವೂ ತಯಾರ್ಮಾಡಬೇಕಾದ್ದಿಲ್ಲವು.

77. ಪ್ರತಿ ಸಂವತ್ಸರವೂ ವೊಂದು ಹೊಸ ಬುಕ್ಕನ್ನು ತಯಾರ್ಮಾಡುವದು ಜರೂರಾಗಿತಕ್ಕದ್ದಲ್ಲವು. ಆದರೆ ಕಮ್ಮಿಷನರ್ಗಳು, ಹಿಂದಿನ ಸಂವತ್ಸರಕ್ಕಾಗಿ ಬುಕ್ಕಿನಲ್ಲಿ ಅಡಗಿರತಕ್ಕ ಅಂದಾಜ್ ಯಾ ಮೋಜಣಿ ಮತ್ತು ಕಟ್ಟೋಣಾದ ತೆರಿಗೆ ಯಿಂಥಾದ್ದನ್ನು, ಕೆಲವು ವಿಶೇಷ ಸಂಗತಿಗಳಲ್ಲಿ ಜರೂರೆಂದು ಭಾವಿಸಲ್ಪಡುವಂತಾ ತಿದ್ದು ಪಡಿಗಳ ಸಹಿತವಾಗಿ ಮುಂದಿನ ಸಂವತ್ಸರದ ಅಂದಾಜ್ ಯಾ

ಮೋಜಣೀ ಮತ್ತು ಕಟ್ಟಲ್ಪಟ್ಟ ತೆರಿಗೆ ಇಂತಾದ್ದನ್ನಾಗಿ ಯೇರ್ಪಡಿಸಿ ಕೊಳ್ಳ ಬಹುದು. ಪರಂತು, ಯಾವಾಗ್ಯೂ

ನಿಬಂಧನೆ.

ಅಂಥಾ ಅಂದಾಜ್ ಯಾ ಮೋಜಣಿ ಮತ್ತು ಕಟ್ಟಲ್ಪಟ್ಟ ತೆರಿಗೆ ಯಿಂತಾದ್ದನ್ನು ಕುರಿತು, ಈ ಕಾನೂನಿನ 72 ನೇ ಸೆಕಷನಿನಲ್ಲಿ ವಿಧಿಸಲ್ಪಟ್ಟ ರೀತಿಯಾಗಿ ಬಹಿರಂಗವಾದ ನೋಟೀಸ ಕೊಡಲ್ಪಡತಕ್ಕದ್ದು. ಸದರೀ ಸೆಕ್ಷನ್ ಮತ್ತು ಅದರ ತರುವಾಯದ ನಾಲ್ಕು ಸೆಕ್ಷನ್‌ಗಳು ಯಿವುಗಳ ನಿಬಂಧನೆಗಳು, ಸದರೀ ಅಂದಾಜ್ ಯಾ ಮೋಜಣೀ ಮತ್ತು ಕಟ್ಟಲ್ಪಟ್ಟ ತೆರಿಗೆ ಯಿಂತಾವುಗಳಿಗೂ, ಅವುಗಳು ಯಾವ ಬುಕ್ಕು ಯಾ ಬುಕ್ಕುಗಳಲ್ಲಿ ಅಡಗಿರುತವೋ ಅವುಗಳಿಗೂ ಲಗಾವಾಗತಕ್ಕವು, ಮತ್ತು ಈ ಕಾನೂನಿನ 68 ನೇ ಸೆಕ್ಷನ್ ಅನುಸರಿಸಿ ಹೊಸ ಅಂದಾಜ್ ಯೇರ್ಪಡಿಸುವಂತೆ ಮ್ಯುನಿಸಿಪಲ್ ಕಮಿಷ್ನರ್ ಪ್ರೆಸಿಡೆಂಟರನ್ನು ಆಗಿಂದಾಗ್ಯೆ ನಿಯಮಿಸುವದು ಮೈಸೂರು ಶ್ರೀಮನ್ ಮಹಾರಾಜಾ ಸರ್ಕಾರದವರಿಗೆ ನ್ಯಾಯವಾಗಿರತಕ್ಕದ್ದು.

ಅಪ್ಪೀಲ್‌ಗಳು.

ಅಪ್ಪೀಲ್‌ಗಳ ವಿಚಾರಣೆ.

78. "ಈ ರೆಗ್ಯುಲೇಷನ್‌ಗಳ ಹಿಂದಿನ ನಿಬಂಧನೆಗಳನುಸರಿಸಿ ಕಮಿಷನರ್‌ಗಳಿಂದ ವಿಧಿಸಲ್ಪಟ್ಟ ಯಾ ತಗಾದೆ ಮಾಡಲ್ಪಟ್ಟ ಯಾವದಾದರೂ ರಿವಾಜ್, ತೆರಿಗೆ ಯಾ ತೀರ್ವೆ ಇವುಗಳ ವಿಷಯದಲ್ಲಿ ಬರುವ ಅಪ್ಪೀಲ್‌ಗಳು ಬೆಂಗಳೂರಿನ ಡಿಸ್ಟ್ರಿಕ್ಟ ಜಡ್ಜರವರಿಂದ ಕೇಳಲ್ಪಟ್ಟು ಮತ್ತು ಫೈಸಲ್ಮಾಡಲ್ಪಡತಕ್ಕವು, ಮತ್ತು ಅಂಥಾ ಅಪ್ಪೀಲ್‌ಗಳಲ್ಲಿ ಸದರೀ ಡಿಸ್ಟ್ರಿಕ್ಟ ಜಡ್ಜರವರ ಫೈಸಲ್‌ಗಳು ಆಖೈರಾದ್ದಾಗಿರತಕ್ಕದ್ದು. ಆದರೆ ರಿವಾಜ್ ಯಾ ತೆರಿಗೆ ಮೊಬಲಗು ಕಮಿಷನರ್‌ಗಳಲ್ಲಿ ಡಿಪಾಜಿಟ ಇಡಲ್ಪಟ್ಟ ಹೊರ್ತು ಅಂತಾ ಯಾವ ಅಪ್ಪೀಲ್‌ಗಳೂ ವಿಚಾರಣೆಯಾಗತಕ್ಕದ್ದಲ್ಲವು, ಮತ್ತು 68ನೇ ಸೆಕಷನನುಸರಿಸಿ ಕಮಿಷನರ್‌ಗಳಿಂದ ಕಟ್ಟಲ್ಪಟ್ಟ ತೀರ್ವೇ ಮೇಲೆ ಬರತಕ್ಕ ಯಾವ ಅಪ್ಪೀಲೂ ಇದರಲ್ಲಿ ಹಿಂದೆ ವಿಧಿಸಲ್ಪಟ್ಟ ರೀತಿಯಾಗಿ ಮುಂದಾಗಿ ಪ್ರೆಸಿಡೆಂಟರಲ್ಲಿ ಫಿರ್ಯಾದ್ ಮಾಡಲ್ಪಟ್ಟಿದ್ದ ಹೊರ್ತು ವಿಚಾರಣೆ ಆಗತಕ್ಕದ್ದಲ್ಲ. ಪರಂತು ಸದರೀ ಡಿಸ್ಟ್ರಿಕ್ಟ ಜಡ್ಜರವರು ಅವರು ಯುಕ್ತವೆಂದು ಭಾವಿಸುವ ಪಕ್ಷಕ್ಕೆ, ಈ ಕಾನೂನ್ ಅನುಸರಿಸಿ ಅವರಲ್ಲಿ ಅಪ್ಪಿಲ್ ಬರುವ ಯೆಲ್ಲಾ ಸಂಗತಿಗಳಲ್ಲಿಯೂ ಮೈಸೂರು ಚೀಫ್ ಜಡ್ಜರವರ ತೀರ್ಪಿನ ಬಗ್ಯೆ ಮೊಕದ್ದಮೆಯನ್ನು ಬರದು ಕಳುಹಿಸತಕ್ಕದ್ದು; ಅಂತಾ ತೀರ್ಪು ಕಾನೂನಿನ ಬಲವುಂಟಾಗಿ ಖರ್ಚುಗಳನ್ನು ಕಟ್ಟುವದಕ್ಕೆ ತಕ್ಕದ್ದಾಗಿರತಕ್ಕದ್ದು.

"ಹಾಗೆ ಬಂದು ಮೊಕದ್ದಮೆಯು ಚೀಫ್ ಜಡ್ಜರವರಿಗೆ ರಿಫರ್ ಮಾಡಲ್ಪಟ್ಟಾಗ ಅವರು ತಮಿಗೆ ಯುಕ್ತ ತೋರುವ ಆರ್ಡರನ್ನು ಅದರ ಮೇಲೆ ಮಾಡತಕ್ಕದ್ದು. ಚೀಫ್ ಜಡ್ಜರವರ ತೀರ್ಪಿನ ಬಂದು ನಕಲು ಅವರ ಸೈನ್ ಮೊಹರನಿಶೀ ಡಿಸ್ಟ್ರಿಕ್ಟ ಜಡ್ಜರವರಿಗೆ ಕಳುಹಿಸಲ್ಪಡತಕ್ಕದ್ದು, ಅವರು ಸದರೀ ತೀರ್ಪಿಗೆ ಅನುಗುಣವಾಗಿ ಮೊಕದ್ದಮೆಯನ್ನು ವ್ಯವಸ್ಥೆ ಮಾಡತಕ್ಕದ್ದು, ಮತ್ತು ಅಪ್ಪೀಲ್ ವ ರಿಫರ ಮಾಡಿದ್ದರ ಖರ್ಚುಗಳು ಫಲಾನೆಯವರು ಕೊಡತಕ್ಕದ್ದೆಂತ ನಿಯಮಿಸುವದಕ್ಕೂ ಅವರಿಗೆ ಅಧಿಕಾರ ವುಂಟಾಗಿರತಕ್ಕದ್ದು."

ಅಪ್ಪೀಲ್ ಮಾಡುವಕಾಲ.

79. ಅಂತಾ ಪ್ರತಿ ಅಪ್ಪೀಲೂ, ಫಿರ್ಯಾದ್‌ಕಾರಣ ಹುಟ್ಟಿದ ತಾರೀಖು ತರುವಾಯ ಮುವ್ವತ್ತು ದಿನಗಳೊಳಗಾಗಿ ಆರಂಭಿಸಲ್ಪಡತಕ್ಕದ್ದು. ಯಾವದಾದರೂ ರಿವಾಜನ್ನು ಕುರಿತ ಸದರೀ ಫಿರ್ಯಾದ್ ಕಾರಣವು ತೆರಿಗೇ ಕಟ್ಟುವ ಬುಕ್ಕಿನಲ್ಲಿ ಪ್ರೆಸಿಡೆಂಟರ ಸರಟಿಫಿಕೇಟ ತಾರೀಖಿನಲ್ಲಾಗಲಿ 73ನೇ ಸೆಕ್ಷನ್ ನಿಬಂಧನೆಗಳನ್ನನುಸರಿಸಿ ಸದರೀ ಬುಕ್ಕಿನಲ್ಲಿ ಈಚಿಗೆ ನಡೆದ ಯಾವದಾದರೂ ತಿದ್ದುಪಡಿಯ ಸಂಗತಿಯಲ್ಲಿ ನುಕ್ಸಾನ್ ಪಟ್ಟ ಮನುಷ್ಯನಿಗೆ ಅಂತಾತಿದ್ದುಪಡಿಯನ್ನು ಕುರಿತ ನೋಟೀಸ್ ತಲಪಿದ ಮೇಲಾಗಲಿ ಉಂಟಾಗುತ್ತೆಂತ ಯೆಣಿಸತಕ್ಕದ್ದು. ಮತ್ತು ಯಾವದಾದರೂ ತೆರಿಗೆಯೂ ತೀರ್ವೆಯ ವಿಷಯದಲ್ಲಿ ಯಾವ ತಾರೀಖಿನಲ್ಲಿ ಅಂತಾ ತೆರಿಗೆ ನಿಷ್ಕರ್ಷೆ ಮಾಡಲ್ಪಟ್ಟಿರುತ್ತೋ ಅಥವಾ ಅಂತಾ ತೀರ್ವೆ ಕೇಳಲ್ಪಟ್ಟಿರುತ್ತೋ ಆ ತಾರೀಖು ಲಾಗಾಯತ್ ಫಿರ್ಯಾದು ಕಾರಣ ವುಂಟಾಗಿರುವಂತೆ ಯೆಣಿಸತಕ್ಕದ್ದು.

ಕಮಿಷನರ್‌ಗಳಿಂದ ಕಟ್ಟಲ್ಪಟ್ಟ ತೆರಿಗೆ ಯಾವಾಗ ಆಖೈರಾದ್ದಾಗಿರತಕ್ಕದ್ದು.

80. ಇದರಲ್ಲಿ ಹಿಂದೆ ವಿಧಿಸಲ್ಪಟ್ಟ ರೀತಿಯಾಗಿ ಕಮಿಷನರ್‌ಗಳಿಂದ ಕಟ್ಟಲ್ಪಟ್ಟ ಯಾವದಾದರೂ ರಿವಾಜ್ ಯಾ ತೆರಿಗೆಯ ಮೇಲೆ ಅಪ್ಪೀಲ್ ಬಾರದೇ ಯಿದ್ದರೆ ಅದೂ, ಮತ್ತು ಯಿದರ ಹಿಂದಿನ ಮೂರು ಸೆಕ್ಷನ್‌ಗಳನುಸರಿಸಿ ಯಾವದಾದರೂ ಅಪ್ಪೀಲಿನ ವ್ಯವಸ್ಥೆಯೂ, ಆಖೈರಾದ್ದಾಗಿಯೂ ನಿಷ್ಕೃಷ್ಟವಾಗಿಯೂ ಯಿರತಕ್ಕದ್ದು.

ಮ್ಯುನಿಸಿಪಲ್ ಕಮ್ಮಿಷನರಗಳ ಮೇಲೆ ಅಧಿಕಾರ ಸಲ್ಲಿಸುವದಕ್ಕೆ ಗವರ್ನಮೆಂಟಿನವರಿಗೆ ಅಧಿಕಾರ.

ಸಾಕಾದಷ್ಟು ದ್ರವ್ಯ ಜಮಾಯಿಸುವದಕ್ಕೆ ತಪ್ಪಿದ ಸಂಗತಿಯಲ್ಲಿ ಈ ಕಾನೂ ಅನುಸರಿಸಿ ವಿಧಿಸಲ್ಪಟ್ಟ ತೆರಿಗೇ ವಗೈರೇ ಪೈಕಿ ವಿಶೇಷ್ಯವನ್ನಾಗಲಿ ಯಾವದನ್ನಾಗಲಿ ವಸೂಲ್ಮಾಡುವಂತೆ ಗವರ್ನಮೆಂಟಿನವರು ನಿಯಮಿಸಬಹುದು.

81. ಈ ಕಾನೂನಿನ ಕಾರ್ಯಗಳನ್ನು ನೆರವೇರಿಸುವ ಬಗ್ಯೆ ಸಾಕಾದಷ್ಟು ದ್ರವ್ಯವನ್ನು ಜಮಾಯಿಸುವದಕ್ಕೆ ಮ್ಯುನಿಸಿಪಲ್ ಕಮ್ಮಿಷನರಗಳು ತಪ್ಪಿದಂತೆ ಮೈಸೂರು ಶ್ರೀಮನ್ಮಹಾರಾಜಾ ಸರಕಾರದವರಿಗೆ ಯಾವಾಗಲಾಗಲಿ ಕಾಣಬಂದರೆ, ಈ ಕಾನೂ ಅನುಸರಿಸಿ ಮೊಕರರ್ಮಾಡೋಣಾದ ತೆರಿಗೆಗಳು, ರಿವಾಜ್‌ಗಳು, ರುಸುಂಗಳು, ತೀರ್ವೆಗಳು ಇಂಥಾವುಗಳಲ್ಲಿ, ಯೆಲ್ಲವನ್ನಾಗಲಿ ಯಾವದನ್ನಾಗಲಿ ವಸೂಲ್ಮಾಡುವಂತೆ ಮ್ಯುನಿಸಿಪಲ್ ಕಮ್ಮಿಷನ್ ಪ್ರೆಸಿಡೆಂಟರನ್ನು ನಿಯಮಿಸುವದು, ಮತ್ತು ಈ ಕಾನೂ ಅನುಸರಿಸಿ ತೆರತಕ್ಕ ದರೋಬಸ್ತು ತೆರಿಗೆ, ರಿವಾಜ್, ತೀರ್ವೇ ವ ರುಸುಂಗಳು ಯಿಂತಾವುಗಳ ಬಾಬತು ಬಾಕಿಯನ್ನು ಪಾವತೀ ಮಾಡುವಂತೆ ಮಾಡುವದು ಮಹಾರಾಜಾ ಸರ್ಕಾರದವರಿಗೆ ನ್ಯಾಯ ವಾಗಿರತಕ್ಕದ್ದು ಮತ್ತು ಅಂಥಾ ಪ್ರತಿ ಹುಕುಂ ಮೇರೆ ನಡಿಯುವದು ಪ್ರೆಸಿಡೆಂಟರ ಕಾರ್ಯವಾಗಿರತಕ್ಕದ್ದು.

ರಿವಾಜ್ ಯಾ ತೆರಿಗೆಗಳ ವಸೂಲಾತಿ.

ಬಿಲ್ಲುಗಳು ಹಾಜರ್ಮಾಡಲ್ಪಡತಕ್ಕದ್ದು.

82. ಯಾವದಾದರು ರಿವಾಜ್ ಶಿಸ್ತು ಯಾ ತೆರಿಗೆ ಬಾಕಿ ಯಿದ್ದಲ್ಲಿ ಪ್ರೆಸಿಡೆಂಟರು 83ರ ಲಾಗಾಯತು 87ರ ವರಿಗೆ ಸದರೀ ಎರಡೂವಳತವಾಗಿರುವ ಸೆಕ್ಷನ್‌ಗಳ ನಿಬಂಧನೆಗಳನ್ನು ಅಮಲ್‌ನಲ್ಲಿ ತರುವದಕ್ಕೆ ಪೂರ್ವ ಸದರೀ ಬಾಕಿಯನ್ನು ಕೊಡಲಿಕ್ಕೆ ಗುರಿಯಾದ ಮನುಷ್ಯನು ಬಾಕೀಯಾಗುವ ಮೊಬಲಗಿನ ಬಗ್ಯೆ ಅವನಿಗೆ ಒಂದು ಬಿಲ್ಲನ್ನು ಕೊಡಿಸತಕ್ಕದ್ದು. ಅಂತಾ ಬಿಲ್ಲಿನಲ್ಲಿ ಯಾವ ಬಗ್ಯೆ ಸದರೀ ರಿವಾಜು, ಶಿಸ್ತು ಯಾ ತೆರಿಗೆ ಹಾಕೋಣಾಗುತ್ತೋ ಅಂತಾ ಸ್ವತ್ತಿನ ಯಾ ವಸ್ತುವಿನ ವಿವರ ಯೆಷ್ಟರ ಕಾಲಕ್ಕೆ ಶಿಸ್ತು ಕಟ್ಟೋಣಾಗುತ್ತೋ ಆ ಕಾಲ ಮತ್ತು ತೆರಿಗೆ ಕೊಡದೇ ತಪ್ಪಿಹೋದ್ದಕ್ಕಾಗಿ ತೆರಬೇಕಾಗುವ ಮೊಬಲಗನ್ನು ಕುರಿತು ಒಂದು ನೋಟೀಸ್ ಸಹ ಅಡಗಿರತಕ್ಕದ್ದು.

ತಗಾದಾ ನೋಟಿಸ.

83. ಸದರೀ ಬಿಲ್ಲು ಕೊಡೋಣಾದ ಏಳು ದಿನಗಳೊಳಗಾಗಿ, ಸದರೀ ಬಾಕೀ ತೆರಬೇಕಾದ ಮನುಷ್ಯನಿಂದ ಬಿಲ್ಲಿನ ಮೊಬಲಗ್ ಪಾವತೀ ಯಾಗದೇ ಹೋದ ಪಕ್ಷಕ್ಕೆ ಪ್ರೆಸಿಡೆಂಟರು ಈ ಕಾನೂನಿಗೆ ಸೇರಿಸೋಣಾದ D ಗುರ್ತು ಷೆಡ್ಯೂಲ್‌ನಲ್ಲಿ ಕಂಡ ನಮೂನೆ ಮೇರೆಯಾಗಲಿ ಸದರೀ ಅರ್ಥ ಆಗುವಂತೆಯಾಗಲಿ ಒಂದು ತಗಾದೆ ನೋಟೀಸ ಸದರೀ ಮನುಷ್ಯನ ಮೇಲೆ ಜಾರೀ ಮಾಡಿಸಬಹುದು, ಅಂಥಾ ತಗಾದಾ ನೋಟೀಸ್ ತಲಪಿದ ಏಳು ದಿನಗಳೊಳಗಾಗಿ ತಾನು ತೆರಬೇಕಾದ ಮೊಬಲಗು ಪಾವತೀ ಮಾಡದೇ ಹೋದಲ್ಲಿ ಅಥವಾ ಹಾಗೆ ಪಾವತೀ ಮಾಡದೇ ಇರುವದಕ್ಕೆ ಪ್ರೆಸಿಡೆಂಟರಿಗೆ ತೃಪ್ತಿಕರವಾದ ಕಾರಣವನ್ನು ತೋರಿಸದೇ ಹೋದರೆ ಅಂಥಾ ಮೊಬಲಗನ್ನು ನಿಶ್ಚಿತ ಖರ್ಚುಗಳು ಸಹಿತವಾಗಿ

ಜಫ್ತಿ.

ಹಾಗೆ ತಪ್ಪಿ ಹೋದಂಥಾವನ ಸಾಮಾನುಗಳು, ಪಾತ್ರೆ ಪದಾರ್ಥಗಳು ಇವುಗಳನ್ನು ಜಫ್ತಿಯಿಂದ ವಿಕ್ರಯಿಸುವದರ ಮೂಲಕ ಅಥವಾ ಸದರೀ ಮೊಬಲಗ್ ಕೊಡಲಿಕ್ಕೆ ತಪ್ಪಿದವನು, ಯಾವದರ ವಿಷಯವಾಗಿ ರಿವಾಜ್ ಯಾ ಶಿಸ್ತು ಯಾ ತೆರಿಗೆ ಬಾಕೀಯಾಗುತ್ತಾನೋ ಅಂತಾ ಮನೆಯ ಯಾ ಕಟ್ಟಡ ಯಾ ಜಮೀನಿನ ಅನುಭವದಾರನಾಗಿದ್ದ ಪಕ್ಷಕ್ಕೆ ಈ ಕಾನೂನಿಗೆ ಸೇರಿಸೋಣಾದ E ಗುರ್ತು ಷೆಡ್ಯೂಲ್‌ನಲ್ಲಿ ಅಡಗಿರುವ ನಮೂನೆ ಪ್ರಕಾರ ಪ್ರೆಸಿಡೆಂಟರಿಂದ ಸದರೀ ಬಗ್ಯೆ ಕೊಡೋಣಾಗುವ ವಾರಂಟ ಅನುಸರಿಸಿ ಅಥವಾ ಅಂಥಾ ಅರ್ಥ ಆಗುವಂತೆ ಸದರೀ ವಠಾರದಲ್ಲಿ ಸಿಕ್ಕುವ ಯಾವದಾದರೂ ಸಾಮಾನುಗಳು ಪಾತ್ರೆ ಪದಾರ್ಥಗಳು ಇವುಗಳನ್ನು ಜಫ್ತು ಮಾಡುವದರ ವ ವಿಕ್ರಯಿಸುವದರ ಮೂಲಕ ವಸೂಲ್ಮಾಡಬಹುದು, ಪ್ರೆಸಿಡೆಂಟರು ಈ ಸೆಕ್ಷನ್ ಅನುಸರಿಸಿ ಯಾವ ಮನುಷ್ಯನ ಮೇಲಾಗಲಿ ಜಾರೀ ಮಾಡಿಸುವ ಪ್ರತಿ ತಗಾದೇ ನೋಟೀಸಿಗೂ ಅಂತಾ ಮನುಷ್ಯನು ಒಂದು ರೂಪಾಯಿಗೆ ಮೀರದೇ ಒಂದು ರುಸುಂ ಕೊಡಬೇಕು. ಅಂಥಾ ರುಸುಂ ಮೊಬಲಗು ಪ್ರತಿ ಸಂಗತಿಯಲ್ಲಿಯೂ ಪ್ರೆಸಿಡೆಂಟರಿಂದ ಗೊತ್ತು ಮಾಡಲ್ಪಡತಕ್ಕದ್ದು. ಅಂಥಾ ರುಸುಮು, ಯಾವದರ ಬಗ್ಯೆ ನೋಟೀಸ ಕೊಡೋಣಾಗುತ್ತೋ ಆ ಬಾಬತು ರಿವಾಜ ಯಾ ಶಿಸ್ತು ಮೊಬಲಗಿಗೆ ಸೇರಿಸಲ್ಪಟ್ಟು ಕ್ರಮ ಪ್ರಕಾರ ಪಾವತೀ ಮಾಡದೇ ಹೋದಲ್ಲಿ ಅಂಥಾ ರಿವಾಜ್ ಯಾ ಶಿಸ್ತು ಯಾ ತೀರ್ವೆ ಯಾವ ಮೇರೆ ವಸೂಲ್ಮಾಡಲ್ಪಡುತ್ತೋ ಅದೇ ಮೇರೆ ವಸೂಲ್ಮಾಡಲ್ಪಡತಕ್ಕದ್ದು.

ಜಪ್ತೀ ಸಾಮಾನುಗಳಪಟ್ಟಿ ಜಪ್ತೀ ನೋಟೀಸು.

84. ಇದರ ಹಿಂದಿನ ಕಡೇ ಸೆಕ್ಷನ್ ಅನುಸರಿಸಿ ಸಾದರಾದ ಜಪ್ತೀ ವಾರಂಟ್ ಜಾರೀ ಮಾಡುವ ಕೆಲಸ ನೋಡುತ್ತಿರುವ ಆಫೀಸರ್ ಅಂಥಾ ಯಾವ ವಾರಂಟ್ ಅನುಸರಿಸಿ ಯಾಗಲಿ ಜಪ್ತೀ ಮಾಡಲ್ಪಟ್ಟ ಸಾಮಾನುಗಳು ಪಾತ್ರೆ ಪದಾರ್ಥಗಳು ಇಂತಾವುಗಳ ಬಾಬತು ಒಂದು ಪಟ್ಟೀ ತಯಾರ್ಮಾಡಿಸಿ, ಈ ಕಾನೂನಿಗೆ ಸೇರಿಸೋಣಾದ F ಗುರ್ತಿನ ಷೆಡ್ಯೂಲ್‌ನಲ್ಲಿ ಅಡಗಿರುವ ನಮೂನೇ ಮೇರೆ ಬರವಣಿಗೆಯಲ್ಲಿ ಸದರೀ ಸಾಮಾನುಗಳೂ ಪಾತ್ರೆ ಪದಾರ್ಥಗಳೂ ಸಹ ಇದರಲ್ಲಿ ಕಂಡ ಪ್ರಕಾರ ವಿಕ್ರಯಿಸಲ್ಪಡುವದೆಂತ, ಜಪ್ತೀ ಮಾಡುವ ಕಾಲದಲ್ಲಿ ಸದರೀ ಸಾಮಾನ್ ವಗೈರೇ ತನ್ನ ವಶದಲ್ಲಿಟ್ಟುಕೊಂಡಿರುವ ಮನುಷ್ಯನಿಗೆ ಒಂದು ನೋಟೀಸ್ ಕೊಡತಕ್ಕದ್ದು.

ವಿಕ್ರಯ.

85. ಇಷ್ಟರಲ್ಲಿ ಸದರೀ ವಾರಂಟಿಗೆ ಮೊಬಲಗ್ ಪಾವತೀ ಮಾಡಲ್ಪಡದೇ ಹೋದ ಪಕ್ಷಕ್ಕೆ, ಅಥವಾ ಪ್ರೆಸಿಡೆಂಟರಿಂದ ನಿಲ್ಲಿಸಿ ಇಡಲ್ಪಡದ ಪಕ್ಷಕ್ಕೆ ಜಪ್ತೀ ಮಾಡಲ್ಪಟ್ಟ ಸಾಮಾನುಗಳೂ, ಪಾತ್ರೆ ಪದಾರ್ಥಗಳೂ ಪ್ರೆಸಿಡೆಂಟರ ಅಪ್ಪಣೇ ಮೇರೆ ವಿಕ್ರಯಿಸಲ್ಪಟ್ಟು ಅದರಲ್ಲಿ ಹುಟ್ಟುವಳಿಯಾದ್ದನ್ನಾಗಲಿ, ಆ ಪೈಕಿ ಜರೂರಾದಷ್ಟು ಮಟ್ಟಿಗಾಗಲಿ ಸದರೀ ಬಾಕಿ ಮತ್ತು ಖರ್ಚು ಇವುಗಳನ್ನು ಫೈಸಲ್ಮಾಡುವ ಬಗ್ಗೆ ವಿನಿಯೋಗಿಸತಕ್ಕದ್ದು. ಮತ್ತು ಉಳಿಕೆ ಯೇನಾದರೂ ಇದ್ದಲ್ಲಿ, ಜಪ್ತೀ ಕಾಲದೊಳಗೆ ಸಾಮಾನುಗಳು ಪಾತ್ರೆ ಪದಾರ್ಥಗಳು ಸ್ವಾಧೀನದಲ್ಲಿಯುಳ್ಳ ಮನುಷ್ಯನಿಗೆ, ಹರಾಜ್ ತಾರೀಖ್ ಲಾಗಾಯತ್ ಆರು ತಿಂಗಳ ಕಾಲದೊಳಗಾಗಿ ಕೇಳಿದಲ್ಲಿ ವಾಪಸ ಕೊಡತಕ್ಕದ್ದೇ ಶಿವಾಯಿ ಅನ್ಯಥಾ ಕೂಡದು.

ರುಸುಂವಳು.

G ಗುರ್ತಿನ ಷೆಡ್ಯೂಲಿನಲ್ಲಿ ಇರುವ ರುಸುಂ ಪಟ್ಟಿಯಲ್ಲಿ ಕಂಡ ರಿವಾಜ್ ಪ್ರಕಾರ, ಈ ಕಾನೂನ್ ಅನುಸರಿಸಿ ಮಾಡಲ್ಪಟ್ಟ ಜಪ್ತಿಗಳ ಮೇಲೆ ರುಸುಂಗಳು ಸಲ್ಲಿಸಲ್ಪಡತಕ್ಕದ್ದು.

ತಾನು ಕೊಡಬೇಕಾದ ಮೊಬಲಗ್ ಕೊಡಲಿಕ್ಕೆ ತಪ್ಪಿದ ಮನುಷ್ಯನ ಸಾಮಾನುಗಳು ಯಲ್ಲಿ ಕಾಣಬಂದಾಗ್ಯೂ ಜಪ್ತಿ ಮಾಡಬಹುದು.

86. ಯಾವದಾದರೂ ರಿವಾಜ್, ಶಿಸ್ತು ಯಾ ತೆರಿಗೆ ಕೊಡಬೇಕಾಗಿರುವ ಯಾವ ಮನುಷ್ಯನದಾಗಲಿ ಸಾಮಾನುಗಳೂ ಪಾತ್ರೆ ಪದಾರ್ಥಗಳೂ ಯೆಲ್ಲಿ ಕಾಣಬಂದಾಗ್ಯೂ ಅಂತಾ ಮನುಷ್ಯನು ಕೊಡಬೇಕಾದ ಹಣ ಕೊಡದೇ ತಪ್ಪಿದ್ದಕ್ಕೋಸ್ಕರ ಜಪ್ತು ಮಾಡಲ್ಪಡಬಹುದು.

ಮಾಲೀಕನಿಂದ ಬರತಕ್ಕ ರಿವಾಜನ್ನು ಅನುಭವದಾರನಿಂದ ವಸೂಲ್ ಮಾಡಿಕೊಳ್ಳಲ್ಪಟ್ಟು ಸದರೀ ಅನುಭವದಾರನು ತನ್ನ ಬಾಡಿಗೆಯಲ್ಲಿ ವಜಾ ಮಾಡಿಕೊಳ್ಳಬಹುದು.

87. ಯಾವದಾದರೂ ರಿವಾಜ್, ಶಿಸ್ತು, ಯಾ ತೆರಿಗೆ ಇಂತಾದ್ದನ್ನು ಕುರಿತು ಯಾವ ಮನೆ ಕಟ್ಟು ಯಾ ಜಮೀನು ಒಗ್ಯಾಗಲಿ ಅದರ ಮಾಲೀಕನಿಂದ ಬರಬೇಕಾದ ಮೊಬಲಗು, ತಗಾದಾ ನೋಟೀಸ್ ಕ್ರಮವಾಗಿ ಜಾರೀಯಾದ ಬಳಿಕ ಸಂದಾಯವಾಗದೇ ಬಾಕೀ ನಿಂತ ಪಕ್ಷಕ್ಕೆ ಪ್ರೆಸಿಡೆಂಟರು ಅಂತಾ ಮನೆ ಕಟ್ಟು ಯಾ ಜಮೀನು ಇಂತಾದ್ದರ ಬಾಬತು ಅನುಭವದಾರನನ್ನು ಕೇಳಬಹುದು, ಮತ್ತು ಅವನು ಅದನ್ನು ಸಲ್ಲಿಸದೇ ಇದ್ದ ಪಕ್ಷಕ್ಕೆ ಸದರೀ ಮಠಾರದಲ್ಲಿ ಕಾಣಬರುವ ಯಾವ ಚರಜಿಂದಗಿಯನ್ನಾಗಲಿ ಜಪ್ತೀಯಿಂದ ಹರಾಜ್ ಮಾಡಿಸಿ ವಸೂಲ್ ಮಾಡಬಹುದು. ಅಂತಾ ಸಂಗತಿಯಲ್ಲಿ ಸದರೀ ಅನುಭವದಾರನು ತನ್ನಿಂದ ಆ ಮೇರೆ ಪಾವತೀ ಮಾಡಲ್ಪಟ್ಟ ಅಥವಾ ತನ್ನ ದೆಶೆಯಿಂದ ವಸೂಲ್ ಮಾಡಲ್ಪಟ್ಟ ಮೊಬಲಗನ್ನು ಆ ತರುವಾಯ ಕೂಡಲೇ ತಾನು ಕೊಡಬೇಕಾದ ಬಾಡಿಗೆಯಿಂದ ವಜಾ ಮಾಡಿಕೊಳ್ಳಬಹುದು, ಪರಂತು ಯಾವದಾದರೂ ಮನೆ, ಕಟ್ಟು ಯಾ ಜಮೀನು ಇಂತಾದ್ದರ ಮಾಲೀಕನ ದೆಶೆಯಿಂದ ಒಂದು ಸಂವತ್ಸರಕ್ಕಿಂತ ಜಾಸ್ತೀಕಾಲದ ಬಾಬತು ಬರಬೇಕಾದ ಯಾವದಾದರೂ ರಿವಾಜ್, ಶಿಸ್ತು, ಯಾ ತೆರಿಗೇ ಇಂತಾದ್ದರ ಬಾಕೀಯು ಸದರೀ ಮನೆ ಮುಂತಾದ್ದರ ಅನುಭವದಾರನಿಂದ ಆ ಮೇರೆ ವಸೂಲ್ಮಾಡಲ್ಪಡತಕ್ಕದ್ದಲ್ಲವು.

ಕ್ರಮ ಲೋಪವಾದ್ದರಿಂದ ಜಪ್ತಿಯು ಅಕ್ರಮವಾದ್ದಾಗತಕ್ಕದ್ದಲ್ಲವು.

88. ಈ ಕಾನೂನಿನ ಬಲವನ್ನು ಅವಲಂಬಿಸಿ ಮಾಡಲ್ಪಟ್ಟ ಯಾವ ಜಪ್ತಿಯೂ, ನೋಟೀಸ್ ಪಟ್ಟಿ ಸಮ್ಮನು, ತಗಾದಾ ನೋಟೀಸ್ ಜಪ್ತಿ ವಾರಂಟ್, ಸಾಮಾನುಪಟ್ಟಿ ಅಥವಾ ಅವುಗಳಿಗೆ ಸಂಬಂಧಪಟ್ಟ ಇತರ ನಡವಳಿಕೆ ಇಂತಾದ್ದರಲ್ಲಿ ನಮೂನೆಯ ಯಾವದಾದರೂ ನ್ಯೂನತೆ ಯಾ ಲೋಪಕ್ಕೋಸ್ಕರ ಅಕ್ರಮವಾದ್ದೆಂತ ಯೆಣಿಸಲ್ಪಡತಕ್ಕದ್ದಲ್ಲವು ; ಇದಲ್ಲದೆ ಅಂತಾ ಮನುಷ್ಯನು ಆ ತರುವಾಯ ತನ್ನಿಂದ ನಡಿಸಲ್ಪಟ್ಟ ಯಾವದಾದರೂ ಅಕ್ರಮನ್ನು ಕುರಿತು ಮೊದಲಿನಿಂದಲೂ ಅತಿಕ್ರಮವಾಗಿ ಪ್ರವೇಶಿಸಿದವನೆಂತ ಯೆಣಿಸಲ್ಪಡತಕ್ಕದ್ದಲ್ಲವು.

ಆವರೆ ಅಂತಾ ಅತಿಕ್ರಮದ ದೆಸೆಯಿಂದ ಅನ್ಯಾಯವನ್ನು ಹೊಂದಿದ ದರೋಬಸ್ತು ಮನುಷ್ಯರೂ ಯುಕ್ತವಾದ ಅಧಿಕಾರವುಳ್ಳ ಯಾವ ಕೋರ್ಟಿನಲ್ಲಿಯಾಗಲಿ ತಾವು ಹೊಂದಿದ ಯಾವದಾದರೂ ವಿಶೇಷ ನಷ್ಟವನ್ನು ಕುರಿತು ಪೂರಾ ನಷ್ಟದ್ರವ್ಯ ವಸೂಲ್ಮಾಡಿಕೊಳ್ಳಬಹುದು.

ಜಪ್ತೀದ್ವಾರ ನಡವಳಿತ ನಡಿಸುವದಕ್ಕೆ ಬದಲಾಗಿ ಕಮ್ಮಿಷನರಗಳು ದಾವಾ ತರಬಹುದು.

89. ಜಪ್ತಿಯಿಂದಲೂ, ವಿಕ್ರಯದಿಂದಲೂ, ನಡವಳತ ನಡಿಸಲಿಕ್ಕೆ ಬದಲಾಗಿ, ಅಥವಾ ಯಾವದಾದರೂ ರಿವಾಜು, ಶಿಸ್ತು ಯಾ ತೆರಿಗೆ, ಯಿಂತಾದ್ದರ ಬಾಬತು ಬಾಕೀ ಮೊಬಗ್ ವಿಶಿಷ್ಟವನ್ನಾಗಲಿ ಕೆಲವು ಭಾಗವನ್ನಾಗಲಿ ಜಪ್ತಿಯಿಂದ ವಸೂಲ್ಮಾಡುವದಕ್ಕೆ ತಪ್ಪಿ ಹೋದ ಸಂಗತಿಯಲ್ಲಿ ಕಮ್ಮಿಷನರಗಳು ಸದರೀ ಮೊಬಲಗ್ ಕೊಡಲಿಕ್ಕೆ ಗುರಿಯಾದ ಮನುಷ್ಯನ ಮೇಲೆ ಯುಕ್ತವಾದ ಅಧಿಕಾರವುಳ್ಳ ಯಾವ ಕೋರ್ಟಿನಲ್ಲಾಗಲಿ ದಾವಾ ಮಾಡಬಹುದು.

ಈ ಕಾನೂನಿನ ಹುಕುಂಗಳ ಸಾರಾಂಶವನ್ನು ಅವಲಂಬಿಸಿ ಅಮಲ್ ನಡಿಸಲ್ಪಟ್ಟದ್ದರ ಪಕ್ಷಕ್ಕೆ ಕಟ್ಟೋಣಾದ ತೆರಿಗೆ ಆಕ್ಷೇಪಣಾರ್ಹವಾಗತಕ್ಕದ್ದು.

90. ಈ ಕಾನೂನಿಯಿಂದ ಉಂಟು ಮಾಡೋಣಾದ ಅಧಿಕಾರವನ್ನು ಅನುಸರಿಸಿ ರಿವಾಜ್, ಶಿಸ್ತು ಯಾ ತೆರಿಗೆ ಯಿಂತಾದ್ದನ್ನು ಕಟ್ಟೋಣ, ಖರ್ಚು ಹಾಕೋಣ ಅಥವಾ ಕೇಳೋಣ ಯಿಂತಾದ್ದು ಈ ಕಾನೂನಿನ ಹುಕುಂಗಳ ಸಾರಾಂಶವೂ ಪ್ರಯೋಜನವೂ, ಕ್ರಮವಾಗಿ ನಡಿಸಲ್ಪಟ್ಟ ಪಕ್ಷಕ್ಕೆ, ರಿವಾಜ್, ಶಿಸ್ತು ಯಾ ತೆರಿಗೆ ಯಿಂತಾದ್ದನ್ನು ಕೊಡಲಿಕ್ಕೆ ಗುರಿಯಾದ ಯಾವ ಮನುಷ್ಯನ ಹೆಸರಿನಲ್ಲಾಗಲಿ, ರಿವಾಜ್, ಶಿಸ್ತು ಯಾ ತೆರಿಗೆ ಯಿಂತಾದ್ದಕ್ಕೆ ಗುರಿಯಾದ ಯಾವದಾದರೂ ಸ್ವತ್ತಿನ ಯಾ ವಸ್ತುವಿನ ತಪಶೀಲ್ ವಿಷಯದಲ್ಲಿಯಾಗಲಿ ಯಾವದಾದರೂ ಗಲ್ಲತ್ ಅಥವಾ ಕಟ್ಟೋಣಾದ ತೆರಿಗೇ ಮೊಬಲಗಿನಲ್ಲಿ ಯಾವನಾದರೂ ಗಲ್ಲತ್ ಯಿಂತಾದ್ದಕ್ಕೋಸ್ಕರ ಆಕ್ಷೇಪಣಾರ್ಹವಾಗತಕ್ಕದ್ದಲ್ಲವು, ಅಥವಾ ಭಾಧಕ ವುಂಟುಮಾಡಲ್ಪಡತಕ್ಕದ್ದಲ್ಲವು ಮತ್ತು ಈ ಕಾನೂನು ಅನುಸರಿಸಿ ನಡಿಸೋಣಾದ ಯಾವ ನಡವಳಿತವಾಗಲಿ ನಮೂನೆಯಲ್ಲಿ ವುಂಟಾದ ಲೋಪಕ್ಕೋಸ್ಕರ ಯಾವ ಕೋರ್ಟಾಫ್ ಜಸ್ಟಿಸ್ ಯೆಂಬ ಕೋರ್ಟಿನಲ್ಲಿಯೂ ರದ್ದು ಮಾಡಲ್ಪಡತಕ್ಕದ್ದಲ್ಲವು.

ಸ್ಥಿರವಾದ ಕಾಮಗಾರೀಗಳ ಬಗ್ಯೆ ಹಣ ಜಮಾಯಿಸೋಣ.

ರಿವಾಜ್ ಮೊಬಲಗ್ ಅಡಮಾನ ಇಡುವದು.

91. ಕಲಂ. 1. ಈ ಕಾನೂನು ನಿಬಂಧನೆಗಳನುಸರಿಸಿ ಮಾಡಲ್ಪಡತಕ್ಕ ಸ್ಥಿರವಾದ ಬಾಬತು ಕಾಮಗಾರೀಗಳನ್ನು ಮಾಡುವಬಗ್ಯೆ, ಕಮ್ಮಿಷನರಗಳು ಮೈಸೂರು ಗವರ್ನಮೆಂಟಿನವರ ಮಂಜೂರಾತೀನಿಶೀ ಮ್ಯುನಿಸಿಪಲ್ ಫಂಡಿನ ವಿಷಯದಲ್ಲಿ ಹುಟ್ಟಿದ ಈ ಕಾನೂನು ಅನುಸರಿಸಿಯಾಗಲಿ ಮತ್ಯಾವ ಕಾನೂನು ಅನುಸರಿಸಿಯಾಗಲಿ ಮ್ಯುನಿಸಿಪಲ್ ಫಂಡಿಗೋಸ್ಕರ ವಿಧಿಸಲ್ಪಟ್ಟ ಮತ್ತು ವಸೂಲ್ ಮಾಡಲ್ಪಟ್ಟ ರಿವಾಜುಗಳು, ತೆರಿಗೆಗಳು, ಬಾಕೀ ಮೊಬಲಗ್‌ಗಳು ಇಂತಾವುಗಳ ಆಧಾರದ ಮೇಲೆ ಅಥವಾ ಆ ಪೈಕಿ ಒಂದು ಭಾಗದ ಆಧಾರದಮೇಲೆ ಗವರ್ನಮೆಂಟಿನವರು ಮಂಜೂರ್ ಮಾಡುವಂತಾ ಬಡ್ಡೀ ದರಪ್ರಕಾರವಾಗಿಯೂ ಮೊಬಲಗ್ ವಾಪಸ ಕೊಡತಕ್ಕ ಕಾಲ ವ ಇತರ ವಿಷಯಗಳಲ್ಲಿ ಷರತ್ತುಗಳ ಮೇಲೆಯೂ, ಮೇಲ್ಕಂಡ ಕಾರ್ಯಕ್ಕೋಸ್ಕರ ಕಮ್ಮಿಷನರಗಳಿಗೆ ಬೇಕಾಗುವ ಯೆಷ್ಟರ ಮೊಬಲಗನ್ನಾಗಲಿ ಸಾಲದ ಪತ್ರದ ಮೂಲಕ ಆಗಿಂದಾಗ್ಯೆ ಸಾಲ ತೆಗೆಯಬಹುದು. ಅಂತಾ ದರೋಬಸ್ತು ಸಂಗತಿಗಳಲ್ಲಿಯೂ, ಸದರೀ ಕಾಮಗಾರೀ ಮಾಡಿಸತಕ್ಕಬಗ್ಯೆ ಆಗುವ ಅಂದಾಜ್ ಮೈಸೂರ್ ಗವರ್ನಮೆಂಟಿನವರ ಮಂಜೂರಾತಿಯ ಬಗ್ಯೆ ಕಳುಹಿಸಲ್ಪಡತಕ್ಕದ್ದಲ್ಲದೆ ಅವರ ಅಧಿಕಾರಕ್ಕೆ ಒಳಪಟ್ಟಿರತಕ್ಕದ್ದು.

ಸಾಲ ಪತ್ರದ ನಮೂನೆ.

ಕಲಂ. 2. ಈ ಕಾನೂನು ಅಧಿಕಾರ ಅನುಸರಿಸಿ ಬರಕೊಡೋಣಾಗುವ ದರೋಬಸ್ತು ಸಾಲ ಪತ್ರಗಳೂ, ಈ ಕಾನೂನಿಗೆ ಸೇರಿಸೋಣಾದ H ಷೆಡ್ಯೂಲಿನಲ್ಲಿ ಅಡಗಿರುವ ನಮೂನೇ ಪ್ರಕಾರ ಯಿರತಕ್ಕದ್ದಲ್ಲದೆ ಯಿಂಡಾರ್ಸಮೆಂಟ್ ಯೆಂಬ ಷರಾ ಮೂಲಕ ಪರಭಾರೇ ಮಾಡಲ್ಪಡತಕ್ಕದ್ದು.

ಮೊಂದುಸಾಲಕ್ಕಿಂತ ಮುಂದೆ ಮತ್ತೊಂದು ಸಾಲಮಾಡಲ್ಪಟ್ಟದೆ ಯೆಂಬ ವಿಚಾರವಿಲ್ಲದೇನೇ ಮೊಬಲಗ್ ಸಂದಾಯ ಮಾಡುವಿಕೆ.

ಕಲಂ. 3. ಕಮ್ಮಿಷನರಗಳು, ಒಂದು ಸಾಲ ಮತ್ತೊಂದು ಸಾಲಕ್ಕೆ ಹಿಂದಿನ ತಾರೀಖಿನಲ್ಲಿ ಮಾಡಲ್ಪಟ್ಟಿರುತ್ತೆಂಬ ವಿಚಾರ ವಿಲ್ಲದೇನೇ ಯಾವ ಸಾಲವನ್ನಾಗಲಿ ಆಗಿಂದಾಗ್ಯೆ ಫಡ್ಶಾ ಮಾಡಬಹುದು.

ಕಲಂ. 4. ಕಮಿಷ್ನರಗಳು, ಮೇಲೆ ಕಂಡಂತಾ ಅಂಗೀಕಾರನಿಶಿ ಯಾವ ಕಾಲದಲ್ಲಾಗಲಿ, ಈ ಕಾನೂನು ಅನುಸರಿಸಿ ಹುಟ್ಟಿದ ಯಾವದಾದರೂ ಸಾಲಪತ್ರಗಳ ಮೇಲೆ ತತ್ಕಾಲಕ್ಕೆ ಸಲ್ಲತಕ್ಕ ಯಾವ ಮೊಬಲಗನ್ನಾಗಲಿ ಕೊಡತಕ್ಕ ಬಗ್ಯೆ ಬೇಕಾದ ಯಾವ ಹಣವನ್ನಾದರೂ ಹೊಸ ಪತ್ರಗಳನ್ನು ಹುಟ್ಟಿಸುವದರ ದ್ವಾರಾ ಯಿಷ್ಟರ ಸಾಲವನ್ನಾಗಲಿ ಜಮಾಯಿಸಬಹುದು.

ರಿವಾಜ್ ಮೊಬಲಗ್ ಗಳನ್ನು ಹೊಸದಾಗಿ ಆಧಾರ ಮಾಡುವದರಿಂದ ಸಾಲದ ಪತ್ರಗಳಿಗೆ ಮೊಬಲಗ್ ಪಾವತೀ ಮಾಡೋಣ.

ಪೋಲೀಸಿನವರಿಗೆ ಸಲ್ಲಿಸಬೇಕಾದಹಣದ ಬಗ್ಯೆ ಏರ್ಪಾಟುಗಳು.

92. ಈ ಕಾನೂನು ಷುರುವಾದ ತಾರೀಖು ತರುವಾಯ ಮ್ಯುನಿಸಿಪಲ್ ಕಮಿಷ್ನರಗಳು ಪ್ರತಿ ತಿಂಗಳಲ್ಲಿಯೂ ಆಖೈರ್ ಯೇಳು ದಿನಗಳೊಳಗಾಗಿ ಮೈಸೂರು ಗವರ್ನಮೆಂಟಗೋಸ್ಕರ ಡೆಪ್ಯುಟಿ ಕಮಿಷ್ನರವರ ಖಜಾನೆಯಲ್ಲಿ ಷಹರ್ ಪೋಲೀಸ ಸಂರಕ್ಷಣೆಗಾಗಿ ಸದರಿ ಪೋಲೀಸಿನ ಕುಲ್ ಖರ್ಚಿನ ಪೈಕಿ ಶ್ರೀಮನ್ ಮೈಸೂರ್ ಮಹಾರಾಜಾ ಸರ್ಕಾರದವರಿಂದ ಸಾಲಿಯಾನಾ ಮೊಕರರ್ ಮಾಡಲ್ಪಡುವಂತಾ ದರವನ್ನು ಪಾವತೀ ಮಾಡತಕ್ಕದ್ದು.

ಪೋಲೀಸ್ ನವರ ಭರಣಕ್ಕಾಗಿ ದ್ರವಕೊಡೋಣ.

93. ಬೆಂಗಳೂರು ಷಹರಿನ ಪೋಲೀಸ್ ಫೋಜು, ಮೈಸೂರು ಗವರ್ನಮೆಂಟಿನ ಒಟ್ಟು ಪೋಲೀಸ್ ಫೋಜಿನ ಪೈಕಿ ಒಂದು ಭಾಗವೆಂತ ಭಾವಿಸಲ್ಪಡತಕ್ಕದ್ದು. ಮತ್ತು ಸದರೀ ಷಹರ್ ಸರಹದ್ದಿನೊಳಗೆ ಅದರ ವಿಚಾರಣೆಯು ಬೆಂಗಳೂರು ಡಿಸ್ಟ್ರಿಕ್ಟ ಮಾಜಿಸ್ಟ್ರೇಟರಿಗೆ ಸೇರಿರ ತಕ್ಕದ್ದು.

ಷಹರನೊಳಗೆ ಪೋಲೀಸ್ ವಿಚಾರಣೆ.

ಷಹರಿಗೆ ಸಂಬಂಧಪಟ್ಟ ಪ್ರೋಟ್ಟು ಪಾಕೀಜಿಯನ್ನು ಕುರಿತು,

94. ಗವರ್ನಮೆಂಟನವರ ಆಸ್ತಿ ಅಲ್ಲದೆಯೂ, ಅವರ ಅಧಿಕಾರದಲ್ಲಿಡದೆಯೂ ಯಿರುವ ಬೆಂಗಳೂರು ಷಹರಿನಲ್ಲಿ ಹಾಲಿ ಯಿರುವ ಅಥವಾ ಯಿನ್ನುಮೇಲೆ ಕಲ್ಪಿಸಲ್ಪಡತಕ್ಕ ದರೋಬಸ್ತು ಬಹಿರಂಗಗಳಾದ ಬೀದಿಗಳು ಯಾ ರಸ್ತೆಗಳು ಮತ್ತು ಅವುಗಳ ತಳವರಸೆಗಳು, ಕಲ್ಲುಗಳು ಯಿತರ ಸಾಮಾನುಗಳು, ಮತ್ತು ಅಂತಾ ಬೀದಿಗಳಿಗಾಗಿ ಒದಗಿಸೋಣಾದ ಖಾಸಗತ ಸ್ವತ್ತಲ್ಲದೆ ದರೋಬಸ್ತು ಕಟ್ಟಡಗಳು, ಸಾಮಾನುಗಳು, ಕೊರಮುಟ್ಟುಗಳು, ಯಿತರ ಪದಾರ್ಥಗಳು, ಅಂತಾ ಬೀದಿಗಳಲ್ಲಿ ಬೆಳದಿರುವ ಮರಗಳು ಇವುಗಳು ಕಮಿಷ್ನರಗಳು ಮತ್ತು ಅವರ ಹಿಂಬಾಲಿಸಿ ಬರತಕ್ಕವರು ಯಿಂತಾವರಲ್ಲಿಡಲ್ಪಟ್ಟು ಅವರಿಗೆ ಸಂಬಂಧಿಸಿ ಯಿರತಕ್ಕದ್ದು.

ಬೀದಿಗಳು ಕಮಿಷ್ನರಗಳ ಸುಫರ್ದಿನಲ್ಲಿಡಲ್ಪಡತಕ್ಕವು.

95 ಕಮಿಷ್ನರಗಳು ಮೈಸೂರ್ ಮಹಾರಾಜಾ ಸರಕಾರದವರ ಮಂಜೂರಾತೀನಿಶಿ ಹೊಸಬೀದಿಗಳನ್ನು ಹಾಕಿಸಬಹುದು ಮತ್ತು ಮಾಡಿಸಬಹುದು, ಸೇತುವೆಗಳು ಸುರಂಗಗಳು ಯಿವುಗಳನ್ನು ಕಟ್ಟಿಸಿ ನಿರ್ಮಿಸಬಹುದು; ಯಾವ ಪಬ್ಲಿಕ್ ಬೀದಿಯನ್ನಾಗಲಿ ತಿರಿಗಿಸಬಹುದು ಯಾ ಒಂದುದಿಕ್ಕಿನಿಂದ ಮತ್ತೊಂದು ದಿಕ್ಕಿಗೆ ಹಾಕಿಸಬಹುದು, ಯಾ ನಿಲ್ಲಿಸಬಹುದು, ಯಾ ಮೌಕೂಫ್ ಮಾಡಬಹುದು; ಅಂತಾ ಯಾವ ಬೀದಿಯನ್ನಾಗಲಿ ಅಗಲವಾಗಿ ಮಾಡಬಹುದು, ಅಭ್ಯಂತರವನ್ನು ನಿವರ್ತಿ ಮಾಡಬಹುದು, ಯಾ ವಿಸ್ತರಿಸಬಹುದು, ಅಥವಾ ಯಿತರ ವಿಧದಿಂದ ಅಭಿವೃದ್ಧಿ ಪಡಿಸಬಹುದು ಹೀಗೆಲ್ಲಾ ಮಾಡುವಲ್ಲಿ ಸದರೀ ಯಾವ ಬಗ್ಯಾಗಲಿ ಬೇಕಾದ ಯಾವದಾದರೂ ಜಮೀನು ಯಾ ಕಟ್ಟಡ ಯಿಂತಾದ್ದರ ಮಾಲೀಕರು ಯಾವ ಅನುಭವದಾರರಿಗೆ ಕ್ರಮವಾದ ಕಂಪೆನ್ಸೇಷನ್ ಯಾನೇ ಈಡು ಮೊಬಲಗ್ ಕೊಟ್ಟು ಸದರೀ ಪ್ರಕಾರ ಮಾಡಬಹುದು.

ಬೀದಿಗಳನ್ನು ಕಲ್ಪಿಸೋಣ, ಅಭಿವೃದ್ಧಿ ಪಡಿಸೋಣ, ಮತ್ತು ಅವುಗಳನ್ನು ಮೌಕೂಫ್ ಮಾಡೋಣ ಮುಂತಾದ್ದಕ್ಕೆ ಅಧಿಕಾರ.

96 ಯಾವದಾದರೂ ಹೊಸಬೀದಿ ಏರ್ಪಡಿಸುವಲ್ಲಿ ಯಾ ನಿರ್ಮಿಸುವಲ್ಲಿ ಅಥವಾ ಯಾವ ಪಬ್ಲಿಕ್ ಬೀದಿಯನ್ನಾಗಲಿ, ತಿರಿಗಿಸುವದರಲ್ಲಿ ಯಾ ಒಂದು ದಿಕ್ಕಿನಿಂದ ಮತ್ತೊಂದು ದಿಕ್ಕಿಗೆ ಹಾಕುವದರಲ್ಲಿ ಯಾ ಅಗಲಪಡಿಸುವದು, ಖುಲಾಸೆ ಮಾಡುವದು, ವಿಸ್ತರಿಸುವದು ಯಾ ಯಿತರ ವಿಧದಿಂದ ಅಭಿವೃದ್ಧಿ ಪಡಿಸುವದು ಇಂತಾದ್ದರಲ್ಲಿ, ಅದರ ಬಂಡಿ ದಾರಿ ಕಾಲುದಾರಿ ಈ ಬಗ್ಯೆ ಬೇಕಾದ ಜಮೀನಾ ಶಿವಾಯಿ ಸದರೀ ಬೀದಿಯ ಉಭಯ ಪಾರ್ಶ್ವಗಳಲ್ಲಿಯೂ, ಕಟ್ಟುವ (ಮನೆವಗೈರೇ) ಕಟ್ಟಡಗಳಿಗೋಸ್ಕರ ಜರೂರಾದ ಜಾಸ್ತೀ ಜಮೀನನ್ನು ಸಹ ಕಮಿಷ್ನರಗಳ ಖರೀದಿಗೆ ತೆಗದುಕೊಳ್ಳಬಹುದು. ಮತ್ತು ಅಂತಾ ಬೀದಿಯಲ್ಲಿ

ಹೊಸ ಬೀದಿಗಳ ಬಾಜೂದಲ್ಲಿ ಇರುವ ಜಮೀನನ್ನು ಕಟ್ಟಡದ ಕೆಲಸಗಳಿಗೋಸ್ಕರ ತೆಗದುಕೊಳ್ಳಲಿಕ್ಕೆ ಅಧಿಕಾರ.

924

ಕಟ್ಟಲ್ಪಡತಕ್ಕ ಕಟ್ಟಗಳ ತರಗತಿ ವ ತರಹೇ ದಾರೀಗೆ ಯುಕ್ತವೆಂದು ಅವರಿಗೆ ತೋರುವ ಕರಾರುಗಳು ವ ಷರತ್ತುತಳೊಡನೆ ಸದರಿ ಜಮೀನನ್ನು ವಿಕ್ರಯಿಸಿ ಬಿಡಬಹುದು. ಮತ್ತು ವಿನಿಯೋಗಿಸಿ ಬಿಡಬಹುದು. ಪರಂತು ಈ ಕಾನೂನಿನ ನಿಬಂಧನೆಗಳನ್ನನುಸರಿಸಿ ಯಾವದಾದರೂ ಜಮೀನು ತೆಗದುಕೊಳ್ಳಲ್ಪಟ್ಟಲ್ಲಿ ಮಾಲೀಕನ ಬಾಬತು ಅದರ ಆಜಾಬಾಜು ಜಮೀನಿಗಾಗಲಿ ಕಟ್ಟಗಳಿಗಾಗಲಿ ಅದರ ದೆಸೆಯಿಂದ ಸಾಕ್ಷಾತ್ತಾಗಿ ಯಾವರೂ ಅವ್ಯವಹಿತವಾಗಿಯಾದರೂ ವುಂಟಾಗುವ ಯಾವ ನುಕ್ಸಾನಿಗಾಗಲಿ ಅಂತಾ ಮಾಲೀಕರಿಗೆ ಈಡು ಕೊಡತಕ್ಕದ್ದು.

ಬೀದಿಗಳನ್ನು ಅಭಿವೃದ್ಧಿ ಪಡಿಸತಕ್ಕ ಬಗ್ಯಾಗಲಿ, ಇತರ ಮ್ಯುನಿಸಿಪೆಲ್ ಕಾರ್ಯಗಳಿಗೋಸ್ಕರವಾಗಲಿ ಜಮೀನ್ ಖರೀದಿ ವೊಪ್ಪಂದ ಮಾಡಲಿಕ್ಕೆ ಅಧಿಕಾರ.

97. ಹೊಸರಸ್ತೆಗಳನ್ನು ಹಾಕಲಿಕ್ಕೆ ವ ಕಲ್ಪಿಸಲಿಕ್ಕೆ ಅಥವಾ ಯಾವ ಪಬ್ಲೀಕ್ ರಸ್ತೆಯನ್ನಾಗಲಿ ಅಗಲ ಪಡಿಸಲಿಕ್ಕೆ, ನಿಸ್ತಾರ ಮಾಡಲಿಕ್ಕೆ ಅಥವಾ ಇತರ ವಿಧದಿಂದ ಅಭಿವೃದ್ಧಿ ಪಡಿಸಲಿಕ್ಕೆ, ಅಥವಾ ಪಾಕೀಜೇಗೆ ಸಂಬಂಧಪಟ್ಟ ಇತರ ಯಾವ ಬಗ್ಯಾಗಲಿ ಷಹರಿನ ಒಟ್ಟು ಅಭಿವೃದ್ಧಿಗೋಸ್ಕರವಾಗಲಿ ಯಾವ ಜಮೀನನ್ನಾದರೂ ಕಟ್ಟವನ್ನಾದರೂ ಶುದ್ಧ ಕ್ರಯಕ್ಕೆ ತೆಗದುಕೊಳ್ಳುವಬಗ್ಯೆ ಅದರ ಮಾಲೀಕನ ಸಂಗಡ ಕಮ್ಮಿಷನರಗಳು ವೊಡಂಬಡಿಕೆ ಮಾಡಬಹುದು.

ಜಮೀನ್ ಮುಂತಾದವುಗಳ ಬಗ್ಯೆ ಈಡು ಮೊಬಲಗು ಠರಾವ್ ಮಾಡುವ ರೀತಿ.

98. ಈ ಕಾನೂನಿನ ಕಾರ್ಯಗಳಿಗೋಸ್ಕರ ಬೇಕಾದ ಯಾವ ಜಮೀನನ್ನಾಗಲಿ, ಕಟ್ಟವನ್ನಾಗಲಿ ಖರೀದೀ ಮೂಲಕ ಸಂಪಾದಿಸಲಿಕ್ಕೆ ಯೇನಾದರೂ ಅಭ್ಯಂತರ ವಿದ್ದ ಪಕ್ಷಕ್ಕೆ ಕಮ್ಮಿಷನರಗಳು ತಿಳಿಸಿದ್ದರ ಮೇಲೆ ಮೈಸೂರು ಮಹಾರಾಜಾ ಸರ್ಕಾರದವರು ಯುಕ್ತತೋರುವ ಪ್ರಕಾರ ವಿಚಾರಣೇ ಮಾಡಿದ ಬಳಿಕ ಸದರೀ ಜಮೀನು ಯಾ ಕಟ್ಟ ಒಂದು ಪಬ್ಲಿಕ್ ಕಾರ್ಯಕ್ಕೋಸ್ಕರ ಬೇಕಾಗಿರುತ್ತೆಂತ ತಿಳಿಸಿ ಪಬ್ಲಿಕ್ ಕಾರ್ಯಗಳಿಗೋಸ್ಕರ ಜಮೀನ್ ಸಂಪಾದಿಸುವ ವಿಷಯದಲ್ಲಿ ಹಾಲೀ ಜಾರೀಯಿರುವ ಅಥವಾ ಯಿನ್ನುಮೇಲೆ ಜಾರೀಲಿ ಬರುವ ಯಾವದಾದರೂ ಕಾನೂನ್‌ಗಳಪ್ರಕಾರ ಗವರ್ನಮೆಂಟಗೋಸ್ಕರ ಅದನ್ನು ಸ್ವಾಧೀನ ಪಡಿಸಿಕೊಳ್ಳುವ ಬಗ್ಯೂ, ಜಮೀನ್ ಮುಂತಾದ ವಿಷಯದಲ್ಲಿ ಸಂಬಂಧಪುಳ್ಳ ಜನಗಳಿಗೆ ಕೊಡತಕ್ಕ ಈಡು ಮೊಬಲಗ್ ನಿಷ್ಕರ್ಷೆ ಮಾಡುವ ಬಗ್ಯೂ, ತಕ್ಕ ನಡವಳಿತಗಳನ್ನು ನಡಿಸುವಂತೆ ಹುಕುಂ ಮಾಡಬಹುದು. ಮತ್ತು ಮೈಸೂರು ಮಹಾರಾಜಾ ಸರ್ಕಾರದವರು ಅಂತಾ ಜಮೀನ್ ಯಾ ಕಟ್ಟವನ್ನು ಕಮ್ಮಿಷನರಗಳು ಈಡು ಕಟ್ಟಿಕೊಟ್ಟ ಮೇಲೆ ಅವರುಗಳ ವಶಕ್ಕೆ ಕೊಡಬಹುದು.

ಜಮೀನ್ ಯಾ ಕಟ್ಟಗಳನ್ನು ವಿಕ್ರಯಿಸಿ ಬಿಡಲಿಕ್ಕೆ ಅಧಿಕಾರ.

99. ಕಮ್ಮಿಷನರಗಳು ಈ ಕಾನೂನ್ ಬಲವನ್ನು ಅವಲಂಬಿಸಿ ತಮ್ಮ ವಶಕ್ಕೆ ಕೊಡೋಣಾದ ಅಥವಾ ಸದರೀ ಬಗ್ಯೆ ತಮ್ಮಿಂದ ಸಂಪಾದಿಸಲ್ಪಟ್ಟ ಯಾವ ಜಮೀನುಗಳನ್ನಾಗಲಿ ಕಟ್ಟಗಳನ್ನಾಗಲಿ ಅಖಂಡವಾಗಿಯಾಗಲಿ, ಖಂಡವಾಗಿಯಾಗಲಿ ತಮಗೆ ಕೇವಲ ಅನುಕೂಲ ವೆಂತಲೂ, ಲಾಭಕರವೆಂತಲೂ ತೋರುವ ಮೇರೆ ವಿಕ್ರಯಿಸಬಹುದು. ಹಾಗೆ ವಿಕ್ರಯಿಸುವದರಿಂದ ಹುಟ್ಟುವಳಿಯಾದ ಮೊಬಲಗ್ ಈ ಕಾನೂನ್ ಕಾರ್ಯಗಳಗೋಸ್ಕರ ವಿನಿಯೋಗಿಸಲ್ಪಡತಕ್ಕದ್ದು. ಹಾಗೆ ವಿಕ್ರಯವನ್ನು ಮಾಡುವಬಗ್ಯೆ ಕಮ್ಮಿಷನರಗಳು, ತೆಗದುಕೊಳ್ಳತಕ್ಕವನಿಗೆ ವಿಕ್ರಯಿಸೋಣಾದ ಜಮೀನ್ ಬಗ್ಯೆ ಒಂದು ಕ್ರಯ ಶಾಸನವನ್ನು ಬರೆದು ಕೊಡಬಹುದು, ಅಂತಾ ಕ್ರಯಶಾಸನಕ್ಕೆ ಕಮ್ಮಿಷನರಗಳ ಸಮುದಾಯ ಮೊಹರ್ ಹಾಕಿರತಕ್ಕದ್ದು.

ಬಂದ್ ಮಾಡೋಣಾದ ಬೀದಿಗಳನ್ನು ವಿಕ್ರಯಿಸುವದಕ್ಕೆ ಅಧಿಕಾರ.

100. ಇದರ ದೆಶೆಯಿಂದ ಕಮ್ಮಿಷನರಗಳ ವಶಕ್ಕೆ ಕೊಡೋಣಾದ ಯಾವ ಬೀದಿಯಾಗಲಿ ಈ ಕಾನೂನ್ ೯೫ನೇ ಸೆಕ್ಷನ್ ಅನುಸರಿಸಿ ಬಂದ್ ಮಾಡಲ್ಪಟ್ಟಲ್ಲಿ ಕಮ್ಮಿಷನರಗಳು, ಈ ಕಾನೂನ್ ಕಾರ್ಯಗಳಿಗೆ ಬೇಡದೆ ಯಿರುವಂತಾ ಬೀದಿಯ ಜಮೀನ್‌ಗಳನ್ನು ಅಥವಾ ಆ ಪೈಕಿ ಒಂದು ಭಾಗವನ್ನು ವಿಕ್ರಯಿಸಿ ಬಿಡಬಹುದು.

ಬೀದಿಗಳ ಸಂರಕ್ಷಣೆ ವ ರಿಪೇರಿ.

101. ಕಮ್ಮಿಷನರಗಳು ತಮ್ಮಲ್ಲಿರುವ ಜಮಜಿಗೆ ತಕ್ಕಂತೆ ಆಗಿಂದಾಗ್ಯೆ ಪಬ್ಲಿಕ್ ಬೀದಿ ಸಂರಕ್ಷಿಸಿಕೊಂಡು ರಿಪೇರಿ ಮಾಡಿಸತಕ್ಕದ್ದು. ಮತ್ತು ಆಗಿಂದಾಗ್ಯೆ ತಮಗೆ ಯುಕ್ತ ತೋರುವ ಪ್ರಕಾರ ತಳ ವರಸೆ ಹಾಕಿಸುವದು, ದಮ್ಮಸ್ ಮಾಡಿಸುವದು, ಫರಷಬಂದಿ ಮಾಡಿಸುವದು, ಕಾಲ್ವೆಗಳು ಅಗಿಸುವದು, ಚರಂಡಿಗಳು ಯಿಡಿಸುವದು ಅಥವಾ ಅನ್ಯಥಾ ಅಭಿವೃದ್ಧಿ ಪಡಿಸುವದು ಮತ್ತು ಅದರ ಮೇಲ್ಭಾಗ ಯೆತ್ತರಮಾಡಿಸುವದು ಯಾ ತಗ್ಗಿಸುವದು, ಯಾ

ಬದಲಾವಣೇ ಮಾಡುವದು ಯಿಂತಾದ್ದನ್ನು ಮಾಡಿಸಬಹುದು; ಮತ್ತು ಅಂತಾ ಯಾವ ಬೀದಿಯಲ್ಲಾಗಲಿ ಮಾರ್ಗಸ್ಥರ ಉಪಯೋಗಕ್ಕೋಸ್ಕರ ಯಾವ ಕಾಲ್ದಾರಿಯನ್ನಾಗಲಿ ಮಾಡಿಸಿ ದುರಸ್ತಾಗಿ ಯಿಡಬಹುದು; ಮತ್ತು ಅಂತಾ ಕಾಲ್ದಾರೀ ಬಾಜೂಗಳಲ್ಲಿ ಆಗಿಂದಾಗ್ಯೆ ಕಾಲ್ನಡೆಯಿಂದ ಸಂಚರಿಸುವ ಮಾರ್ಗಸ್ಥರ ಸಂಗಕ್ಷಣೆಗೋಸ್ಕರ ಜರೂರಾದ ಕಟಕಟೆಗಳನ್ನೂ ಕಂಭಗಳನ್ನೂ ಯಿಡಿಸಬಹುದು.

ಕಾಲು ದಾರಿಗಳು.

102. ಕಮ್ಮಿಷನರಗಳು ಬೀದಿಗಳನ್ನು ಅವುಗಳ ಕಾಲ್ದಾರೀ ಸಹಿತವಾಗಿ ಕ್ರಮವಾಗಿ ಗುಡಿಸಿಸಿ ಪಾಕ ಮಾಡಿಸತಕ್ಕದ್ದು. ಅಂತಾ ಬೀದಿಗಳಲ್ಲಿಗುವ ನಾನಾ ವಿಧಗಳುಳ್ಳ ಧೂಳು, ಕಶ್ಮಲ, ಬೂದಿ ಕಸ, ಕಚರಾ ಇಂತಾವುಗಳು ಜಮಾಯಿಸಲ್ಪಟ್ಟು ಆಚೆಗೆ ಸಾಗಿಸಲ್ಪಡತಕ್ಕದ್ದು.

ಬೀದಿಗಳನ್ನು ಚೊಕ್ಕಟ ಪಡಿಸುವದು.

103. ಕಲಂ. 1.—ಪ್ರೆಸಿಡೆಂಟರು, ಧೂಳು, ಕಸ, ಬೂದಿ ವ ಕಚರಾ ಇಂತಾವುಗಳನ್ನು ಆಚೆಗೆ ಸಾಗಿಸಿ ತೆಗೆಸಿಕೊಂಡು ಹೋಗುವ ಪರ್ಯಂತ ಹಂಗಾಮಿಯಾಗಿ ಹಾಕಿ ಯಿಡಬಹುದಾದ ಸ್ಥಳದಿಂದ ಸ್ಥಳಕ್ಕೆ ತೆಗೆದುಕೊಂಡು ಹೋಗತಕ್ಕ ಅಥವಾ ಸ್ಥಿರವಾದ ಯೆಷ್ಟು ಕಚರೇ ತೊಟ್ಟಿಗಳನ್ನಾಗಲಿ, ಇತರ ಅನುಕೂಲಗಳಾದ ಆಧಾರಗಳನ್ನಾಗಲಿ ಒದಗಿಸಿ, ಯುಕ್ತವಾಗಿಯೂ, ಅನುಕೂಲವಾಗಿಯೂ ಇರುವ ಸ್ಥಳಗಳಲ್ಲಿ ಇಡಿಸಬಹುದು. ಮತ್ತು ಬೀದಿಗಳಲ್ಲಿರುವ ಮನೆಗಳೊಳಗೆ ವಾಸಮಾಡುವಂತಾವರು ಮೇಲೆ ಕಂಡಂತಾ ದರೋಬಸ್ತು ಕಚರೇ ವಗೈರೆಯನ್ನು ಪ್ರತಿ ದಿನವಾಗಲಿ ಅನ್ಯಥಾ ಯಾವದಾದರೂ ಒಂದು ಕಾಲಕ್ಕೊಂದಾವರ್ತಿಯಾಗಲಿ ಸದರೀ ಆಧಾರಗಳಲ್ಲಿ ಜಮಾಯಿಸಿ ಇಡುವಂತೆ ತಾಕೀದೀ ಮಾಡಬಹುದು. ಅಂತಾ ಆಧಾರಗಳು ಕಲ್ಪಿಸಲಟ್ಟ ಬಳಿಕ ಮತ್ತು ಮೇಲೆ ಕಂಡ ಪ್ರಕಾರ ತಾಕೀದ್ ಮಾಡಲ್ಪಟ್ಟ ಬಳಿಕಲೂ, ಪ್ರೆಸಿಡೆಂಟರಿಂದ ಗೊತ್ತು ಮಾಡಲ್ಪಡುವ ಅಂತಾ ಆಧಾರಗಳಲ್ಲಿ ಅಥವಾ ಸ್ಥಳಗಳಲ್ಲಿ ಮತ್ತು ಆ ರೀತಿಯಾಗಿ ವ ಅಂತಾ ಮೊತ್ತುಗಳಲ್ಲಿ ಅಲ್ಲದೆ ಅನ್ಯಥಾ ಅಂತಾ ಯಾವ ಪದಾರ್ಥಗಳನ್ನಾಗಲಿ ಯಾವಬೀದಿಯೊಳಗಾಗಲಿ ಯಾವದಾದರೂ ಮನೆಯ ಸ್ಥಿರವಾದ ಜಗಲಿಯ ಹಜಾರ ಇಂತಾದ್ದರ ಮೇಲೆಯಾಗಲಿ, ಮನೆಗೂ ಬೀದಿಗೂ ಮಧ್ಯೆ ಇರುವ ಯಾವ ಜಮೀನ ಮೇಲೆಯಾಗಲಿ ಜಮಾಯಿಸಿ ಇಡುವ ಅಥವಾ ಜಮಾಯಿಸಿ ಇಡಿಸುವ ಅಥವಾ ಆ ಬಗ್ಯೆ ಅಪ್ಪಣೆ ಕೊಡುವ ಪ್ರತಿ ಮನುಷ್ಯನೂ ಪ್ರತಿ ತಪ್ಪಿತಕ್ಕೂ ಹತ್ತು ರೂಪಾಯಿಗಳಿಗೆ ಮೀರದ ಒಂದುಜುರ್ಮಾನೆಗೆ ಗುರಿಯಾಗತಕ್ಕದ್ದು.

ಬೀದಿಗಳಲ್ಲಿ ಕಚರಾ ತೊಟ್ಟಿಗಳು.

ಕಲಂ. 2.—ಪ್ರೆಸಿಡೆಂಟರಿಂದ ಗೊತ್ತು ಮಾಡಲ್ಪಡತಕ್ಕ ಸ್ಥಳಗಳೊಳಗೂ, ಆ ರೀರಿತಿಯಾಗಿಯೂ ಮತ್ತು ಅಂತಾ ಕಾಲಗಳೊಳಗೂ ಅಲ್ಲದೆ ಅನ್ಯಥಾ ಯಾವ ಬೀದಿಯಲ್ಲಾಗಲಿ ಯಾವ ಮನೆಯ ತಳವರಸೆ, ಜಗತೀ, ಯಾ ವಸಾರೇ ಮೇಲಾಗಲಿ ಮನೆಗೂ ಬೀದಿಗೂ ಮಧ್ಯೆ ಇರುವ ಯಾವದಾದರೂ ಜಮೀನು ಇಂತಾದ್ದರ ಮೇಲಾಗಲಿ, ಸರಕುಗಳು ಇಳಿಯುವ ಯಾವದಾದರೂ ಪಬ್ಲಿಕ್ ರೇವುಕಲ್ಲಿನಿಂದ ಕಟ್ಟೋಣಾದ ಕಟ್ಟೆ, ಹಡಗು ಇಳಿಯುವ ಸ್ಥಳ ಇವುಗಳ ಮೇಲಾಗಲಿ, ಹೊಳೆಯಲ್ಲಿ ನೀರು ನಿಲ್ಲುವ ಅತ್ಯಂತ ಪ್ರಮಾಣವುಳ್ಳ ಯೆತ್ತರಕ್ಕೆ ಮೇಲ್ಪಟ್ಟಾಗಲಿ ಕೀಳ್ಪಟ್ಟಾಗಲಿ ಇರುವ ನದೀ ತೀರದ ಪೈಕಿ ಯಾವ ಭಾಗದಲ್ಲಾಗಲಿ, ಯಾವ ಧೂಳನ್ನಾಗಲಿ, ಕಸ, ಸಗಣಿ, ಬೂದಿ ಅಥವಾ ತೋಟ ಅಡಿಗೇಮನೆ ಯಾ ಲಾಯ ಇಂತಾದ್ದರ ಬಾಬತು ಕಚರಾ ಅಥವಾ ಯಾವ ಬಗೇದಾಗಲಿ ಜಂತು ಸಂಬಂಧವಾದ ಯೆಲುವು ಮುಂತಾದ ಪದಾರ್ಥ, ಯಾ ಕನ್ನಡೀ ಚೂರು, ಯಾ ಮಡಿಕೇಬೋಡು, ಇಟ್ಟಿಗೇಮುರುಕು, ಯಾಇತರ ಕಚರಾ ಇಂತಾದ್ದನ್ನಾಗಲಿ ಯಾವನು ಜಮಾಯಿಸಿಡುತ್ತಾನೋ ಯಾ ಜಮಾಯಿಸಿ ಇಡುವಂತೆ ತನ್ನ ನೌಕರರಿಗೆ ಅಪ್ಪಣೇ ಮಾಡುತ್ತಾನೋ ಅಂತಾ ಮನುಷ್ಯನು ಪ್ರತಿ ತಪ್ಪಿತಕ್ಕೂ ಹತ್ತು ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಬೀದಿಗಳು ಮುಂತಾದವುಗಳಲ್ಲಿ ಕಚರೆಯನ್ನು ಜಮಾಯಿಸಿ ಇಡೋಣ.

104. ಯಾವನು ತನಗೆ ಸಂಬಂಧಪಟ್ಟ ಅಥವಾ ತನ್ನ ಭೂಮಿಯಲ್ಲಿರುವ ಯಾವದಾದರೂ ಬಚ್ಚಲು ತೊಟ್ಟಿ ಯಾ ಚರಂಡಿ ಯಾ ಪಾಯಿಖಾನೆ ಯಿಂತಾದ್ದರ ನೀರನ್ನಾಗಲಿ, ಅಸಹ್ಯಕರವಾದ ಮತ್ಯಾವ ಯಿತರ ದ್ರವ ಪದಾರ್ಥವನ್ನಾಗಲಿ ಯಾವ ಬೀದಿಯಲ್ಲಾದರೂ ಹರಿಯುವಂತೆ ಯಾ ಚಲ್ಲಲ್ಪಡುವಂತೆ ಯಾ ಹಾಕಲ್ಪಡುವಂತೆ ಮಾಡುತ್ತಾನೊ ಯಾ ಅಪ್ಪಣೇ ಕೊಡುತ್ತಾನೋ ಅಥವಾ ಯಾವ ಪಾಯಿ

ಬಚ್ಚಲು ನೀರು ಬೀದಿಗಳಲ್ಲಿ ಹರಿಯಗೊಡಿಸುವಿಕೆ.

- ಖಾನೇ ಯಿಂದಲಾಗಲಿ ಬಚ್ಚಲು ತೊಟ್ಟಿಯಿಂದಲಾಗಲಿ ಅಸಹ್ಯಕರವಾದ ಯಾವ ಪದಾರ್ಥವಾದರೂ, ಯಾವ ಬೀದಿಯೊಳಗಾಗಲಿ, ಯಿರುವ ಮೇಲ್ಭಾಗದ ಬಚ್ಚಲಿನಲ್ಲಿ ಹರಿಯುವಂತೆ ಅಥವಾ ಚೆಲ್ಲಲ್ಪಡುವಂತೆ ಮಾಡುತ್ತಾನೋ ಯಾ ಅಪ್ಪಣೇ ಕೊಡುತ್ತಾನೋ ಅಂತಾ ಮನುಷ್ಯನು ಪ್ರತಿ ತಕ್ಕೀರಿಗೂ ಹತ್ತುರೂಪಾಯಿಗ ಮೀರದೆ ವೊಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

105. ಪ್ರೆಸಿಡೆಂಟರು ಆಗಿಂದಾಗ್ಯೆ ಹೊತ್ತುಗಳನ್ನು ನಿಷ್ಕರ್ಷೆ ಮಾಡಿ ಅಂತಾ ಹೊತ್ತಿನೊಳಗೇನೇ ಯಾವ ಮಲವನ್ನಾಗ್ಲಿ, ಅಂತಾ ಅಸಹ್ಯಕರವಾದ ಯಿತರ ವಸ್ತುವನ್ನಾಗಲಿ ತೆಗಿಸಿ ಹಾಕುವುದು ನ್ಯಾಯವಾಗಿರತಕ್ಕದ್ದು. ಪ್ರೆಸಿಡೆಂಟರು ಅಂತಾ ಕಾಲವನ್ನು ಗೊತ್ತುಮಾಡಿ ಅದನ್ನು ಕುರಿತು ಬಹಿರಂಗವಾದ ನೋಟಿಸ ಕೊಟ್ಟಾಗ, ಹಾಗೆ ನಿಷ್ಕರ್ಷೆ ಮಾಡಲ್ಪಟ್ಟ ಹೊತ್ತಿನೊಳಗೆ ಶಿವಾಯಿ ಅನ್ಯಥಾ ಅಂತಾ ಅಸಹ್ಯಕರವಾದ ಯಾವ ವಸ್ತುವನ್ನಾಗಲಿ ಯಾವ ಬೀದಿಯ ಮಾರ್ಗವಾಗಿಯಾದರೂ ತೆಗದುಕ್ಕೊಂಡು ಹೋಗುತ್ತಾನೋ ಯಾ ತೆಗದುಕೊಂಡು ಹೋಗುವಂತೆ ಮಾಡುತ್ತಾನೋ, ಮತ್ತು ಯಾವನು ಪ್ರೆಸಿಡೆಂಟರಿಂದ ನಿಷ್ಕರ್ಷೆಯಾಗಿರಲಿ ಆಗದೇಯಿರಲಿ ಪರಂತು ಅಂತಾ ಯಾವ ಹೊತ್ತಿನಲ್ಲಾಗಲಿ, ಕಶ್ಮಲ ಹೊರಗೆ ಬೀಳದಂತೆ ಯಾ ದುರ್ಗಂಧ ಹೊರಗೆ ಬಾರದಂತೆ ತಕ್ಕ ಮುಚ್ಚಳ ವಗ್ಯೆರೇ ಇಲ್ಲದ ಯಾವದಾದರೂ ಬಂಡಿ, ಯಾನಸಾಧನ, ಇತರ ಆಧಾರ, ಯಾ ಪಾತ್ರ ಯಿಂತಾದ್ದನ್ನು, ಅಂತಾ ಯಾವ ಕಾರ್ಯಕ್ಕೋಸ್ಕರವಾಗಲಿ ಉಪಯೋಗಿಸುತ್ತಾನೋ, ಅಥವಾ ಯಾವನು ಅಂತಾ ಅಸಹ್ಯವಾದ ಕಶ್ಮಲವನ್ನು ತೆಗಿಸಿಕ್ಕೊಂಡು ಹೋಗುವಲ್ಲಿ ಅದನ್ನು ಕೆಳಗೆ ಚೆಲ್ಲುತ್ತಾನೋ ಯಾ ಸುರಿಯುತ್ತಾನೋ? ಯಾವನು ಅಂತಾ ಅಸಹ್ಯವಾದ ಯಾವ ಕಶ್ಮಲವಾದರೂ ಚೆಲ್ಲಿದ ಅಥವಾ ಬಿದ್ದ ಕಡೆಯಲ್ಲೆಲ್ಲಾ ಆದನ್ನು ಚನ್ನಾಗಿ ಗುಡಿಸಿ ಸಾಫ ಮಾಡುವದಿಲ್ಲವೋ ಯಾವನು ಮೇಲೆ ಕಂಡಂತಾ ಯಾವ ಕಾರ್ಯಕ್ಕಾಗಲಿ ಉಪಯೋಗಿಸಲ್ಪಡತಕ್ಕ ಯಾವದಾದರೂ ಬಂಡಿ, ಯಾನ ಸಾಧನ, ಆಧಾರ ಯಾ ಪಾತ್ರ ಯಿಂತಾದ್ದನ್ನು ಪ್ರೆಸಿಡೆಂಟರು ಆಗಿಂದಾಗ್ಯೆ ಬಹಿರಂಗವಾದ ನೋಟಿಸ ಮೂಲಕ ಸದರೀ ಬಗ್ಯೆ ಮೊಕರರ ಮಾಡುವ ಬೀದಿ ಅಥವಾ ಮಾರ್ಗವಲ್ಲದೆ ಬೇರೆ ಯಾವ ಬೀದಿ ಯಾ ಮಾರ್ಗದಲ್ಲಿ ಹೊಡಿಯುತ್ತಾನೋ ಯಾ ತೆಗದುಕ್ಕೊಂಡು ಹೋಗುತ್ತಾನೋ ಅಥವಾ ಹೊಡಿಯುವಂತೆ ಯಾ ತೆಗದುಕ್ಕೊಂಡು ಹೋಗುವಂತೆ ಮಾಡುತ್ತಾನೋ ಅಂತಾ ಮನುಷ್ಯನು ಪ್ರತಿ ತಕ್ಕೀರಿಗೂ ಇಪ್ಪತ್ತುರೂಪಾಯಿಗೆ ಮೀರದ ವೊಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಮಲವನ್ನು ತೆಗಿಸಿ ಹಾಕುವಿಕೆ.

106. ಈ ಕಾನೂನಿನಿಂದ ಕೊಡೋಣಾದ ಅಧಿಕಾರವನ್ನು ಅನುಸರಿಸಿ ಜಮಾಯಿಸಿ ಸಾಗಿಸಲ್ಪಟ್ಟ ಮಲ, ಸಗಣಿ ವ ಇತರ ಕಶ್ಮಲ, ಧೂಳು, ಕಸ, ಬೂದಿ, ಕಚರಾ, ಇಂತಾದ್ದನ್ನು ಜಮಾಯಿಸಿ ಇಡುವ ಬಗ್ಯೆ ಮತ್ತು ಈ ಕಾನೂನಿನ ಬಾಬತು ಮೇಲೆ ಕಂಡ ಕೆಲಸಗಳಿಗಾಗಲಿ ಆ ಪೈಕಿ ಯಾವ ಕೆಲಸಗಳಿಗಾಗಲಿ, ಬೇಕಾದ ದರೋಬಸ್ತು ಜಾನವರಗಳನ್ನೂ, ಬಂಡಿಗಳನ್ನೂ, ಸಾಧನಗಳನ್ನೂ, ಇತರವಸ್ತುಗಳನ್ನೂ ಇಡುವಬಗ್ಯೆ ಅನುಕೂಲಗಳಾದ ಸ್ಥಳಗಳನ್ನು ಕಮ್ಮಿಷನರಗಳು ಆಗಿಂದಾಗ್ಯೆ ಯೇರ್ಪಡಿಸತಕ್ಕದ್ದು, ಯಾ ವೊದಗಿಸತಕ್ಕದ್ದು; ಮತ್ತು ಅಂತಾ ಯಾವ ಕಾರ್ಯಕ್ಕೋಸ್ಕರವಾಗಲಿ ಕಮ್ಮಿಷನರಗಳು ತಾವು ಜರೂರೆಂದು ಭಾವಿಸುವ ಯಾವ ಜಮೀನನ್ನಾಗಲಿ, ಕಟ್ಟಡಗಳನ್ನಾಗಲಿ ಖರೀದಿಗೆ ಕೊಳ್ಳಬಹುದು; ಯಾ ಬಾಡಿಗ್ಯೆ ತೆಗದುಕೊಳ್ಳಬಹುದು, ಅಥವಾ ತಮ್ಮಿಂದ ಕೊಳ್ಳತಕ್ಕ ಯಾ ಬಾಡಿಗ್ಯೆ ತೆಗದು ಕೊಳ್ಳಲ್ಪಟ್ಟ ಯಾವ ಜಮೀನಿನಲ್ಲಾದರೂ ಯಾವ ಹೊಸ ಕಟ್ಟಡವನ್ನಾಗಲಿ ನಿರ್ಮಿಸುವಂತೆ ಮಾಡಬಹುದು.

ಕಚರಾ ಜಮಾ ಇಡತಕ್ಕ ಸ್ಥಳ.

107. ಈ ಕಾನೂನು ಲಾಗೂವಾಗತಕ್ಕ ಸರಹದ್ದುಗಳೊಳಗೆ ಇರುವ ಯಾವ ಬೀದಿಯಲ್ಲಾಗಲಿ ಆದರ ಸಮೀಪದಲ್ಲಾಗಲಿ ಇರುವ ಪ್ರತಿ ಮನೆಯ ವಾಸಸ್ಥನು ತನ್ನ ವತಾರದಿಂದ ಮಲ ವಗ್ಯೆರೇ ತೆಗದುಕೊಂಡು ಹೋಗುವ ಬಗ್ಯೆ ಮ್ಯುನಿಸಿಪೆಲ ಕಮ್ಮಿಷನರಗಳಿಂದ ವೊದಗಿಸೋಣಾದ ಬಂಡಿಗಳಲ್ಲಿ ದರೋಬಸ್ತು ಮಲವನ್ನೂ ಸಗಣಿಯನ್ನೂ, ಇತರ ಕಚರೇಯನ್ನೂ, ಮ್ಯುನಿಸಿಪೆಲ ಕಮ್ಮಿಷನರಗಳು ನಿಯಮಿಸುವ ಕಾಲದಲ್ಲಿಯೂ, ಮತ್ತು ಅಂತಾ ರೀತಿಯಾಗಿಯೂ, ಸಾಗಿಸುವದು ಅವನ ಕಾರ್ಯ ವಾಗಿರತಕ್ಕದ್ದು. ಪರಂತು ಯಾವದಾದರೂ ಮನೆಯ ವಾಸಸ್ಥನು ಸದರೀ ಮಲ, ಸಗಣಿ, ಯಾ ಇತರಕಚರೆ ಇಂತಾದ್ದನ್ನು ಸಾಗಿಸಿಕ್ಕೊಂಡು ಹೋಗುವಂತೆ ಖಾಯಿಷ ಮಾಡಿದ್ದಲ್ಲಿ ಈ ಕಾನೂನಿನ105ನೇ ಸೆಕ್ಷನ ನಿಬಂಧನೆಗೆ ಅನುಗುಣವಾಗಿ, ಆ ಮೇರೆ ಮಾಡುವದು ಅವನ ಇಷ್ಟಪ್ರಕಾರ ಇರತಕ್ಕದ್ದು.

ಮನೆಗಳಲ್ಲಿ ವಾಸ ಮಾಡುವಂತಾವರು ಮಲ ವಗ್ಯೆರೇಯನ್ನು ಕಮ್ಮಿಷನರಗಳ ಬಂಡಿಗಳಿಗೆ ಸಾಗಿಸತಕ್ಕದ್ದು.

ನಿಯಮ.

ಕಚರೇ ತೆಗಸಿ ಹಾಕದೇ ಇರುವ ಮನೆಯ ವಾಸಸ್ಥನಿಗೆ ದಂಡನೆ.

108. ಈ ಕಾನೂ ಲಾಗೂವಾಗತಕ್ಕ ಸರಹದ್ದುಗಳೊಳಗೆ ಇರುವ ಮನೆಯ ವಾಸಸ್ಥನಾದ ಯಾವನು ಸರಿಯಾದ ಆಧಾರದಲ್ಲಿ ಅಲ್ಲವೆ ಅನ್ಯಥಾ ಇಪ್ಪತ್ತುನಾಲ್ಕು ಘಂಟೆಯ ಹೊತ್ತಿಗಿಂತ ಹೆಚ್ಚಾಗಿ ಯಾವ ಕಸ, ಸಗಣಿ, ಮಲ, ಕಚರ ಅಥವಾ ಯಾವದಾದರೂ ಬಾಧಕವಾದ ಯಾ ಅಸಹ್ಯವಾದ ಪದಾರ್ಥ ಇಂತಾದ್ದನ್ನು ಯಾವದಾದರೂ ಮನೆಯ ಛಾವಣಿಯಲ್ಲಿ ಯಾ ಛಾವಣಿಯ ಮೇಲೆ, ಅಥವಾ ಅಂತಾ ಮನೆಗೆ ಸೇರಿದ ಮತ್ತು ಅದರ ವಾಸಸ್ಥನಿಂದ ವಾಸ ಮಾಡಲ್ಪಟ್ಟ ಯಾವ ಉಪಗೃಹದ ಛಾವಣಿಯೊಳಗೆ ಯಾ ಅದರ ಮೇಲೆ ಅಥವಾ ಯಾವದಾದರೂ ಅಂಗಳದಲ್ಲಿ ಯಾ ಜಮೀನಿನಲ್ಲಿ ಇಡುತ್ತಾನೋ ಯಾ ಇಡಗೊಡಿಸುತ್ತಾನೋ ಅಂತಾವನು ಪ್ರತಿ ತಕ್ಸೀರಿಗೂ ಹೆತ್ತು ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಮನೆಗಳನ್ನು ಗುಡಿಸುವ ಬಗ್ಯೆ ಕಮಿಷನರಗಳು ಸ್ಕಾವೆಂಜರಗಳು ಯಾನೇ ಗುಡಿಸುವವರನ್ನು ಮೊಕರರ ಮಾಡಬಹುದು.

109. ಕಮಿಷನರಗಳು, ಝಾಡಮಾಲೀರಿಂದ ವಾಡಿಕೆಯಾಗಿ ನೆರವೇರಿಸಲ್ಪಡತಕ್ಕ ಕೆಲಸಗಳನ್ನು ತಮ್ಮ ನೌಕರರ ಮಾರಿಫತ್ ಮಾಡಿಸುತ್ತೇವೆಂತ ಯಾವದಾದರೂ ಮನೆಯ ವಾಸಸ್ಥನಿಗೆ ಯಾ ವಾಸಸ್ಥರಿಗೆ ಇದರ ಹಿಂದಿನ ಕಡೇ ಸೆಕ್ಷನ್ ಅನುಸರಿಸಿ ನೋಟಿಸ ಕೊಡೋಣ ಸದರೀ ಕಮಿಷನರಗಳಿಗೆ ನ್ಯಾಯವಾಗಿರತಕ್ಕದ್ದು. ಮತ್ತು ಯಾವ ಮನೆಯ ಗುಡಿಸುವ ಕೆಲಸವನ್ನು ಸರದೀ ಮೇರೆ ಅವರುಗಳು ವಹಿಸಿ ಇರುತ್ತಾರೋ ಅಂತಾ ಪ್ರತಿಮನೆಗೂ, ಸದರೀ ಮನೆಯ ವಾಸಸ್ಥರು ಸಾಧಾರಣ ಝಾಡಮಾಲಿಯ ನೌಕರಿಗೆ ನ್ಯಾಯವಾಗಿ ಯೆಷ್ಟು ಕೊಡಬೇಕಾಗುವದೋ ಅಷ್ಟಕ್ಕೆ ಜಾಸ್ತೀ ಇಲ್ಲದಂತೆ ಒಂದು ತೀರ್ವೆ ಮೊಕರರ ಮಾಡುವದು ಸದರೀ ಕಮಿಷನರಗಳಿಗೆ ನ್ಯಾಯವಾಗಿರತಕ್ಕದ್ದು.

ಜಮಾಯಿಸೋಣಾದ ದರೋಬಸ್ತು ಕಚರಾ ವಗೈರೆಯೂ ಕಮಿಷನರಗಳ ಸ್ವತ್ತಾಗಿರತಕ್ಕದ್ದು.

110. ಕಮಿಷನರಗಳು ತಮ್ಮ ಹುಕ್ಕುಂ ಅನುಸರಿಸಿ, ಬೀದಿಗಳಲ್ಲಿಯೂ, ಮನೆಗಳೊಳಗೂ, ಪಾಯಖಾನೆಗಳಲ್ಲಿಯೂ, ಜಲಧಾರೇಗಳಲ್ಲಿಯೂ, ಬಚ್ಚಲು ತೊಟ್ಟಿಯಲ್ಲಿಯೂ, ಜಮಾಯಿಸುವ ದರೋಬಸ್ತು ಕಸ, ಧೂಳು, ಬೂದಿ, ಕಚರಾ, ಜಲಧಾರೇ ರೊಚ್ಚು, ಮಣ್ಣು, ಸಗಣಿ ವ ಕಶ್ಮಲ, ಇಂತಾವು ಅವರುಗಳ ಸ್ವತ್ತಾಗಿರತಕ್ಕದ್ದು. ಮತ್ತು ಅವರು ತಮಗೆ ಯುಕ್ತ ತೋರುವ ಪ್ರಕಾರ ಸದರೀ ಕಚರೇ ವಗೈರೆಯನ್ನು ಮಾರುವದಕ್ಕೆ ಯಾ ವಿನಿಯೋಗಿಸುವದಕ್ಕೆ ಅಧಿಕಾರ ಉಂಟಾಗಿರತಕ್ಕದ್ದು. ಅವುಗಳನ್ನು ವಿಕ್ರಯಿಸುವದರಿಂದ ಹುಟ್ಟುವಳಿಯಾಗುವ ಹಣವು ಈ ಕಾನೂನಿನ ಕಾರ್ಯಗಳಿಗೆ ವಿನಿಯೋಗಿಸಲ್ಪಡತಕ್ಕದ್ದು.

ಬೀದಿಗಳಿಗೆ ನೀರು ಹಾಕೋಣ.

111. ಕಮಿಷನರಗಳು ತಮ್ಮಲ್ಲಿ ಐವಜು ಅನುಕೂಲಿಸಿದಷ್ಟು ಮಟ್ಟಿಗೆ ಮತ್ತು ಜನಗಳ ಅನುಕೂಲಕ್ಕೆ ಜರೂರೆಂತ ತಮಗೆ ತೋರುವಷ್ಟು ಮಟ್ಟಿಗೆ ಪಬ್ಲಿಕ ಬೀದಿಗಳಲ್ಲಿ ನೀರು ಹಾಕಿಸತಕ್ಕದ್ದು. ಮತ್ತು ಆ ಬಗ್ಯೆ ಜರೂರೆಂತ ಅವರು ಯೆಣಿಸುವಂತಾ ಕೆಲಸಗಳನ್ನೂ ಯಂತ್ರಗಳನ್ನೂ ಒದಗಿಸಬಹುದು.

ಬೀದಿಗಳಲ್ಲಿ ಬೆಳಕು ಇಡಿಸುವದು.

112. ಕಮಿಷನರಗಳು ತಮ್ಮ ವಶದಲ್ಲಿ ಐವಜು ಅನುಕೂಲಿಸಿದಷ್ಟು ಮಟ್ಟಿಗೆ ಪಬ್ಲಿಕ ಬೀದಿಗಳು ರಸ್ತೆಗಳು ಇವುಗಳ ಪೈಕಿ ಯಾವದಕ್ಕೆ ಬೆಳಕು ಇಡತಕ್ಕದ್ದು ಅವಶ್ಯಕವೆಂತ ಯೆಣಿಸುತ್ತಾರೋ ಅದರಲ್ಲಿ ದೀಪ ಹಚ್ಚತಕ್ಕ ಬಗ್ಯೆ ತಮಗೆ ಜರೂರೆಂದು ಭಾವಿಸುವ ದೀಪಗಳನ್ನೂ, ದೀಪದ ಕಂಭಗಳನ್ನೂ, ಅಂತಾ ಇತರ ಸಾಧನಗಳನ್ನೂ ಒದಗಿಸತಕ್ಕದ್ದು. ಮತ್ತು ಸದರೀ ದೀಪಗಳನ್ನು ಯುಕ್ತವಾದ ಕ್ರಮದಲ್ಲಿ ಇಡಿಸತಕ್ಕದ್ದು; ಮತ್ತು ಸದರೀ ದೀಪಗಳನ್ನು ಒರಸಿ ಸಾಫ ಮಾಡುವದು, ಸಿದ್ಧಪಡಿಸುವದು, ದೀಪ ಹಚ್ಚುವದು ಈ ಕೆಲಸಗಳಿಗೆ ಬೇಕಾದಷ್ಟು ಮಂದಿಯನ್ನು ಇಟ್ಟು ಕೊಳ್ಳತಕ್ಕದ್ದು; ಮತ್ತು ಕಮಿಷನರಗಳು ಆಗಿಂದಾಗ್ಯೆ ತಮ್ಮಲ್ಲಿ ಜರೂರೆಂದು ತೋರುವ ಮೇರೆ ಸದರೀ ದೀಪಗಳ ಸಂಖ್ಯೆಯನ್ನೂ ಸ್ಥಳವನ್ನೂ ಜಾಸ್ತೀ ಮಾಡಬಹುದು. ಅಥವಾ ಅನ್ಯಥಾ ಬದಲಾವಣೀ ಮಾಡಬಹುದು.

ಬೀದಿಗಳಲ್ಲಿ ಉತ್ತರೋತ್ತರ ಉಂಟಾಗತಕ್ಕ ಆಟಕಾವಗಳು.

113. ಈ ಕಾನೂ಼ನ್ ಜಾರೀಲಿ ಬಂದ ತರುವಾಯ ಯಾವ ಪಬ್ಲಿಕ್ ಬೀದಿಯಲ್ಲಾಗಲಿ, ರಸ್ತೆಯಲ್ಲಾಗಲಿ ಅಂತಾ ಯಾವ ಬೀದಿಯ ಪಾರ್ಶ್ವ ಭಾಗದಲ್ಲಿ ಖುಲ್ಲಾ ಇರತಕ್ಕ ಯಾವದಾದರೂ ಚರಂಡಿ, ಬಚ್ಚಲು, ಕಾಲುವೆ, ಇಂತಾದ್ದರಲ್ಲಿ ಯಾಗಲಿ ಇಂತಾದ್ದರ ಮೇಲೆಯಾಗಲಿ ಯಾವನು ಯಾವದಾದರೂ ಗೋಡೆಯು ಹಾಕುತ್ತಾನೋ ಅಥವಾ ಯಾವ ಆವರಣ, ಕಟಕಟೆ, ಕಂಭ, ಅಥವಾ ಇತರಅಟಕಾವ್ ಯಾ ಪ್ರೊತ್ತುವರೀಯನ್ನು ಕಟ್ಟಿಸುತ್ತಾನೋ ಯಾ ಇಡುತ್ತಾನೋ ಅಂತಾವನು ನೂರು ರೂಪಾಯಿಗಳಿಗೆ ವಿಾರದ ವೊಂದು ಜುರ್ಮಾನೆಗೆ ಗುರಿಯಾಗತಕ್ಕದ್ದು, ಮತ್ತು ಕಮ್ಮಿಷನರಗಳು ಅಂತಾ ಯಾವ ಅಟಕಾವನ್ನಾಗಲಿ ಪ್ರೊತ್ತುವರಿಯನ್ನಾಗಲಿ ತೊಲಗಿಸುವದಕ್ಕೆ ಅಧಿಕಾರ ಪಡೆದಿರತಕ್ಕದ್ದು; ಹಾಗೆ ತೊಲಗಿಸುವದರ ಲಾಗವಡನ್ನು ಸದರೀ ಅಟಕಾವ್ ವಗೈರೇ ಉಂಟು ಮಾಡಿದ ಮನುಷ್ಯನು ಕೊಡತಕ್ಕದ್ದಾಗಿ ಇದರಲ್ಲಿ ಮುಂದೆ ವಿಧಿಸಲ್ಪಡುವ ಪ್ರಕಾರ ವಸೂಲ್ ಮಾಡಲ್ಪಡತಕ್ಕದ್ದು. ಪ್ರೊಲೀಸ ಸೂಪರ್ರಿಟೆಂಡೆಂಟರ

ತೊಲಗಿಸುವದಕ್ಕೆ ಅಧಿಕಾರ.

ಅನುಮತೀಮೇಲೆ ಯಾವ ಪಬ್ಲಿಕ್ ಬೀದಿಯಲ್ಲಾಗಲಿ, ಉತ್ಸವ ಮದುವೆ ಇಂತಾ ಸಮಯಗಳಲ್ಲಿ ಹಂಗಾಮಿಯಾಗಿ ಯಾವದಾದರೂ (ಚಪ್ಪರ ವಗೈರೇ) ಕಟ್ಟುವದಕ್ಕೆ ಅಪ್ಪಣೇ ಕೊಡುವ ವಿಷಯದಲ್ಲಿ ಇದರಲ್ಲಿ ಅಡಗಿರುವ ಯಾವ ಅಂಶವೂ ಕಮ್ಮಿಷನರಗಳನ್ನು ನಿರೋಧಿಸತಕ್ಕದ್ದಲ್ಲವು.

ಉತ್ಸವಾದ್ಯವಸರಗಳಲ್ಲಿ ಹಂಗಾಮಿಯು ಅಟಕಾವಗಳು.

ತಳವರಸೇಗಳನ್ನು ತೆಗದುಹಾಕುವದು.

114. ಯಾವನು, ಯಾವ ಪಬ್ಲಿಕ್ ಬೀದಿಯು ಯಾ ರಸ್ತೆಯು, ತಳವರಸೇ ಕಲ್ಲುಗಳನ್ನಾಗಲಿ, ಚಾಪ್ ಕಲ್ಲುಗಳನ್ನಾಗಲಿ ಯಿತರ ಸಾಮಾನುಗಳನ್ನಾಗಲಿ, ಅಥವಾ ಆವರಣಗಳು ಕಂಭಗಳು ಯಿಂತಾವುಗಳನ್ನಾಗಲಿ ಪಬ್ಲಿಕ್ ದೀಪದ ಸ್ತಂಭಗಳನ್ನಾಗಲಿ, ಪ್ರೆಸಿಡೆಂಟರ ಬರವಣಿಗೇ ಮೂಲಕವಾದ ಅನುಮತೀ ಇಲ್ಲದೆ ಅಥವಾ ಇತರ ನ್ಯಾಯವಾದ ಅಧಿಕಾರ ಇಲ್ಲದೆ ಕೆಡಿಸುತ್ತಾನೋ, ಸ್ಥಳ ತಪ್ಪಿಸುತ್ತಾನೋ, ತೆಗದು ಬಿಡುತ್ತಾನೋ ಅಥವಾ ಅವುಗಳಲ್ಲಿ ಯೇನಾದರೂ ಬದಲಾವಣೀ ಮಾಡುತ್ತಾನೋ ಅಂತಾವನು ಐವತ್ತು ರೂಪಾಯಿಗೆ ವಿಾರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಜನಗಳು ಹೊಸ ಬೀದಿಗಳನ್ನು ಮಾಡೋಣ.

115. ಯಾವದಾದರೂ ಹೊಸ ಬೀದಿಯನ್ನು ನಿರ್ಮಿಸಬೇಕೆಂತಲಾಗಲಿ ಏರ್ಪಡಿಸಬೇಕೆಂತಲಾಗಲಿ ಯಾವನು ಖಾಯಿಷ್ ಪಡುತ್ತಾನೋ ಅಂತಾ ಪ್ರತಿ ಮನುಷ್ಯನೂ, ಅಂತಾ ಬೀದಿಯ ಉದ್ದೇಶಿಸೋಣಾದ ಮಟ್ಟ ಅಗಲ ಇವುಗಳನ್ನು ಕಾಣಿಸಿ ಕಮ್ಮಿಷನರಗಳಿಗೆ ಅದನ್ನು ಕುರಿತು ಬರವಣಿಗೇ ಮೂಲಕ ನೋಟೀಸ ಕೊಡತಕ್ಕದ್ದು; ಮತ್ತು ಅಂತಾ ಪ್ರತಿ ಬೀದಿಯ ಮಟ್ಟ, ಅಗಲ ಸಹ ಕಮ್ಮಿಷನರಗಳಿಂದ ಗೊತ್ತು ಮಾಡಲ್ಪಡತಕ್ಕದ್ದು ಯಾ ಮಂಜೂರ್ ಮಾಡಲ್ಪಡತಕ್ಕದ್ದು; ಮತ್ತು ಯಾವನು, ಆ ಮೇರೆ ಗೊತ್ತು ಮಾಡೋಣಾದ ಯಾ ಮಂಜೂರ್ ಮಾಡೋಣಾದ ಮಟ್ಟ ಅಗಲ ಇವುಗಳ ಪ್ರಕಾರ ಅಲ್ಲದೆ ಅನ್ಯಥಾ ಅಂಥಾ ಯಾವ ಬೀದಿಗಳನ್ನಾಗಲಿ ಯೇರ್ಪಡಿಸುತ್ತಾನೋ, ಯಾ ನಿರ್ಮಿಸುತ್ತಾನೋ ಯಾ ಅದರಮೇಲೆ (ಏನಾದರೂ) ಕಟ್ಟುತ್ತಾನೋ, ಅಂತಾ ಮನುಷ್ಯನು ಐನೂರು ರೂಪಾಯಿಗೆ ವಿಾರದ ವೊಂದು ಜುರ್ಮಾನೆಗೆ ಗುರಿಯಾಗತಕ್ಕದ್ದು. ಮತ್ತು ಮೇಲೆಕಂಡಂತೆ ಗೊತ್ತು ಮಾಡೋಣಾದ ಯಾ ಮಂಜೂರ್ ಮಾಡೋಣಾದ ಮಟ್ಟ ಯಾ ಅಗಲಪ್ರಕಾರವಲ್ಲದೆ ಅನ್ಯಥಾ ಮಟ್ಟ ಯಾ ಅಗಲ ಪ್ರಕಾರ ಯೇರ್ಪಡಿಸೋಣಾದ ಯಾ ನಿರ್ಮಿಸೋಣಾದ ಅಂತಾ ಯಾವ ಬೀದಿಯನ್ನಾಗಲಿ ಕಮ್ಮಿಷನರಗಳಿಗೆ ಯುಕ್ತ ತೋರಿದರೆ, ಬದಲಾಯಿಸುವಂತೆ ಮಾಡಬಹುದು, ಅಥವಾ ಅಂತಾ ಯಾವ ಬೀದಿಯಲ್ಲಾಗಲಿ ಅಂತಾ ಮಟ್ಟ ಯಾ ಅಗಲಪ್ರಕಾರ ಅಲ್ಲದೆ ಅನ್ಯಥಾ ಕಟ್ಟೋಣಾದ ಯಾವ ಕಟ್ಟಣವನ್ನಾಗಲಿ ಬದಲಾಯಿಸುವಂತೆ ಅಥವಾ ಅವಶ್ಯಕವಿದ್ದಲ್ಲಿ ತೆಗಿಸಿಬಿಡುವಂತೆ ಆ ಬಗ್ಯೆ ಹಿಡಿದ ಲಾಗವಡನ್ನ ತಕ್ಸೀರ್‌ದಾರನು ತಮಗೆ ಕೊಡುವಂತೆಯೂ ಮತ್ತು ಯಿದರಲ್ಲಿ ಮುಂದೆ ವಿಧಿಸುವ ಪ್ರಕಾರ ಸದರೀ ಲಾಗವಡು ವಸೂಲ್ ಮಾಡಲ್ಪಡುವಂತೆಯೂ, ಮಾಡಬಹುದು. ಅಂತಾ ಯಾವ ಮಟ್ಟವಾಗಲಿ, ಅಗಲವಾಗಲಿ ವೊಂದು ತಿಂಗಳೊಳಗಾಗಿ, ಕಮ್ಮಿಷನರಗಳಿಂದ ಗೊತ್ತು ಮಾಡಲ್ಪಡದೇಯೂ ಖಾಯಿಷ್ ಮಾಡಲ್ಪಟ್ಟ ಮಟ್ಟ ಯಾ ಅಗಲದ ವಿಷಯದಲ್ಲಿ ಮಂಜೂರಾತಿ ಯಾ ನಾಮಂಜೂರಾತಿ ಅವರುಗಳಿಂದ ತಿಳಿಸಲ್ಪಡದೇಯೂ ಹೋದರೆ ನೋಟಿಸಿನಲ್ಲಿ ಕಂಡ ಮಟ್ಟ ಮತ್ತು ಅಗಲಪ್ರಕಾರವೇ ಉದ್ದೇಶಿಸಲ್ಪಟ್ಟ ಬೀದಿಯು ಯೇರ್ಪಡಿಸಲ್ಪಡಬಹುದು. ಮತ್ತು ನಿರ್ಮಿಸಲ್ಪಡಬಹುದು.

ಹೊಸ ಕಟ್ಟಣಗಳನ್ನು ಕಟ್ಟುವದು ಪ್ರೆಸಿಡೆಂಟರ ಅಧಿಕಾರದಲ್ಲಿರಬೇಕಾದ್ದು.

116. ಯಾವ ಬೀದಿಯಲ್ಲಾಗಲಿ ಅದರ ಸಮೀಪದಲ್ಲಾಗಲಿ ಕಟ್ಟಣಗಳು ಯಾವದೂ ಯಿಲ್ಲದೆ ಯಿರುವ ಯಾವದಾದರೂ ವೊಂದು ತುಂಡು ಯಾ ತಾಕು ಜಮೀನಿನಲ್ಲಿ ಯಾವ ಕಟ್ಟಣವನ್ನಾಗಲಿ, ಕಟ್ಟಣಗಳ ಸಾಲನ್ನಾಗಲಿ ಯಾ ಗುಂಪನ್ನಾಗಲಿ. ಕಮ್ಮಿಷನರಗಳಿಗೆ ಬರವಣಿಗೇ ಮೂಲಕ ವೊಂದು ತಿಂಗಳ ನೋಟೀಸ ಕೊಡದೇ ಕಟ್ಟುವದು ಯಾವ ಮನುಷ್ಯನಿಗೂ ನ್ಯಾಯವಾಗಿರತಕ್ಕದ್ದಲ್ಲವು, ಮತ್ತು ಅಂತಾ ಕಟ್ಟಣ ಯಾ ಕಟ್ಟಣಗಳು ಕ್ರಮವಾದ ಶ್ರೇಣಿಯಾಗಿರುವಂತೆಯೂ ಪ್ರತಿ ಶ್ರೇಣಿಯ ಮುಂಭಾಗದಲ್ಲಿ ಸುಖವಾಗಿ ಘಾಳಿ ಬೀಸುವದಕ್ಕೂ ಸುಲಭವಾಗಿ ಕಚರಾ ಗುಡಿಸಿಕೊಂಡು ಹೋಗುವದಕ್ಕೂ ಯೆಷ್ಟರ ಅಗಲವಿರಬೇಕೆಂದು ಪ್ರೆಸಿಡೆಂಟರು ಯೆಣಿಸುತ್ತಾರೋ ಅಷ್ಟು ಅಗಲವುಳ್ಳ ಧಾರಾಳವಾದ ದಾರಿಯ ಮಾರ್ಗದೊಡನೆಯೂ ಮತ್ತು ಚರಂಡೀ ನೀರು ಸಾಫಾಗಿ ಹೋಗುವದಕ್ಕೆ ಯಾವ ಮಟ್ಟ ಯಿರತಕ್ಕದ್ದೋ ಅಂತಾ ಮಟ್ಟದಲ್ಲಿಯೂ ಸದರೀ ಕಟ್ಟಣಗಳನ್ನು ಕಟ್ಟಿಸುವಂತೆ ಪ್ರೆಸಿಡೆಂಟರು ಆಮೇಲೆ ತಾಕೀದ ಮಾಡಬಹುದು. ಮತ್ತು ಅಂತಾ ಯಾವ ಕಟ್ಟಣ ಯಾ ಕಟ್ಟಣಗಳಾಗಲಿ ಪ್ರೆಸಿಡೆಂಟರು ತಾಕೀದಾಮಾಡುವರೀತಿಯಾಗಿ ಅಲ್ಲದೆ ಅನ್ಯಥಾ ಕಟ್ಟಲ್ಪಟ್ಟಲ್ಲಿ ಸದರೀ ಕಟ್ಟಣಗಳನ್ನು ಒಂದು ತಿಂಗಳೊಳಗಾಗಿ ಕಿತ್ತಿಹಾಕುವಂತೆ ಯಾ ತೆಗದು ಹಾಕುವಂತೆ ಪ್ರೆಸಿಡೆಂಟರು, ಅಂತಾ ಕಟ್ಟಣ ಯಾ ಕಟ್ಟಣಗಳನ್ನು ಕಟ್ಟಿದವನಿಗೆ ಯಾ ಕಟ್ಟಿದವರಿಗೆ ನೋಟಿಸ್ ಕೊಡಬಹುದು. ಅಂತಾ ನೋಟಿಸ ಪ್ರಕಾರ ಅಂತಾ ಕಟ್ಟಣ ಯಾ ಕಟ್ಟಣಗಳು ಕೆಡವಿಸಲ್ಪಟ್ಟು ತೆಗದುಹಾಕಲ್ಪಡದೆ ಇದ್ದ ಪಕ್ಷಕ್ಕೆ ಅವುಗಳನ್ನು ಪ್ರೆಸಿಡೆಂಟರೇ ಕೆಡವಿಸಿ ತೆಗಸಿಹಾಕಬಹುದು. ಆ ಬಗ್ಯೆ ಹಿಡಿಯುವ ಲಾಗವಡನ್ನು ಸದರೀ ಕಟ್ಟಿದವನಿಂದ ಯಾ ಕಟ್ಟಿದವರಿಂದ ಇದರಲ್ಲಿ ಮುಂದೆ ವಿಧಿಸಲ್ಪಡುವ ಮೇರೆ ವಸೂಲ ಮಾಡಲ್ಪಡತಕ್ಕದ್ದು.

ಹಾಲೀ ಇರುವ ಕಟ್ಟಣಗಳ ವಿಷಯದಲ್ಲಿ ಪ್ರೆಸಿಡೆಂಟರ ಅಧಿಕಾರ.

117. ಯಾವ ಬೀದಿಯಲ್ಲಾಗಲಿ ಅದರ ಸಮೀಪದಲ್ಲಾಗಲಿ ಹಾಲೀ ಇರುವ ಯಾವದಾದರೂ ಕಟ್ಟಣಗಳ ಗುಂಪು ಕಟ್ಟಣಗಳು ಒಂದಕ್ಕೊಂದು ಗಜಿಬಿಜಿಯಾಗಿರುವದರಿಂದಾಗಲಿ ಚರಂಡಿ ನೀರು ಹರಿಯುವದಕ್ಕಿಲ್ಲದೇ, ಕಚರಾ ಗುಡಿಸಿಕೊಂಡು ಹೋಗಲಿಕ್ಕೆ ಅನುಕೂಲವಿಲ್ಲದೆ ಇರುವದರಿಂದಲಾಗಲಿ ಅಲ್ಲಿನ ಆಸಪಾಸ ಪ್ರದೇಶದ ಜನಗಳಿಗೆ ರೋಗಾಸ್ಪದ ಉಂಟಾಗುವದೆಂತ ಪ್ರೆಸಿಡೆಂಟರು ಖುದ್ದು ನೋಡುವದರಿಂದಲಾದರೂ ತಕ್ಕ ಮನುಷ್ಯರ ರಿಪೋರ್ಟಿನ ದೆಶೆಯಿಂದಲಾದರೂ ಅವರಿಗೆ ತೃಪ್ತಿಕರವಾಗಿ ತಿಳಿಯಬಂದರೆ ಅಂತಾ ರೋಗೋಪದ್ರವಕ್ಕೆ ಆಸ್ಪದವಿಲ್ಲದಂತೆ ಮಾಡುವ ಬಗ್ಯೆ ಪ್ರೆಸಿಡೆಂಟರು ತಮಗೆ ಆವಶ್ಯಕವೆಂದು ತೋರುವಂತಾ ಕಾರ್ಯಗಳನ್ನು ಆ ಬಗ್ಯೆ ಅವರುಗಳು ಮೊಕರರ್ ಮಾಡುವ ಯುಕ್ತವಾದ ಕಾಲದೊಳಗೆ ಅಂತಾ ಕಟ್ಟಣಗಳ ಗುಂಪಿನ ಮಾಲೀಕರು ಯಾ ವಾಸಸ್ಥರು, ಅಥವಾ ಪ್ರೆಸಿಡೆಂಟರ ಇಷ್ಟವಿದ್ದಂತೆ ಯಾವ ಜಮೀನಿನಲ್ಲಿ ಅಂತಾ ಕಟ್ಟಣಗಳು ಕಟ್ಟಲ್ಪಟ್ಟಿರುತ್ತವೋ ಆ ಜಮೀನಿನ ಮಾಲೀಕನು ನಡಿಸತಕ್ಕದ್ದೆಂತ, ಮೇಲೆ ಕಂಡ ಪ್ರಕಾರ ಮೈಸೂರು ಮಹಾರಾಜಾ ಸರ್ಕಾರದವರ ಮಂಜೂರಾತೀನಿಶೀ ತಾಕೀದ್ ಮಾಡಿ ಒಂದು ನೋಟಿಸ ಬರೆದು ಅಂತಾ ಕಟ್ಟಣಗಳ ಗುಂಪಿನಲ್ಲಿ ಪ್ರಸಿದ್ಧವಾದ ಸ್ಥಳದೊಳಗೆ ಚಿಕಟಾಯಿಸುವಂತೆ ಮಾಡತಕ್ಕದ್ದು. ಮತ್ತು ಅಂತಾ ಮಾಲೀಕರು ಯಾ ವಾಸಸ್ಥರು, ಯಾ ಜಮೀನ್ ಮಾಲೀಕರು ಹಾಗೆ ಮೊಕರರ್ ಆದ ಕಾಲದೊಳಗಾಗಿ ಅಂತಾ ಕಾರ್ಯಗಳನ್ನು ನೆರವೇರಿಸಲಿಕ್ಕೆ ನಿರಾಕರಿಸಿದರೆ ಯಾ ಅಸಡ್ಡೆ ಮಾಡಿದರೆ ಪ್ರೆಸಿಡೆಂಟರು ಸದರೀ ಕಟ್ಟಣಗಳನ್ನು ಕಿತ್ತಿ ಹಾಕಿಸಬಹುದು. ಅಥವಾ ಅಂತಾ ಉಪದ್ರವ ಉಂಟಾಗದಂತೆ ಮಾಡುವ ಬಗ್ಯೆ ಪ್ರೆಸಿಡೆಂಟರು ಜರೂರೆಂದು ಭಾವಿಸುವ ಕೆಲಸಗಳನ್ನು ಅಂತಾ ಕಟ್ಟಣಗಳ ವಿಷಯದಲ್ಲಿ ಮಾಡಿಸಬಹುದು. ಅಂತಾ ಕಟ್ಟಣಗಳು ಕಿತ್ತಿಹಾಕಿಸಲ್ಪಟ್ಟಪಕ್ಷಕ್ಕೆ ಪ್ರೆಸಿಡೆಂಟರು ಪ್ರತಿ ಕಟ್ಟಣದ ಸಾಮಾನುಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ವಿಕ್ರಯಿಸುವದು ಸಾಧ್ಯವಾಗಿದ್ದ ಪಕ್ಷಕ್ಕೆ ಆ ಪ್ರಕಾರ ವಿಕ್ರಯಿಸುವಂತೆ ಮಾಡತಕ್ಕದ್ದು. ಸದರೀ ವಿಕ್ರಯದ ಮೊಬಲಗನ್ನು ಕಟ್ಟಣದ ಮಾಲೀಕನಿಗೆ ಕೊಡತಕ್ಕದ್ದು. ಆ ಮಾಲೀಕನು ಪತ್ತೇಯಿಲ್ಲದೇ ಹೋದರೆ ಅಥವಾ ಬಾಧ್ಯತೇ ವಿಷಯದಲ್ಲಿ ತಕರಾರ್ ಉಂಟಾದರೆ ಸದರೀ ಮೊಬಲಗಿಗೆ ಅರ್ಹನಾದ ಮನುಷ್ಯನಿಗಾಗಿ ಪ್ರೆಸಿಡೆಂಟರಲ್ಲಿ ಡಿಪಾಜಿಟ ಇಡಲ್ಪಡತಕ್ಕದ್ದು. ಅಂತಾ ಬಾಧ್ಯಸ್ಥನು ಹರಾಜ್ ತಾರೀಖ್ ಲಾಗಾಯತ್ ಮೂರು ವರುಷಗಳೊಳಗಾಗಿ ಹಾಜರಾಗಿ ತನ್ನ ಬಾಧ್ಯತೆ ರುಜಾ ಮಾಡಿದಲ್ಲಿ ಅಂತಾ ಮನುಷ್ಯನಿಗೆ ಸದರೀ ಮೊಬಲಗ್ ಸಲ್ಲತಕ್ಕದ್ದೇ. ಹೊರ್ತು ಅನ್ಯಥಾ ಕೊಡದು ಈ ಸೆಕ್ಷನ ಅನುಸರಿಸಿ ಬಾಧ್ಯತೇ ವಿಷಯಕ್ಕೆ ಸಂಬಂಧಪಟ್ಟ ಯಾವ ಅಂಶವನ್ನಾಗಲಿ ವ್ಯವಸ್ಥೆಮಾಡಲಿಕ್ಕೆ ಬೆಂಗಳೂರು ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟು ಅರ್ಹವಾದ ಕೋರ್ಟೆಂತ ಎಣಿಸತಕ್ಕದ್ದು.

ಜನಗಳ ಸ್ವಂತ ಬೀದಿಗಳ ತಳವರಸೆ ವಗೈರೆ.

118. (ಪಬ್ಲಿಕ್ ಬೀದಿಯಲ್ಲದ) ಯಾವ ಬೀದಿಯಾಗಲಿ, ಆ ಪೈಕಿ ಯಾವ ಭಾಗವಾಗಲಿ ಪ್ರೆಸಿಡೆಂಟರಿಗೆ ತೃಪ್ತಿಕರವಾಗಿ ನೀರು ಮಟ್ಟ ಏರ್ಪಡಿಸಲ್ಪಡದೇಯೂ, ತಳವರಸೇ ಹಾಕಲ್ಪಡದೆಯೂ, ಜಲ್ಲಿಹಾಕಿ ದಮ್ಮಸ ಮಾಡಲ್ಪಡದೆಯೂ, ಕಲ್ಲು ಹಾಸಲ್ಪಡದೆಯೂ, ಕಾಲ್ವೆ ಇಡಿಸಲ್ಪಡದೆಯೂ, ಚರಂಡೀ ಕಟ್ಟಸಲ್ಪಡದೆಯೂ ಇದ್ದ ಪಕ್ಷಕ್ಕೆ ಅವರು ಬೀದಿಯು ಅಂತಾ ಯಾವ ಭಾಗದಲ್ಲಿ ಮಟ್ಟ ಮಾಡಿಸುವದು, ತಳವರಸೇ ಹಾಕಿಸುವದು, ಜಲ್ಲಿ ಹಾಕಿ ದಮ್ಮಸ ಮಾಡಿಸುವದು, ಕಲ್ಲು ಹಾಸಿಸುವದು, ಕಾಲ್ವೆ ಇಡಿಸುವದು, ಚರಂಡೀ ಕಟ್ಟಿಸುವದು, ಅವಶ್ಯಕವಾಗಿರುತ್ತೋ ಅಂತಾ ಭಾಗಗಳಿಗೆ ಮುಂದುಗಡೆ ಇರುವ ಯಾ ಸೇರಿದ ಹಾಗೆ ಇರುವ ಯಾ ಅದರ ಅಂಚಿನಲ್ಲಿರುವ ಆಯಾ ಜಮೀನಿನ ಯಾ ಕಟ್ಟಗಳ ಮಾಲೀಕರಿಗಾಗಲಿ ಅನುಭವದಾರರಿಗಾಗಲಿ ಬರವಣಿಗೇ ಮೂಲಕ ನೋಟೀಸ ಕೊಟ್ಟು ಅಂತಾ ನೋಟೀಸಿನಲ್ಲಿ ಕಂಡ ಕಾಲದೊಳಗಾಗಿ ಸದರೀ ಭಾಗಗಳಿಗೆ ಮಟ್ಟ ಏರ್ಪಡಿಸುವಂತೆ ಜಲ್ಲೀ ಹಾಕಿ ದಮ್ಮಸ ಮಾಡುವಂತೆ ತಳವರಸೇ ಹಾಕಿಸುವಂತೆ ಕಲ್ಲು ಹಾಕಿಸುವಂತೆ ಕಾಲ್ವೆ ಮಾಡಿಸುವಂತೆ ಮತ್ತು ಚರಂಡಿ ಕಟ್ಟಿಸುವಂತೆ ತಾಕೀದ್ ಮಾಡಬಹುದು. ಆ ಪ್ರಕಾರ ಅವರು ನಡಿಸದೇ ಇದ್ದ ಪಕ್ಷಕ್ಕೆ ಪ್ರೆಸಿಡೆಂಟರು ತಮಗೆ ಯುಕ್ತ ತೋರಿದರೆ ಸದರೀ ನೋಟೀಸಿನಲ್ಲಿ ಕಂಡ ಯಾ ಸೂಚಿಸೋಣಾದ ಕಾಮಗಾರಿಗಳನ್ನು ಮಾಡಿಸಬಹುದು, ಆ ಬಗ್ಗೆ ಹಿಡಿದ ಲಾಗವಡನ್ನು ಕಾಮಗಾರೀ ಮಾಡಿಸಲಿಕ್ಕೆ ತಪ್ಪಿದ ಮಾಲೀಕರು ತಮ್ಮ ತಮ್ಮ ಜಮೀನ ಯಾ ಕಟ್ಟಗಳ ಮುಂಭಾಗದ ಜಮೀನಿಗೆ ತಕ್ಕಷ್ಟು ಮತ್ತು ಪ್ರೆಸಿಡೆಂಟರಿಂದ ನಿಷ್ಕರ್ಷೆ ಮಾಡಲ್ಪಡುವದರ ಪ್ರಕಾರ ಅಥವಾ ತಕರಾರ್ ಉಂಟಾಗುವ ಸಂದರ್ಭದಲ್ಲಿ, ನುಕ್ಸಾನು, ಲಾಗುವಡುಗಳು ಇವುಗಳ ವಿಷಯದಲ್ಲಿ ಹುಟ್ಟುವ ತಕರಾರ್‌ಗಳನ್ನು ವ್ಯವಸ್ಥೆ ಮಾಡುವ ಬಗ್ಗೆ ಇದರಲ್ಲಿ ಮುಂದೆ ವಿಧಿಸಲ್ಪಡುವ ರೀತಿಯಾಗಿ ನಿಷ್ಕರ್ಷೆ ಮಾಡಲ್ಪಡುವ ಪ್ರಕಾರ ಕೊಡತಕ್ಕದ್ದು. ಅಂತಾ ಲಾಗವಡುಗಳು ಇದರಲ್ಲಿ ಮುಂದೆ ವಿಧಿಸಲ್ಪಡುವ ಪ್ರಕಾರ ವಸೂಲ್ಮಾಡತಕ್ಕದ್ದು. ಪರಂತು ಮೇಲೆ ತಿಳಿಸಲ್ಪಟ್ಟ ಪ್ರಕಾರ ಪ್ರೆಸಿಡೆಂಟರ ಅಪ್ಪಣೇ ಮೇಲೆಯೇಯಾಗಲಿ ಪ್ರೆಸಿಡೆಂಟರಿಂದಲೇ ಯಾಗಲಿ ಮಾಲೀಕರ ಸ್ವಂತ ಲಾಗವಡಿನಿಂದಲೇ ಅಂತಾ ಬೀದಿಗಳು ಸದರೀ ಮೇರೆ ಮಟ್ಟ ಮಾಡಲ್ಪಟ್ಟು ತಳವರಸೇ ಹಾಕಲ್ಪಟ್ಟು ಜಲ್ಲೀ ಹಾಕಿ ದಮ್ಮಸ ಮಾಡಲ್ಪಟ್ಟು ಕಲ್ಲು ಹಾಸಲ್ಪಟ್ಟು ಕಾಲ್ವೆ ಇಡಿಸಲ್ಪಟ್ಟು ಮತ್ತು ಚರಂಡಿ ಕಟ್ಟಿಸಲ್ಪಟ್ಟ ಬಳಿಕ ಮ್ಯುನಿಸಿಪಲ್ ಫಂಡ್ಸ ದೆಶೆಯಿಂದ ಸದರೀ ಬೀದಿಯು ಕಮ್ಮಿಷನರಗಳಿಂದ ಆಗಿಂದಾಗ್ಯೆ ರಿಪೇರ್ಮಾಡಿಸತಕ್ಕ ಪಬ್ಲಿಕ್ ಬೀದಿ ಎಂಬದಾಗಿ ತಿಳಿಸತಕ್ಕದ್ದೆಂದು ತೋರುವದಕ್ಕೆ ಅಂತಾ ಮಾಲೀಕರಿಗೆ ಯಾವಾಗ್ಯೂ ಒಂದು ಹಕ್ಕು ಉಂಟಾಗಿರತಕ್ಕದ್ದು.

ನಿಯಮ.

ಬೀದಿಯ ವರಸೆಯನ್ನು ಕ್ರಮ ಪಡಿಸುವ ಬಗ್ಗೆ ಮನೆಗಳನ್ನು ಬಡಾಯಿಸುವಿಕೆ.

119. ಪ್ರೆಸಿಡೆಂಟರು, ತಮಗೆ ಯುಕ್ತ ತೋರುವಂತಾ ಷರತ್ತುಗಳ ಮೇಲೆ, ಯಾವ ಕಟ್ಟವನ್ನಾಗಲಿ, ಯಾವ ಪಬ್ಲಿಕ್ ಬೀದಿಯೊಳಗೆ ಅಂತಾ ಕಟ್ಟ ಇರುತ್ತೋ ಆ ಬೀದಿಯು ವರಸೇ ಕ್ರಮ ಪಡಿಸುವ ಬಗ್ಗೆ, ಮುಂದಕ್ಕೆ ಬಡಾಯಿಸುವಂತೆ ಅಪ್ಪಣೆ ಕೊಡಬಹುದು.

ಬೀದಿಯ ವರಸೆಗೆ ಮುಂದೆ ಬಡಾಯಿಸಿ ಬಂದಿರುವ ಮನೆಗಳು ಕಿತ್ತಿ ಹಾಕಲ್ಪಟ್ಟಾಗ ಹಿಂದಕ್ಕೆ ಒತ್ತಿ ಸಿ ಕಟ್ಟತಕ್ಕದ್ದು.

120. ಒಂದು ಪಬ್ಲಿಕ್ ಬೀದಿಯ ವರಸೇ ಕ್ರಮಕ್ಕೆ ಮುಂದೆ ಅಥವಾ ಅಂತಾ ಬೀದಿಯು ಎರಡು ಪಾರ್ಶ್ವಗಳಲ್ಲಿಯೂ ಇರುವ ಕಟ್ಟದ ಮುಂಭಾಗಕ್ಕಿಂತ ಮುಂದೆ ಬಡಾಯಿಸಿ ಬಂದಿರುವ ಯಾವ ಮನೆಯಾಗಲಿ ಆ ಪೈಕಿ ಯಾವ ಭಾಗವಾಗಲಿ ಪುನಃ ಕಟ್ಟುವ ಬಗ್ಗೆ ಯಾ ಬದಲಾಯಿಸುವ ಬಗ್ಗೆ ಕಿತ್ತಿ ಹಾಕಲ್ಪಟ್ಟ ಪಕ್ಷಕ್ಕೆ ಪ್ರೆಸಿಡೆಂಟರು, ಅಂತಾ ಮುಂದೆ ಬಡಾಯಿಸಿ ಬಂದಿರತಕ್ಕ ಭಾಗವನ್ನು ಬೀದಿಯ ವರಸೆಗೆ ಸರಿಯಾಗಿ ಯಾ ಅಜುಬಾಜು ಕಟ್ಟಗಳ ವರಸೆಗೆ ಸರಿಯಾಗಿ ಹಿಂದಕ್ಕೆ ಒತ್ತರಿಸಿ ಕಟ್ಟುವಂತೆಯಾಗಲಿ ಮುಂದಕ್ಕೆ ಬಡಾಯಿಸಿ ಕಟ್ಟುವಂತೆ ಯಾಗಲಿ ತಾಕೀದ್ ಮಾಡಬಹುದು. ಪರಂತು ಹಾಗೆ ಒತ್ತರಿಸಿ ಕಟ್ಟುವದರಿಂದ ಅಂತಾ ಯಾವ ಕಟ್ಟದ ಮಾಲೀಕನಿಗಾಗಲಿ ಉಂಟಾಗುವ ಯಾವದಾದರೂ ನುಕ್ಸಾನಿಗಾಗಿ ಪ್ರಾಪ್ತ ಈಡು ಮೊಬಲಗನ್ನು ಅವನಿಗೆ ಕಮ್ಮಿಷನರಗಳು ಯಾವಾಗ್ಯೂ ಕಟ್ಟಕೊಡತಕ್ಕದ್ದು. ಮತ್ತು ಅಂತಾ ಈಡು ಮೊಬಲಗಿನ ವಿಷಯದಲ್ಲಿ ಏನಾದರೂ ತಕರಾರ್ ಸಂಭವಿಸಿದರೆ ; ನುಕ್ಸಾನ್ ಯಾ ಲಾಗವಡಿನ ವಿಷಯದೊಳಗೆ ಉಂಟಾಗತಕ್ಕ ತಕರಾರಗಳನ್ನು ವ್ಯವಸ್ಥೆ ಮಾಡಲಿಕ್ಕೆ ಇದರಲ್ಲಿ ಮುಂದೆ ವಿಧಿಸಲ್ಪಡುವ ರೀತಿಯಾಗಿ ಅವುಗಳು ವ್ಯವಸ್ಥೆ ಮಾಡಲ್ಪಡತಕ್ಕದ್ದು.

ನಿಯಮ.

ಬೀದಿಗಳ ಹೆಸರುಗಳು.

121. ಯಾವ ಬೀದಿಯು ಯಾವ ಹೆಸರಿಂದ ತಿಳಿಯಲ್ಪಡತಕ್ಕದ್ದೋ-ಆ ಹೆಸರನ್ನು ಪ್ರೆಸಿಡೆಂಟರು ಆಗಿಂದಾಗ್ಯೆ ಪ್ರತಿ ಬೀದಿಯ ಎರಡು ಕೊನೆಗಳು ಯಾ ಮೂಲೆ ಯಾ ಮುಂಭಾಗ ಇಂತಾದ್ದರಲ್ಲಿ ಯಾ ಇಂತಾದ್ದರ ಸಮೀಪದಲ್ಲಿರುವ ಯಾವದಾದ್ದರೂ ಕಟ್ಟಡ ಯಾ ಗೋಡೆ ಯಾ ಸ್ಥಳ ಇಂತಾದ್ದರ ಪ್ರಸಿದ್ಧವಾದ ಪ್ರದೇಶದಲ್ಲಿ ಬರೆಯಿಸಿ ಕಟ್ಟಿಸಬಹುದು; ಅಥವಾ ಬಣ್ಣದಿಂದ ಬರೆಯಿಸಬಹುದು. ಮತ್ತು ಯಾವನು, ಅಂತಾ ಹೆಸರನ್ನು ನಾಶ ಪಡಿಸುತ್ತಾನೋ, ಕಿತ್ತಿ ಹಾಕುತ್ತಾನೋ, ಕೆಡಿಸುತ್ತಾನೋ, ಅಥವಾ ಪ್ರೆಸಿಡೆಂಟರ ಅಪ್ಪಣೇ ಮೇಲೆ ಕಟ್ಟಲ್ಪಟ್ಟ ಹೆಸರು ಶಿವಾಯಿ ಬೇರೇ ಹೆಸರನ್ನು ಇಡುತ್ತಾನೋ ಅವನು ಇಪ್ಪತ್ತು ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಮನೆಗಳಿಗೆ ನಂಬರಗಳು.

122. ಯಾವದಾದರೂ ಕಟ್ಟಡದ ಹೊರಗಿನ ಪಾರ್ಶ್ವದಲ್ಲಿ ಪ್ರಸಿದ್ಧವಾದ ಸ್ಥಳದೊಳಗೆ, ಅಥವಾ ಬೀದಿಯ ಕಡೆಗೆ ಇರತಕ್ಕ ಸದರೀ ಕಟ್ಟಡದ ಆವರಣದ ಬಾಗಲಲ್ಲಿ ಪ್ರೆಸಿಡೆಂಟರು ಆಗಿಂದಾಗ್ಯೆ ಒಂದು ನಂಬರನ್ನು ಹಾಕಿಸಬಹುದು. ಮತ್ತು ಅಂತಾ ಯಾವ ನಂಬರನ್ನಾಗಲಿ ಯಾವನು ನಾಶಪಡಿಸುತ್ತಾನೋ, ಕಿತ್ತಿಹಾಕುತ್ತಾನೋ, ಕೆಡಿಸುತ್ತಾನೋ, ಅಂತಾವನು ಇಪ್ಪತ್ತು ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಕದಗಳು ವಗೈರೆ ಹೊರಪಾರ್ಶ್ವಕ್ಕೆ ತೆರೆಯುವಂತೆ ಇರಕೂಡದು.

123. ಈ ಕಾನೂನ ಜಾರೀಲಿ ಬಂದ ತರುವಾಯ ಇಡೋಣಾದ ಯಾವದಾದರೂ ಕದಗಳು, ಗೇಟುಗಳು, ಅಗಳಗಳು, ಮೊದಲನೇ ಅಂತಸ್ತಿನ ಕಿಟಿಕೇಗಳು, ಇಂತಾವು ಯಾವ ಪಬ್ಲಿಕ ಬೀದಿಯಲ್ಲಾಗಲಿ ತೆರೆಯುವ ಹಾಗಿದ್ದ ಪಕ್ಷಕ್ಕೆ ಅವುಗಳು ಆ ಮೇರೆ ಹೊರಗೆ ಬಾರದಂತೆಯೂ ಅಟಕಾವಾಗದಂತೆಯೂ ತಗಲಿಸತಕ್ಕದ್ದು ಯಾ ಇಡಲ್ಪಡತಕ್ಕದ್ದು. ಮತ್ತು ಅಂತಾ ಯಾವ ಕದ, ಗೇಟ, ಅಗಳಿ, ಯಾ ಕಿಟಕಿ ಯಾಗಲಿ ಅಂತಾ ಯಾವ ಬೀದಿಯೊಳಗಾದರೂ ತೆರೆಯುವಂತೆ ಮತ್ತು ಅಟಕಾವಾಗುವಂತೆ. ತಗಲಿಸಲ್ಪಟ್ಟಲ್ಲಿ ಯಾ ಇಡಲ್ಪಟ್ಟಲ್ಲಿ ಸದರೀ ಕದಗಳು ವಗೈರೆ, ಯಾವ ಕಟ್ಟಡಗಳಿಗೆ ಸೇರಿದವೋ ಆ ಕಟ್ಟಡಗಳ ಮಾಲೀಕನು ಯಾ ವಾಸಸ್ಥನು, ಆ ಬಗ್ಯೆ ಪ್ರೆಸಿಡೆಂಟರಿಂದ ನೋಟಿಸ ಬಂದ ಎಂಟು ದಿನಗಳೊಳಗಾಗಿ, ಸದರೀಮೇರೆ ಬೀದೀ ಕಡೆಗೆ ತೆರೆಯದಂತೆಯೂ, ಪ್ರೆಸಿಡೆಂಟರ ಅಭಿಪ್ರಾಯದಲ್ಲಿ ಅಟಕಾವ ಉಂಟಾಗದಂತೆಯೂ ಬದಲಾಯಿಸತಕ್ಕದ್ದು. ಅಂತಾ ಮಾಲೀಕ ಯಾ ವಾಸಸ್ಥನು ಸದರೀ ಮೇರೆ ಬದಲಾವಣೀ ಮಾಡಿಸಲಿಕ್ಕೆ ಉಪೇಕ್ಷಿಸುವ ಸಂಗತಿಯಲ್ಲಿ ಪ್ರೆಸಿಡೆಂಟರೇ ಅಂತಾ ಬದಲಾವಣೆಯನ್ನು ಮಾಡಿ ಅದರ ಲಾಗವಡು ಮಾಲೀಕ ಯಾ ವಾಸಸ್ಥನಿಂದ ಕೊಡಲ್ಪಡತಕ್ಕದ್ದಲ್ಲದೆ ಇದರಲ್ಲಿ ಮುಂದೆ ವಿಧಿಸಲ್ಪಡುವ ಮೇರೆ ವಸೂಲ್ಮಾಡಲ್ಪಡತಕ್ಕದ್ದು.

ಹೊರಗಡೆಗಾಗಿ ತೆರೆಯುವ ಕದಗಳು ವಗೈರೇ ಬದಲಾಯಿಸತಕ್ಕದ್ದು.

124. ಈ ಕಾನೂನ ಜಾರೀಲಿ ಬರುವದಕ್ಕೆ ಪೂರ್ವ ಇಡಲ್ಪಟ್ಟ ಯಾವ ಕದ, ಗೇಟು, ಅಗಳಿ, ಕೀಳಂತಸ್ತು ಕಿಟಕಿಗಳು ಇಂತಾವು ಯಾವ ಪಬ್ಲಿಕ ಬೀದಿಯಲ್ಲಾಗಲಿ ಹೊರಗಡೆ ತೆರೆಯುವಂತೆ ತಗಲಿಸಲ್ಪಟ್ಟು ಯಾ ಇಡಲ್ಪಟ್ಟಲ್ಲಿ ಅಥವಾ ಅಟಕಾವ ಉಂಟುಮಾಡಿದರೆ, ಇದರ ಹಿಂದಿನ ಕಡೇ ಸೆಕ್ಷನಿನಲ್ಲಿ ನಮೂದಿಸಿದ ಪ್ರಕಾರ ನೋಟಿಸ ಕೊಡಲ್ಪಟ್ಟ ತರುವಾಯ ಬದಲಾಯಿಸುವದಕ್ಕೆ ತಪ್ಪಿದ ಮೇಲೆ ಪ್ರೆಸಿಡೆಂಟರು, ಅದರ ಯಾವ ಭಾಗವೂ ತೆರೆಯಲ್ಪಟ್ಟಾಗ ಅಟಕಾವ ಉಂಟುಮಾಡದಂತೆ ಬದಲಾಯಿಸಬಹುದು, ಅಂತಾ ಬದಲಾವಣೆಯ ಲಾಗವಡು ಮ್ಯುನಿಸಿಪಲ್ ಇಲಾಖೆಯವರಿಂದ ಕೊಡಲ್ಪಡತಕ್ಕದ್ದು.

ಕಟ್ಟಡಗಳಿಗೆ ದೋಣಿಗಳನ್ನೂ ನಳ್ಳಿಗಳನ್ನೂ ಇಡತಕ್ಕದ್ದು.

125. ಯಾವ ಪಬ್ಲಿಕ ಬೀದಿಯಲ್ಲಾಗಲಿ ಇರುವ ಪ್ರತಿ ಕಟ್ಟಡದ ಮಾಲೀಕನು ಪ್ರೆಸಿಡೆಂಟರಿಂದ ಆ ಬಗ್ಯೆ ನೋಟಿಸ ಕೊಡಲ್ಪಟ್ಟ ತರುವಾಯ ಹದಿನೈದು ದಿನಗಳೊಳಗಾಗಿ ಅಂತಾ ಕಟ್ಟಡದ ಛಾವಣಿಯಿಂದ ವ ಇತರ ಭಾಗಗಳಿಂದ ಬರುವ ನೀರು ವಾಟವಾಗಿ ಹರಿದು ಹೋಗುವ ಬಗ್ಯೆ ಪ್ರೆಸಿಡೆಂಟರು ಹುಕುಂ ಮಾಡುವ ಪ್ರಕಾರ ಆ ನೀರನ್ನು ಆಚೆಗೆ ಬಿಡುವ ಬಗ್ಯೆ ಸರಿಯಾದ ದೋಣಿಗಳನ್ನೂ ನಳ್ಳಿಗಳನ್ನೂ ಇಡತಕ್ಕದ್ದಲ್ಲದೆ, ಅವುಗಳನ್ನು ಸರಿಯಾದ ಸ್ಥಿತಿಯಲ್ಲಿಟ್ಟಿರತಕ್ಕದ್ದು. ಮೇಲೆ ಕಂಡ ಕಾಲದೊಳಗಾಗಿ ಅಂತಾ ನೋಟಿಸ ಪ್ರಕಾರ ನಡಿಸಲ್ಪಡದ ಪಕ್ಷಕ್ಕೆ ಮಾಲೀಕನಾಗಲಿ ವಾಸಸ್ಥನಾಗಲಿ ಹಾಗೆ ತಪ್ಪುವಂತಾ ಪ್ರತಿ ದಿನಕ್ಕೂ ಹತ್ತು ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಹಿಂದಾ ಕಟ್ಟಲ್ಪಡತಕ್ಕ ಮುಂದುಬ್ಬು ವಗೈರೆಯನ್ನು ಪ್ರೆಸಿಡೆಂಟರು ತೆಗಿಸಿ ಹಾಕಬಹುದು.

126. ಈ ಕಾನೂನು ಜಾರೀಲಿ ಬಂದ ತರುವಾಯ, ಪ್ರೆಸಿಡೆಂಟರು ಯಾವದಾದರೂ ಕಟ್ಟಡದ ಮಾಲೀಕನಿಗೆ ಯಾ ವಾಸಸ್ಥನಿಗೆ, ಅಂತಾ ಕಟ್ಟಡಕ್ಕೆ ಎದುರಾಗಿ ಯಾ ಮುಂದು ಗಡೆಗೆ ಉಬ್ಬಿರುವಂತೆ ಕಟ್ಟಲ್ಪಟ್ಟ ಮುಂದುಬ್ಬನ್ನಾಗಲಿ, ಒತ್ತುವರಿಯನ್ನಾಗಲಿ ಅಟಕಾವನ್ನಾಗಲಿ, ತೆಗದು ಹಾಕುವಂತೆ ಬರವಣಿಗೇ ಮೂಲಕ ನೋಟಿಸ ಕೊಡಬಹುದು. ಅಂತಾ ಮಾಲೀಕ ಯಾ ವಾಸಸ್ಥನು ಅಂತಾ ನೋಟಿಸ್ ತನಗೆ ತಲಪಿದ ತರುವಾಯ ಹದಿನೈದು ದಿನಗಳೊಳಗಾಗಿ, ಪ್ರೆಸಿಡೆಂಟರಿಂದ ನಿಯಮಿಸಲ್ಪಟ್ಟಿರತಕ್ಕ ರೀತಿಯಾಗಿ ಅಂತಾ ಮುಂದುಬ್ಬನ್ನು, ಯಾ ಒತ್ತುವರಿಯನ್ನು ಯಾ ಅಟಕಾವನ್ನು ತೆಗದು ಹಾಕತಕ್ಕದ್ದು. ಹಾಗೆ ತೆಗಿಯುಲಿಕ್ಕೆ ತಪ್ಪಿದಲ್ಲಿ ಇನ್ನೂರು ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು- ಮತ್ತು ಪ್ರೆಸಿಡೆಂಟರು, ಅಂತಾ ಸಂಗತಿಯಲ್ಲಿ ಅಂತಾ ಮುಂದುಬ್ಬನ್ನಾಗಲಿ, ಒತ್ತುವರಿಯನ್ನಾಗಲಿ, ಆಟಕಾವನ್ನಾಗಲಿ ತೆಗದು ಹಾಕಿ ಹಾಗೆ ತೆಗದು ಹಾಕಿದ್ದರ ಲಾಗವಡನ್ನು ಹಾಗೆ ತಪ್ಪಿದ ಮಾಲೀಕನಿಂದಾಗಲಿ ವಾಸಸ್ಥನಿಂದಲಾಗಲಿ ಕೊಡಿಸಲ್ಪಟ್ಟು, ಇದರಲ್ಲಿ ಮುಂದೆ ವಿಧಿಸಲ್ಪಟ್ಟಿರುವ ಪ್ರಕಾರ ವಸೂಲ್ ಮಾಡಲ್ಪಡತಕ್ಕದ್ದು.

ನಿಯಮ.

ಪರಂತು ಸದರೀ ಲಾಗವಡು ವಾಸಸ್ಥನಿಂದ ಕೊಡಲ್ಪಟ್ಟ ಪಕ್ಷಕ್ಕೆ, ಸದರೀ ಮುಂದುಬ್ಬು ವಗೈರೆಯನ್ನು ತೆಗದು ಹಾಕಲಿಕ್ಕಾಗಲಿ ಬದಲಾಯಿಸಲಿಕ್ಕಾಗಲಿ ಹಿಡಿಯುವ ಖರ್ಚು ಕಟ್ಟಡದ ಮಾಲೀಕನಿಗೆ ತಾನು ಕೊಡತಕ್ಕ ಬಾಡಿಗೆಯಲ್ಲಿ ವಜಾ ಮಾಡಿಕೊಳ್ಳಲಿಕ್ಕೆ ಅರ್ಹನಾಗಿರತಕ್ಕದ್ದು. ಆದರೆ ಅಂತಾ ಮುಂದುಬ್ಬುಗಳಾಗಲಿ ಒತ್ತುವರಿಗಳಾಗಲಿ, ಅಟಕಾವ್‌ಗಳಾಗಲಿ ತನ್ನ ದೆಶೆಯಿಂದ ಮಾಡಲ್ಪಟ್ಟು ಯಾ ಇಡಲ್ಪಟ್ಟಿದ್ದರೆ ಹಾಗೆ ವಜಾಕ್ಕೆ ಅರ್ಹನಾಗತಕ್ಕದ್ದಲ್ಲವು.

ಹಾಲಿ ಇರುವ ಮುಂದುಬ್ಬು ವಗೈರೆ ತೆಗಿಸಿಹಾಕುವಿಕೆ.

127. ಪ್ರೆಸಿಡೆಂಟರು, ಈ ಕಾನೂನು ಜಾರೀಲಿ ಬರುವದಕ್ಕೆ ಪೂರ್ವ ಯಾವ ಪಬ್ಲಿಕ್ ಬೀದಿಯಲ್ಲಾಗಲಿ ಇರುವ ಯಾವದಾದರೂ ಕಟ್ಟಡಕ್ಕೆ ಎದುರಾಗಿ ಯಾ ಮುಂದು ಗಡೆ ಕಟ್ಟಲ್ಪಟ್ಟಿರುವ ಯಾ ಇಡಲ್ಪಟ್ಟಿರುವ ಅಂತಾ ಯಾವ ಮುಂದುಬ್ಬು ಯಾ ಒತ್ತುವರಿ ಯಾ ಅಟಕಾವ್ ಇಂತಾದ್ದನ್ನು ತೆಗಿಸಿ ಹಾಕಬಹುದು, ಯಾ ತಮಗೆ ಯುಕ್ತತೋರುವ ಮೇರೆ ಬದಲಾಯಿಸಿ ಬಿಡಬಹುದು;

ತೆಗಿಸಿಹಾಕಲಿಕ್ಕೆ ನೋಟಿಸ.

ಪರಂತು ಯಾವ ಕಟ್ಟಡಕ್ಕೆ ಯೆದುರಾಗಿ ಯಾ ಮುಂದುಗಡೆ ಅಂತಾ ಮುಂದುಬ್ಬು, ಯಾ ಒತ್ತುವರಿ ಯಾ ಅಟಕಾವ್ ಇರುತ್ತೋ ಆ ಕಟ್ಟಡದ ವಾಸಸ್ಥನಿಗೆ ಉದ್ದೇಶಿಸಲ್ಪಟ್ಟ ಅಂತಾ ತೆಗದು ಹಾಕೋಣ ಯಾ ಬದಲಾಯಿಸೋಣವನ್ನು ಕುರಿತು ಅಂತಾ ಬದಲಾಯಿಸೋಣವಾಗಲಿ, ತೆಗದುಹಾಕೋಣವಾಗಲಿ ಷುರೂ ಮಾಡಲ್ಪಡುವದಕ್ಕೆ ಮೂವತ್ತು ದಿನಗಳ ಮುಂಚಿತವಾಗಿ ಸದರೀ ಪ್ರೆಸಿಡೆಂಟರು ನೋಟಿಸ ಕೊಡತಕ್ಕದ್ದು.

ಈಡು ಯಾವಾಗ ಕಟ್ಟಿಕೊಡತಕ್ಕದ್ದು.

ಮತ್ತು ಅಂತಾ ಮುಂದುಬ್ಬಾಗಲಿ, ಒತ್ತುವರಿಯಾಗಲಿ ಅಟಕಾವಾಗಲಿ ನ್ಯಾಯತಃ ಮಾಡಲ್ಪಟ್ಟಿದ್ದ ಪಕ್ಷಕ್ಕೆ ಹಾಗೆ ತೆಗದು ಹಾಕೋಣ ಯಾ ಅಂತಾ ಬದಲಾವಣಿ ಇಂತಾದ್ದರಿಂದ ನುಕ್ಸಾನಪಡುವ ಪ್ರತಿ ಮನುಷ್ಯನಿಗೂ ಕಮಿಷನರಗಳು ನ್ಯಾಯವಾದ ಈಡು ಕಟ್ಟಿ ಕೊಡತಕ್ಕದ್ದು. ಅಂತಾ ಈಡು ಮೊಬಲಗಿನ ವಿಷಯದಲ್ಲಿ ಯೇನಾದರೂ ತಕರಾರ್ ಉಂಟಾದ ಪಕ್ಷಕ್ಕೆ, ನುಕ್ಸಾನ ವ ಲಾಗವಡ ಇವುಗಳ ವಿಷಯದಲ್ಲಿ ಹುಟ್ಟುವ ತಕರಾರ್‌ಗಳನ್ನು ವ್ಯವಸ್ಥೆ ಮಾಡುವ ಉದ್ದಿಶ್ಯ ಇದರಲ್ಲಿ ಮುಂದೆ ವಿಧಿಸಲ್ಪಟ್ಟ ಪ್ರಕಾರ ವ್ಯವಸ್ಥೆ ಯಾಗತಕ್ಕದ್ದು.

ಕಟ್ಟಡಗಳಲ್ಲಿ ಹೊರಟಿರುವ ಕೆಲವು ಮುಂದುಬ್ಬುಗಳನ್ನು ಪ್ರೆಸಿಡೆಂಟರು ಅಂಗೀಕರಿಸಬಹುದು.

128. ಪಬ್ಲಿಕ್ ಬೀದಿಗಳಲ್ಲಿರುವ ಕಟ್ಟಡಗಳ ಮಾಲೀಕರಿಗಾಗಲಿ, ವಾಸಸ್ಥರಿಗಾಗಲಿ, ಸದರೀ ಕಟ್ಟಡಗಳ ಮುಂದುಗಡೆ ಯಾ ಬೀದಿಗಳ ಮೇಲೆ ಜಗಲೀಗಳ . ಮೇಲೂ, ತಳಪರಸೇಗಳ ಮೇಲೆ ತಾಳ್ವಾರಗಳು, ಕೈಸಾಲೆಗಳು, ಸನ್‌ಷೇಡಗಳು ವೆದರ್ ಫ್ರೇಂಗಳು ಇನ್ನೂ ಇಂತಾವು ಕಟ್ಟಡಗಳ ವರಸೇಗೆ ಐದು ಅಡಿಗಿಂತ ಜಾಸ್ತೀ ಇಲ್ಲದೇ ಮುಂದುಬ್ಬುಗಳನ್ನು ಇಟ್ಟುಕೊಳ್ಳುವಂತೆ ಪ್ರೆಸಿಡೆಂಟರು ಅಪ್ಪಣೇ ಕೊಡಬಹುದು.

ಕಟ್ಟಡಗಳ ಛಾವಣಿಗಳೂ, ಹೊರಗಿನ ಗೋಡೆಗಳೂ, ಬೆಂಕಿ ಹತ್ತಿಕೊಳ್ಳುವ ಸಾಮಾನಿ

129. ಈ ಕಾನೂನು ಜಾರೀಲಿ ಬಂದ ತರುವಾಯ ಷಹರಿನಲ್ಲಿ ಕಟ್ಟೋಣಾದ ಯಾ ಖೋಲ್ ಬಂದೀ ಮಾಡೋಣಾದ ಕಟ್ಟಡಗಳ ಹೊರಗಿನ ಛಾವಣಿಗಳು ತಾಳ್ವಾರಗಳು, ಚಪ್ಪರಗಳು, ಗೋಡೆಗಳು, ಯಿಂತಾವು ಆಜೂಬಾಜೂ ಕಟ್ಟಡಗಳಿಗೆ ಅಪಾಯ

ನಿಂದ ಕಟ್ಟಲ್ಪಡತಕ್ಕದ್ದಲ್ಲವು.

ಕರವಾಗುವಂತಾ ಸ್ಥಳಗಳಲ್ಲಿಯೂ, ಅಂತಾ ರೀತಿಯಾಗಿಯೂ, ಹುಲ್ಲಿನಿಂದಾಗಲಿ, ಯಲೆಗಳಿಂದಾಗಲಿ, ಚಾಪೆಯಿಂದಾಗಲಿ, ಬೆಂಕಿಗೆ ಬೇಗ ಹತ್ತಿಕೊಳ್ಳುವ ಅಂತಾ ಯಿತರ ಪದಾರ್ಥಗಳಿಂದಾಗಲಿ, ಮಾಡಲ್ಪಡತಕ್ಕದ್ದಲ್ಲವು. ಮೇಲೆ ಕಂಡಂತಾ ಸ್ಥಳದಲ್ಲಿಯೂ ಆರೀತಿಯಾಗಿಯೂ ಅಂತಾ ಸಾಮಾನಿನಿಂದಲೂ ಮಾಡೋಣಾದ ಹಾಲೀ ಯಿರತಕ್ಕ ಹೊರಗಿನ ಛಾವಣೀ, ತಾಳ್ವಾರ, ಚಪ್ಪರ, ಯಾ ಗೋಡೆ ಯಿಂತಾದ್ದುಳ್ಳ ಯಾವದಾದರೂ ಕಟ್ಟದ ಮಾಲೀಕನು ಈ ಕಾನೂನು ಜಾರೀಲಿ ಬಂದ ತರುವಾಯ, ಪ್ರೆಸಿಡೆಂಟರ ಅನುಮತೀ ಯಿಲ್ಲದೆ ಅನ್ಯಥಾ ಅಂಥಾ ಛಾವಣೀ ಯಾ ಗೋಡೆಯು ಯಿರಗೊಡಿಸುವದು ನ್ಯಾಯವಾಗಿರತಕ್ಕದ್ದಲ್ಲವು, ಪರಂತು ಸದರೀ ನಿಬಂಧನೆಗಳು ಜಾರಿಯಾಗುವ ದರೋಬಸ್ತು ಸಂಗತಿಗಳಲ್ಲಿಯೂ ನಡೆದಿರುವ ಖರ್ಚಿನಲ್ಲಿ ಅಥವ ಪಕ್ಷ ಆರವಾಸಿ ಖರ್ಚು ಮ್ಯುನಿಸಿಪೆಲ್ ಇಲಾಖೆಯವರಿಂದ ಕೊಡಲ್ಪಡತಕ್ಕದ್ದು, ಮತ್ತು ಯಾವನು ಬರವಣಿಗೇ ಮೂಲಕವಾಗಿ ಪ್ರೆಸಿಡೆಂಟರ ಅನುಮತಿಶಿವಾಯಿ ಅಂತಾ ಸಾಮಾನುಗಳಿಂದ ಯಾವದಾದರೂ ಹೊರಗಿನ ಛಾವಣಿಯನ್ನು ತಾಳ್ವಾರವನ್ನು ಚಪ್ಪರ ಯಾ ಗೋಡೆಯನ್ನು ಮಾಡುತ್ತಾನ್ನೋ ಅಥವಾ ಯಿದರಲ್ಲಿ ಅಡಗಿರುವ ನಿಬಂಧನೆಗಳಿಗೆ ವಿರುದ್ಧವಾಗಿ, ಅಂತಾ ಸಾಮಾನಿನಿಂದ ಮಾಡಲ್ಪಟ್ಟ ಯಾವ ಛಾವಣಿಯಾಗಲಿ, ತಾಳ್ವಾರವಾಗಲಿ, ಚಪ್ಪರವಾಗಲಿ, ಗೋಡೆಯಾಗಲಿ ಯಾವನು ಹಾಗೆಯೇ ಯಿರಗೊಡಿಸುತ್ತಾನೊ ಆ ಮನುಷ್ಯನು ಅಂತಾದ್ದನ್ನು ಹಾಗೆ ಯಿರಗೊಡಿಸಿದ ಪ್ರತಿ ದಿನಕ್ಕೂ ಹತ್ತು ರೂಪಾಯಿಗೆ ಮೀರದ ವೊಂದು ಜುರ್ಮಾನೆಗೆ ಗುರಿಯಾಗತಕ್ಕದ್ದು. ಈ ಸೆಕ್ಷನ್ ಅನುಸರಿಸಿ ಯಾವ ಮನುಷ್ಯನಾಗಲಿ ಬಾತಮಿ ಕೊಡಬಹುದು ಮತ್ತು ಫಿರ್ಯಾದ್ ಮಾಡಬಹುದು.

ಕಟ್ಟವಗೈರೆ ಹಾಳಾಗಿ ಮತ್ತು ಅಪಾಯಕರವಾದ ಸ್ಥಿತಿಯುಲ್ಲಿರುವಿಕೆ.

130. ಯಾವ ಬೀದಿಯಲ್ಲಾಗಲಿ ಯಿರುವ ಯಾವ ಕಟ್ಟವಾದರೂ ಗೋಡೆಯಾದರೂ ಅದಕ್ಕೆ ಸೇರಿಸಲ್ಪಟ್ಟ ಮತ್ತೇನಾದರೂ ಹಾಳಾದ ಸ್ಥಿತಿಯಲ್ಲಿರುವದಾಗಿ, ಅಥವಾ ಪ್ರಾಯಶಃ ಬೀಳುವ ಹಾಗೆ ಯಿರುದಾಗಿ ಅಥವಾ ಅಂತಾ ಕಟ್ಟದ ವಾಸಸ್ಥರಿಗೆ, ಯಾ ಆಸಪಾಸ್ ಕಟ್ಟಗಳ ವಾಸಸ್ಥರಿಗೆ ಯಾ ಅನುಭವದಾರ್ರಿಗೆ ಯಾ ಬೀದಿಯಲ್ಲಿ ಹೋಗತಕ್ಕವರಿಗೆ ಯಾವ ರೀತಿಯಿಂದಲಾದರೂ ಅಪಾಯಕರವಾಗುವದಾಗಿ ಪ್ರೆಸಿಡೆಂಟರಿಗೆ ತೋರಿಬಂದರೆ ಸದರೀ ಪ್ರೆಸಿಡೆಂಟರು ತಮಗೆ ಜರೂರ್ ಕಂಡ ಬೀದಿಯಲ್ಲಿ ಹೋಗತಕ್ಕವರ ಕ್ಷೇಮಕ್ಕೋಸ್ಕರ ತಕ್ಕ ಆವರಣವನ್ನು ಯಾ ಗೋಡೆ ಮುಂತಾದ್ದನ್ನು ಕೂಡ್ಲೆ ಹಾಕಿಸತಕ್ಕದ್ದು. ಮತ್ತು ಮಾಲೀಕನು ಫಲಾನೆಯವನೆಂತ ತಿಳಿದಿದ್ದು ಮ್ಯುನಿಸಿಪೆಲ್ ಸರಹದ್ದುಗಳೊಳಗೆ ವಾಸಮಾಡತಕ್ಕವನಾಗಿದ್ದಲ್ಲಿ ಅವನಿಗೆ ಬರವಣಿಗೆಯಲ್ಲಿ ನೋಟಿಸ ಕೊಡತಕ್ಕದ್ದಲ್ಲದೆ ಅಂತಾ ನೋಟೀಸನ್ನು ಅಂತಾ ಕಟ್ಟವಗೈರೆಯ ಬಾಗಲಿಗಾಗಲಿ ಯಿತರ ಪ್ರಸಿದ್ಧವಾದ ಭಾಗದೊಳಗಾಗಲಿ ಚಿಕಟಾಯಿಸತಕ್ಕದ್ದು ಅಥವಾ ಅನ್ಯಥಾ, ವಾಸಮಾಡತಕ್ಕವನು ಯಾವನಾದರೂ ಯಿದ್ದರೆ ಅವನಿಗೆ ಕೊಡತಕ್ಕದ್ದು ಹಾಗೆ ನೋಟಿಸ ಕೊಡುವದರಲ್ಲಿ ಸಂದರ್ಭಾನುಸಾರ ಅಂತಾ ಕಟ್ಟವನ್ನು ಯಾ ಗೋಡೆಯನ್ನು ಯಾ ಅದಕ್ಕೆ ಸೇರಿಸಲ್ಪಟ್ಟಿರುವ ವಸ್ತುವನ್ನು ಕೂಡ್ಲೆ ತೆಗೆದುಹಾಕುವಂತೆ ಯಾ ಬಂದೋಬಸ್ತು ಮಾಡುವಂತೆ ಯಾ ದುರಸ್ತುಮಾಡುವಂತೆ ಅಂತಾ ಮಾಲೀಕನಿಗೆ ಯಾ ವಾಸಸ್ಥನಿಗೆ ತಾಕೀದ ಮಾಡತಕ್ಕದ್ದು. ಮತ್ತು ಅಂತಾ ಮಾಲೀಕ ಯಾ ವಾಸಮಾಡತಕ್ಕವನು ಅಂತಾನೋಟೀಸ್ ಕೊಟ್ಟ ಮೂರುದಿನಗಳೊಳಗಾಗಿ ಸದರೀ ಕಟ್ಟವನ್ನು ರಿಪೇರ ಮಾಡಲಿಕ್ಕೆ ಯಾ ಕಿತ್ತಿಹಾಕಲಿಕ್ಕೆ ಯಾ ಬಂದೋಬಸ್ತು ಮಾಡಲಿಕ್ಕೆ ಷುರೂಮಾಡಿ ಯುಕ್ತವಾದ ಮುತ್ತವರ್ಜಿಯಿಂದ ಪೂರೈಸದೇ ಹೋದಲ್ಲಿ ಪ್ರೆಸಿಡೆಂಟರು ಸದರೀ ಕಟ್ಟ, ಗೋಡೆ ಯಾ ಇತರವಸ್ತು ಯಿಂತಾದ್ದರ ಪೈಕಿ ವಿಸಿಷ್ಟವನ್ನಾಗಲಿ ತಾವು ಜರೂರೆಂದು ಭಾವಿಸುವಷ್ಟು ಭಾಗವನ್ನಾಗಲಿ ಕಿತ್ತಿ ಹಾಕಿಸತಕ್ಕದ್ದು. ಯಾ ರಿಪೇರ ಮಾಡಿಸತಕ್ಕದ್ದು ಯಾ ಯಿತರ ವಿಧದಿಂದ ಬಂದೋಬಸ್ತು ಪಡಿಸತಕ್ಕದ್ದು. ಹಾಗೆ ಮಾಡಿಸುವದರಲ್ಲಿ ಅವರು ಸದರೀಕಟ್ಟದ ಸಾಮಾನುಗಳನ್ನು ಸದರೀ ಬಗ್ಯೆ ತಮಗೆ ಯುಕ್ತತೋರುವ ಪ್ರಕಾರ ಉಪಯೋಗಿಸಬಹುದು. ಮತ್ತು ಆ ಬಗ್ಯೆ ಹಿಡಿದ ದರೋಬಸ್ತುಲಾಗವಡೂ ಸದರೀ ಕಟ್ಟಗಳ ಮಾಲೀಕನಿಂದ ಕೊಡಲ್ಪಟ್ಟು ಯಿದರಲ್ಲಿ ಮುಂದೆ ವಿಧಿಸಲ್ಪಟ್ಟ ರೀತಿಯಾಗಿ ವಸೂಲ್ ಮಾಡಲ್ಪಡತಕ್ಕದ್ದು.

ಹಾಳಾಗಿರುವ ಕಟ್ಟಗಳ ಸಾಮಾನುಗಳನ್ನು ಹರಾಜ್ ಹಾಕಿಸಿ ಬಿಡೋಣ.

131. ಮೇಲ್ಕಂಡ ಅಧಿಕಾರದಬಲದಿಂದ ಅಂತಾ ಯಾವ ಕಟ್ಟವಾಗಲಿ, ಗೋಡೆಯಾಗಲಿ, ಆ ಪೈಕಿ ಯಾವ ಭಾಗವಾಗಲಿ, ಕಿತ್ತಿ ಹಾಕಲ್ಪಟ್ಟಲ್ಲಿ ಕಮ್ಮಿಷನರಗಳು ಅದರ ಸಾಮಾನುಗಳನ್ನು, ಅಥವಾ ಆ ಪೈಕಿ ಎಷ್ಟು ಕಿತ್ತಿ ಹಾಕಲ್ಪಡುತ್ತೋ ಅಷ್ಟನ್ನು ಹರಾಜ ಹಾಕಿಸಿ, ಅಂತಾ ಹರಾಜ ಹುಟ್ಟುವಳೀ ಹಣವನ್ನು ಕಿತ್ತಿ ಹಾಕುವ ಬಗ್ಯೆ ಹಿಡಿದ ಲಾಗವಡನ್ನು ಕೊಡತಕ್ಕ ಬಗ್ಯೆ ವಿನಿಯೋಗಿಸಬಹುದು, ಅಂತಾ ವಿಕ್ರಯದ ಮೊಬಲಗಿನ ಪೈಕಿ ಖರ್ಚು ಜಾತಾ ಉಳಿದಿರತಕ್ಕದ್ದನ್ನು ಅಂತಾ ಕಟ್ಟದ ಯಾ ಗೋಡೆಯ ಮಾಲೀಕನು ಹರಾಜ್

ತಾರೀಖ್ ಲಾಗಾಯತ್ ಆರು ತಿಂಗಳೊಳಗಾಗಿ ಬಂದು ಕೇಳಿದಲ್ಲಿ ಅವನಿಗೆ ಕೊಟ್ಟು ಬಿಡತಕ್ಕದ್ದು. ಹಾಗಿಲ್ಲದೆ ಅನ್ಯಥಾ ಅವನಿಗೆ ಸಲ್ಲತಕ್ಕದ್ದಲ್ಲವು. ಕಮಿಷನರುಗಳು ಅಂತಾ ಸಾಮಾನುಗಳನ್ನು ಮೇಲೆಕಂಡ ಕಾರ್ಯಗಳಿಗೋಸ್ಕರ ವಿಕ್ರಯಿಸಿದಾಗ್ಯೂ ಸದರೀ ಲಾಗವಡಿನ ವಿಶಿಷ್ಟ ಮೊಬಲಗನ್ನೂ ಕೊಡುವಂತೆ ಬಲಾತ್ಕರಿಸಲಿಕ್ಕೆ ಅವರಿಗೆ ಈ ಕಾನೂನು ದೆಶೆಯಿಂದ ಯಾವ ಉಪಾಯ ಉಂಟುಮಾಡಲ್ಪಟ್ಟಿರುತ್ತೋ ಮೇಲೆ ಕಂಡ ಹರಾಜಿನಲ್ಲಿ ಹುಟ್ಟಿದ ಮೊಬಲಗನ್ನು ವಿನಿಯೋಗಿಸಿದ ಬಳಿಕ ಬಾಕೀ ಬರಬೇಕಾಗಿರುವಷ್ಟು ಮೊಬಲಗನ್ನು ಕೊಡುವಂತೆ ಬಲಾತ್ಕರಿಸಲಿಕ್ಕೆ ಸಹ ಅದೇ ಉಪಾಯವೇ ಉಂಟಾಗಿರತಕ್ಕದ್ದು.

ಒಕ್ಕಲಿಲ್ಲದೇ ಬಿಟ್ಟು ಬಿಟ್ಟ ಮನೆಗಳನ್ನೂ ಜಮೀನುಗಳನ್ನೂ ಬಂದೋಬಸ್ತು ಪಡಿಸುವಿಕೆ, ಆವರಣ ಕಲ್ಪಿಸೋಣ ಮುಂತಾದ್ದು.

132. ಯಾವ ಕಟ್ಟಡವಾಗಲಿ, ಜಮೀನಾಗಲಿ ಜನಗಳು ಬಿಟ್ಟುಬಿಟ್ಟು ಹೋಗುವದರಿಂದ, ಯಾ ಉಪಯೋಗಿಸದೇ ಇರುವದರಿಂದ ಯಾ ಬಾಧ್ಯತೇ ತಕರಾರ್ ದೆಶೆಯಿಂದ ಯಾ ಇತರ ಸಬಬಿನಿಂದ ಖಾಲೀ ಇದ್ದು ಅದರಿಂದ ಶೋಮಾರಿಗಳಿಗೂ ಪೋಕರೀ ಜನಗಳಿಗೂ ಆಸ್ಪದವಾಗಿ ಇದ್ದರೆ ಅಥವಾ ಪ್ರೆಸಿಡೆಂಟರ ಅಭಿಪ್ರಾಯ ಪ್ರಕಾರ ಯಾವ ವಿಧದಿಂದಲಾದರೂ ಬಾಧಕವಾದರೆ, ಪ್ರೆಸಿಡೆಂಟರು, ಕ್ರಮವಾಗಿ ವಿಚಾರಣೇ ಮಾಡಿದ ಬಳಿಕ, ಮಾಲೀಕನು ಫಲಾನೆಯವನೆಂತ ತಿಳಿದು ಮತ್ತು ಅವನು ಮ್ಯುನಿಸಿಪಲ್ ಸರಹದ್ದುಗಳೊಳಗೆ ವಾಸಸ್ಥನಾಗಿದ್ದಲ್ಲಿ ಅವನಿಗಾಗಲಿ ಮಾಲೀಕನೆಂತ ಬಾಧ್ಯತೇ ತರುವ ಮನುಷ್ಯನಿಗಾಗಲಿ ಬರವಣಿಗೆಯಿಂದ ನೋಟಿಸ್ ಕೊಡಿಸಬಹುದು. ಮತ್ತು ಸದರೀ ಕಟ್ಟಡ ಯಾ ಜಮೀನಿನಲ್ಲಿ ಸಂಬಂಧಪಟ್ಟ ಮನುಷ್ಯರು ಯಾರಾಗಲಿ ಅವರು ಸದರೀ ಖಾಲೀ ಮನೆಯನ್ನು ಬಂದೋಬಸ್ತು ಪಡಿಸುವಂತೆ, ಆವರಣ ಕಲ್ಪಿಸುವಂತೆ, ಪಾಕ್ ಮಾಡುವಂತೆ, ಗುಡಿಸುವಂತೆ ತಾಕೀದ್ ಮಾಡಿ ಅಂತಾ ನೋಟಿಸನ್ನು ಕಟ್ಟಡ ಯಾ ಜಮೀನು ಬಾಗಲಿಗಾಗಲಿ ಯಾವದಾದರೂ ಪ್ರಸಿದ್ಧವಾದ ಭಾಗದಲ್ಲಾಗಲಿ ಚಿಕಟಾಯಿಸುವಂತೆಯೂ ಮಾಡತಕ್ಕದ್ದು. ಮತ್ತು ಎಂಟು ದಿನಗಳೊಳಗಾಗಿ ಅಂತಾ ನೋಟಿಸ್ ಮೇರೆ ನಡಿಸಲ್ಪಡದೇ ಇದ್ದರೆ ಪ್ರೆಸಿಡೆಂಟರು ಜರೂರಿಯಾತ್ ಕಾಮಗಾರಿಗಳನ್ನು ಮಾಡಿಸಿ ಆ ಬಗ್ಯೆ ಹಿಡಿದ ವಿಶಿಷ್ಟವೂ ಕಟ್ಟಡ ಯಾ ಜಮೀನಿನ ಮಾಲೀಕನಿಂದ ಕೊಡಿಸಲ್ಪಟ್ಟು ಇದರಲ್ಲಿ ಮುಂದೆ ವಿಧಿಸಲ್ಪಟ್ಟ ಪ್ರಕಾರ ವಸೂಲ್ ಮಾಡಲ್ಪಡತಕ್ಕದ್ದು.

ಗಲೀಜಾಗಿರುವ ಕಟ್ಟಡಗಳು.

133. ಬೆಂಗಳೂರು ಷಹರ್ ಸರಹದ್ದುಗಳೊಳಗೆ ಇರುವ ಯಾವದಾದರೂ ಕಟ್ಟಣ ಯಾ ಜಮೀನು ಒಕ್ಕಲಿರತಕ್ಕದ್ದಾಗಿರಲಿ ಅನ್ಯಥಾ ಇರಲಿ ಅದರ ಮಾಲೀಕ ಯಾ ವಾಸಸ್ಥನಾದ ಯಾವನು ಸದರೀ ಕಟ್ಟಣ ವಗೈರೇ ಗಲೀಜ್ ಆಗಿ ಅಥವಾ ಹಾಳಾಗಿ ಅಥವಾ ಅನಾರೋಗ್ಯಕರವಾಗಿ ಅಥವಾ ದುರ್ಗಂಧವುಳ್ಳ ಕಳೇ ಗಿಡಗಳು ಬೆಳೆದುಹೋದ ಸ್ಥಿತಿಯಲ್ಲಿರುವಂತೆ ನೋಡುತ್ತಿರುತ್ತಾನೋ ಅವನು ಐವತ್ತು ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು. ಮತ್ತು ಅಂತಾ ತಪ್ಪಿತ ಸ್ಥಾಪನೇ ಆದ ಬಳಿಕ ಯಾವ ದಿನ ಅದು ನಡಿಸಲ್ಪಡುತ್ತೋ ಅಂತಾ ಪ್ರತಿ ದಿನಕ್ಕೂ ಹತ್ತು ರೂಪಾಯಿಗೆ ಮೀರದೆ ಒಂದು ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದು. ಸದರೀ ಮಾಲೀಕ ಫಲಾನೆಯವನೆಂತ ತಿಳಿಯಬಾರದೇ ಅಥವಾ ಸದರೀ ಸರಹದ್ದುಗಳೊಳಗೆ ವಾಸಮಾಡದೇ ಇದ್ದರೆ ಜರೂರಿಯಾತ್ ಕಾಮಗಾರಿಯನ್ನು ಪ್ರೆಸಿಡೆಂಟರೇ ಮಾಡಿಸಿ ಆ ಬಗ್ಯೆ ಹಿಡಿದ ವಿಶಿಷ್ಟ ಖರ್ಚನ್ನೂ ಇದರಲ್ಲಿ ಮುಂದೆ ವಿಧಿಸಲ್ಪಡುವ ಪ್ರಕಾರ ವಸೂಲ್ಮಾಡತಕ್ಕದ್ದು.

ಕಟ್ಟಡಗಳಲ್ಲಿ ಪ್ರವೇಶಿಸುವದಕ್ಕೂ ಪಾಕ್ ಮಾಡುವದಕ್ಕೂ ಅಧಿಕಾರ.

134. ಮ್ಯುನಿಸಿಪಲ್ ಕಮಿಷನರ್ಸ್ ಪ್ರೆಸಿಡೆಂಟರು, ಸೂರ್ಯೋದಯ ಮೊದಲು ಸೂರ್ಯಾಸ್ತಮಯದ ಪರ್ಯಂತ ಯಾವಾಗಲಾಗಲಿ ತಾವಾದರೂ ತಮ್ಮ ನೌಕರರ ಮಾರಿಫತ್ತಾದರೂ, ಇದರಲ್ಲಿ ಮುಂದೆ ವಿಧಿಸಲ್ಪಟ್ಟ ಪ್ರಕಾರ ನೋಟಿಸ್ ಕೊಟ್ಟ ಮೇಲೆ ದರೋಬಸ್ತು ಕಟ್ಟಡಗಳೊಳಗೂ ಪ್ರವೇಶಿಸಿ ನೋಡುವದು, ವಿಶಿಷ್ಟ ಕಟ್ಟಡವಾಗಲಿ ಯಾವ ಭಾಗವಾಗಲಿ ಕೂಡಲೇ ಆರೋಗ್ಯಕ್ಕೋಸ್ಕರ ಒಳಗೂ ಹೊರಗೂ ಸಹ ಸುಣ್ಣ ಬೊಳಿಸಲ್ಪಡುವಂತೆ ಅಥವಾ ಇತರ ರೀತಿಯಿಂದ ಪಾಕ್ ಮಾಡುವಂತೆ ಬರವಣಿಗೇ ಮೂಲಕ ಹುಕುಂ ಕೊಡುವದು ಸಹ ಅವರಿಗೆ ನ್ಯಾಯವಾಗಿರತಕ್ಕದ್ದು. ಅಂತಾ ಕಟ್ಟಡದ ಮಾಲೀಕ ಯಾ ವಾಸಸ್ಥನು, ತನಗೆ ಅಂತಾ ಹುಕುಂ ಕೊಡೋಣಾದ್ದು ಮೊದಲು ಎಂಟು ದಿನಗಳೊಳಗಾಗಿ ಆ ಮೇರೆ ಪಾಕ್ ಮಾಡಿಸಲಿಕ್ಕೆ ಉಪೇಕ್ಷಿಸಿದರೆ ಪ್ರೆಸಿಡೆಂಟರು ಆ ಕೆಲಸವನ್ನು ಮಾಡಿಸಬಹುದು. ಮತ್ತು ಆ ಬಗ್ಯೆ ಹಿಡಿದ ಲಾಗವಡು ಸದರೀ ಮಾಲೀಕ ಯಾ ವಾಸಸ್ಥನಿಂದ ಕೊಡಿಸಲ್ಪಟ್ಟು, ಇದರಲ್ಲಿ ಮುಂದೆ ವಿಧಿಸಲ್ಪಟ್ಟ ಮೇರೆ ವಸೂಲ್ಮಾಡಲ್ಪಡತಕ್ಕದ್ದು. ಮ್ಯುನಿಸಿಪಲ್ ಇಲಾಖೆಯ ಸಾನಿಟರಿ ಇನ್ಸ್ಪೆಕ್ಟರ್ ಎಂಬ ಜನಗಳ ಆರೋಗ್ಯ ವಿಷಯವನ್ನು ವಿಚಾರಣೇ ಮಾಡುವ ಅಧಿಕಾರಿಯು ರೋಗ ಅಂಟುವ ಕಟ್ಟಡಗಳನ್ನು ಹೊಗೆ ಹಾಕಿಸುವ ಬಗ್ಯೆ ಅಥವಾ ರೋಗ ನಿವೃತ್ತಿಯ ಬಗ್ಯೆ ಪ್ರೆಸಿಡೆಂಟರು ಬರವಣಿಗೇ ಮೂಲಕವಾದ ಮಂಜೂರಾತಿ ಅನುಸರಿಸಿ ಅಂತಾ ಕ್ರಮಗಳನ್ನು ಏರ್ಪಡಿಸತಕ್ಕದ್ದು.

...ರು ತಮಗೆ ಆವಶ್ಯಕ ತೋರಿ ...ಮ್ಮರ್ದವುಳ್ಳ ಕಟ್ಟಗಳನ್ನು ತಗ್ಗಿ ...ತಕ್ಕ ಕ್ರಮಗಳನ್ನು ನಿರ್ಣಯಿಸ

ಯಾವ ಕಟ್ಟವಾಗಲಿ, ವಾಸಸ್ಥರ ಆರೋಗ್ಯಕ್ಕೆ ಅಪಾಯಕರವಾಗಿ ಅಥವಾ ಬಾಧಕವಾಗುವಷ್ಟು ಜನದಿಂದ ನಿಬಿಡವಾಗಿದೆಯೆಂತ ಸದರೀ ಮನೆಯಲ್ಲಿ ಒಂದು ಪ್ರೌಕ್ಕಲಿಗಿಂತ ಹೆಚ್ಚಾಗಿ ಇರುವದಾಗಿ ಮ್ಯುನಿಸಿಪಲ್ ಕಮ್ಮಿಷ್ನರ ಪ್ರೆಸಿಡೆಂಟರಿಗೆ ಸಾನಿಟರಿ ಇನಸ್ಪೆಕ್ಟರರವರು ಸರಿಟಫೈ ಮಾಡಿದಲ್ಲಿ ಪ್ರೆಸಿಡೆಂಟರು ಅಂತಃ ಜನಸಮ್ಮರ್ದವನ್ನು ತಗ್ಗಿಸುವ ಬಗ್ಗೆ ಮಾಜಿಸ್ಟ್ರೇಟರಲ್ಲಿ ನಡವಳತವನ್ನು ನಡೆಯಿಸತಕ್ಕದ್ದು. ಮಾಜಿಸ್ಟ್ರೇಟರು ಆ ಮೇಲೆ ತಮಗೆ ಯುಕ್ತತೋರುವ ಹುಕುಂಕೊಡತಕ್ಕದ್ದು. ಅಂತಾ ಜನಸಮ್ಮರ್ದವನ್ನು ಅಂಗೀಕರಿಸುವ ಮನುಷ್ಯನು ಅಂತಾ ಹುಕುಂ ತಾರೀಖು ತರುವಾಯ ಹಾಗೆ ಜನಸಮ್ಮರ್ದವಿರುವಂತಾ ಪ್ರತಿ ದಿನಕ್ಕೂ ಇಪ್ಪತ್ತು ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಬೇಲಿಗಳನ್ನೂ ಮರಗಳನ್ನೂ ಕತ್ತರಿಸಿ ಕ್ರಮಪಡಿಸುವಿಕೆ.

136. ಯಾವದಾದರೂ ಜಮೀನಿನಲ್ಲಿರತಕ್ಕ ಬೇಲಿಗಳು ಭೂಮಿಯ ಮಟ್ಟದಿಂದ ಆರಡಿಯ ಎತ್ತರಕ್ಕೆ ಮೀರದಂತೆ ಅವುಗಳನ್ನು ಕತ್ತರಿಸುವಂತೆ ಯಾ ಕೊಂಬೆಗಳು ಕಡಿಯುವಂತೆ ಮತ್ತು ಯಾವದಾದರೂ ಪಬ್ಲಿಕ ರಸ್ತೆ ಅಥವಾ ಬೀದಿಯ ಮೇಲೆ ಚಾಚಿ ಇರುವದರಿಂದ ದಾರಿಗೆ ಅಟಕಾವ್ ಆಗುವಂತಾ ಅಥವಾ ನುಕ್ಸಾನ್ ಆಗುವಂತಾ ದರೋಬಸ್ತು ಮರಗಳನ್ನೂ ಕಡಿಯುವಂತೆಯೂ, ಕತ್ತರಿಸುವಂತೆಯೂ, ಮಾಲೀಕನು ಫಲಾನೆಯವನೆಂತ ತಿಳಿದದ್ದು ಅವನು ಮ್ಯುನಿಸಿಪಲ್ ಸರಹದ್ದುಗಳೊಳಗೆ ವಾಸಮಾಡುತ್ತಾ ಇದ್ದರೆ ಅಂತಾವನಿಗೂ ಅದರ ಅನುಭವದಾರನಿಗೆ ಸಹ ಪ್ರೆಸಿಡೆಂಟರು ಬರವಣಿಗೇ ಮೂಲಕ ನೋಟಿಸ್ ಕೊಡಬಹುದು, ಅಂತಾ ನೋಟಿಸಿನಲ್ಲಿ ಕಂಡ ತಾರೀಖು ಲಾಗಾಯತ್ ಎಂಟು ದಿನಗಳೊಳಗಾಗಿ ಅದರಂತೆ ನಡೆಯದೇ ಇದ್ದ ಪಕ್ಷಕ್ಕೆ ಮಾಲೀಕನಾಗಲಿ ಅನುಭವದಾರನಾಗಲಿ ಒಬ್ಬ ಮಾಜಿಸ್ಟ್ರೇಟರ ಮುಂದೆ ತಕ್ಕೀರ್ ಆಪಾದನೆ ಪಟ್ಟು ಐವತ್ತು ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು. ಮತ್ತು ತಕ್ಕೀರ್ ಸ್ಥಾಪನೆ ಆದ ತರುವಾಯ ಸದರೀ ತಕ್ಕೀರ್ ನಡೆಯುತ್ತಾ ಇರುವ ಪ್ರತಿ ದಿನಕ್ಕೂ ಹತ್ತು ರೂಪಾಯಿಗೆ ಮೀರದ ಒಂದು ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದು.

ಷಹರಿನಲ್ಲಿ ಯಾವದಾದರೂ ಬಾಡಿಗೇ ಕುದುರೆಗಳ ಯಾ ಬಂಡಿಗಳ ಲಾಯಗಳು, ಬಂಡಿ ಮಿಟ್ಟೆಗಳು ವಗೈರೆ ಹದ್ದು ಪಡಿಸೋಣಾದ ಸಂಖ್ಯೆಗಿಂತ ಜಾಸ್ತಿಯಾಗಿ ದನಗಳು ಇಂತಾವುಗಳನ್ನು ಲೈಸೆನ್ಸ ಇಲ್ಲದೆ ಇಟ್ಟುಕೊಂಡರ ದಂಡನೆ.

137. ಯಾವನಾಗಲಿ ಕ್ರಮ ಪ್ರಕಾರ ನೋಟಿಸ್ ಕೊಡಲ್ಪಟ್ಟ ತರುವಾಯ, ಯಾವದಾದರೂ ಬೀದಿಯಲ್ಲಿ ಯಾ ಬೀದಿಯ ಸಮೀಪದಲ್ಲಿ ಪ್ರೆಸಿಡೆಂಟರಿಂದ ಲೈಸೆನ್ಸ ಪಡೆಯದೇ ಒಂದೇ ಸ್ಥಳದಲ್ಲಿ ಯಾವದಾದರೂ ಬಾಡಿಗೇ ಕುದುರೆಗಳು ಯಾ ಗಾಡಿಗಳ ತಬೇಲೆಗಳು ಕುದುರೇ ತಬೇಲೆಗಳು, ಕುದುರೆಗಳು ಚಿತ್ತೆ ಕಾಲೆ ಬಂಡೀ ಮಿಂಟೇಗಳು ದನಗಳ ಕೊಟ್ಟಿಗೇಗಳು ಎಲ್ಲವೂ ಸಾಧಾರಣವಾಗಿ ಬಂದು ಇಳಿಯುತ್ತಾ ಹೋಗುತ್ತಾ ಇರುವ ಬಗ್ಗೆ ಇಡೋಣಾದ ದೊಡ್ಡಿಗಳು, ಇಪ್ಪತ್ತಕ್ಕೆ ಮೀರಿದ ಕುರಿ ಯಾ ಮೇಕೆಗಳು ಅಥವಾ ಕೊಂಬುಗಳುಳ್ಳ ಹತ್ತು ದನಗಳಿಗಿಂತ ಹೆಚ್ಚಾಗಿ ದನಗಳು, ಇವುಗಳಿಗೆಸ್ವಂತಗಾರನಾಗಿರುವ ಯಾ ಇವುಗಳನ್ನು ಇಟ್ಟಿರುವ ಯಾವನಾಗಲಿ ಐವತ್ತು ರೂಪಾಯಿಗೆ ಮೀರದ ಒಂದು ಜುರ್ಮಾನೆಗೂ, ತಕ್ಕೀರ್ ಸ್ಥಾಪನೆ ಆದ ಮೇಲೆ ಅಂತಾ ತಪ್ಪಿತ ನಡೆಯುತ್ತಾ ಇರುವ ಪ್ರತಿ ದಿನಕ್ಕೂ ಹತ್ತು ರೂಪಾಯಿಗೆ ಮೀರದ ಒಂದು ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದು.

ಹಂದಿಗಳನ್ನು ಇಡುವಿಕೆ.

138. ಯಾವ ಬೀದಿಯಲ್ಲಾಗಲಿ ಅದರ ಸಮೀಪದಲ್ಲಾಗಲಿ, ಪ್ರೆಸಿಡೆಂಟರ ಅಭಿಪ್ರಾಯದಲ್ಲಿ, ಆಸಪಾಸ ಜನಗಳಿಗೆ ಬಾಧಕವಾಗಿದೆ ಯೆಂಬಂತೆ; ಯಾವ ಹಂದಿಗಳನ್ನಾಗಲಿ ಇಡುತ್ತಾನೋ ಅವನು ಹತ್ತು ರೂಪಾಯಿಗೆ ಮೀರದ ಒಂದು ಜುರ್ಮಾನೆಗೂ ತಕ್ಕೀರ್ ಸ್ಥಾಪನೆ ಆದಮೇಲೆ ಸದರೀ ತಪ್ಪಿತ ನಡಿಸಲ್ಪಡುತ್ತಾಯಿರುವ ಪ್ರತಿ ದಿನಕ್ಕೂ ಐದು ರೂಪಾಯಿಗೆ ಮೀರದ ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದು. ಮತ್ತು ತೊಂಡಾಗಿ ತಿರುಗುವ ಯಾವ ಹಂದಿಯನ್ನಾಗಲಿ ಪ್ರೆಸಿಡೆಂಟರ ಹುಕುಂನಿಶೀ, ಯಾವ ನುಕ್ಸಾನು ಬಾಬತು ವ್ಯಾಜ್ಯಕ್ಕೂ ಆಸ್ಪದ ಉಂಟಾಗದಂತೆ ಫೂಟಾಗಿ ಕೊಂದು ಹಾಕಬಹುದು.

ಬಚ್ಚಲುಗಳು, ಚರಂಡಿಗಳು ವಗೈರೇ ಕಮ್ಮಿಷನರಗಳ ವಶದಲ್ಲಿಡಲ್ಪಡತಕ್ಕದ್ದು.

139. ದರೋಬಸ್ತು ಬಚ್ಚಲುಗಳೂ, ಚರಂಡಿಗಳೂ ಮತ್ತು ಈ ಕಾನೂನ್ ಜಾರೀಲಿ ಬರುವ ಕಾಲದಲ್ಲಿರುವಂತಾ ಅಥವಾ ತರುವಾಯ ಮಾಡಲ್ಪಡುವಂತಾ ಬೀದಿಗಳು ಯಾ ರಸ್ತೆಗಳು ಇಂತಾವುಗಳಲ್ಲಿ ಯಾ ಇಂತಾವುಗಳ ಮಾರ್ಗವಾಗಿ ಯಾ ಇಂತಾವುಗಳ ಕೆಳಗೆ ಇರುವಂತಾ ದರೋಬಸ್ತು ಬಚ್ಚಲುಗಳೂ; ಚರಂ

ಡಿಗಳು, ನಲ್ಲಿಗಳು, ತಮೂಂ ಮೊಹರಿಗಳೂಸಹ, ಕಮಿಶ್ನರ್‌ಗಳ ಲಾಗವಡಿನಿಂದ ಮಾಡಲ್ಪಟ್ಟದ್ದಾಗಿ... ಆದ್ದಾಗಿರಲಿ ಅಂತಾವ್ರೂ, ಅವುಗಳಿಗೆ ಸಂಬಂಧಪಟ್ಟ ದರೋಬಸ್ತು ಕಾಮಗಾರಿಗಳೂ, ಸಾಮಾನುಗಳೂ... ಗಳೂ, ಕಮಿಶ್ನರ್‌ಗಳ ವಶದಲ್ಲಿಡಲ್ಪಟ್ಟು ಅವರಿಗೆ ಸಂಬಂಧಪಟ್ಟಿರತಕ್ಕವು.

ಪಬ್ಲಿಕ ಬಚ್ಚಲುಗಳನ್ನು ಕಲ್ಪಿಸುವ ವಿಷಯದಲ್ಲಿ ಕಮಿಶ್ನರ್‌ಗಳ ಅಧಿಕಾರ.

140. ಮ್ಯುನಿಸಿಪಲ್ ಸರಹದ್ದುಗಳ ಜಲದಾರೀ ನೀರು ಹರಿಯುವ ಬಗ್ಯೆ ಯಾವದಾದರೂ ವ... ಹರಿಯನ್ನಾಗಲಿ ಇತರ ಮೊಹರಿಯನ್ನಾಗಲಿ ಮಾಡಿಸುವಲ್ಲಿ ... ನರ್‌ಗಳು, ಜರೂರಿದ್ದಲ್ಲಿ, ಯಾವದಾದರೂ ಬೀದಿಯ ಅಥವಾ ರಸ್ತೆ... ಅಥವಾ ಬೀದಿಯಾಗಿ ಯಾ ರಸ್ತೆಯಾಗಿ ಏರ್ಪಡಿಸಲ್ಪಟ್ಟ ಯಾ ಆ ಬಗ್ಯೆ ಉದ್ದೇಶಿಸಲ್ಪಟ್ಟ ಯಾವದಾದರೂ ಸ್ಥಳದ ಅಥವಾ ಬೀದಿಗಳ ಪೈಕಿ ಯಾವದರ ಕೆಳಗಾಗಲಿ ಯಿರುವ ಯಾವದಾದರೂ ಸೆಲ್ಲರ್ ಯಾನೇ ನೆಲಮಾಳಿಗೆ ಯಾ ಕಮಾ೯ ಬಗ್ಗಿಸಿ ಕಟ್ಟಿರತಕ್ಕ ನೆಲಮಾಳಿಗೆ, ಯಿಂತಾದ್ದರ ಮಾರ್ಗವಾಗಿ ಯಾ ಯಿಂತಾದ್ದಕ್ಕೆ ಅಡ್ಡವಾಗಿ ಯಾ ಕೆಳಗೆ ಮತ್ತು ಈ ವಿಷಯವನ್ನು ಕುರಿತು ತಕ್ಕವಾಯಿದೇನಿಶಿ ಬರವಣಿಗೆಯಲ್ಲಿ ನೋಟಿಸ್ ಕೊಡಲ್ಪಟ್ಟ ತರುವಾಯ ಆವರಣವುಳ್ಳ ಯಾ ಇತರ ಯಾವ ಬಗೆ ಜಮೀನಿನಲ್ಲಾಗಲಿ, ಜಮೀನ್ ಮಾರ್ಗವಾಗಿಯಾಗಲಿ ಜಮೀನ್ ಕೆಳಗಾಗಲಿ ಅಂತಾ ಬಚ್ಚಲುಗಳನ್ನು ತೆಗದುಕೊಂಡು ಹೋಗಬಹುದು. ಹಾಗೆ ಮಾಡುವದರಿಂದ ಉಂಟಾಗುವ ಯಾವ ನುಕ್ಸಾನಿಗಾಗಲಿ ಪೂರಾ ಈಡು ಕಟ್ಟಿ ಕೊಡತಕ್ಕದ್ದು. ಅಂತಾ ಈಡು ಮೊಬಲಗ್ ವಿಷಯದೊಳಗಾಗಲಿ ಅದನ್ನು ಹಂಚಿಕೆ ಮಾಡಿಕೊಡುವ ಅಂಶದಲ್ಲಾಗಲಿ ಏನಾದರೂ ತಕರಾರ್ ಉಂಟಾದಪಕ್ಷಕ್ಕೆ, ನುಕ್ಸಾನ್ ವ ಲಾಗವಡುಗಳು ಇವುಗಳನ್ನು ಕುರಿತು ಹುಟ್ಟುವ ತಕರಾರುಗಳ ವ್ಯವಸ್ಥೆ ಬಗ್ಯೆ ಇದರಲ್ಲಿ ಮುಂದೆ ವಿಧಿಸಲ್ಪಟ್ಟ ರೀತಿಯಾಗಿ ಫೈಸಲ್ ಆಗತಕ್ಕದ್ದು.

ಬಚ್ಚಲುಗಳನ್ನು ಕಮಿಶ್ನರ್‌ಗಳು ರಿಪೇರ್ ಮಾಡೋಣ, ಬದಲಾಯಿಸೋಣ ವ ಮುಚ್ಚಿಬಿಡೋಣ.

141. ಕಮಿಶ್ನರ್‌ಗಳು ಈ ಕಾನೂನ್ ದೆಶೆಇಂದ ತಮ್ಮ ವಶದಲ್ಲಿಡೋಣಾದ ಬಚ್ಚಲುಗಳು, ಚರಂಡಿಗಳು ಇವುಗಳ ಪೈಕಿ ವಿಶಿಷ್ಟವನ್ನಾಗಲಿ ಯಾವದನ್ನಾಗಲಿ ಕಾಪಾಡತಕ್ಕದ್ದು, ಆಗಿಂದಾಗ್ಯೆ ರಿಪೇರ್ ಮಾಡತಕ್ಕದ್ದು ಮತ್ತು ತಮಗೆ ಯುಕ್ತ ತೋರುವಮೇರೆ, ದೊಡ್ಡದು ಮಾಡ ಬಹುದು ಬದಲಾವಣಿ ಮಾಡಬಹುದು ಯಾ ಮೇಲೆ ಕಮಾ೯ ಕಟ್ಟಿಸ ಬಹುದು ಅಥವಾ ಯಿತರ ವಿಧದಿಂದ ಅಭಿವೃದ್ಧಿ ಪಡಿಸಬಹುದು, ಮತ್ತು ಆ ಪೈಕಿ ಯಾವಭಾಗ ತಮಗೆ ನಿಷ್ಪ್ರಯೋಜಕವೆಂತಲೂ, ಅನಾವಶ್ಯಕವೆಂತಲೂ ತೋರುತ್ತೋ ಆ ಭಾಗವನ್ನು ಮೌಕೂಫ್ ಮಾಡಬಹುದು, ಮುಚ್ಚಿಸಿಬಿಡಬಹುದು ನಾಶಮಾಡಿಬಿಡಬಹುದು. ಪರಂತು ಈ ಸೆಕ್ಷನ್ ಅನುಸರಿಸಿ ಮಾಡಲ್ಪಟ್ಟಿತೆಂಬ ಸಬಬಿನಮೇಲೆ ಯಾವ ಮನುಷ್ಯನಾಗಲಿ ಯಾವದಾದರೂ ಬಚ್ಚಲು ಯಾ ಚರಂಡಿಯನ್ನು ನ್ಯಾಯವಾಗಿ ಉಪಯೋಗಿಸುವದಕ್ಕೆ ತಪ್ಪಿಸಲ್ಪಟ್ಟಲ್ಲಿ ಕಮಿಶ್ನರ್‌ಗಳು ತಮ್ಮ ಬಚ್ಚಲಿನ ನೀರು ಯಾವಸ್ಥಳದಲ್ಲಿ ಬಿಡುವದಕ್ಕೆ ಅಧಿಕಾರ ಪಡದಿರುತ್ತಾರೋ ಅಂತಾ ಯಾವದಾದರೂ ಪಬ್ಲಿಕ್ ಬಚ್ಚಲಿನಲ್ಲಿಯಾಗಲಿ ಇತರ ಸ್ಥಳದೊಳಗಾಗಲಿ ಸದರೀ ಬಚ್ಚಲು ನೀರುಹರಿಯತಕ್ಕ ಬಗ್ಯೆ ಸಾಧನವನ್ನು ತಮ್ಮ ಲಾಗವಡಿನಿಂದ ಕಲ್ಪಿಸತಕ್ಕದ್ದು.

ಬಚ್ಚಲುಗಳನ್ನು ಪಾಕ ಮಾಡೋಣ ವ ಖಾಲಿ ಮಾಡೋಣ.

142. ಕಮಿಶ್ನರ್‌ಗಳು, ತಮಗೆ ಸೇರಿದ ಬಚ್ಚಲುಗಳೂ, ಚರಂಡಿಗಳೂ, ಅಸಹ್ಯವಾಗಿಯೂ, ಅನಾರೋಗ್ಯಕರವಾಗಿಯೂ ಯಿರದಂತೆ ತಮ್ಮಲ್ಲಿ ಐವಜು ಅನುಕೂಲಿಸಿದಷ್ಟು ಮಟ್ಟಿಗೆ ಕಟ್ಟಿಸತಕ್ಕದ್ದು, ಕಾಪಾಡತಕ್ಕದ್ದು, ಯಿಡಿಸತಕ್ಕದ್ದು ಮತ್ತು ಕ್ರಮ ಪ್ರಕಾರ ಪಾಕ್‌ಮಾಡಿಸತಕ್ಕದ್ದು ವ ಗುಡಿಸಿಸತಕ್ಕದ್ದು. ಮತ್ತು ಖಾಲೀಮಾಡಿಸತಕ್ಕದ್ದು, ಸದರೀ ಬಚ್ಚಲುಗಳನ್ನು ನೀರುವಾಟಾಮಾಡಲಿಕ್ಕೂ, ಶುದ್ಧಪಡಿಸಲಿಕ್ಕೂ ಖಾಲಿಮಾಡಲಿಕ್ಕೂ, ಭೂಮಿಯ ಮೇಲಾಗಲಿ, ಕೆಳಗಾಗಲಿ; ಜರೂರಾದ ತೊಟ್ಟಿ ವಗೈರೆಗಳನ್ನು, ತೂಬುಗಳನ್ನು, ಯಂತ್ರಗಳನ್ನು ಮತ್ತು ಅವಶ್ಯಕವಾದ ಯಿತರ ಕೆಲಸಗಳನ್ನು ಸಹ ಅವರು ಕಟ್ಟಿಸಬಹುದು ಮತ್ತು ಅವರು ಮಹಾರಾಜಾ ಸರ್ಕಾರದವರ ಮಂಜೂರಾತೀನಿಶೀ ಅಂತಾ ಬಚ್ಚಲುಗಳು ಚರಂಡಿಗಳು ಯಿವುಗಳ ಪೈಕಿ ವಿಶಿಷ್ಟವನ್ನಾಗಲಿ, ಯಾವದನ್ನಾಗಲಿ ಯಾವದಾದರೂ ತಕ್ಕ ಸ್ಥಳದೊಡನೆ ಶೇರುವಂತೆ ಮತ್ತು ಅಂತಾ ಸ್ಥಳದಲ್ಲಿ ಹೋಗಿ ಬೀಳುವಂತೆಯೂ ಮಾಡಬಹುದು ಅಥವಾ ಅಂತಾ ಬಚ್ಚಲ ದೆಶೆಯಿಂದಲೂ, ಚರಂಡಿಗಳ ದೆಶೆಯಿಂದಲೂ, ಕಶ್ಮಲವನ್ನು ಜಮಾಯಿಸಿ ಯಿಡಲಿಕ್ಕೆ ಕೇವಲ ಅನುಕೂಲವಾದ ಪ್ರದೇಶಕ್ಕೆ ಸರಿಯಾದ ಮಾರ್ಗದಿಂದ ತೆಗದುಕೊಂಡು ಹೋಗುವಂತೆ ಮಾಡಬಹುದು ಮತ್ತು ಕೇವಲ ಜರೂರೆಂತ ಎಣಿಸುವ ವ್ಯವಸಾಯದ ಕೆಲಸಗಳಿಗಾಗಲಿ, ಯಿತರ ಕಾರ್ಯಗಳಿಗಾಗಲಿ ವಿಕ್ರಯಿಸಿ ಬಿಡಬಹುದು ಆದರೆ ಹಾಗೆ ಉಪಯೋಗಿಸೋಣದರಿಂದ (ಜನಗಳಿಗೆ) ಹೇಸಿಕೆಯುಂಟಾಗತಕ್ಕದ್ದಲ್ಲವು.

ಪಬ್ಲಿಕ ಬಚ್ಚಲುಗಳಲ್ಲಿ ಸರ್ಕಾರ ಹುಕುಂ ಯಿಲ್ಲದೆ ಚರಂಡೀ ನೀರು ಬಿಟ್ಟರೆ ದಂಡನೆ.

143. ಮೊದಲು ಬರವಣಿಗೇ ಮೂಲಕ ಪ್ರೆಸಿಡೆಂಟರ ಅನುಮತಿಯನ್ನು ಪಡೆಯದೆ ಈ ಕಾನೂನಿನಿಂದ ಕಮ್ಮಿಷನರಗಳ ವಶದಲ್ಲಿ ಯಿಡೋಣಾದ ಯಾವ ಬಚ್ಚಲುಗಳಲ್ಲಾಗಲಿ ಚರಂಡಿಗಳಲ್ಲಿ ಯಾವನು ಯಾವ ಚರಂಡಿಯನ್ನಾದರೂ ಮಾಡುತ್ತಾನೋ, ಯಾ ಮಾಡಿಸುತ್ತಾನೋ ಅಥವಾ ಯಾವದಾದರೂ ಪಬ್ಲಿಕ ಚರಂಡಿಯಾಗಲಿ ಬಚ್ಚಲಾಗಲಿ, ಸರ್ಕಾರೀ ಜಮೀನ ಮಾರ್ಗವಾಗಿ ಹರಿಯಲಿ ಜನಗಳ ಸ್ವಂತ ಜಮೀನ ಮಾರ್ಗವಾಗಿ ಹರಿಯಲಿ ಅಂತಾದ್ದನ್ನು ಯಾವನು ಬಂದಮಾಡುತ್ತಾನೋ ತಿರಿಗಿಸುತ್ತಾನೋ, ಅಟಕಾವ್‌ಮಾಡುತ್ತಾನೋ ಅಥವಾ ಮತ್ಯಾವ ವಿಧದಿಂದಲಾಗಲಿ ಪ್ರವರ್ತಿಸುತ್ತಾನೋ, ಅಂತಾ ಮನುಷ್ಯನು ಯಿನ್ನೂರು ರೂಪಾಯಿಗೆ ಮೀರದ ವೊಂದು ಜುರ್ಮಾನೆಗೆ ಗುರಿಯಾಗತಕ್ಕದ್ದು. ಮತ್ತು ಪ್ರೆಸಿಡೆಂಟರು ಅಂತಾ ಫೂಟ ಚರಂಡಿಯನ್ನಾಗಲಿ, ಅಟಕಾವನ್ನಾಗಲಿ ತಮಗೆ ಯುಕ್ತ ತೋರುವ ಪ್ರಕಾರ ನಾಶಮಾಡಿಸಿ ಬಿಡಬಹುದು, ಬದಲಾವಣೀ ಮಾಡಿಸಬಹುದು, ಹೊಸದಾಗಿ ಮಾಡಿಸಬಹುದು, ಅಥವಾ ಅನ್ಯಥಾ ತಮಗೆ ಯುಕ್ತ ತೋರುವ ಪ್ರಕಾರ ನಡಿಸಬಹುದು, ಆ ಬಗ್ಯೆ ಹಿಡಿದ ದರೋಬಸ್ತು ಲಾಗವಡೂ, ಅಂತಾ ಫೂಟ ಚರಂಡಿಯನ್ನು ಯಾ ಅಟಕಾವನ್ನು ಮಾಡಿದಂತಾ ಯಾ ಮಾಡಿಸಿದಂತಾ ಮನುಷ್ಯನಿಂದ ಕೊಡಲ್ಪಟ್ಟು ಯಿದರಲ್ಲಿ ಮುಂದೆ ವಿಧಿಸಲ್ಪಡುವ ರೀತಿಯಾಗಿ ವಸೂಲ್ ಮಾಡಲ್ಪಡತಕ್ಕದ್ದು.

ಪ್ರೆಸಿಡೆಂಟರ ಅನುಮತಿ ಇಲ್ಲದೆ ಬಚ್ಚಲು ವಗೈರೆಗಳ ಮೇಲೆ ಕಟ್ಟಣಗಳು ಕಟ್ಟಕೂಡದು.

144. ಈ ಕಾನೂನಿನಿಂದ ಕಮ್ಮಿಷನರಗಳ ವಶದಲ್ಲಿ ಇಡೋಣಾದ ಯಾವ ಬಚ್ಚಲು ಯಾ ಚರಂಡಿಯ ಮೇಲಾಗಲಿ ಪ್ರೆಸಿಡೆಂಟರ ಅನುಮತಿಯಿಲ್ಲದೆ ಯಾವ ಕಟ್ಟಣವನ್ನೂ ಹೊಸದಾಗಿ ಕಟ್ಟತಕ್ಕದ್ದಲ್ಲವು ಮತ್ತು ಯಾವ ಕಟ್ಟಣವಾಗಲಿ ಆ ಮೇರೆ ಕಟ್ಟಲ್ಪಟ್ಟಲ್ಲಿ ಪ್ರೆಸಿಡೆಂಟರು ಅಂತಾ ಕಟ್ಟಣವನ್ನು ಕಿತ್ತಿ ಹಾಕಿಸಬಹುದು ಅಥವಾ ತಮಗೆ ಯುಕ್ತ ತೋರುವ ಪ್ರಕಾರ ಯಿತರ ರೀತಿಯಿಂದ ನಡಿಸಬಹುದು ಮತ್ತು ಆ ಬಗ್ಯೆ ಹಿಡಿದ ಲಾಗವಡನ್ನು ತಕ್ಸೀರ್ ನಡಿಸಿದ ಮನುಷ್ಯನು ಕೊಡತಕ್ಕದ್ದಲ್ಲದೆ ಯಿದರಲ್ಲಿ ಮುಂದೆ ವಿಧಿಸಲ್ಪಡುವ ಮೇರೆ ಆ ಲಾಗವಡು ವಸೂಲ್ ಮಾಡಿಕೊಳ್ಳಲ್ಪಡತಕ್ಕದ್ದು.

ಸರಿಯಾಗಿ ಜಲಧಾರೆ ಇಲ್ಲದೆ ಇರುವ ಕಟ್ಟಣಗಳಿಗೆ ಚರಂಡಿಗಳನ್ನು ಕಲ್ಪಿಸುವದಕ್ಕೆ ಪ್ರೆಸಿಡೆಂಟರು ಅಧಿಕಾರ ಉಂಟಾಗಿರತಕ್ಕದ್ದು.

145. ಯಾವ ಬೀದಿಯಲ್ಲಾಗಲಿ ಬೀದಿಯ ಸಮೀಪದಲ್ಲಾಗಲಿ ಮತ್ತು ಉಪಯೋಗಿಸಲಿಕ್ಕೆ ಅರ್ಹವಾದ ಬಚ್ಚಲಿಗೆ ಅಥವಾ ಕಮ್ಮಿಷನರಗಳು ತಮ್ಮ ಬಚ್ಚಲುಗಳ ನೀರನ್ನು ಯಾವದರಲ್ಲಿ ಬಿಡಲಿಕ್ಕೆ ಅಧಿಕಾರ ಉಂಟಾಗಿರುತ್ತಾರೋ ಅಂತಾ ಯಾವದಾದರೂ ಸ್ಥಳಕ್ಕೆ ಯುಕ್ತವಾದ ದೂರದಲ್ಲಿ ಯಿರುವ ಯಾವದಾದರೂ ಕಟ್ಟಣವು ಯಾವಾಗಲಾಗಲಿ, ತಕ್ಕ ಚರಂಡಿಯಿಂದ ಯಾ ನಲ್ಲಿಯಿಂದ ಯಾವದಾದರೂ ಬಚ್ಚಲಿಗೆ ಅಥವಾ ಮೇಲೆ ಕಂಡಂತೆ ಯಿತರ ಸ್ಥಳಕ್ಕೆ ಹೋಗಿ ಸೇರುವಂತೆ ಪ್ರೆಸಿಡೆಂಟರಿಗೆ ತೃಪ್ತಿಕರವಾಗಿ ಚರಂಡಿ ಯಿಡಿಸಲ್ಪಡದೇ ಯಿರುವ ಪಕ್ಷಕ್ಕೆ ಪ್ರೆಸಿಡೆಂಟರು, ನೋಟಿಸ ಕೊಡೋಣಾದ ಹದಿನೈದು ದಿನಗಳೊಳಗಾಗಿ ಮಾಲೀಕನು ಆ ಮೇರೆ ಮಾಡಿಸಲಿಕ್ಕೆ ಉಪೇಕ್ಷಿಸಿದ ಪಕ್ಷಕ್ಕೆ, ಅಂತಾ ಕಟ್ಟಣದದೆಶೆಯಿಂದ ಬಚ್ಚಲು ಹರಿಯಲಿಕ್ಕೆ ಜರೂರೆಂತ ತಮಗೆ ತೋರುವಂತಾ ಸಾಮಾನಗಳ ದೆಶೆಯಿಂದ ಅಷ್ಟರ ಆಕಾರದಲ್ಲಿ, ಅಷ್ಟರ ಮಟ್ಟಕ್ಕೆ ಮತ್ತು ಅಂತಾ ನೀರುವಾಟದಲ್ಲಿ ಮುಚ್ಚಲ್ಪಟ್ಟ ಯಾ ಖುಲ್ಲಾ ಯಿರುವ ಚರಂಡಿಯನ್ನಾಗಲಿ, ನಲ್ಲಿಯನ್ನಾಗಲಿ, ಅಂತಾ ಕಟ್ಟಣದಿಂದ ಕಟ್ಟಿಸಬಹುದು ಅಥವಾ ಏರ್ಪಡಿಸಬಹುದು ಮತ್ತು ಆ ಬಗ್ಯೆ ಹಿಡಿದ ಲಾಗವಡು ಮಾಲೀಕನಿಂದ ಕೂಡ್ಲೆ ಕೊಡಲ್ಪಡದ ಪಕ್ಷಕ್ಕೆ ಯಿದರಲ್ಲಿ ಮುಂದೆ ವಿಧಿಸಲ್ಪಟ್ಟ ರೀತಿಯಾಗಿ ವಸೂಲ್ಮಾಡಲ್ಪಡತಕ್ಕದ್ದು.

ಷಹರಿನೊಳಗೆ ಇಂದ ಕಟ್ಟಲ್ಪಡತಕ್ಕ ಕಟ್ಟಣಗಳ ಮಟ್ಟ.

146. ಯಾವದಾದರೂ ಬೀದಿಯಲ್ಲಿ ಯಾ ಬೀದಿಯ ಸಮೀಪದಲ್ಲಿ, ಯಾವದಾದರೂ ಕಟ್ಟಣದ ಬಚ್ಚಲ ನೀರು ಅಗ್ಯೆ ಇರುವಂತಾ ಅಥವಾ ಏರ್ಪಾಡು ಮಾಡಲ್ಪಡುವಂತಾ ಯಾವದಾವರೂ ಪಬ್ಲಿಕ ಬಚ್ಚಲುಗಳಲ್ಲಿಯೂ, ಕಮ್ಮಿಷನರಗಳು ತಮ್ಮ ಬಚ್ಚಲುಗಳನ್ನು ಬಿಡುವದಕ್ಕೆ ಅಧಿಕಾರ ಪಡೆದಿರುವ ಇತರ ಸ್ಥಳಗಳಿಗೂ ತೆಗೆದುಕೊಂಡು ಹೋಗಲಿಕ್ಕೆ ತಕ್ಕ ನೀರುಮಟ್ಟಕ್ಕಿಂತ ತಗ್ಗಾದ ನೀರುಮಟ್ಟದಲ್ಲಿ ಇನ್ನು ಮೇಲೆ ಯಾವ ಕಟ್ಟಣವೂ ಕಟ್ಟಲ್ಪಡತಕ್ಕದ್ದಲ್ಲವು ಮತ್ತು ಪಬ್ಲಿಕ ಬೀದಿ ಯಾ ರಸ್ತೆಗೆ ಅಂಚಿನಲ್ಲಿರುವ ಜಮೀನ ಯಾ ಕಟ್ಟಣಗಳ ಮಾಲೀಕರು ಯಾ ಅನುಭವದಾರರು, ಪ್ರೆಸಿಡೆಂಟರಿಂದ ನಿಯಮಿಸಲ್ಪಡುವ ಸಾಕಾದ ಪರಿಮಾಣ ಮತ್ತು ಸಾಮಾನುಗಳಿಂದ ಮೊಹರಿಗಳನ್ನು, ತಮ್ಮ ಜಮೀನಿನ ಯಾ ಕಟ್ಟಣಗಳ ಮೊದಲಿನಲ್ಲಿ ಇರುವ ಬಾಜೂ ಕಾಲ್ವೆಗಳಮೇಲಾಗಲಿ, ಹಳ್ಳಗಳ ಮೇಲಾಗಲಿ ಕಟ್ಟತಕ್ಕದ್ದು. ಬದಲಾವಣಿ ಮಾಡತಕ್ಕದ್ದು ಕಾಪಾಡತಕ್ಕದ್ದು ಮತ್ತು ನೋಟಿಸ ಕೊಡೋಣಾದ ಹದಿನೈದು ದಿನಗಳೊಳಗಾಗಿ ಅವರು ಆ ಮೇರೆ ಮಾಡದೆ

ತಿರಸ್ಕಾರ ಮಾಡಿದ ಪಕ್ಷಕ್ಕೆ ಪ್ರೆಸಿಡೆಂಟರು ಆ ಮೇರೆ ಮಾಡಲ್ಪಡುವಂತೆ ಮಾಡಬಹುದು, ಆ ಬಗ್ಯೆ ಹಿಡಿದ ಲಾಗವಡುಗಳನ್ನು ಸದರೀ ಮಾಲೀಕರಾಗಲಿ, ಅನುಭವದಾರರಾಗಲಿ, ಕೊಡತಕ್ಕದ್ದಲ್ಲದೆ ಆ ಮೊಬಲಗು ಇದರಲ್ಲಿ ಮುಂದೆ ವಿಧಿಸಲ್ಪಟ್ಟಿರುವ ರೀತಿಯಾಗಿ ವಸೂಲ್ ಮಾಡಲ್ಪಡತಕ್ಕದ್ದು.

ಮುಂದ ಕಟ್ಟಲ್ಪಡತಕ್ಕ ಕಟ್ಟಗಳಿಗೆ ಪ್ರೆಸಿಡೆಂಟರ ಅಪ್ಪಣೇಪ್ರಕಾರ ಕಟ್ಟಲ್ಪಟ್ಟ ಚರಂಡಿಗಳು ಇರತಕ್ಕವು.

147. ಈ ಕಾನೂನು ಜಾರೀಲಿ ಬಂದಬಳಿಕ ಯಾವದಾದರೂ ಬೀದಿಯಲ್ಲಿ ಯಾ ಬೀದಿಯ ಸಮೀಪದಲ್ಲಿ ಹೊಸದಾಗಿ ಕಟ್ಟೋಣಾದ ಅಥವಾ ಪುನಸ್ಸ ಕಟ್ಟೋಣಾದ ಯಾವ ಕಟ್ಟವಾಗಲಿ, ಇದರ ಹಿಂದಿನ ಕಡೇ ಸೆಕ್ಷನಿನಲ್ಲಿ ಕಂಡಂತೆ ಅದಕ್ಕೆ ನೂರು ಅಡಿಗಳೊಳಗೆ ಬಚ್ಚಲು ನೀರು ಹರಿಯಲಿಕ್ಕೆ ಆಧಾರವಿದ್ದಪಕ್ಷಕ್ಕೆ ಅದರ ಮಾಲೀಕನು ಅಂತಾ ಕಟ್ಟದ ನಿವೇಶನದ ದೆಶೆಯಿಂದ ಅದರೊಳಕ್ಕೆ ಹರಿಯುವಂತೆ ಪ್ರೆಸಿಡೆಂಟರು ನಿಯಮಿಸುವ ಸಾಮಾನುಗಳಿಂದಲೂ, ಆ ಪ್ರಮಾಣದಿಂದಲೂ, ಅಂತಾ ಮಟ್ಟದಲ್ಲಿಯೂ, ಅಂತಾ ನೀರು ವಾಟದಿಂದಲೂ, ವೊಂದು ಚರಂಡೀ ಕಟ್ಟಿಸತಕ್ಕದ್ದು; ಅಂತಾ ಮಾಲೀಕನು ಯುಕ್ತವಾದ ಕಾಲದೊಳಗಾಗಿ ಆ ಮೇರೆ ಕಟ್ಟಿಸಲಿಕ್ಕೆ ಉಪೇಕ್ಷಿಸಿದ ಪಕ್ಷಕ್ಕೆ, ಪ್ರೆಸಿಡೆಂಟರು ಸದರೀ ಚರಂಡಿ ಕಟ್ಟಿಸಲ್ಪಡುವಂತೆ ಮಾಡಬಹುದು ಮತ್ತು ಆ ಬಗ್ಯೆ ಹಿಡಿದಲಾಗವಡುಗಳು ಮಾಲೀಕನಿಂದ ಕೊಡಲ್ಪಟ್ಟು ಯಿದರಲ್ಲಿ ಮುಂದೆ ವಿಧಿಸಲ್ಪಟ್ಟ ಪ್ರಕಾರ ವಸೂಲ್ ಮಾಡಲ್ಪಡತಕ್ಕದ್ದು.

ಪ್ರೆಸಿಡೆಂಟರಿಗೆ ಹೊಸ ಕಟ್ಟಗಳನ್ನು ಕುರಿತು ನೋಟಿಸ ಕೊಡಲ್ಪಡತಕ್ಕದ್ದು.

148. ಯಾವದಾದರೂ ಬೀದಿಯಲ್ಲಾಗಲಿ ಬೀದಿಯ ಸಮೀಪದಲ್ಲಾಗಲಿ ಯಾವ ಕಟ್ಟವನ್ನಾದರೂ ಕಟ್ಟಿಸಲಿಕ್ಕೆ ಅಥವಾ ಖೋಲಬಂದೀ ಮಾಡಿಸಲಿಕ್ಕೆ ಷುರೂಮಾಡುವದಕ್ಕೆ ಮುಂಚಿತವಾಗಿ ಅಂತಾ ಕಟ್ಟವನ್ನು ಕಟ್ಟಿಸಲಿಕ್ಕೆ ಯಾ ಖೋಲಬಂದೀ ಮಾಡಲಿಕ್ಕೆ ಖಾಯಿಷ್ ಪಡುವ ಮನುಷ್ಯನು ಆ ವಿಷಯವನ್ನು ಕುರಿತು ಬರವಣಿಗೇಮೂಲಕ ಪ್ರೆಸಿಡೆಂಟರಿಗೆ ನೋಟಿಸ ಕೊಡತಕ್ಕದಲ್ಲದೆ, ಪ್ರೆಸಿಡೆಂಟರ ಹುಕುಂ ಅನುಸರಿಸಿ ನಿಷ್ಕರ್ಷೆ ಮಾಡೋಣಾದ ವೊಂದು ಮಟ್ಟದ ವಿಷಯದಲ್ಲಿ ಅಂತಾ ಕಟ್ಟದ ತಳಾದಿಯೂ, ಎಲ್ಲಕ್ಕೂ ಕೀಳ್ಪಟ್ಟ ತಳವರಶೆಯೂ ಯಾವ ಮಟ್ಟಪ್ರಕಾರ ಇಡಲ್ಪಡುತ್ತೋ ಆ ಮಟ್ಟವನ್ನು ಕಾಣಿಸಿ ಬಂದು ಪ್ಲ್ಯಾನ ಯಾನೇ ನಕಷೆಯು ಸದರೀ ನೋಟಿಸ ಸಂಗಡ ಕಳುಹಿಸತಕ್ಕದ್ದು; ಯಾವನು ಅಂತಾ ನೋಟಿಸ ಕೊಡದೇ ತಪ್ಪುತ್ತಾನೋ ಅವನು ಐವತ್ತು ರೂಪಾಯಿಗೆ ಮೀರದ ಜುರ್ಮಾನೆಗೆ ಗುರಿಯಾಗತಕ್ಕದ್ದು.

ಪ್ರೆಸಿಡೆಂಟರು ಬಂದು ತಿಂಗಳೊಳಗಾಗಿ ತಮ್ಮ ಮಂಜೂರಾತಿಯನ್ನಾಗಲಿ ಬೇಮಂಜೂರಾತಿಯನ್ನಾಗಲಿ ಕುರಿತು ತಿಳಿಸತಕ್ಕದ್ದು.

149. ಅಂತಾ ನೋಟಿಸ ತಲಪಿದ ತರುವಾಯ ಬಂದು ತಿಂಗಳೊಳಗಾಗಿ ಪ್ರೆಸಿಡೆಂಟರು (ಮಾಲೀಕ ವಗ್ಯೆರೇರಿಂದ) ತಿಳಿಸಲ್ಪಟ್ಟ ಮಟ್ಟಗಳನ್ನು ಮಂಜೂರ್ಮಾಡಿದ್ದನ್ನು ಕುರಿತು ತಿಳಿಸತಕ್ಕದ್ದು ಅಥವಾ ಅವರು ಅದನ್ನು ಬೇಮಂಜೂರ್ಮಾಡಿದ ಪಕ್ಷಕ್ಕೆ ಸದರೀ ಮಟ್ಟಕ್ಕೆ ಬದಲಾಗಿ ಸದರೀ ಕಾಲದೊಳಗಾಗಿ ಬೇರೆ ಮಟ್ಟವನ್ನು ಏರ್ಪಡಿಸಿಕೊಡತಕ್ಕದ್ದು.

ನೋಟಿಸ ಕೊಡದೆಯಾಗಲಿ, ಈ ಕಾನೂನಿನ ನಿಬಂಧನೆಗಳಿಗೆ ವಿರುದ್ಧವಾಗಿಯಾಗಲಿ ಕಟ್ಟಲ್ಪಟ್ಟ ಕಟ್ಟವು ಪ್ರೆಸಿಡೆಂಟರಿಂದ ಬದಲಾಯಿಸಲ್ಪಡಬಹುದು.

150. ಅಂತಾ ನೋಟಿಸನ್ನೂ ನಕ್ಷೆಯನ್ನೂ ಕಳುಹಿಸದೆಯಾಗಲಿ, ಸದರೀ ತಿಂಗಳೊಳಗಾಗಿ ಪ್ರೆಸಿಡೆಂಟರಿಂದ ನಿರ್ಣಯಿಸಲ್ಪಟ್ಟ ಮಟ್ಟ ಪ್ರಕಾರವಲ್ಲದೆ ಬೇರೆ ಮಟ್ಟಗಳ ಪ್ರಕಾರವಾಗಲಿ, ಈ ಕಾನೂನು ನಿಬಂಧನೆಗಳಿಗೆ ಮತ್ಯಾವ ವಿಧದಿಂದಲಾದರೂ ವಿರುದ್ಧವಾಗಿಯಾಗಲಿ ಅಂತಾ ಕಟ್ಟವು ಆರಂಭಿಸಲ್ಪಟ್ಟರೆ ಯಾ ಮಾಡಲ್ಪಟ್ಟರೆ ಪ್ರೆಸಿಡೆಂಟರು, ಜರೂರ್ ಇದ್ದಲ್ಲಿ, ಸಂದರ್ಭಕ್ಕೆ ಅನುಗುಣವಾಗಿರುವಂತೆ ಅದನ್ನು ಬದಲಾಯಿಸುವಂತೆ ಯಾ ನಾಶಪಡಿಸುವಂತೆ ಮಾಡಬಹುದು. ಮತ್ತು ಆ ಬಗ್ಯೆ ಹಿಡಿದಲಾಗವಡುಗಳನ್ನು, ಮೇಲೆ ಕಂಡ ನಿಬಂಧನೆಗಳ ಪ್ರಕಾರ ನಡಿಸಲಿಕ್ಕೆ ತಪ್ಪಿದ ಮನುಷ್ಯನಿಂದ ಕೊಡಲ್ಪಟ್ಟು ಇದರಲ್ಲಿ ಮುಂದೆ ವಿಧಿಸಲ್ಪಡುವ ಮೇರೆ ವಸೂಲ್ಮಾಡಲ್ಪಡತಕ್ಕದ್ದು.

ಪ್ರೆಸಿಡೆಂಟರು ಬಂದು ತಿಂಗಳೊಳಗಾಗಿ ಮಂಜೂರಾತಿ ವಗ್ಯೆರೆಯನ್ನು ಕುರಿತು ತಿಳಿಸದೆ ತಪ್ಪಿಹೋದ ಪಕ್ಷಕ್ಕೆ ಆಸಾಮಿಗಳು (ಮಂಜೂರಾತಿ) ಇಲ್ಲದೆ ನಡವಳಿಕ ನಡಿಸಬಹುದು.

151. ಪ್ರೆಸಿಡೆಂಟರು, ಮೇಲೆ ಕಂಡಮೇರೆ ಅಂತಾ ನಕ್ಷೆಯಲ್ಲಿ ಕಾಣಿಸಲ್ಪಟ್ಟ ಮಟ್ಟವನ್ನು ಕುರಿತು ಮಂಜೂರಾತಿಯನ್ನಾಗಲಿ; ಬೇಮಂಜೂರಾತಿಯನ್ನಾಗಲಿ ಬರವಣಿಗೇ ಮೂಲಕ ತಿಳಿಸದೆಯೂ, ಮೇಲೆ ಕಂಡಮೇರೆ ಅಂತಾ ನೋಟಿಸೂ ನಕ್ಷೆಯೂ ತಲಪಿದ ತರುವಾಯ ಬಂದು ತಿಂಗಳೊಳಗಾಗಿ ಬೇರೆ ಮಟ್ಟವನ್ನು ಏರ್ಪಡಿಸದೆಯೂ, ತಪ್ಪಿದ ಪಕ್ಷಕ್ಕೆ ಅಂತಾ ನೋಟಿಸ ಕೊಡುವ ಮನುಷ್ಯನು ಇದರಲ್ಲಿ ಹಿಂದೆ ಯಾವ ಅಂಶ ಅಡಗಿದ್ದಾಗ್ಯೂ ಅಂತಾ

ನಕ್ಷೆಯಲ್ಲಿ ಕಾಣಿಸಲ್ಪಟ್ಟ ಮಟ್ಟಗಳ ಪ್ರಕಾರ ಅದರಲ್ಲಿ ಕಂಡ ಕಟ್ಟಣವನ್ನು ಕಟ್ಟಿಸಲಿಕ್ಕಾಗಲಿ, ಖೋಲಬಂದೀ ಮಾಡಿಸಲಿಕ್ಕಾಗಲಿ ಪ್ರವರ್ತಿಸಬಹುದು, ಪರಂತು ಅಂಥಾ ಕಟ್ಟಿಸೋಣವಾಗಲಿ, ಖೋಲಬಂದಿಯಾಗಲಿ ಮೇಲೆ ವಿವರಿಸೋಣಾದ ಸಂಗತಿಗಳಲ್ಲಿ ವಿನಾ ಇತರ ವಿಷಯಗಳಲ್ಲಿ ಈ ಕಾನೂನಿನ ನಿಬಂಧನೆಗಳಿಗೆ ಅನುಗುಣವಾಗಿ ರತಕ್ಕದ್ದು.

ಬಚ್ಚಲುಗಳಲ್ಲಿ ಕಚರೇ ಹಾಕುವಿಕೆ.

152. ಕಮಿಶ್ನರಗಳ ಯಾವದಾದರೂ ಬಚ್ಚಲು ಯಾ ಚರಂಡಿಯಲ್ಲಿಯಾಗಲಿ ಅವುಗಳೊಡನೆ ಸೇರಿದ ಯಾವ ಚರಂಡಿಯಲ್ಲಾಗಲಿ ಯಾವದಾದರೂ ಮಣ್ಣು, ಕಶ್ಮಲ, ಬೂದೀ, ತೋಟ, ಅಡಿಗೇ ಮನೆ, ಕುದುರೇ ಲಾಯ ಇಂಥಾದ್ದರ ಬಾಬತು ಕಚರೇ ಗಾಜ ವಗೈರೆ ಚೂರು, ಮಡಿಕೇ ಚೂರು ಯಾ ಇತರ ಕಸ ಅಥವಾ ತಕ್ಕ ಬಚ್ಚಲು ಏರ್ಪಡಿಸಿ ಕೊಡಲ್ಪಡುವ ಪರ್ಯಂತ ಯಾವದಾದರೂ ಮಲ ಇಂಥಾದ್ದನ್ನು ಯಾವನು ಚೆಲ್ಲುತ್ತಾನೋ ಯಾ ಹಾಕುತ್ತಾನೋ ಅಥವಾ ತನ್ನ ನೌಕರರು ಚೆಲ್ಲುವಂತೆ ಯಾ ಹಾಕುವಂತೆ ಒಪ್ಪುವ ಯಾವ ಮನುಷ್ಯನಾಗಲಿ ಪ್ರತಿ ತಪ್ಪಿತಕ್ಕೂ ಐವತ್ತು ರೂಪಾಯಿಗೆ ಮಿೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಪಾಯಿಖಾನೆಗಳು ಮತ್ತು ಉಚ್ಚೆ ಹುಯ್ಯುವ ಸ್ಥಳಗಳು.

153. ಕಮಿಶ್ನರಗಳು, ಜನಗಳಿಗೆ ಹೇಸಿಗೇ ಯುಂಟಾಗದಂತೆ ಸಾಧಾರಣಗಳಾದ ಪಾಯಿಖಾನೇಗಳನ್ನೂ ಉಚ್ಚೆ ಹುಯ್ಯುವ ಸ್ಥಳಗಳನ್ನೂ ಯುಕ್ತಗಳಾಗಿಯೂ ಅನುಕೂಲಗಳಾಗಿಯೂ ಇರುವ ಪ್ರದೇಶಗಳಲ್ಲಿ ಏರ್ಪಾಡು ಮಾಡಿ ಕಾಪಾಡತಕ್ಕದ್ದಲ್ಲದೆ ಅವು ಕಲ್ಪಿಸಲ್ಪಟ್ಟಾಗ ಅವು ಯುಕ್ತವಾದ ಸ್ಥಿತಿಯಲ್ಲಿಡಲ್ಪಡುವಂತೆಯೂ ದಿನವಹೀ ಪಾಕ ಮಾಡಲ್ಪಡುವಂತೆಯೂ ಮಾಡತಕ್ಕದ್ದು. ಮತ್ತು ಅರ್ಧ ಎಕ್ರೇ ವಿಸ್ತೀರ್ಣಕ್ಕೆ ಮಿೀರಿದ ಜಮಿೀನಿನಲ್ಲಿರುವ ಮತ್ತು ಆದರಿಂದ ಸುತ್ತಲ್ಪಟ್ಟಿರುವ ಪ್ರತಿ ಕಟ್ಟಣದ ಮಾಲೀಕ ಯಾ ಅನುಭವದಾರನು ಅಂಥಾ ಕಟ್ಟಣದಲ್ಲಿ ಅಥವಾ ಕಟ್ಟಣದ ಬಳಿ ನೌಕರಿಯಲ್ಲಿಟ್ಟುಕೊಳ್ಳೋಣಾದ ನೌಕರರು ಮತ್ತು ಜನಗಳ ಉಪಯೋಗಕ್ಕೋಸ್ಕರ ಅಂಥಾ ಪ್ರದೇಶದೊಳಗೆ ಅನುಕೂಲವಾದ ಸ್ಥಳದಲ್ಲಿ ಚನ್ನಾಗಿಯೂ ಪಾಕಾಗಿಯೂ ಇರುವ ಪಾಯಿಖಾನೆಯನ್ನು ಏರ್ಪಡಿಸಿ ಅದನ್ನು ಪಾಕಾಗಿಯೂ ಸರಿಯಾಗಿಯೂ ಇರುವ ಸ್ಥಿತಿಯಲ್ಲಿ ಇಡತಕ್ಕದ್ದು. ಹಾಗೆ ಇಡದೇ ಹೋದಲ್ಲಿ ಅಂಥಾ ಮಾಲೀಕ ಯಾ ಅನುಭವದಾರನು ಐವತ್ತು ರೂಪಾಯಿಗೆ ಮಿೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು. ಮತ್ತು ಅಂಥಾ ತಪ್ಪಿತ ಆಪಾದನೆ ಆದ ಮೇಲೆ ಸದರೀ ತಪ್ಪಿತ ನಡಿಸುತ್ತಾ ಇರುವ ಪ್ರತಿದಿನಕ್ಕೂ ಹತ್ತು ರೂಪಾಯಿಗೆ ಮಿೀರದ ಒಂದು ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದು.

ಪಬ್ಲಿಕ ಪಾಯಿಖಾನೇಗಳಿಗೆ ಲೈಸೆನ್ಸ ಕೊಡೋಣ.

154. ಜನಗಳು ಉಪಯೋಗಿಸುವದಕ್ಕೋಸ್ಕರ ಆಗಿಂದಾಗ್ಯೆ ತಮಗೆ ಯುಕ್ತವೆಂದು ತೋರುವಂಥಾ ಪಾಯಿಖಾನೆಗೆ ಒಂದು ವರುಷದ ಫಾಯಿದೆಗೆ ಮಿೀರದೆ ಎಷ್ಟರವರಿಗಾಗಲಿ ಪ್ರೆಸಿಡೆಂಟರು ಲೈಸೆನ್ಸ ಕೊಡಬಹುದು, ಅಂಥಾ ಲೈಸೆನ್ಸಿಲ್ಲದೆ ಯಾವ ಪಬ್ಲಿಕ ಪಾಯಿಖಾನೆಯನ್ನಾಗಲಿ ಯಾವನು ಯಿಡುತ್ತಾನೋ, ಅಥವಾ ಒಂದು ಪಬ್ಲಿಕ ಪಾಯಿಖಾನೇ ಬಗ್ಯೆ ಲೈಸೆನ್ಸು ಪಡದು, ಅದು ಗಲೀಜಾಗಿಯೂ, ಹೇಸಿಗೆ ವುಂಟುಮಾಡುವ ಸ್ಥಿತಿಯಲ್ಲಿಯೂ ಯಾವನು ಇರಗೊಡಿಸುತ್ತಾನೋ, ಅಥವಾ ಅದನ್ನು ಪಾಕ ಮಾಡಿಸಲಿಕ್ಕೆ ತಕ್ಕ ಸಾಧನಗಳನ್ನು ಕಲ್ಪಿಸದೆ ಯಾವನು ಉಪೇಕ್ಷಿಸುತ್ತಾನೋ ಅಂಥಾ ಮನುಷ್ಯನು ಐವತ್ತು ರೂಪಾಯಿಗೆ ಮಿೀರದ ಒಂದು ಜುರ್ಮಾನೆಗೂ ಅಂಥಾ ತಪ್ಪಿತ ಸ್ಥಾಪನೆ ಆದತರುವಾಯ ಸದರೀ ತಪ್ಪಿತ ನಡಿಸಲ್ಪಡುವ ಪ್ರತಿ ದಿನಕ್ಕೂ ಹತ್ತು ರೂಪಾಯಿಗೆ ಮಿೀರದ ಒಂದು ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದು.

ಜನಗಳ ಸ್ವಂತ ಪಾಯಿಖಾನೆಗೆ ಆವರಣ ಉಂಟುಮಾಡದೆಯೂ, ಛಾವಣೀ ಹಾಕದೆ ಯೂ ಉಪೇಕ್ಷಿಸೋಣ.

155. ತನ್ನ ನಿವೇಶನದಲ್ಲಿ ಪಾಯಿಖಾನೆಯುಳ್ಳ ಯಾವದಾದರೂ ಕಟ್ಟಣದ ಮಾಲೀಕ ಯಾ ಅನುಭವದಾರನು ಆಬಳಿ ಹೋಗಿಬರುವ ಅಥವಾ ವಾಸಮಾಡುವ ಜನಗಳ ಕಣ್ಣಿಗೆ ಕಾಣದೆ ಸಾಕಾದಷ್ಟು ಛಾವಣೀ ಇಂದಮುಚ್ಚಿಸಿ ಗೋಡೆಯಾಗಲಿ ಆವರಣವಾಗಲಿ ಹಾಕಿಸಿ ಅಂಥಾ ಪಾಯಿಖಾನೆಯನ್ನು ಹೊರಗೆ ಕಾಣಿಸದಂತೆ ಮಾಡತಕ್ಕದ್ದು. ಈ ಸೆಕ್ಷನ್ನ ನಿಬಂಧನೆಗಳ ಪೈಕಿ ಯಾವ ನಿಬಂಧನೆಯ ಪ್ರಕಾರವಾಗಲಿ ನಡೆಯುವದಕ್ಕೆ ಯಾವನು ತಪ್ಪುತ್ತಾನೋ ಅಥವಾ ವಿರುದ್ಧವಾಗಿ ನಡಿಯುತ್ತಾನೋ ಅಂಥಾ ಪ್ರತಿ ಮಾಲೀಕ ಯಾ ಅನುಭವದಾರನೂ ಹಾಗೆ ತಪ್ಪುವ ಯಾ ವಿರುದ್ಧವಾಗಿ ನಡಿಯುವ ಪ್ರತಿ ದಿನಕ್ಕೂ ಹತ್ತು ರೂಪಾಯಿಗೆ ಮಿೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಫ್ರುಟಿ ಚರಂಡಿಗಳೂ ಪಾಯಿಖಾನೆಗಳೂ ಕಮ್ಮಿಷನರಗಳ ಅಧಿಕಾರದಲ್ಲಿರತಕ್ಕದ್ದಲ್ಲದೆ ಮಾಲೀಕರಿಂದ ಒಳ್ಳೇ ಸ್ಥಿತಿಯಲ್ಲಿಡಲ್ಪಡತಕ್ಕದ್ದು.

156. ಯಾವ ಜಮೀನ್ಹಾ ವಗೈರೆಗಳಿಗೆ ಫ್ರುಟಿ ಚರಂಡಿಗಳು ಸಂಬಂಧಿಸಿದವುಗಳಾಗಿರುತ್ತವೋ ಅಂತಾ ಜಮೀನ್ಹಾಗಳಲ್ಲಿಯೂ ಕಟ್ಟಗಳಲ್ಲಿಯೂ, ಜಮೀನ್ಹಾಗಳ ಹೊರಗೂ, ಕಟ್ಟಗಳ ಹೊರಗೂ, ಯಿರುವ ದರೋಬಸ್ತು ಫ್ರುಟಿ ಚರಂಡಿಗಳೂ, ಯಾವದಾದರೂ ಬೀದಿಯಲ್ಲಾಗಲಿ ಬೀದಿಯ ಬಳಿಯಲ್ಲಾಗಲಿ ಯಿರುವ ಪಾಯಿಖಾನೆಗಳೂ ಬಚ್ಚಲು ಗುಣಿಗಳೂ ಕಮ್ಮಿಷನರಗಳ ವಿಚಾರಣೆಯಲ್ಲಿಯೂ, ಅಧಿಕಾರದೊಳಗೂ, ಇರತಕ್ಕದ್ದಲ್ಲದೆ ಯಾವ ಜಮೀನ್ಹಾಗಳಿಗೂ, ಕಟ್ಟಕ್ಕೂ ಅವು ಸೇರಿ ಇರುತವೋ, ಯಾವದರ ಉಪಯೋಗಕ್ಕೋಸ್ಕರ ಅವು ಕಟ್ಟಲ್ಪಟ್ಟು ಇರುತವೋ ಅಥವಾ ಜಾರೀಯಾಗಿ ನಡಿಸಲ್ಪಡುತವೋ ಅಂತಾ ಜಮೀನ್ಹಾಗಳ ಮತ್ತು ಕಟ್ಟದ ಮಾಲೀಕರ ಲಾಗವಡಿನಿಂದಲೂ ಖರ್ಚುಗಳಿಂದಲೂ ಸದರೀ ಪಾಯಿಖಾನೆ ವಗೈರೆಯು ಬದಲಾಇಸಲ್ಪಟ್ಟು, ದುರಸ್ತು ಮಾಡಲ್ಪಟ್ಟು, ಮತ್ತು ಕ್ರಮವಾದ ಸ್ಥಿತಿಯಲ್ಲಿಡಲ್ಪಡತಕ್ಕದ್ದು. ಮತ್ತು ಅಂತಾ ಯಾವ ಚರಂಡಿಯಾಗಲಿ, ಪಾಯಿಖಾನೆಯಾಗಲಿ, ಬಚ್ಚಲು ಗುಂಡಿಯಾಗಲಿ ಯಾವದಕ್ಕೆ ಸಂಬಂಧಿಸಿ ಇರುತ್ತೋ ಅಂತಾ ಯಾವದಾದರೂ ಜಮೀನು ಯಾ ಕಟ್ಟಗಳು ಇಂತಾವುಗಳ ಮಾಲೀಕನು ಆ ಬಗ್ಯೆ ಬರವಣಿಗೆಯಲ್ಲಿ ನೋಟಿಸ ಕೊಡೋಣಾದ ತರುವಾಯ ಎಂಟು ದಿನಗಳಲ್ಲಿ ಪ್ರೆಸಿಡೆಂಟರಿಂದ ನಿಯಮಿಸಲ್ಪಟ್ಟ ರೀತಿಯಾಗಿ ಬದಲಾಯಿಸಲಿಕ್ಕೆ, ದುರಸ್ತು ಮಾಡಲಿಕ್ಕೆ, ಬಂದೋಬಸ್ತು ಪಡಿಸಿ ಇಡಲಿಕ್ಕೆ, ಉಪೇಕ್ಷಿಸಿದಪಕ್ಷಕ್ಕೆ ಪ್ರೆಸಿಡೆಂಟರು ಅಂತಾ ಚರಂಡಿಯನ್ನಾಗಲಿ, ಪಾಯಿಖಾನೆಯನ್ನಾಗಲಿ, ಬಚ್ಚಲು ಗುಂಡಿಯನ್ನಾಗಲಿ ಬದಲಾಯಿಸುವಂತೆಯೂ, ದುರಸ್ತು ಮಾಡುವಂತೆಯೂ ಬಂದೋಬಸ್ತು ಪಡಿಸುವಂತೆಯೂ ಮಾಡಬಹುದಲ್ಲದೆ ಆ ಬಗ್ಯೆ ಹಿಡಿದ ಲಾಗವಡು ಮಾಲೀಕನಿಂದ ಕೊಡಲ್ಪಟ್ಟು, ಯಿದರಲ್ಲಿ ಮುಂದೆ ವಿಧಿಸಲ್ಪಟ್ಟ ರೀತಿಯಾಗಿ ವಸೂಲ್ ಮಾಡಲ್ಪಡತಕ್ಕದ್ದು.

ಮಾಲೀಕರು ಉಪೇಕ್ಷಿಸಿದಪಕ್ಷಕ್ಕೆ ಪ್ರೆಸಿಡೆಂಟರು ಕೆಲಸವನ್ನು ಮಾಡಿಸಿ ಅದರ ಲಾಗವಡನ್ನು ಮಾಲೀಕರಿಗೆ ಕಟ್ಟತಕ್ಕದ್ದು.

ಪ್ರೆಸಿಡೆಂಟರ ಹುಕುಮಿಗೆ ವಿರುದ್ಧವಾಗಿ ಚರಂಡಿಗಳನ್ನು ಮಾಡುವ ಯಾ ಬದಲಾಯಿಸುವ ಜನಗಳಿಗೆ ಶಿಕ್ಷೆ.

157. ಈ ಕಾನೂನ್ ಜಾರೀಲಿ ಬಂದ ತರುವಾಯ ಬರವಣಿಗೆ ಮೂಲಕ ಪ್ರೆಸಿಡೆಂಟರ ಅನುಮತಿ ಇಲ್ಲದೆಯಾಗಲಿ ಅವರ ಹುಕುಮಿಗೆ ಬರಕಿಲಾಫ್ ಆಗಲಿ ಅಂತಾ ಯಾವ ಚರಂಡಿಯಾಗಲಿ, ಪಾಯಿಖಾನೆಯಾಗಲಿ, ಬಚ್ಚಲು ಗುಂಡಿಯಾಗಲಿ, ಕಟ್ಟಲ್ಪಟ್ಟರೆ, ಕಿತ್ತಿ ಹಾಕಿಸುವಂತೆ, ಯಾ ನಿಲ್ಲಿಸುವಂತೆ, ಮಾಡಿಸದೇ ಇರುವಂತೆ ಪ್ರೆಸಿಡೆಂಟರಿಂದ ಹುಕುಂ ಮಾಡಲ್ಪಟ್ಟಿರುವ ಯಾವ ಚರಂಡಿಯನ್ನಾಗಲಿ, ಪಾಯಿಖಾನೆಯನ್ನಾಗಲಿ, ಬಚ್ಚಲು ಗುಂಡಿಯನ್ನಾಗಲಿ, ಯಾವನಾದರೂ ಕಟ್ಟಿದರೆ, ಯಾ ಖೋಲ್‌ಬಂದಿ ಮಾಡಿಸಿದರೆ, ಯಾ ನಿಲ್ಲಿಸದೆ ತೆಗದರೆ-ಹಾಗ್ರೆ ಮಾಡುವ ಪ್ರತಿ ಮನುಷ್ಯನೂ ಐವತ್ತು ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು. ಪ್ರೆಸಿಡೆಂಟರು ಅಂತಾ ಯಾವ ಚರಂಡಿಯಲ್ಲಾಗಲಿ, ಪಾಯಿಖಾನೆಯಲ್ಲಾಗಲಿ, ಬಚ್ಚಲು ಗುಂಡಿಯಲ್ಲಾಗಲಿ, ತನಗೆ ಯುಕ್ತ ತೋರುವಂತಾ ತಿದ್ದುಪಡಿಯನ್ನಾಗಲಿ ಬದಲಾವಣಿಯನ್ನಾಗಲಿ ಮಾಡಿಸತಕ್ಕದ್ದು ಮತ್ತು ಅದರ ಬಾಬತು ಲಾಗವಡು ಅಂತಾ ಚರಂಡಿಯಾಗಲಿ, ಪಾಯಿಖಾನೆಯಾಗಲಿ, ಬಚ್ಚಲು ಗುಂಡಿಯಾಗಲಿ, ಅಕ್ರಮವಾಗಿ ಕಟ್ಟಿಸಲ್ಪಟ್ಟ ಯಾ ಖೋಲ್‌ಬಂದಿ ಮಾಡಲ್ಪಟ್ಟ ಯಾ ನಿಲ್ಲಿಸದೆ ತೆಗೆಯಲ್ಪಟ್ಟ ಮನುಷ್ಯನಿಂದ ಕೊಡಲ್ಪಟ್ಟು ಇದರಲ್ಲಿ ಮುಂದೆ ವಿಧಿಸಲ್ಪಡುವ ರೀತಿಯಾಗಿ ವಸೂಲ್ ಆಗತಕ್ಕದ್ದು.

ಚರಂಡಿಗಳನ್ನೂ ಪಾಯಿಖಾನೆಗಳನ್ನೂ ಬಚ್ಚಲು ಗುಂಡಿಗಳನ್ನೂ ತನಖೀ ತೆಗದುಕೊಳ್ಳುವಿಕೆ.

158. ಪ್ರೆಸಿಡೆಂಟರಾಗಲಿ ಆ ಬಗ್ಯೆ ಅವರಿಂದ ಮೊಕರರ್ ಮಾಡಲ್ಪಟ್ಟ ಯಾವ ಆಫಿಸರಾಗಲಿ, ಅಂತಾ ಯಾವ ಚರಂಡಿಯನ್ನಾಗಲಿ, ಪಾಯಿಖಾನೆಯನ್ನಾಗಲಿ, ಬಚ್ಚಲು ಗುಂಡಿಯನ್ನಾಗಲಿ ತನಿಖೀ ತೆಗದು ಕೊಳ್ಳಬಹುದು, ಮತ್ತು ಆ ಬಗ್ಯೆ ಸೂರ್ಯೋದಯದ ಮೊದಲು ಸೂರ್ಯಾಸ್ತಮಾನದೊಳಗೆ ಯಾವಾಗಲಾಗಲಿ ಅಂತಾ ಚರಂಡಿ ಪಾಯಿಖಾನೆ ಯಾ ಬಚ್ಚಲುಗುಂಡಿ ಯಾವ ನಿವೇಶನಕ್ಕೆ ಸೇರಿ ಇರುತ್ತೋ ಆ ನಿವೇಶನಗಳ ಅನುಭವದಾರನಿಗೆ ಬರವಣಿಗೇ ಮೂಲಕ ನೋಟಿಸ ಕೊಟ್ಟು ಹನ್ನೆರಡು ಘಂಟೆಯ ಹೊತ್ತು ತರುವಾಯ ಯಾವದಾದರೂ ಜಮೀನ್ಹಾಗಳಲ್ಲಿ ಮತ್ತು ಕಟ್ಟದಲ್ಲಿ ಜರೂರಾದ ಕುಮಕೀದಾರು, ಕಾರೇಗಾರು ನಿಶೀ ಪ್ರವೇಶಿಸಿ ಸಾಧ್ಯವಾದ ಮಟ್ಟಿಗೆ ಎಷ್ಟು ಮಟ್ಟಿಗೂ ನುಕ್ಸಾನ್ ಉಂಟಾಗದಂತೆ ಯುಕ್ತವೆಂದು ತೋರುವ ಕಡೆ ಜಮೀನನ್ನು ಅಗಿಯಿಸಬಹುದು, ಮತ್ತು ಹಾಗೆ ತನಖೀ ತೆಗದುಕೊಂಡ ಮೇಲೆ ಸದರೀ ಚರಂಡಿ, ಪಾಯಿಖಾನೆ ಯಾ ಬಚ್ಚಲುಗುಂಡಿ ಬಂದೋಬಸ್ತಾಗಿಯೂ, ಸರಿಯಾದ ಸ್ಥಿತಿಯಲ್ಲಿಯೂ ಇರುವದಿಲ್ಲವೆಂತಲಾಗಲಿ ಈ ಕಾನೂನ್ ಜಾರೀಲಿ ಬಂದತರುವಾಯ ಇದರ ನಿಬಂಧನೆಗಳಿಗೆ ಬರಕಿಲಾಫಾಗಿ ಕಟ್ಟಲ್ಪಟ್ಟಿದೆ ಎಂತಲಾಗಲಿ ತಿಳಿಯ ಬಂದಲ್ಲಿ, ಹಾಗೆ ತನಖೀ ತೆಗದುಕೊಳ್ಳೋಣದರ ಲಾಗವಡು ಅಂತಾ ಚರಂಡಿ ಯಾ ಪಾಯಿಖಾನೆ, ಯಾ ಬಚ್ಚಲು

ಗುಂಡಿ ಯಾವನಿಗೆ ಸೇರಿಯಿರುತ್ತವೋ ಅಂಥಾ ಮನುಷ್ಯನಿಂದ ಕೊಡಲ್ಪಡತಕ್ಕದ್ದಲ್ಲದೆ ಇದರಲ್ಲಿ ಮುಂದೆ ವಿಧಿಸಲ್ಪಡುವ ಮೇರೆ ವಸೂಲ್ ಮಾಡಲ್ಪಡತಕ್ಕದ್ದು. ಆದರೆ ಚರಂಡಿಯಾಗಲಿ ಪಾಯಿಖಾನೆಯಾಗಲಿ ಬಚ್ಚಲು ಗುಂಡೀಯಾಗಲಿ ಬಂದೋಬಸ್ತಾಗಿಯೂ, ಕ್ರಮವಾದ ಸ್ಥಿತಿಯಲ್ಲಿರುವದಾಗಿಯೂ, ಈ ಕಾನೂನಿನ ನಿಬಂಧನೆಗಳಿಗೆ ಬರಕಿಲಾಫಾಗಿ ಕಟ್ಟಲ್ಪಡದೇಯೂ, ಕಾಣಬಂದರೆ ಪ್ರೆಸಿಡೆಂಟರಾಗಲಿ ಮೇಲೆ ಕಂಡ ಅಧೀನರಾಗಲಿ (ಹಾಗೆ ಅಗೆಯಿಸಿದ) ಭೂಮಿಯನ್ನು ಭರ್ತಿಮಾಡಿ ಸಾಧ್ಯವಾದಷ್ಟು ತ್ವರೆಯಲ್ಲಿ ನೆಟ್ಟಗೆ ಮಾಡಿಸತಕ್ಕದ್ದು. ಮತ್ತು ಅಂತಾ ಚರಂಡಿ, ಪಾಯಿಖಾನೆ, ಬಚ್ಚಲುಗುಂಡಿ ಇವುಗಳನ್ನು ತೆಗೆಯುವದರಿಂದಲೂ ಮುಚ್ಚುವದರಿಂದಲೂ ನೆಟ್ಟಗೆ ಮಾಡಿಸುವದರಿಂದಲೂ, ಹಿಡಿಯುವ ಲಾಗವಡಗಳು, ಅಂತಾ ಸಂಗತಿಯಲ್ಲಿ ಕಮಿಷ್ನರಗಳಿಂದ ಸಲ್ಲಿಸಲ್ಪಡತಕ್ಕದ್ದು, ಪರಂತು (ಮನೆಯೊಳಗೆ) ಇರತಕ್ಕವರು ಆಚೆಗೆ ಹೋಗಲಿಕ್ಕೆ ಯುಕ್ತವಾದ ಸಾವಕಾಶ ಕೊಡುವ ಪರ್ಯಂತ ಹಾಂಗೆ ತನಿಖೇ ನೋಡಲಿಕ್ಕೋಸ್ಕರ ಹಿಂದುಗಳು, ಮುಸಲಮಾನರು ಇವರುಗಳ ಹೆಂಗಸರು ಇರತಕ್ಕಬಗ್ಗೆ ವಿನಿಯೋಗಿಸಲ್ಪಟ್ಟ ಜನಾನೆಗಳಲ್ಲಾಗಲಿ, ಅಂತರ್ಗೃಹಗಳಲ್ಲಾಗಲಿ ಪ್ರವೇಶಿಸತಕ್ಕದ್ದಕ್ಕೆ ಇದರಲ್ಲಿ ಹಿಂದೆ ಅಡಗಿರುವ ಯಾವ ಅಂಶವೂ ಯಾವಾಗ್ಯೂ ಅಧಿಕಾರವನ್ನುಂಟುಮಾಡತಕ್ಕದ್ದಲ್ಲವು.

ನಿಯಮ.

ಮಾಲೀಕನಾಗಲಿ, ಅನುಭವದಾರನಾಗಲಿ ಕೆಲಸ ಮಾಡಿಸದೇ ತಪ್ಪಿ ಹೋದ ಪಕ್ಷಕ್ಕೆ ಪ್ರೆಸಿಡೆಂಟರು ಕೆಲಸಗಳನ್ನು ಮಾಡಿಸಿ ಅದರ ಲಾಗವಡಗಳನ್ನು ವಸೂಲ್ ಮಾಡಿಕೊಳ್ಳಬಹುದು.

159. ಈ ಕಾನೂನಿನ ನಿಬಂಧನೆಗಳನುಸರಿಸಿ ಯಾವದಾದರೂ ಕಟ್ಟ ಯಾ ಜಮೀನಿನ ಮಾಲೀಕನಿಂದಾಗಲಿ ಅನುಭವದಾರನಿಂದಾಗಲಿ ಯಾವ ಕಾಮಗಾರೀಯಾದರೂ ನೆರವೇರಿಸಲ್ಪಡಬೇಕಾಗಿದ್ದು ಅಂತಾ ಕೆಲಸ ನೆರವೇರಿಸಲಿಕ್ಕೆ ತಪ್ಪಿಹೋದ ಪಕ್ಷಕ್ಕೆ ಹಾಂಗೆ ತಪ್ಪಿಹೋದ್ದಕ್ಕೆ ಯಾವದಾದರೂ ಜುರ್ಮಾನೆ ವಿಧಿಸಲ್ಪಡಲಿ ವಿಧಿಸಲ್ಪಡದೇ ಇರಲಿ ಪರಂತು ಅಂತಾ ಕೆಲಸವನ್ನು ಪ್ರೆಸಿಡೆಂಟರು ಮಾಡಿಸತಕ್ಕದ್ದು ಆ ಬಗ್ಗೆ ಹಿಡಿದ ಲಾಗವಡ ಸದರೀ ಕಾಮಗಾರೀ ಯಾವ ಮನುಷ್ಯನಿಂದ ನೆರವೇರಿಸಲ್ಪಡತಕ್ಕದ್ದೋ ಆ ಮನುಷ್ಯನಿಂದ ಕೊಡಲ್ಪಟ್ಟು ಇದರಲ್ಲಿ ಮುಂದೆ ವಿಧಿಸಲ್ಪಡುವ ರೀತಿಯಾಗಿ ವಸೂಲ್ ಮಾಡಲ್ಪಡತಕ್ಕದ್ದು.

ಅನುಭವದಾರನ ದೆಸೆಯಿಂದ ಲಾಗವಡ ವಸೂಲ್ ಮಾಡುವದಕ್ಕೂ, ಆತನು ಅದನ್ನು ತಾನು ಕೊಡತಕ್ಕ ಬಾಡಿಗೇ ಮೊಬಲಗಿನಲ್ಲಿ ವಜಾ ಮಾಡುವದಕ್ಕೂ ಅಧಿಕಾರ.

160. (ಕಾಮಗಾರೀ) ಮಾಡಿಸುವದಕ್ಕೆ ತಪ್ಪಿದ ಮನುಷ್ಯನ ಕಟ್ಟದ ಯಾ ಜಮೀನಿನ ಮಾಲೀಕನಾಗಿ ಇದ್ದರೆ ಪ್ರೆಸಿಡೆಂಟರು ಈ ಬಗ್ಗೆ ಜಾಸ್ತಿಯಾಗಿ ಪರಿಹಾರವನ್ನುಂಟುಮಾಡುವ ವುದ್ದಿಶ್ಯ ಅಂಥಾ ಯಾವ ಮಾಲೀಕನ ಮೇಲಾಗಲಿ ಯಾವದಾದರೂ ಫ್ಯಾಕ್ಟ್ಯ ಯಾ ನಡವಳಿತ ನಡಿಸಿಯಾಗಲಿ ನಡಿಸದೇ ಇರಲಿ ತತ್ಕಾಲದಲ್ಲಿ ಮಾಲೀಕನಿಂದ ನಡಿಸಲ್ಪಡತಕ್ಕ ಲಾಗವಡ ಮೊಬಲಗು ಪೂರ್ತಿಯನ್ನಾಗಲಿ ಅಪೈಕಿ ಕೆಲವು ಭಾಗವನ್ನಾಗಲಿ, ಆಗ್ಯೆ ಅಥವಾ ಆ ತರುವಾಯ ಯಾವ ಕಾಲದಲ್ಲಾಗಲಿ, ಅಂಥಾ ಮಾಲೀಕನ ವಶದಲ್ಲಿ ಇರತಕ್ಕ ಕಟ್ಟವನ್ನು ಯಾ ಜಮೀನನ್ನು ಅನುಭವದಲ್ಲಿಯುಳ್ಳ ಮನುಷ್ಯನು ಸಲ್ಲಿಸುವಂತೆ ಕೋರಬಹುದು. ಮತ್ತು ಹಾಗೆ ಅನುಭವದಲ್ಲಿಯುಳ್ಳ ಮನುಷ್ಯನನ್ನು ಕೇಳಿದ ಮೇಲೆ ಆತನು ಅದನ್ನು ಸಲ್ಲಿಸದೇ ಹೋದ ಪಕ್ಷಕ್ಕೆ ಅಂಥಾ ಅನುಭವದಾರನ ಬಾಬತು ಚರಸ್ವತ್ತುಗಳ ಜಪ್ತಿಯಿಂದ ವಸೂಲ್ಮಾಡಬಹುದು; ಮತ್ತು ಹಾಗೆ ಅನುಭವದಾರನಾದ ಪ್ರತಿ ಮನುಷ್ಯನೂ ಅಂಥಾ ಯಾವ ಖರ್ಚಿಗಾಗಲಿ ತಾನು ಸದರೀ ಮೇರೆ ಸಲ್ಲಿಸಿದಷ್ಟು ಮಟ್ಟಿಗೆ ಅಥವಾ ತನ್ನಿಂದ ವಸೂಲ್ಮಾಡಿಕೊಳ್ಳಲ್ಪಡುವಷ್ಟು ಮಾತ್ರ, ತಾನು ಸಲ್ಲಿಸತಕ್ಕ ಬಾಡಿಗೇ ಮೊಬಲಗಿನಲ್ಲಿ ವಜಾ ಮಾಡಿಕೊಳ್ಳಲಿಕ್ಕೆ ಹಕ್ಕುಂಟಾಗಿರತಕ್ಕದ್ದು.

ಅನುಭವದಾರನು ತಾನು ಕೊಡತಕ್ಕ ಬಾ[...] ಮೊಬಲಗಿಗಿಂತ ಜಾಸ್ತೀ ಮೊಬಲಗಿಗೆ [...]ಯಾಗತಕ್ಕದ್ದಲ್ಲವು.

161. ಯಾವದಾದರೂ ಕಟ್ಟ ಯಾ ಜಮೀನಿನ ಯಾವ ಅನುಭವದಾರನೂ, ಅದರ ಮಾಲೀಕನಿಗೆ ಈ ಕಾನೂನಿಂದ ಕಟ್ಟೋಣಾದ ಯಾವ ಲಾಗವಡಗಳಿಗೋಸ್ಕರವಾಗಲಿ, ಯಾವ ಕಟ್ಟ ವಗೈರೇಗಾಗಿ ಅಂಥಾ ಲಾಗವಡ ಕೊಡಬೇಕಾಗಿರುತ್ತೋ ಆ ಕಟ್ಟಗಳಿಗೋಸ್ಕರ ತನ್ನನ್ನು ಕೇಳಿದಾಗ ತನ್ನಿಂದ ಸಲ್ಲಬೇಕಾದ ಅಥವಾ ಹಾಗೆ ಕೇಳಲ್ಪಟ್ಟ ತರುವಾಯ ಯಾವ ಕಾಲದಲ್ಲಾಗಲಿ ಬಾಕೀಯಾದ[...]ಂದ ಕೊಡಬೇಕಾಗುವ ಬಾಡಿಗೇ ಮೊಬಲಗಿಗಿಂತ ಜಾಸ್ತೀ ಮೊಬಲಗನ್ನು ಕೊಡುವದಕ್ಕೆ ಗುರಿಯಾಗತಕ್ಕದ್ದಿ[...] ಪರಂತು ಪ್ರೆಸಿಡೆಂಟರು ಆ ವಿಷಯವನ್ನು ಕುರಿತು ತನ್ನನ್ನು ಕೇಳಿದ ಮೇಲೆ ತಾನು ಸಲ್ಲಿಸತಕ್ಕ ಬಾಡಿ[...]ಬತು ಮೊಬಲಗು ಮತ್ತು ಯಾವನಿಗೆ ಅಂಥಾ ಬಾಡಿಗೇ ಕೊಡಬೇಕಾಗಿರುತ್ತೋ ಆ ಮನುಷ್ಯನ ಹೆಸರು,

ಅಷ್ಟೆ ಹೆಸರು ವಗೈರೇ, ಇತ್ಯಾಗಳನ್ನು ವಾಸ್ತವವಾಗಿ ಪ್ರಕಟ ಪಡಿಸುವದಕ್ಕೆ ಉಪೇಕ್ಷಿಸಿದರೆ ಯಾ ನಿರಾಕರಿಸಿದರೆ ಆ ಮೇರೆ ಗುರಿಯಾಗದೇ ಹೋಗುವದಿಲ್ಲವು; ಆದರೆ, ಅಂಥಾ ಅನುಭವದಾರನನ್ನು ಕೇಳದ ಮೊಬಲಗು ಹಾಗೆ ಕೇಳದ ಕಾಲದಲ್ಲಿಯಾಗಲಿ ಆ ತರುವಾಯ ಆಗಲಿ ತಾನು ಬಾಕೀಯಾಗಿದ್ದ ಬಾಡಿಗೇ ಮೊಬಲಗಿಗಿಂತ ಜಾಸ್ತೀ ಎಂಬದಾಗಿ ರುಜು ಮಾಡುವ ಭಾರ ಸದರೀ ಅನುಭವದಾರನನ್ನೇ ಸೇರಿ ಇರುತ್ತೆ. ಮತ್ತು ಇದರಲ್ಲಿ ಅಡಗಿಇರುವ ಯಾವ ಅಂಶವೂ; ಮೇಲೆ ಕಂಡಂತೆ ಯಾವದಾದರೂ ಕಾಮಗಾರೀಗಳ ಬಾಬತು ಲಾಗವಡುಗಳನ್ನು ಕುರಿತು ಅಂಥಾ ಯಾವ ಮಾಲೀಕ ಯಾ ಅನುಭವದಾರ ಇಂತಾವರಿಗೆ ಪರಸ್ಪರ ನಡದಿರುವ ಮುಖ್ಯವಾದ ಯಾವ ಒಡಂಬಡಿಕೆಗೂ ಬಾಧಕವಾಗುತ್ತೆಂತ ಗ್ರಹಿಸಕೂಡದು.

ಮಾಲೀಕ ಕಾಮಗಾರೀ ಮಾಡಿಸುವದಕ್ಕೆ ತಪ್ಪಿದರೆ ಅನುಭವದಾರನು ಕಾಮಗಾರಿಗಳನ್ನ ನೆರವೇರಿಸಿ ಲಾಗವಡನ್ನು ತನ್ನ ಬಾಡಿಗೇ ಮೊಬಲಗಿನಲ್ಲಿ ವಜಾ ಮಾಡಿಕೊಳ್ಳಬಹುದು.

162. ಯಾವದಾದರೂ ಕಟ್ಟಡ ಯಾ ಜಮೀನಿನ ಮಾಲೀಕನು; ಪ್ರೆಸಿಡೆಂಟರು ತಾಕೀದು ಮಾಡುವ ಯಾವದಾದರೂ ಕಾಮಗಾರಿಯನ್ನು ಮಾಡಿಸದೇ ತಪ್ಪಿದ ಪಕ್ಷಕ್ಕೆ ಅಂತಾ ಯಾವದಾದರೂ ಕಟ್ಟ ಯಾ ಜಮೀನಿನ ಅನುಭವದಾರನು ಅಂತಾ ಕೆಲಸವನ್ನು ಮಾಡಿಸತಕ್ಕದ್ದು ಮತ್ತು ಅದರ ಲಾಗವಡುಗಳು ಮಾಲೀಕನಿಂದ ಅವನಿಗೆ ಪಾವತೀ ಮಾಡಲ್ಪಡತಕ್ಕದ್ದು ಅಥವಾ ಅವನ ದೆಶೆಯಿಂದ ಅಂತಾ ಮಾಲೀಕನಿಗೆ ಆಗಿಂದಾಗ್ಯೆ ಬಾಕೀಯಾಗತಕ್ಕ ಬಾಡಿಗೇಯಲ್ಲಿ ವಜಾ ಮಾಡಲ್ಪಡತಕ್ಕದ್ದು.

ಈ ಕಾನೂನಿನ ಅಮಲ್‌ಜಾರೀಯಾಗತಕ್ಕದ್ದನ್ನು ಅನುಭವದಾರರು ವಿರೋಧಿಸಿದ ಪಕ್ಷಕೆ ನಡಿಸಬೇಕಾದ ನಡವಳಿತ.

163. ಯಾವದಾದರೂ ಕಟ್ಟ ಯಾ ಜಮೀನಿನ ಅನುಭವದಾರನು ಅಂತಾ ಕಟ್ಟ ಯಾ ಜಮೀನ್ ವಿಷಯದಲ್ಲಿ ಈ ಕಾನೂನಿನ ಯಾವ ನಿಬಂಧನೆಗಳ ಅಮಲನ್ನಾಗಲಿ ನಡಿಸತಕ್ಕದ್ದರಲ್ಲಿ, ಅದರಮಾಲೀಕನು ಸದರೀ ಮೇರೆ ಅಮಲ್ ನಡಿಸಬೇಕೆಂಬ ತನ್ನ ಅಭಿಪ್ರಾಯವನ್ನು ಕುರಿತು ಅನುಭವದಾರನಿಗೆ ನೋಟಿಸ ಕೊಟ್ಟ ತರುವಾಯ ಸದರೀ ಅನುಭವದಾರನು ಸದರೀ ಮಾಲೀಕನನ್ನು ನಿರೋಧಿಸಿದ ಪಕ್ಷಕ್ಕೆ, ಪ್ರೆಸಿಡೆಂಟರು ಆ ವಿಷಯ ರುಜು ಆದ ಮೇಲೆ, ಅಂತಾ ಕಟ್ಟ ಯಾ ಜಮೀನ್ ವಿಷಯದಲ್ಲಿ ಈ ಕಾನೂನ್ ನಿಬಂಧನೆಗಳ ಅಮಲ್ ನಡಿಸಲಿಕ್ಕೆ ಜರೂರಾವ ಅಂತಾ ದರೋಬಸ್ತು ಕಾಮಗಾರಿಗಳನ್ನು ನೆರವೇರಿಸುವ ಬಗ್ಯೆ ಅನುಭವದಾರನು ಮಾಲೀಕನಿಗೆ ಅವಕಾಶ ಕೊಡತಕ್ಕದ್ದೆಂದು ಬರವಣಿಗೆಯಲ್ಲಿ ಒಂದು ಹುಕುಂ ಕೊಡಬಹುದು. ಮತ್ತು ಹುಕುಂ ತಾರೀಖ್ ಲಾಗಾಯತು ಎಂಟು ದಿನಗಳು ಕಳೆದ ತರುವಾಯ, ಅಂತಾ ಕಾಮಗಾರೀಗಳನ್ನು ನೆರವೇರಿಸುವ ಅಂಶದಲ್ಲಿ ಅಂತಾ ಮಾಲೀಕನಿಗೆ ಅವಕಾಶ ಕೊಡಲಿಕ್ಕೆ ಅಂತಾ ಅನುಭವದಾರನು ನಿರಾಕರಿಸುತ್ತಾ ಇದ್ದರೆ ಹಾಗೆ ನಿರಾಕರಿಸುತ್ತಾ ಇರುವ ಪ್ರತಿ ದಿನಕ್ಕೂ ಐವತ್ತು ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು. ಮತ್ತು ಅಂತಾ ಪ್ರತಿ ಮಾಲೀಕನೂ ಹಾಗೆ ನಿರಾಕರಿಸಲ್ಪಡುತ್ತಾ ಇರುವಲ್ಲಿ, ಅಂತಾ ಕಾಮಗಾರೀಗಳನ್ನು ಮಾಡಿಸದೇ ತಪ್ಪಿದ ಸಬಬ್ ಅನ್ಯಥಾ ಗುರಿಯಾಗಿರುವ ಯಾವ ಜುರ್ಮಾನೇಯಿಂದಲೂ ಮಾಫ್ ಆಗತಕ್ಕದ್ದು.

ಪಬ್ಲಿಕ್ ಕೆರೆಗಳು ವಗೈರೇ ಕಮ್ಮಿಷನರಗಳ ಸುಫರ್ದಿನಲ್ಲಿರತಕ್ಕದ್ದು.

164. ಈ ಕಾನೂನ್ ಜಾರೀಲಿ ಬರುವ ಕಾಲದಲ್ಲಿಯಾಗಲಿ ಆ ತರುವಾಯವಾಗಲಿ ಮಾಡಲ್ಪಟ್ಟ, ಇಡಲ್ಪಟ್ಟ, ಯಾ ಕಟ್ಟಲ್ಪಟ್ಟ, ದರೋಬಸ್ತು ಪಬ್ಲಿಕ್ ಕೆರೆಗಳು, ಕುಂಟೆಗಳು, ನೀರು ತೊಟ್ಟಿಗಳು, ಬಾಮಿಗಳು, ಕಾಲುವೆಗಳು, ಜಲದಾರೆಗಳು, ತೂಬಿನ ಕಾಲುವೆಗಳು, ನೀರು ನಲ್ಲೀಗಳು, ನೀರು ತೋಡುವ ಯಂತ್ರಗಳು, ಅಥವಾ ನೀರಿನಸಂಬಂಧವಾದ ಇತರ ಕಾಮಗಾರಿಗಳು ಇಂತಾದ್ದು ಕಮ್ಮಿಷನರ್‌ಗಳ ಲಾಗವಡಿನಿಂದ ಕಲ್ಪಿಸಲ್ಪಡಲಿ ಯಾ ಇಡಲ್ಪಡಲಿ ಯಾ ಕಟ್ಟಲ್ಪಡಲಿ ಅಥವಾ ಅನ್ಯಥಾ ಆಗಲಿ ಪರಂತು ಅಂತಾದ್ದು ಮತ್ತು ಸದರೀ ಕೆರೇ ವಗೈರೇಗಳಿಗೆ ಶೇರಿದ ಅಥವಾ ಅವುಗಳೊಡನೆ ಸಂಬಂಧಿಸಿದ ದರೋಬಸ್ತು ಸೇತುವೆಗಳು ಕಟ್ಟಗಳು ಯಂತ್ರಗಳು, ಕೆಲಸಗಳು, ಸಾಮಾನುಗಳು, ಪದಾರ್ಥಗಳು ಇವುಗಳೂ ಮತ್ತು, ಯಾವದಾದರೂ ಪಬ್ಲಿಕ್ ಕೆರೆ[illegible] ಶೇರಿದ (ಸ್ವಂತ ಸ್ವತ್ತು ಅಲ್ಲದೇಆಗಲಿ ಸರಕಾರದವರ ಸ್ವತ್ತು ಅಲ್ಲದೇ ಆಗಲಿ ಇರುವ) ಶೇರಿದ ಹಾಗೆ ಇರುವ ಯ[illegible]ವದಾದರೂ ಜಮೀನು ಇಂತಾದ್ದೂ ಕಮ್ಮಿಷನರ್‌ಗಳ ಅಧಿಕಾರದಲ್ಲಿರತಕ್ಕದಲ್ಲದೆ ಅವರಿಗೆ ಶೇರಿದವಾಗಿರತಕ್ಕದ್ದು.

ನೀರು ಒದಗಿಸುವ ಬಗ್ಯೆ ಕಾಮಗಾರೀ

165. ಕಮ್ಮಿಷನರ್‌ಗಳು, ನಿವಾಸಿಗಳಿಗೆ ನೀರು ಒದಗಿಸುವದಕ್ಕಾಗಿಯಾಗಲಿ, ಈ ಕಾನೂನ್‌ನಲ್ಲಿ ಕ[illegible] ಇತರ ಕಾರ್ಯಗಳಿಗೋಸ್ಕರವಾಗಲಿ ಉಪಯೋಗಿಸುವ ಹಾಲೀ ಇ[illegible] ದರೋಬಸ್ತು ಪಬ್ಲಿಕ್ ಕೆರೆಗಳು, ಕುಂಟೆಗಳು, ನೀರು ತೊಟ್ಟಿ[illegible]

ಗಳನ್ನು ಮಾಡಿಸುವದು ಮತ್ತು ಅವುಗಳನ್ನು ಕಾಪಾಡುವದು.

ಬಾವಿಗಳು, ಕಾಲುವೆಗಳು, ಮೋಹರೀಗಳು, ತೂಬಿನ ಕಾಲುವೆಗಳು, ನೀರಿನ ನಲ್ಲೀಗಳು, ನೀರು ತೋಡುವ ಯಂತ್ರಗಳು, ಮತ್ತು ಇತರ ನೀರಿನ ಕಾಮಗಾರೀಗಳು, ಇಂಥಾವು ಜಾರೀಯಾಗಿ ನಡಿಯುವಂತೆಯೂ, ಕಾಪಾಡಲ್ಪಡುವಂತೆಯೂ, ನೀರು ಒದಗಿಸುವಂತೆಯೂ ಮಾಡತಕ್ಕದ್ದು; ಅಥವಾ ಅವರು ಅವುಗಳಿಗೆ ಬದಲಾಗಿ ಅಂಥಾ ಇತರ ಕಾಮಗಾರೀಗಳನ್ನು ಮಾಡಿಸಿ, ಕಾಪಾಡಲ್ಪಡುವಂತೆಯೂ, ನೀರು ಒದಗಿಸಲ್ಪಡುವಂತೆಯೂ, ಮಾಡತಕ್ಕದ್ದು ; ಮತ್ತು ಕಮ್ಮಿಷನರಗಳು ಮೈಸೂರು ಮಹಾರಾಜಾ ಸರ್ಕಾರದವರ ಮಂಜೂರಾತೀ ಮೇಲೆ ಆಗಿಂದಾಗ್ಯೆ ಮ್ಯುನಿಸಿಪೆಲ್ ಸರಹದ್ದುಗಳೊಳಗೆ ನೀರು ತರಲಿಕ್ಕೋಸ್ಕರ ಕಾಲ್ವೆಗಳನ್ನು ನಿರ್ಮಿಸಿ ನಲ್ಲಿಗಳನ್ನು ಇಡಿಸುವದು ಮಾತ್ರವಲ್ಲದೆ ಮೇಲೆ ಕಂಡ ಕೆಲಸಕ್ಕಾಗಿ ಹೊಸ ಕೆರೆಗಳು, ಕುಂಟೆಗಳು, ನೀರು ತೊಟ್ಟಿಗಳು, ಬಾವಿಗಳು, ನೀರಿಗೆ ಸಂಬಂಧಪಟ್ಟ ಇತರ ಕಾಮಗಾರಿಗಳು ಇವುಗಳೆಷ್ಟನ್ನಾಗಲಿ ಒದಗಿಸಬಹುದು.

ಸ್ನಾನ ಮಾಡುವದರಿಂದ ಜಂತುಗಳನ್ನು ಯಾ ಪದಾರ್ಥಗಳು ವಗೈರೆಯನ್ನು ತೊಳಿಯುವದರಿಂದ, ಕಚರೇ ವಗೈರೆಯನ್ನು ಹಾಕುವದರಿಂದ ನೀರು ಕೆಡಿಸುವಿಕೆ.

166. 168ನೇ ಸೆಕ್ಷನ್ ಅನುಸರಿಸಿ ಕಮ್ಮಿಷನರಗಳಿಂದ ನಿಯಮಿಸಲ್ಪಡುವ ಪ್ರಕಾರ ಹೊರತು, ಕಮ್ಮಿಷನರಗಳ ಬಾಬತು ಯಾವದಾದರೂ ಸಣ್ಣ ಹೊಳೆ, ಕೆರೆ, ಕುಂಟೆ, ಬಾವಿ, ನೀರು ತೊಟ್ಟಿ, ಜಲದಾರಿ ಅಥವಾ ಕಾಲುವೆ, ಇಂಥಾದ್ದರಲ್ಲಿ ಸ್ನಾನಮಾಡುವ ಅಥವಾ ಅದರಲ್ಲಿ ಯಾವದಾದರೂ ಕುದುರೆ, ನಾಯಿ ಅಥವಾ ಇತರ ಜಂತುವು ಅಥವಾ ತುಪ್ಪಟ, ಬಟ್ಟೆ ಅಥವಾ ಉಡುವ ಬಟ್ಟೆ ಅಥವಾ ಅಡಿಗೇ ಮುಂತಾದ ಕಾರ್ಯಗಳಿಗೋಸ್ಕರ ಉಪಯೋಗಿಸುವ ಯಾವದಾದರೂ ಪಾತ್ರೆ ಸಾಮಾನುಗಳು, ಜಂತುವಿನ ಚರ್ಮ, ತೊಗಲು, ಅಥವಾ ಅಸಹ್ಯಕರವಾದ ಯಾ ಉಪದ್ರವಕರವಾದ ಇತರ ವಸ್ತು ಇಂಥಾದ್ದು ಯಾವದನ್ನಾಗಲಿ ತೊಳಿಯುವ (ಒಗೆಯುವ ಅಥವಾ ಉಜ್ಜಿ ತೊಳಿಯುವ) ಅಥವಾ ಆ ಮೇರೆ ಮಾಡಿಸುವ ಅಥವಾ ಅದರಲ್ಲಿ ಯಾವದಾದರೂ ಜಂತುವು, ಗ್ರೇವಲ್, ಕಲ್ಲು, ಧೂಳು, ಅಥವಾ ಯಾವದಾದರೂ ಕಚರಾ, ಕಶ್ಮಲ, ಕಲ್ಮಷ ಅಥವಾ ದುರ್ಗಂಧವುಳ್ಳ ಯಾ ಬಾಧಕವಾದ ಇತರ ಪದಾರ್ಥ ಯಾ ವಸ್ತು ಇಂಥಾದ್ದನ್ನು ಹಾಕುವ, ಇರಿಸುವ, ಬಿಸಾಡುವ ಅಥವಾ ಪ್ರವೇಶಿಸುವಂತೆ ಮಾಡುವ ಅಥವಾ ಅದರಲ್ಲಿ ಯಾವದಾದರೂ ಕೊಳೇ ನೀರು ಬಂದು ಬೀಳುವ ತೊಟ್ಟಿ, ಬಚ್ಚಲು, ಚರಂಡಿ, ಯಂತ್ರ ಅಥವಾ ಕಡಾಯಿ ಇಂಥಾದ್ದರ ಬಾಬತು, ನೀರು ಅಥವಾ ತನ್ನದಾಗಿ ಇರುವ ಅಥವಾ ತನ್ನ ಅನುಭವದಲ್ಲಿರುವ ಯಾವದಾದರೂ ಕಟ್ಟಡದಿಂದಾಗಲಿ ಭೂಮಿಯಿಂದಾಗಲಿ ಹರಿಯುವ ಅನಾರೋಗ್ಯಕರವಾದ ಅಥವಾ ಅಸಹ್ಯಕರವಾದ ಯಾವದಾದರೂ ಇತರ ಪದಾರ್ಥ ಯಾ ವಸ್ತು ಇಂಥಾದ್ದನ್ನು ಹರಿಯುವಂತೆ ಅಥವಾ ಅಲ್ಲಿಗೆ ತರಲ್ಪಡುವಂತೆ ಮಾಡಿಸುವ ಅಥವಾ ಅಪ್ಪಣೇ ಕೊಡುವ ಅಥವಾ ಅಂಥಾ ಯಾವ ನೀರಾಗಲಿ ಎಷ್ಟುಮಾತ್ರವಾದರೂ ಕೊಳೆಯಾಗುವಂತೆ ಅಥವಾ ಕೆಡುವಂತೆ ಯಾವ ಕೆಲಸವಾಗಲಿ ಮಾಡುವ ಯಾವ ಮನುಷ್ಯನಾದರೂ ಪ್ರತಿ ತಪ್ಪಿತಕ್ಕೂ ಐವತ್ತು ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಚರಂಡಿ ವಗೈರ ನೀರು ಹರಿಯಗೊಡಿಸುವಿಕೆ.

ಉಪದ್ರವ ಕರವಾದ ಕಸಬುಗಳ ದೆಸೆಯಿಂದನೀರು ಕೊಳೆಮಾಡುವಿಕೆ.

167. ಯಾವದಾದರೂ ಗ್ಯಾಸ ಎಂಬ ಘಾಳಿ ತಯಾರ ಮಾಡುವ ಕಾರಖಾನೆಗಳಿಗೆ ಯಜಮಾನನಾಗಿದ್ದಾಗಲಿ, ಗ್ಯಾಸ ತಯಾರ ಮಾಡುವ ಯಾ ಒದಗಿಸುವ ಕೆಲಸವನ್ನು ವಹಿಸಿ ಅಥವಾ ಅದರಲ್ಲಿ ಪ್ರವರ್ತಿಸಿ ಇದ್ದಾಗಲಿ, ಬಾಧಕವಾದ ಕಸಬು ಯಾ ಕೆಲಸ ನಡಿಸುವ ಯಾವ ಸ್ಥಳವನ್ನಾಗಲಿ ಅನುಭವದಲ್ಲಿಯುಳ್ಳವನಾಗಿ ಅಥವಾ ಅದರ ಮಾಲೀಕನಾಗಿದ್ದಾಗಲಿ, ಕಮ್ಮಿಷನರಗಳ ಬಾಬತು ಯಾವದಾದರೂ ಸಣ್ಣ ಹೊಳೆ, ಕೆರೆ, ಕುಂಟೆ, ಬಾವಿ, ನೀರು ತೊಟ್ಟಿ, ಜಲದಾರಿ, ನೀರಿನ ಕಾಲುವೆ, ಅಥವಾ ನೀರಿಗೆ ಸಂಬಂಧಪಟ್ಟ ಇತರ ಕೆಲಸಗಳು ಇವುಗಳಲ್ಲಿಯ ನೀರು ಕಲ್ಮಷ ಪಡಿಸುವ ಯಾ ಕೆಡಿಸುವ ಸದರೀ ತನ್ನ ಕಸಬಿಗೆ ಸಂಬಂಧಪಟ್ಟ ಯಾವ ಕೆಲಸವನ್ನಾಗಲಿ ಬುದ್ಧಿ ಪೂರ್ವಕವಾಗಿ ಮಾಡುವ ಯಾವ ಮನುಷ್ಯನಾಗಲಿ ಸಾವಿರ ರೂಪಾಯಿಗೆ ಮೀರದಒಂದು ಜುರ್ಮಾನೆಗೂ ಪ್ರೆಸಿಡೆಂಟರು ಲಿಖಿತ ರೂಪವಾದ ನೋಟಿಸ ಕೊಟ್ಟ ಇಪ್ಪತ್ತುನಾಲ್ಕು ಘಂಟೆಯ ಹೊತ್ತಿಗೆ ತರುವಾಯ ಈ ತಪ್ಪಿತ ನಡಿಸಲ್ಪಡುತ್ತಾ ಇರುವ ಪ್ರತಿ ದಿನಕ್ಕೂ ಐನೂರು ರೂಪಾಯಿಗೆ ಮೀರದ ಹೆಚ್ಚುಗಟ್ಲೇ ಜುರ್ಮಾನೆಗೆ ಸಹ ಗುರಿಯಾಗತಕ್ಕದ್ದು; ಮತ್ತು ಪ್ರೆಸಿಡೆಂಟರು ಲಿಖಿತರೂಪವಾದ ನೋಟಿಸಕೊಟ್ಟ ಇಪ್ಪತ್ತು ನಾಲ್ಕು ಘಂಟೆಗೆ ತರುವಾಯ ಅಂಥಾ ಮನುಷ್ಯರ ಬಾಬತು ಯಾವದಾದರೂ ನಲ್ಲಿಗಳು, ಜಲದಾರಿಗಳು, ಕೆಲಸಗಳು ಇಂಥಾವುಗಳನ್ನು ತೆಗದು ಅಜಮಾಯಿಷೀ ಮಾಡಬಹುದು, ಹಾಗೆ ಪರಿಶೀಲನೆ ಮಾಡಿದ ಮೇಲೆ ತನಿಖೀ ಮಾಡಲ್ಪಟ್ಟ ನಲ್ಲಿಗಳು ಜಲ

ದಾರೆಗಳು, ಕೆಲಸಗಳು, ಇವುಗಳ ದೆಸೆಯಿಂದ ಬರುವ ಅಥವಾ ಇವುಗಳಲ್ಲಿ ಇರುವ ಯಾವ ವಸ್ತುವಿನಿಂದಾಗಲಿ ನೀರು ಕೊಳೆ ಮಾಡಲ್ಪಟ್ಟಿತು ಯಾ ಕೆಡಿಸಲ್ಪಟ್ಟಿತು ಎಂತ ತೋರಿಬಂದ ಪಕ್ಷಕ್ಕೆ, ಹಾಗೆ ತನಖೀ ಮಾಡಿದ ಖರ್ಚು ಹಿಡಿವ ಲಾಗವಡುಗಳು, ಅಂತಾ ನಲ್ಲಿಗಳು, ಜಲದಾರಗಳು ಅಥವಾ ಕೆಲಸಗಳು ಯಾರವೋ ಅಥವಾ ಯಾರ ವಿಚಾರಣೆಯಲ್ಲಿಯೂ, ಅಧಿಕಾರದಲ್ಲಿಯೂ ಅವು ಇರುತ್ತವೋ ಅಂತಾ ಮನುಷ್ಯನ ದೆಸೆಯಿಂದ ಸಲ್ಲಿಸಲ್ಪಟ್ಟು, ಇದರಲ್ಲಿ ಮುಂದೆ ವಿಧಿಸಲ್ಪಡುವ ಮೇರೆ ಅವನಿಂದ ವಸೂಲ್ ಮಾಡಲ್ಪಡತಕ್ಕದ್ದು; ಆದರೆ ಸದರೀ ನೀರು ಆ ಮೇರೆ ಕೊಳೆ ಮಾಡಲ್ಪಡಲಿಲ್ಲವೆಂತಾಗಲಿ, ಕೆಡಿಸಲ್ಪಡಲಿಲ್ಲವೆಂತಾಗಲಿ ಕಾಣಬಂದ ಪಕ್ಷಕ್ಕೆ, ಅಂತಾ ಖರ್ಚುಗಳೂ ಅಂತಾ ತನಖೀ ಮಾಡುವದರಿಂದ ಸಂಭವಿಸುವ ದರೋಬಸ್ತು ನುಕ್ಸಾನಗಳೂ ಕಮಿಷನರಗಳಿಂದಲೇ ಸಲ್ಲಿಸಲ್ಪಡತಕ್ಕದ್ದು.

ಕಮಿಷನರಗಳು ಸ್ನಾನ ಘಟ್ಟಗಳನ್ನು ಏರ್ಪಡಿಸಬಹುದು.

168. ಕಮಿಷನರಗಳು ಯಾವ ಪಬ್ಲಿಕ ಪ್ರದೇಶವನ್ನಾಗಲಿ, ತಮಗೆ ಯುಕ್ತ ತೋರುವ ಮೇರೆ (ಜನಗಳ ಖಾಸಗತ ಸ್ವತ್ತಲ್ಲದ) ದೊಡ್ಡ ಕೆರೆಗಳ ಅಥವಾ ಯಾವದಾದರೂ ರ್ಕ ಎಂಬ ಖಾರೀ ತೀರದ ಯಾವ ಭಾಗವನ್ನಾಗಲಿ ಸ್ನಾನಘಟ್ಟವಾಗಿ ಉಪಯೋಗಿಸುವ ಬಗ್ಗೆ ಏರ್ಪಾಡು ಮಾಡಬಹುದು, ಮತ್ತು ಪ್ರಜೆಗಳಿಗೆ ಸ್ನಾನಾರ್ಥವಾಗಿ ಅನುಕೂಲಗಳಾದ ಬೇಕಾದಷ್ಟು ಕೊಳಗಳನ್ನು ಸಹ ಒದಗಿಸಬಹುದು ಅಥವಾ ಪ್ರತ್ಯೇಕವಾಗಿ ಏರ್ಪಡಿಸಬಹುದು, ಮತ್ತು ಜಂತುಗಳನ್ನು ತೊಳೆಯುವ ಬಗ್ಗೆಯಾಗಲಿ, ಬಟ್ಟೆಗಳೊಗೆಯುವ ಬಗ್ಗೆಯಾಗಲಿ, ಪ್ರಜೆಗಳ ಆರೋಗ್ಯ, ಪಾಕೀಜ, ಸುಖ ಇವುಗಳಿಗೆ ಸಂಬಂಧಪಟ್ಟ ಯಾವದಾದರೂ ಇತರ ವಿಷಯಗಳಿಗೋಸ್ಕರವಾಗಲಿ ಕೊಳಗಳನ್ನು ಯಾ ಕುಂಟೆಗಳನ್ನು ಯಾ ರ್ಕ ಎಂಬ ಖಾರೀ ನೀರನ್ನು ಪ್ರತ್ಯೇಕವಾಗಿ ಏರ್ಪಡಿಸಬಹುದು.

ಜನಗಳ ಖಾಸಗತ ನಿವೇಶಗಳಲ್ಲಿರುವ ಅನಾರೋಗ್ಯಕರವಾದ ಕೆರೆಗಳನ್ನು ಶೋಧಿಸುವಂತೆಯೂ ನೀರು ಬಿಟ್ಟುಬಿಡುವಂತೆಯೂ ತಾಕೀದ ಮಾಡಲಿಕ್ಕೆ ಅಧಿಕಾರ.

169. ಆರೋಗ್ಯಕ್ಕೆ ಹಾನಿಕರವಾಗಿಯಾಗಲಿ, ನೆರೆಹೊರೆಗೆ ಬಾಧಕವಾಗಿಯಾಗಲಿ ತೋರುವ ಯಾವದಾದರೂ ಖಾಸಗತ ಕೊಳವನ್ನು ಶೋಧಿಸುವಂತೆಯೂ, ಅಂತಾ ಯಾವದಾದರೂ ನಿವೇಶನದ ಆವರಣದೊಳಗಿರುವ ಅನುಪಯುಕ್ತವಾಗಿಯೂ, ನೆಲೆಯಾಗಿ ನಿಂತಿರುವದರಿಂದ ಕೆಟ್ಟು ಹೋದ ನೀರನ್ನು ಎತ್ತಿಸಿ ಬಿಡುವಂತೆಯೂ, ತೆಗಿಸಿ ಹಾಕುವಂತೆಯೂ, ಲಿಖಿತ ಮೂಲಕವಾದ ನೋಟಿಸಿನ ದ್ವಾರಾ ಯಾವ ನಿವೇಶನದ ಮಾಲೀಕನಿಗಾಗಲಿ ತಾಕೀದ್ ಮಾಡುವದು ಪ್ರೆಸಿಡೆಂಟರಿಗೆ ನ್ಯಾಯವಾಗಿರತಕ್ಕದ್ದು ಮತ್ತು ಅಂತಾ ಮಾಲೀಕನು ಅಂತಾ ನೋಟಿಸ್ ಜಾರಿಯಾದ ಲಾಗಾಯತ ಎಂಟು ದಿನಗಳಲ್ಲಿ ಅಂತಾ ತಾಕೀದ್ ಪ್ರಕಾರ ನಡಿಸಲಿಕ್ಕೆ ತಿರಸ್ಕರಿಸಿದರೆ ಯಾ ಉಪೇಕ್ಷಿಸಿದರೆ ಪ್ರೆಸಿಡೆಂಟರೂ, ಅವರ ಆಫೀಸರಗಳೂ, ಕೆಲಸದವರೂ ಅಂತಾ ನಿವೇಶವನ್ನು ಪ್ರವೇಶಿಸಿ ತಮಗೆ ಯುಕ್ತ ತೋರುವ ಪ್ರಕಾರ, ಮೇಲೆ ಕಂಡ ವಿಶಿಷ್ಟಾಂಶಗಳಿಗೋಸ್ಕರವಾಗಲಿ ಆ ಪೈಕಿ ಕೆಲವಕ್ಕೋಸ್ಕರವಾಗಲಿ, ಜರೂರಾದ ದರೋಬಸ್ತು ಕಾರ್ಯಗಳನ್ನು ಮಾಡಬಹುದು, ಅದರಿಂದ ಹಿಡಿದ ಲಾಗವಡನ್ನು ಹಾಗೆ ತಪ್ಪಿದ, ಅಂತಾ ನಿವೇಶನದ ಮಾಲೀಕನು ಕೊಡತಕ್ಕದ್ದಲ್ಲದೇ ಕಮಿಷನರಗಳಿಗೆ ಸಲ್ಲತಕ್ಕ ಸಾಲದೋಪಾದಿಯಲ್ಲಿ ವಸೂಲ್ ಮಾಡಲ್ಪಡತಕ್ಕದ್ದು.

ಪೈಲು ಜಾಗಾಗಳಲ್ಲಿರುವ ಹರಿಯದೇ ನೆಲೆಯಾಗಿ ನಿಂತಿರುವದರಿಂದ ಕೆಟ್ಟು ಹೋದ ಕುಂಟೆಗಳಲ್ಲಿ ನೀರು ತೆಗಿಸಿ ಹಾಕುವ ಬಗ್ಗೂ ಶೋಧಿಸುವ ಬಗ್ಗೂ ಅಧಿಕಾರ.

170. ಕೆಟ್ಟ ನೀರು ನಿಂತಿರುವ ಸ್ಥಳಗಳು ಯಾವ ಮನುಷ್ಯರ ಸ್ವಂತ ಆಸ್ತಿಯಾಗಿದ್ದರೂ ಇಲ್ಲದೇ ಇದ್ದರೂ, ವಾಸಸ್ಥರ ಆರೋಗ್ಯಕ್ಕೆ ಹಾನಿಕರವೆಂತ ತೋರುವ ಮತ್ತು ಯಾವದಾದರೂ ಸ್ವಂತ ಆವರಣದಲ್ಲಿಲ್ಲದ ಮತ್ತು ಆಚೆಗೆ ಹೋಗದೆ ನೆಲೆಯಾಗಿ ನಿಂತಿರುವದರಿಂದ ಕೆಟ್ಟು ಹೋದ ನೀರುಳ್ಳ ಅಂತಾ ದರೋಬಸ್ತು ಸ್ಥಳಗಳನ್ನು ಪ್ರೆಸಿಡೆಂಟರು ಆಗಿಂದಾಗ್ಯೆ ತಮಗೆ ಯುಕ್ತವೆಂದು ತೋರುವ ಪ್ರಕಾರ ಶೋಧಿಸತಕ್ಕದ್ದು, ಭರ್ತಿ ಮಾಡತಕ್ಕದ್ದು, ಅಥವಾ ನೀರು ತೆಗಿಸಿ ಹಾಕಿಸತಕ್ಕದ್ದು.

ಕಮಿಷನರಗಳು ಕಾಮಗಾರೀ ಮಾಡಿಸುವಲ್ಲಿ ಹಾಲೀ ಇರತಕ್ಕ ರಸ್ತೆಗಳಿಗೆ ಹಾನಿ ಸಂಭವಿಸಿದ ಪಕ್ಷಕ್ಕೆ ರಸ್ತೆಗಳು ವಗೈರೆ ಹಾಕಿಸತಕ್ಕದ್ದು.

171. ಈ ಕಾನೂನಿನಿಂದ, ಮಾಡಲ್ಪಡತಕ್ಕದ್ದೆಂತ ನಿಯಮಿಸಲ್ಪಟ್ಟ ಯಾ ಅಧಿಕಾರ ಕೊಡಲ್ಪಟ್ಟ ಯಾವ ಕಾಮಗಾರಿಗಳನ್ನಾಗಲಿ ಮಾಡಿಸುವಲ್ಲಿ, ಹಾಗೆ ಮಾಡಿಸುವದರಿಂದ ಅಟಕಾವ್ ಮಾಡಲ್ಪಡುವ ಹಾನಿ ಹೊಂದುವ ಯಾ ಅನುಪಯುಕ್ತವಾಗುವ ರಸ್ತೆಗಳು ವಗೈರೆಗೆ ಬದಲಾಗಿ ಮ್ಯುನಿಸಿಪಲ್ ಫಂಡಿನಿಂದ ಲಾಗವಡ ಮುಟ್ಟಿಸಬೇಕಾದಷ್ಟು ಅನುಕೂಲಗಳಾದ ರಸ್ತೆಗಳು, ನೀರು ಕಾಲುವೆಗಳು, ಚರಂಡಿಗಳು, ನಾಲೆಗಳು ಇವುಗಳನ್ನು ಕಮಿಷನರಗಳು ಬದ

ಗಿಸತಕ್ಕದ್ದು ಮತ್ತು ಮಾಡತಕ್ಕದ್ದು ಮತ್ತು ಕಮ್ಮಿಷನರಿಗೂ, ಅದರಿಂದ ಹಾನಿಪಟ್ಟ ಮನುಷ್ಯರಿಗೂ ತಕರಾರ ಸಂಭವಿಸಿದ ಪಕ್ಷಕ್ಕೆ ಅಂತಾ ತಕರಾರು, ನುಕ್ಸಾನ ವ ಲಾಗವಡ ಇವುಗಳ ವ್ಯವಸ್ಥೆಯ ಬಗ್ಗೆ ಇದರಲ್ಲಿ ಮುಂದೆ ವ್ಯವಸ್ಥೆಮಾಡಲ್ಪಟ್ಟ ರೀತಿಯಾಗಿ ಫೈಸಲಾಗತಕ್ಕದ್ದು.

ಕಮ್ಮಿಷನರಗಳು ಬೀದಿಯನ್ನು ಅಗಿಸಿದ ಪಕ್ಷಕ್ಕೆ ಅದನ್ನು ಸಾಧ್ಯವಾದಷ್ಟು ತ್ವರೆಯಲ್ಲಿ ನೆಟ್ಟಗೆ ಮಾಡಿಸತಕ್ಕದ್ದು.

172. ಯಾವದಾದರೂ ಬೀದಿ ಅಥವಾ ರಸ್ತೆಯ ತಳವರಸೆಯಾಗಲಿ, ಮೇಲ್ಭಾಗವಾಗಲಿ ಯಾವದಾದರೂ ಬಚ್ಚಲು ಯಾ ಚರಂಡಿಯಾಗಲಿ ಕಮ್ಮಿಷನರ್‌ಗಳಿಂದ ಯಾ ಅವರ ಆಫಿಸರಗಳಿಂದ ಯಾ ನೌಕರರಿಂದ ತೆಗೆಯಿಸಲ್ಪಟ್ಟ ಯಾ ಒಡೆಯಿಸಲ್ಪಟ್ಟ ಪಕ್ಷಕ್ಕೆ ಯಾವ ಬಗ್ಗೆ ಅವು ಅಗಿಸಲ್ಪಟ್ಟವೋ ಆ ಕಾಮಗಿರೀಗಳನ್ನು ಅವರು ಸಾಧ್ಯವಾದಷ್ಟು ತ್ವರೆಯಲ್ಲಿ ಪೂರೈಸಿ ಆ ಮೇರೆ ಅಗಿಸಲ್ಪಟ್ಟ, ಯಾ ಒಡೆಯಿಸಲ್ಪಟ್ಟ ಭೂಮಿಯನ್ನು ಭರ್ತಿ ಮಾಡಿಸಿ ತಳವರಸೆಯನ್ನೂ, ಮೇಲ್ಭಾಗವನ್ನೂ, ಬಚ್ಚಲನ್ನೂ ಯಾ ಚರಂಡಿಯನ್ನೂ, ಸರಿಮಾಡಿಸಿ ಅದರಲ್ಲಿ ಬಿದ್ದ ಮಣ್ಣನ್ನು ತೆಗಿಸಿ ಹಾಕಿಸತಕ್ಕದ್ದು. ಮತ್ತು ಈ ಮಧ್ಯಕಾಲದಲ್ಲಿ ಅಂತಾ ತಳವರಸೇ ಯಾ ಮೇಲ್ಭಾಗವು ಆ ಮೇರೆ ಅಗಿಸಲ್ಪಟ್ಟ ಯಾ ಒಡಿಸಲ್ಪಟ್ಟ ಸ್ಥಳಕ್ಕೆ ಕಟಕಟೇ ಕಟ್ಟಿಸಿ ಕಾವಲು ಇಡಿಸಿ ರಾತ್ರಿ ಹೊತ್ತು ಸಾಕಾದಷ್ಟು ಬೆಳಕು ಇಡಿಸತಕ್ಕದ್ದು.

ಗ್ಯಾಸಿನ ಮತ್ತು ನೀರು ನಲ್ಲೀಗಳ ಸನ್ನಿವೇಶವು ಕಮ್ಮಿಷನರಗಳ ಖರ್ಚಿನಿಂದಲೇ ಬದಲಾಯಿಸಲ್ಪಡತಕ್ಕದ್ದು.

173. ಈ ಕಾನೂನಿನ ಕಾರ್ಯಗಳಗೋಸ್ಕರ ಯಾವ ಬೀದಿಯಲ್ಲಾಗಲಿ ಇಡಲ್ಪಟ್ಟ ಯಾವದಾದರೂ ನೀರಿನ ನಲ್ಲಿ ಯಾ ಗ್ಯಾಸ ನಲ್ಲಿ ಯಾ ನೀರಿಗೆ ಸಂಬಂಧಪಟ್ಟ ಇತರಕೆಲಸಗಳು ಯಾ ಗ್ಯಾಸ ಕೆಲಸಗಳು ಇವುಗಳ ಸನ್ನಿವೇಶವನ್ನು ಹೆಚ್ಚಿಸುವದು ಯಾ ತಗ್ಗಿಸುವದು ಯಾ ಬೇರೆ ರೀತಿಯಿಂದ ಬದಲಾಯಿಸುವದು ಪ್ರೆಸಿಡೆಂಟರಿಗೆ ಜರೂರೆಂತ ತೋರಿದ ಪಕ್ಷಕ್ಕೆ ಆವರು ಆಗಿಂದಾಗ್ಯೆ ಲಿಖಿತ ರೂಪವಾದ ನೋಟಿಸ ಮೂಲಕ ಅಂತಾ ಯಾವದಾದರೂ ನಲ್ಲಿ ಅಥವಾ ಕೆಲಸಗಳು ಯಾರವೋ ಅಥವಾ ಯಾರ ಸ್ವಾಧೀನದಲ್ಲಿರುತವೋ ಆ ಮನುಷ್ಯನು ತಕ್ಷಣವೇಯಾಗಲಿ, ಸಾಧ್ಯವಾದಷ್ಟು ತ್ವರೆಯಲ್ಲಾಗಲಿ ಯಾವದಾದರೂ ಅಂತಾ ನಲ್ಲಿಯ ಅಥವಾ ಕೆಲಸದ ಸನ್ನಿವೇಶವನ್ನು ಪ್ರೆಸಿಡೆಂಟರು ನಿಯಮಿಸುವ ಮೇರೆ ಹೆಚ್ಚಿಸುವಂತೆ, ತಗ್ಗಿಸುವಂತೆ, ಅಥವಾ ಬೇರೆ ವಿಧವಾಗಿ ಬದಲಾಯಿಸುವಂತೆ ಮಾಡತಕ್ಕದ್ದೆಂತ ಆ ಮನುಷ್ಯನಿಗೆ ಹುಕುಂ ಮಾಡಬಹುದು, ಪರಂತು ಅಂತಾ ಬದಲಾವಣೀಯಿಂದ ಅಂತಾ ಕೆಲಸಗಳಿಗೆ ಶಾಶ್ವತವಾಗಿ ಹಾನಿಯುಂಟಾಗುವಂತಾದ್ದಾಗಿಯಾಗಲಿ, ನೀರು ಅಥವಾ ಗ್ಯಾಸ ಯಾವಾಗಿನಂತೆ ಸ್ವೇಚ್ಛೆಯಾಗಿಯೂ ಧಾರಾಳವಾಗಿಯೂ ಹರಿಯದೇ ಅಟಕಾವ ಮಾಡುವಂತಾದ್ದಾಗಿಯಾಗಲಿ ಇರತಕ್ಕದ್ದಲ್ಲವು ಮತ್ತು ಹಾಗೆ ಹೆಚ್ಚಿಸುವದು, ತಗ್ಗಿಸುವದು ಅಥವಾ ಬದಲಾಯಿಸುವದು ಅಥವಾ ಇವುಗಳಿಗೆ ಹಿಡಿಯುವ ಲಾಗುವಡೂ, ಅದರ ದೆಸೆಯಿಂದ ಉಂಟಾದ ನುಕ್ಸಾನಿಗೆ ಪೂರಾ ಈಡು ಮೊಬಲಗು ಸಹ, ಅಂತಾ ನಲ್ಲಿಗಳೂ ಕೆಲಸಗಳೂ ಯಾರವೋ ಆ ಮನುಷ್ಯರಿಗೆ ಮಾತ್ರವಲ್ಲದೆ ದರೋಬಸ್ತು ಇತರ ಜನಗಳಿಗೂ ಕಮ್ಮಿಷನರಗಳಿಂದ ಸಲ್ಲಿಸಲ್ಪಡತಕ್ಕದ್ದು. ಮತ್ತು ಅಂತಾ ಈಡು ಮೊಬಲಗನ್ನು ಕುರಿತು ಅಥವಾ ಅಂತಾ ಈಡು ಮೊಬಲಗ್ ಹಂಚಿಕೆಯನ್ನು ಕುರಿತು ಯಾವದಾದರೂ ತಕರಾರ ಸಂಭವಿಸಿದ ಪಕ್ಷಕ್ಕೆ ಅದು, ನುಕ್ಸಾನ ವ ಲಾಗವಡುಗಳ ವಿಷಯದಲ್ಲಿ ಹುಟ್ಟುವ ತಕರಾರ ತಕರೀರಗಳ ವ್ಯವಸ್ಥೆಯ ಬಗ್ಗೆ ಇದರಲ್ಲಿ ಮುಂದೆ ವಿಧಿಸಲ್ಪಟ್ಟ ಮೇರೆ ವ್ಯವಸ್ಥೆಯಾಗತಕ್ಕದ್ದು.

ಮಾಲೀಕ ವಗೈರೇರು ಬದಲಾವಣೇ ಮಾಡಲಿಕ್ಕೆ ಉಪೇಕ್ಷಿಸಿದರ ಪ್ರೆಸಿಡೆಂಟರೇ ಅದನ್ನು ಮಾಡಿಸಬಹುದು.

174. ಅಂತಾ ಯಾವ ನಲ್ಲೀ ಯಾ ಕೆಲಸಗಳು ಯಾರಿಗೆ ಸಂಬಂಧಿಸಿ ಇರುತವೋ ಅಥವಾ ಯಾರ ಅಧಿಕಾರದಲ್ಲಿರುತವೋ ಅಂತಾ ಮನುಷ್ಯರು ಅಂತಾ ನೋಟಿಸ ತಲುಪಿದಮೇಲೆ ತಕ್ಷಣವೇಯಾಗಲಿ, ಸಾಧ್ಯವಾದಷ್ಟು ತ್ವರೆಯಲ್ಲಾಗಲಿ ಪ್ರೆಸಿಡೆಂಟರು ಕೋರುವ ರೀತಿಯಾಗಿ ಅವುಗಳನ್ನು ಹೆಚ್ಚಿಸುವಂತೆ, ತಗ್ಗಿಸುವಂತೆ ಯಾ ಬದಲಾಯಿಸುವಂತೆ ಮಾಡಲಿಕ್ಕೆ ಪ್ರವರ್ತಿಸದೇ ಇದ್ದ ಪಕ್ಷಕ್ಕೆ ಪ್ರೆಸಿಡೆಂಟರು ತಾವೇ ಅಂತಾ ನಲ್ಲಿಗಳು ಯಾ ಕೆಲಸಗಳು ತಮಗೆ ಯುಕ್ತ ತೋರುವ ಪ್ರಕಾರ ಹೆಚ್ಚಿಸಲ್ಪಡುವಂತೆ ಯಾ ತಗ್ಗಿಸಲ್ಪಡುವಂತೆ ಅಥವಾ ಬದಲಾಯಿಸಲ್ಪಡುವಂತೆ ಮಾಡಿಸಬಹುದು, ಪರಂತು ಅಂತಾ ಕೆಲಸಗಳಿಗೆ ಅದರಿಂದ ಸ್ಥಿರವಾದ ಹಾನಿ ಉಂಟಾಗಕೂಡದು ಅಥವಾ ನೀರಾಗಲಿ ಗ್ಯಾಸ ಆಗಲಿ ಯಾವಾಗಿನಂತೆ ಧಾರಾಳವಾಗಿಯೂ, ಅನುಕೂಲವಾಗಿಯೂ ಹರಿಯುವದಕ್ಕೆ ಅಟಕಾವ ಪಡಿಸಲ್ಪಡಕೂಡದು.

ರಿಪೇರಿಗಳು ನಡಿಯುತ್ತಾ ಯಿರುವಲ್ಲಿ ಅಡ್ಡ (ಮರ ವಗೈರೆ) ಕಟ್ಟಿಸತಕ್ಕದ್ದು.

175. ಯಾವದಾದರೂ ಬೀದಿಗೆ ಯಾ ಕಾಲ್‌ದಾರಿಗೆ ಅಡ್ಡವಾಗಿರುವ ಅಥವಾ ಅಂತಾ ಕಾಮಗಾರೀ ಇಂದ ಅಸಂದರ್ಭ ಉಂಟಾಗಿರುವ ಸ್ಥಳದಲ್ಲಿ ಯಾವದಾದರೂ ಕಟ್ಟಣವನ್ನು ಕಟ್ಟಲಿಕ್ಕೆ ಅಥವಾ ಕೆಡಿವಿಸಲಿಕ್ಕೆ, ಯಾವದಾದರೂ ಕಟ್ಟಣದ ಹೊರಗಿನ ಭಾಗವನ್ನು ಬದಲಾಯಿಸಲಿಕ್ಕೆ ಯಾ ರಿಪೇರ ಮಾಡಿಸಲಿಕ್ಕೆ ಅಪೇಕ್ಷಿಸುವ ಪ್ರತಿ ಮನುಷ್ಯನೂ, ಅದು ಆರಂಭಿಸುವದಕ್ಕೆ ಪೂರ್ವವೂ, ಆ ಮೇರೆ ಮಾಡಲಿಕ್ಕೆ ಪ್ರೆಸಿಡೆಂಟರಿಂದ ಲಿಖಿತರೂಪವಾದ ಒಂದು ಲೈಸೆನ್ಸ ಮೊದಲು ತೆಗದುಕೊಂಡ ತರುವಾಯವೂ ಅಂತಾ ಕೆಲಸಗಳು ನಡಿಸಲ್ಪಡುವ ಜಾಗಾಗಳಲ್ಲಿ ಬೀದಿಯಿಂದ ಅಥವಾ ಕಾಲ್‌ದಾರೀಯಿಂದ ಆ ಕಟ್ಟಣವನ್ನು ಪ್ರತ್ಯೇಕ ಪಡಿಸಲಿಕ್ಕೆ ಸಾಕಾಗಿರುವ ಮರೆಗಳು ಅಥವಾ ತಡೆಗಳು ನಾಟಸುವಂತೆ ಮಾಡಿ ಅಂತಾ ಮರೆ ಅಥವಾ ತಡೆ ಜನಗಳ ಕ್ಷೇಮಕ್ಕೆ ಯಾ ಅನುಕೂಲಕ್ಕೆ ಜರೂರಿರುವಷ್ಟರವರಿಗೆ ಪ್ರೆಸಿಡೆಂಟರಿಗೆ ಸಮಾಧಾನಕರವಾಗಿರುವಂತೆ ಬಂದೋಬಸ್ತಾಗಿಯೂ ನಿಲುವಾಗಿಯೂ ನಾಟಸಲ್ಪಟ್ಟಿರತಕ್ಕದ್ದು ಮಾತ್ರವಲ್ಲದೆ ರಾತ್ರಿ ಹೊತ್ತು ಅಬಳಿ ಸಾಕಾದಷ್ಟು ದೀಪಗಳು ಇಡಲ್ಪಡುವಂತೆ ಮಾಡತಕ್ಕದ್ದು. ಮತ್ತು ಈ ಸೆಕ್ಷನ್ನ ನಿಬಂಧನೆಗಳಿಗೆ ವಿರುದ್ಧವಾಗಿ ಯಾವ ಕಟ್ಟಣವನ್ನಾಗಲಿ ಕಟ್ಟಲಿಕ್ಕೆ ಯಾ ಕೆಡವಿಸಲಿಕ್ಕೆ ಯಾ ಬದಲಾಯಿಸುವದಕ್ಕೆ ಆರಂಭಿಸಲ್ಪಡುವ, ಲೈಸೆನ್ಸ ಹೊಂದದೆ ಯಾವದಾದರೂ ಮರೆ, ಕಾಲಾವದಿ, ತಡೆ ವಗೈರೇ ಕಟ್ಟತಕ್ಕ ಅಥವಾ ನಾಟಿಸುವ, ಅಥವಾ ಲೈಸೆನ್ಸ ಹೊಂದಿಯಿದ್ದು ಅಂತಾ ತಡೆ ಯಾ ಮರೆ ನಡಿಸದೆಯೂ, ಮೇಲೆ ಕಂಡ ಕಾಲದಲ್ಲಿ ಸದರೀ ಮೇರೆ ಬಂದೋಬಸ್ತಾಗಿ ಇರುವಂತೆ ಮಾಡದೆಯೂ ತಪ್ಪುವ, ಅಥವಾ ಸದರೀ ಮರೆ ಯಾ ತಡೆಯಿರುತ್ತಾ ಇರುವಲ್ಲಿ ಅವುಗಳ ಬಳಿ ಸಾಕಾದಷ್ಟು ದೀಪಗಳನ್ನು ಇಡದ ಯಾ ಪ್ರೆಸಿಡೆಂಟರು ಹುಕುಂ ಮಾಡಿದ ಮೇಲೆ ಎಂಟು ದಿನಗಳೊಳಗೆ ಅವುಗಳನ್ನು ತೆಗಿಸಿ ಹಾಕದ ಪ್ರತಿ ಮನುಷ್ಯನೂ ಐವತ್ತು ರೂಪಾಯಿಗೆ ಮೀರದ ಒಂದು ಜುರ್ಮಾನೆಗೂ, ಸದರೀ ಪ್ರೆಸಿಡೆಂಟರು ನೋಟೀಸ ಕೊಟ್ಟ ಇಪ್ಪತ್ತು ನಾಲ್ಕು ಘಂಟೆಯ ಹೊತ್ತಿಗೆ ತರುವಾಯ ಸದರೀ ತಕ್ಸೀರ್ ನಡಿಸಲ್ಪಡುತ್ತಾ ಇರುವ ಪ್ರತಿ ದಿನಕ್ಕೂ ಹತ್ತು ರೂಪಾಯಿಗೆ ಮೀರದ ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದು.

ರಿಪೇರಿ ನಡಿಯುತ್ತಾ ಇರುವಲ್ಲಿ ಬೀದಿಗಳಿಗೆ ಅಡ್ಡವಾಗಿ ಅಡ್ಡಕಟ್ಟಿಗೆಗಳು ಕಟ್ಟಿಸಲ್ಪಟ್ಟು ರಾತ್ರಿ ಹೊತ್ತು ದೀಪಗಳು ಇಡಿಸತಕ್ಕದ್ದು.

176. ಕಮ್ಮಿಷನರ್‌ಗಳ ಅಧಿಕಾರದಲ್ಲಿರೋಣಾದ ಬೀದಿಗಳು, ಬಚ್ಚಲು ಯಾ ಚರಂಡಿಗಳು ಇಂತಾವುಗಳ ಪೈಕಿ ಯಾವದನ್ನಾಗಲಿ ತಾವು ಕಟ್ಟಿಸುತ್ತಾ ಯಿರುವಲ್ಲಿ ಯಾ ರಿಪೇರಿ ಮಾಡಿಸುತ್ತಾ ಯಿರುವಲ್ಲಿ ನೆರೆ ಹೊರೆ ಮನೆಗಳಿಗೆ ಅಪಾಯ ಬರದಂತೆ ಪ್ರೋಟೇಕೊಟ್ಟು ಬಂದೋಬಸ್ತು ಪಡಿಸಿ, ತಕ್ಕ ಜಾಗ್ರತೆ ಉಂಟಾಗಿರತಕ್ಕದ್ದಲ್ಲದೆ ಯಾವ ಬೀದಿಯಲ್ಲಾಗಲಿ ಬೀದಿಗೆ ಅಡ್ಡವಾಗಿಯಾಗಲಿ ಅಂತಾ ಕಾಮಗಾರಿ ನಡಿಯುತ್ತಾ ಯಿರುವಲ್ಲಿ ಸವಾರಿಗಳು, ಬಂಡಿಗಳು, ಯಿತರ ಯಾನಗಳು, ದನಗಳು, ಯಾ ಕುದುರೆಗಳು, ಇವುಗಳು ಹೋಗುವ ಮಾರ್ಗವನ್ನು ಅಟಕಾಪ್ ಮಾಡಲಿಕ್ಕೆ ಪ್ರೆಸಿಡೆಂಟರು ತಮಗೆ ಯುಕ್ತತೋರುವ ಅಡ್ಡ ಕಟ್ಟಿಗೆಗಳು, ಸರಪಣಿಗಳು ಯಾ ಕಂಭಗಳು ಯಿಂತಾವನ್ನು ಅಡ್ಡವಾಗಿ ಕಟ್ಟಿಸುವಂತೆ ಮಾಡತಕ್ಕದ್ದು. ಮತ್ತು ಪ್ರೆಸಿಡೆಂಟರು ಬೀದಿಗಳಲ್ಲಿರುವ ಯಾವದಾದರೂ ಬಚ್ಚಲು ಯಾ ಚರಂಡಿ ಯಾ ಯಿತರ ಕೆಲಸಗಳು ಯಿವುಗಳನ್ನು ಕಟ್ಟಿಸುತ್ತಾ ಇರುವಲ್ಲಿ ಯಾ ರಿಪೇರ್ ಮಾಡುತ್ತಾ ಯಿರುವಲ್ಲಿ ಅವುಗಳ ಬಳಿ ರಾತ್ರಿಹೊತ್ತು ಸಾಕಾದಷ್ಟು ದೀಪಗಳು ಯಿಡಿಸುವಂತೆ ಮಾಡತಕ್ಕದ್ದಲ್ಲದೆ ಅವುಗಳ ಬಳಿ ಕಾವಲ್ ಯಿಡಿಸತಕ್ಕದ್ದು. ಮತ್ತು ಪ್ರೆಸಿಡೆಂಟರ ಅಧಿಕಾರವನ್ನಾಗಲಿ ಸಮ್ಮತಿಯನ್ನಾಗಲಿ ಪಡೆಯದೆ ಸದರೀ ಅಡ್ಡಕಟ್ಟಿಗೆಗಳು, ಸರಪಣಿಗಳು, ಯಾ ಕಂಭಗಳು ಯಿವುಗಳಪೈಕಿ ಯಾವದನ್ನಾಗಲಿ ಅಗಿದು ತೆಗೆಯುವ, ಬದಲಾಯಿಸುವ ಯಾ ಮತ್ತೊಂದು ಸ್ಥಳಕ್ಕೆ ತೆಗೆದುಕೊಂಡು ಹೋಗುವ ಯಾವದಾದರೂ ದೀಪವನ್ನು ಆರಿಸಿ ಬಿಡುವ, ಯಾವ ಮನುಷ್ಯನಾಗಲಿ ಐವತ್ತು ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಕಟ್ಟಣದ ಸಾಮಾನುಗಳು ಯಿರತಕ್ಕ ಸ್ಥಳಗಳಲ್ಲಾಗಲಿ ಅಗಿಯಲ್ಪಟ್ಟ ಸ್ಥಳಗಳಲ್ಲಾಗಲಿ ದೀಪ ಹಚ್ಚದೆ ಇದ್ದರೆ ಶಿಕ್ಷೆ.

177. ಪ್ರೆಸಿಡೆಂಟರ ಅಪ್ಪಣೆಯಿಲ್ಲದೇನೇ ಯಾವ ಮನುಷ್ಯನೂ ಯಾವ ಬೀದಿಯಲ್ಲಿ ಯಾವ ಕಟ್ಟಣದ ಸಾಮಾನುಗಳನ್ನೂ ಇಡಕೂಡದು, ಅಥವಾ ಹಳ್ಳ ತೆಗೆಯಲೂಕೂಡದು, ಮತ್ತು ಯಾವ ಮನುಷ್ಯನಿಗಾಗಲಿ ಅಂತಾ ಅಪ್ಪಣೇ ಕೊಡಲ್ಪಟ್ಟ ಪಕ್ಷಕ್ಕೆ ಆ ಸಾಮಾನುಗಳು ಆಚೆಗೆ ಸಾಗಿಸಲ್ಪಡುವ ಪರ್ಯಂತವಾಗಲಿ ಅನ್ಯಥಾ ಬಂದೋಬಸ್ತು ಮಾಡಲ್ಪಡುವವರಿಗಾಗಲಿ ಆ ಮನುಷ್ಯನು ತನ್ನ ಸ್ವಂತ ಲಾಗವಡಿನಿಂದಲೇ ಅಂತಾ ಸಾಮಾನುಗಳಿಗೆ ಯಾ ಹಳ್ಳಕ್ಕೆ ಸಾಕಾಗಿರುವ ಮೇರೆ ತಡೆ ಹಾಕಿಸುವಂತೆಯೂ ಅವುಗಳ ಸುತ್ತೂ ಯಾವದಾದರೂ ಕಟ್ಟಿಗೆ ಕಟ್ಟಲ್ಪಡುವಂತೆಯೂ ಮಾಡುವದು ಮಾತ್ರವಲ್ಲದೆ ರಾತ್ರಿ ಹೊತ್ತು ಅದರಬಳಿ

ಸಾಕಾದಷ್ಟು ದೀಪಗಳು ಇಡುವಂತೆಯೂ ಮಾಡತಕ್ಕದ್ದು. ಮತ್ತು ಅಂತಾ ಅಪ್ಪಣೇ ಇಲ್ಲದೆ ಯಾವನು ಸಾಮಾನುಗಳನ್ನು ಇಡುತ್ತಾನೋ ಅಥವಾ ಹಳ್ಳ ತೆಗೆಯುತ್ತಾನೋ ಅಥವಾ ಅಂತಾ ಸಾಮಾನುಗಳು ಹಳ್ಳಗಳು ಇರುವ ಸ್ಥಳದಲ್ಲಿ ತಡೆಕಟ್ಟಿಸದೆಯಾಗಲಿ ಆವರಣ ಕಲ್ಪಿಸದೆಯಾಗಲಿ ದೀಪ ಹಚ್ಚದೆಯಾಗಲಿ ತಪ್ಪುತ್ತಾನೋ ಅಥವಾ ಕೊಡಲ್ಪಟ್ಟ ಅಪ್ಪಣೆಯನ್ನು ಹಿಂದಿರಿಸಿಕೊಂಡಾಗ ಅಂತಾ ಸಾಮಾನುಗಳನ್ನು ಮತ್ತೊಂದು ಸ್ಥಳಕ್ಕೆ ಸಾಗಿಸದೆಯಾಗಲಿ ಅಂತಾ ಹಳ್ಳವನ್ನು ಮುಚ್ಚಿಸದೆಯಾಗಲಿ ಇರುತ್ತಾನೋ ಅಂತಾ ಯಾವ ಮನುಷ್ಯನಾಗಲಿ ಐವತ್ತು ರೂಪಾಯಿಗೆ ಮೀರದ ಒಂದು ಜುರ್ಮಾನೆಗೂ ಪ್ರೆಸಿಡೆಂಟರು ನೋಟೀಸ ಕೊಟ್ಟ ಇಪ್ಪತ್ತು ನಾಲ್ಕು ಘಂಟೆಯ ಹೊತ್ತಿಗೆ ತರುವಾಯ ಆ ತಕ್ಸೀರ್ ನಡಿಸುತ್ತಾ ಇರುವ ಪ್ರತಿ ದಿನಕ್ಕೂ ಹತ್ತು ರೂಪಾಯಿಗೆ ಮೀರದ ಒಂದು ಜಾಸ್ತಿ ಜುರ್ಮಾನೆಗೂ ಗುರಿಯಾಗತಕ್ಕದ್ದು.

ಅಪಾಯಕರಗಳಾದ ಸ್ಥಳಗಳನ್ನು ರಿಪೇರ್ ಮಾಡಿಸತಕ್ಕದ್ದು ಆವರಣ ಏರ್ಪಡಿಸತಕ್ಕದ್ದು.

178. ಸರ್ಕಾರ್ ಜಮೀನಿನಲ್ಲಾಗಲಿ, ಜನಗಳ ಸ್ವಂತ ಜಮೀನಿನಲ್ಲಾಗಲಿ ಇರುವ ಯಾವದಾದರೂ ಕಟ್ಟಡ, ಕೆರೆ, ಬಾವಿ, ಯಾ ಹಳ್ಳ ಯಾ ಇತರ ಪ್ರದೇಶವು, ಸಾಕಾದಷ್ಟು ರಿಪೇರಿ ಯಾ ಬಂದೋಬಸ್ತು ಯಾ ಆವರಣ ಇಂತಾದ್ದು ಇಲ್ಲದೇ ಇರುವದರಿಂದ ಜನಗಳಿಗೆ ಅಪಾಯಕರವಾಗಿದ್ದ ಪಕ್ಷಕ್ಕೆ, ಪ್ರೆಸಿಡೆಂಟರು, ಲಿಖಿತರೂಪವಾದ ನೋಟೀಸ್ ದ್ವಾರಾ, ಅದರ ದೆಸೆಯಿಂದ ಅಪಾಯ ಉಂಟಾಗದೇ ಇರುವಂತೆ ಅದು ರಿಪೇರ್ ಮಾಡಲ್ಪಡತಕ್ಕದ್ದೆಂತಲಾಗಲಿ ಬಂದೋಬಸ್ತು ಮಾಡಲ್ಪಡತಕ್ಕದ್ದೆಂತಲಾಗಲಿ ಸುತ್ತಲೂ ಆವರಣ ಕಟ್ಟಿಸಲ್ಪಡತಕ್ಕದ್ದೆಂತಲಾಗಲಿ ಸದರೀ ನಿವೇಶನಗಳ ಮಾಲೀಕನಿಗಾದರೂ ಅನುಭವದಾರನಿಗಾದರೂ ತಾಕೀದ್ ಮಾಡುವದು ಅವರಿಗೆ ನ್ಯಾಯವಾಗಿರತಕ್ಕದ್ದು; ಮತ್ತು ಆ ಮನುಷ್ಯನು ಇಪ್ಪತ್ತು ನಾಲ್ಕು ಘಂಟೆಯ ಹೊತ್ತಿನೊಳಗೆ ಸದರೀ ತಾಕೀದ್ ಮಾಡಲ್ಪಟ್ಟ ಪ್ರಕಾರ ನಡಿಸದೆ ನಿರಾಕರಿಸಿದ ಪಕ್ಷಕ್ಕೆ ಅಥವಾ ಉಪೇಕ್ಷಿಸಿದರೆ ಅಥವಾ ಅದುನ್ನು ತಕ್ಕ ಜಾಗ್ರತೆಯಿಂದ ಪೂರೈಸಲಿಕ್ಕೆ ತಪ್ಪಿಹೋದರೆ ಆ ಮನುಷ್ಯನು ಪ್ರತಿ ತಪ್ಪಿತಕ್ಕೂ ಐವತ್ತು ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದಲ್ಲದೆ, (ಆ ಪ್ರಕಾರ ಮಾಡಲಿಕ್ಕೆ) ದೇರ್ ಮಾಡುವ ಪ್ರತಿ ದಿನಕ್ಕೂ ಹತ್ತು ರೂಪಾಯಿಗೆ ಮೀರದ ಒಂದು ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದು; ಮತ್ತು ಪ್ರೆಸಿಡೆಂಟರು ಸದರೀ ಕಟ್ಟಡ ಕೆಲಸ ವಗೈರೆ ಕಾಮಗಾರಿ ಮಾಡಿಸಲ್ಪಡುವಂತೆಯಾಗಲಿ, ಬಂದೋಬಸ್ತು ಮಾಡಲ್ಪಡುವಂತೆಯಾಗಲಿ, ಆವರಣ ಕಲ್ಪಿಸಲ್ಪಡುವಂತೆಯಾಗಲಿ ಮಾಡುವದೂ ಮೇಲೆ ಕಂಡ ದರೋಬಸ್ತು ಯಾ ಯಾವದಾದರೂ ಕೆಲಸಗಳಿಗಾಗಿ ತಮಗೆ ಯುಕ್ತ ತೋರುವ ಪ್ರಕಾರ ಜರೂರಾದ ದರೋಬಸ್ತು ಕೆಲಸಗಳನ್ನೂ ಮಾಡುವದು ಪ್ರೆಸಿಡೆಂಟರಿಗೆ ನ್ಯಾಯವಾಗಿರತಕ್ಕದ್ದು ಮತ್ತು ಆ ಬಗ್ಯೆ ಹಿಡಿದ ಲಾಗವಡು ಇದರಲ್ಲಿ ಮುಂದೆ ವಿಧಿಸಲ್ಪಡುವ ಪ್ರಕಾರ ವಸೂಲಾಗತಕ್ಕದ್ದು.

ಹೇಸಿಕೆಯುಂಟು ಮಾಡುವ ಕಸಬ್‌ದಾರೀ ವ್ಯಾಪಾರಗಳು, ಸಮಾಧಿ ವ ಸ್ಮಶಾನ ಘಟ್ಟಗಳು ಇವುಗಳನ್ನು ಕ್ರಮ ಪಡಿಸೋಣ.

ಪ್ರೆಸಿಡೆಂಟರಿಂದ ಲೈಸೆನ್ಸ್ ಪಡೆಯದೆ ಯಾವ ಸ್ಥಳವನ್ನೂ ಖಸ್ಸೈ ಮನೆಯನ್ನಾಗಿ ಯಾಗಲಿ ಮಾರ್ಕೆಟ್ಟನ್ನಾಗಿಯಾಗಲಿ ಉಪಯೋಗಿಸಕೂಡದು.

179. ಬೆಂಗಳೂರು ಷಹರ್ ಸರಹದ್ದುಗಳೊಳಗೆ ಯಾವ ಸ್ಥಳವನ್ನೂ ಖಸ್ಸೈ ಮನೆಯನ್ನಾಗಿ ಅಥವಾ, ಖಸ್ಸೈ ಮಾಂಸ, ಸತ್ತ ಕೋಳಿ, ಮೀನು ಯಾ ಕಾಯಿಸೊಪ್ಪು ಇಂತಾದ್ದನ್ನು ವಿಕ್ರಯಿಸುವಬಗ್ಯೆ ಒಂದು ಮಾರ್ಕೆಟ್ಟನ್ನಾಗಿಯಾಗಲಿ, ಪ್ರೆಸಿಡೆಂಟರಿಂದ ಲಿಖಿತ ರೂಪವಾದ ಲೈಸೆನ್ಸು ಪಡೆದಿದ್ದರೇನೇ ಹೊರತು ಅಂತಾದ್ದನ್ನಾಗಿ ಉಪಯೋಗಿಸ ಕೂಡದು. ಸದರೀ ಪ್ರೆಸಿಡೆಂಟರು ಆಗಿಂದಾಗ್ಯೆ ತಮಗೆ ಯುಕ್ತವೆಂದು ತೋರುವ ಮೇರೆ ಅಂತಾ ಲೈಸೆನ್ಸು ಕೊಡಲಿಕ್ಕೆ ವ ವಾಪಸ್ ತೆಗದುಕೊಳ್ಳಲಿಕ್ಕೆ ಯಾ ರದ್ದು ಮಾಡಲಿಕ್ಕೆ ಇದರಿಂದ ಅಧಿಕಾರ ಕೊಡಲ್ಪಟ್ಟಿರುತ್ತಾರೆ. ಮತ್ತು ಯಾವನು ಅಂತಾ ಲೈಸೆನ್ಸು ಪಡಿಯದೆ ಯಾಗಲಿ, ಅದು ವಾಪಸ್ ತೆಗದುಕೊಳ್ಳಲ್ಪಟ್ಟಿತು ಅಥವಾ ರದ್ದು ಮಾಡಲ್ಪಟ್ಟಿತು ಎಂತ ನೋಟೀಸ್ ಕೊಡಲ್ಪಟ್ಟ ತರುವಾಯುವಾಗಲಿ, ಬೆಂಗಳೂರು ಷಹರ್ ಸರಹದ್ದುಗಳೊಳಗೆ ಇರುವ ಯಾವ ಸ್ಥಳವನ್ನಾಗಲಿ, ಖಸ್ಸೈ ಮನೆಯನ್ನಾಗಿ ಅಥವಾ ಖಸ್ಸೈ ಮಾಂಸ, ಸತ್ತ ಕೋಳಿಗಳು, ಮೀನುಗಳು, ಯಾ ತರಕಾರಿಗಳು ಇವುಗಳನ್ನು ಮಾರಲಿಕ್ಕೋಸ್ಕರ ಒಂದು ಮಾರ್ಕೆಟ್ಟನ್ನಾಗಿ ಉಪಯೋಗಿಸುವ ಯಾವ ಮನುಷ್ಯನಾಗಲಿ, ಇನ್ನೂರು ರೂಪಾಯಿಗೆ ಮೀರದ ಒಂದು ಜುರ್ಮಾನೆಗೂ, ಅಂತಾ ತಕ್ಸೀರನ್ನು ಕುರಿತು ಅಪಾದನೆ ಆದ ತರುವಾಯ ಅಂತಾ ತಕ್ಸೀರು ಪುನಶ್ಚ ನಡಿಸಲ್ಪಡುತ್ತಾ ಇರುವ ಪ್ರತಿ ದಿನಕ್ಕೂ ಐವತ್ತು ರೂಪಾಯಿಗೆ ಮೀರದ ಒಂದು ಜುರ್ಮಾನೆಗೂ ಗುರಿಯಾಗತಕ್ಕದ್ದು; ಪರಂತು ಪ್ರೆಸಿಡೆಂಟರು ಲೈಸೆನ್ಸ್ ಕೊಡುವದಿಲ್ಲ

ವೆಂದು ಹೇಳಿದ ಮೇಲೆ ಅದನ್ನು ಕುರಿತಾಗಲಿ, ಅದು ವಾಪಸ ತೆಗೆದುಕೊಳ್ಳಲ್ಪಟ್ಟದ್ದನ್ನು ಕುರಿತಾಗಲಿ ರದ್ದು ಮಾಡಲ್ಪಟ್ಟದ್ದನ್ನು ಕುರಿತಾಗಲಿ ಆತನ ಮೇಲೆ ಅಪ್ಪೀಲ್ ತರಬೇಕೆಂತ ತೋರಿದ ಪಕ್ಷಕ್ಕೆ ತೆರಿಗೆ ಕಟ್ಟದ್ದರ ಮೇಲೆ ಬರತಕ್ಕ ಅಪ್ಪೀಲನ್ನು ಕುರಿತು ೭೦ನೇ ಸೆಕ್ಷನ್ನಲ್ಲಿ ವಿಧಿಸಲ್ಪಟ್ಟ ರೀತಿಯಾಗಿ ಮಾಜಿಸ್ಟ್ರೇಟರ ಬಳೀ ಅಂತಾ ಅಪ್ಪೀಲ್ ಮಾಡಿಕೊಳ್ಳತಕ್ಕದ್ದು.

ಕಮ್ಮಿಷನರಗಳು ಖಸ್ಯೆ ಮನೆಗಳು ವಗೈರೆ ಏರ್ಪಡಿಸತಕ್ಕದ್ದು.

180. ಕಮ್ಮಿಷನರ್‌ಗಳು ಖಸ್ಯೆ ಮನೆಗಳಾಗಿಯೂ, ಪಬ್ಲಿಕ್ ಮಾರ್ಕೆಟಗಳಾಗಿಯೂ, ವುಪಯೋಗಿಸುವ ಬಗ್ಯೆ ಸಾಕಾದಷ್ಟು ಸ್ಥಳಗಳನ್ನು ಆಗಿಂದಾಗ್ಯೆ ಏರ್ಪಡಿಸತಕ್ಕದ್ದು.

ಮಾರ್ಕೆಟಗಳು ಖಸ್ಯೆ ಮನೆಗಳು ವಗೈರೆಗೆ ಯುಕ್ತವಾಗಿ ಜಲದಾರಿ ಕಟ್ಟಲ್ಪಟ್ಟರತಕ್ಕದ್ದು.

181. ಬೆಂಗಳೂರು ಷಹರ್ ಸರಹದ್ದುಗಳೊಳಗೆ ಇರುವ ಮಾರ್ಕೆಟ್ಟಿನ ಅಥವಾ ಯಾವದಾದರೂ ಖಸ್ಯೆ ಮನೆಯ ಪ್ರತಿ ಮಾಲೀಕನೂ ಪ್ರೆಸಿಡೆಂಟರು ಸಾಕೆಂದು ಎಣಿಸುವಂತಾ ಚರಂಡಿಗಳನ್ನೂ, ಬಚ್ಚಲು ತೊಟ್ಟಿಗಳನ್ನೂ, ಅಲ್ಲಿ ಕಟ್ಟುವಂತೆ ಮಾಡಿ ಮತ್ತು ಪ್ರೆಸಿಡೆಂಟರು ಕೋರಿದ ಪಕ್ಷಕ್ಕೆ ದರೋಬಸ್ತು ನೆಲಗಳಗೂ ಚರಂಡಿಗಳಗೂ ಕಲ್ಲುಗಳಿಂದಾಗಲಿ ಸುಟ್ಟ ಇಟ್ಟಿಗೆಗಳಿಂದಾಗಲಿ ತಳವರಸೆ ಹಾಕುವಂತೆ ಅಥವಾ ನುರುಜುಹಾಕಿ ಘಟ್ಟಿ ಮಾಡಿಸುವಂತೆ ಮಾಡತಕ್ಕದ್ದಲ್ಲದೆ ಅಂತಾ ಮಾರ್ಕೆಟ ಯಾ ಖಸ್ಯೆ ಮನೆ ಪಾಕಾದ ಮತ್ತು ಆರೋಗ್ಯಕರವಾದ ಸ್ಥಿತಿಯಲ್ಲಿ ಇರುವದಕ್ಕೆ ಸಾಕಾದಷ್ಟು ನೀರು ವೊದಗಿಸಲ್ಪಡುವಂತೆ ಮಾಡತಕ್ಕದ್ದು. ಮತ್ತು ಅಂತಾ ಮಾಲೀಕ, ಅಂತಾ ಮಾರ್ಕೆಟ್ಟಗಾಗಲಿ, ಖಸ್ಯೆ ಮನೆಗಾಗಲಿ, ಸದರೀ ತಖ್ತೀಗಳ ಪೈಕಿ ಯಾವ ಅಂಶದಲ್ಲಾಗಲಿ ಲೋಪ ವುಂಟಾಗಿದೆಯೆಂತ ಮತ್ತು ನಮೂದಿಸೋಣಾದ ಅಂತಾ ಲೋಪವು ಮೂವ್ವತ್ತು ದಿನಗಳಗೆ ಕಡಮೆ ಇಲ್ಲದ ಕಾಲದೊಳಗಾಗಿ ಪೂರ್ತಿ ಮಾಡತಕ್ಕದ್ದೆಂತ ತಾಕೀದ್ ಮಾಡಿ ಪ್ರೆಸಿಡೆಂಟರು ಲಿಖಿತರೂಪವಾದ ನೋಟಿಸ್ ಕೊಟ್ಟಬಳಿಕ ಆ ಮೇರೆ ನೆರವೇರಿಸಲಿಕ್ಕೆ ತಪ್ಪಿದ ಪಕ್ಷಕ್ಕೆ ಆತನು ಆ ಮೇರೆ ಮಾಡದೆ ಇರುವ ಪ್ರತಿದಿನಕ್ಕೂ ಐವತ್ತು ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಖಸ್ಯೆ ಮನೆಯಲ್ಲಿ ಶಿವಾಯಿ ಅನ್ಯತ್ರ ಪಶುಗಳನ್ನು ಕೊಲ್ಲುವ ಬಗ್ಯೆ ಶಿಕ್ಷೆ.

182. ಲೈಸೆನ್ಸ ಕೊಡಲ್ಪಟ್ಟ ಖಸ್ಯೆ ಮನೆಯಲ್ಲಿ ಶಿವಾಯಿ (ಅನ್ಯತ್ರ) ಬೆಂಗಳೂರು ಷಹರ್ ಸರಹದ್ದುಗಳೊಳಗೆ ಯಾವ ಸ್ಥಳದಲ್ಲಾಗಲಿ, ಯಾವದಾದರೂ ಕುರಿಯನ್ನು, ಮೇಕೆಯನ್ನು, ಹಂದಿಯನ್ನು ಅಥವಾ ಯಾವದಾದರೂ ದನವನ್ನು (ಮಾಂಸ) ಮಾರತಕ್ಕ ಬಗ್ಯೆ ಕೊಲ್ಲುವ, ಕುಯ್ಯುವ ಅಥವಾ ಚರ್ಮ ಸುಲಿಯುವ ಯಾವ ಮನುಷ್ಯನಾಗಲಿ ಪ್ರತಿ ಜಂತುವಿಗೂ ಇಪ್ಪತ್ತು ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಅನಾರೋಗ್ಯ ಕರವಾದ ಆಹಾರ ವಸ್ತು ಯಾ ಪಾನ ದ್ರವ್ಯವನ್ನು ಬಿಕ್ರೀ ಮಾಡುವಿಕೆ.

183. ಮನುಷ್ಯನಿಗೆ ಆಹಾರವಾಗಿ ಯಾ ಪಾನವಾಗಿ ಬಳಸಿಕೊಳ್ಳಲಿಕ್ಕೆ ಅಸಹ್ಯಕರವಾಗಿ, ಮಾಡಲ್ಪಟ್ಟ ಯಾ ಅಸಹ್ಯಕರವಾದ ಯಾ ಅಯೋಗ್ಯವಾಗಿ ಮಾಡಲ್ಪಟ್ಟ ಯಾ ಅಯೋಗ್ಯವಾದ ಯಾವದಾದರೂ ಜಂತು ಯಾ ವಸ್ತುವು ಮನುಷ್ಯನಿಗೆ ಆಹಾರವಾಗಿ ಯಾಗಲಿ, ಪಾನವಾಗಿ ಯಾಗಲಿ, ಬೆಂಗಳೂರು ಷಹರ್ ಸರಹದ್ದುಗಳೊಳಗೆ ಉಪಯೋಗಿಸುವ ಬಗ್ಯೆ ವಿಕ್ರಯಿಸುವಬಗ್ಯೆ ಯಾ ಕೊಡುವದಕ್ಕೆ ಬರುವ ಬಗ್ಯೆ ಯಾ ವಿಕ್ರಯಕ್ಕೆ ತೋರಿಸುವ ಬಗ್ಯೆ ಯಾವ ಮನುಷ್ಯನ ಸ್ವಾಧೀನದಲ್ಲಾಗಲಿ ಇರುವಂತೆ ನಂಬುವದಕ್ಕೆ ನ್ಯಾಯವಾದ ಕಾರಣವಿದೆಯೆಂತ ತಿಳಿಸಿ ಕಮ್ಮಿಷನರಗಳ ಯಾ ಅವರ ಆಫಿಸರಗಳ ಪೈಕಿ ಯಾರ ದರಖಾಸ್ತು ಮೇಲಾಗಲಿ ಅಂತಾ ಮನುಷ್ಯನ ನಿವೇಶನದಲ್ಲಿ ಪ್ರವೇಶಿಸುವದಕ್ಕೂ, ಅಂತಾ ವಸ್ತುವನ್ನು ಯಾ ಜಂತುವನ್ನು; ಕೈಯಲ್ಲಿ ಹಿಡಿದುಕೊಳ್ಳಲಿಕ್ಕೂ ಒಂದು ವಾರಂಟು ಕೊಡುವದು ಯಾವ ಮಾಜಿಸ್ಟ್ರೇಟರಿಗೂ ನ್ಯಾಯವಾಗಿರತಕ್ಕದ್ದು ಮತ್ತು ಯುಕ್ತವಾದ ಮನುಷ್ಯನ ಸಾಕ್ಷ್ಯದ ಮೇಲೆ ಅಂತಾ ಉಪಯೋಗಕ್ಕೆ ಬಾಧಕವೆಂತಲಾಗಲಿ ಅಯೋಗ್ಯವಾದ್ದಂತಲಾಗಲಿ ಸದರೀ ಮಾಜಿಸ್ಟ್ರೇಟರಿಗೆ ಕಾಣಬಂದ ಪಕ್ಷಕ್ಕೆ ಆತನು ಅಂತಾ ಜಂತುವನ್ನು ಯಾ ವಸ್ತುವನ್ನು ದಂಡವಾಗಿ ತೆಗೆದುಕೊಳ್ಳುವಂತೆಯೂ, ಆತನಿಗೆ ಯುಕ್ತ ತೋರುವ ರೀತಿಯಾಗಿ ವಿನಿಯೋಗ ಪಡಿಸಲ್ಪಡುವಂತೆಯೂ ಹುಕುಂ ಮಾಡತಕ್ಕದ್ದು.

ಕಮ್ಮಿಷನರಗಳು ಖಸ್ಸೈ ಮನೆಗಳೊಳಗೂ ಅಂಗಡಿ ವಗೈರೇಗಳೊಳಗೂ ಪ್ರವೇಶಿಸಿ ನೋಡುವದಕ್ಕೂ, ವಿಕ್ರಯಿಸುವದಕ್ಕೋಸ್ಕರ ಕಾಣಿಸಲ್ಪಟ್ಟ ಅನಾರೋಗ್ಯಕರವಾದ ವಸ್ತುಗಳನ್ನು ಹಿಡಿದುಕೊಳ್ಳಲಿಕ್ಕೂ ಅಧಿಕಾರ.

184. ಕಮ್ಮಿಷನರಗಳಾಗಲಿ ಅವರಿಂದ ಮೊಕರರ ಮಾಡಲ್ಪಟ್ಟ ಯಾವ ಮನುಷ್ಯನಾಗಲಿ, ಯಾವದಾದರೂ ಮಾರ್ಕೆಟ್ಟು, ಕಟ್ಟೆ, ಅಂಗಡಿ, ತಟ್ಟೀಅಂಗಡಿ, ಅಥವಾ ಖಸ್ಸೈ ಮಾಂಸ, ಕೋಳಿಗಳು, ಮೀನುಗಳು, ಹಣ್ಣುಗಳು ಯಾ ತರಕಾರಿಗಳು ಇಂತಾವುಗಳನ್ನು ವಿಕ್ರಯಿಸುವ ಬಗ್ಗೆ ಯಾ ಖಸ್ಸೈ ಮನೇಬಗ್ಗೆ ಉಪಯೋಗಿಸಲ್ಪಡುವ ಸ್ಥಳ ಇವುಗಳಲ್ಲಿ ನ್ಯಾಯವಾದ ಎಲ್ಲಾ ಕಾಲಗಳೊಳಗೂ ಕುಮಕೀದಾರರ ಸಂಗಡಲೆಯಾಗಲಿ, ಅವರುಗಳು ಇಲ್ಲದೆಯಾಗಲಿ, ಪ್ರವೇಶಿಸಿ ತನಖೀಮಾಡುವದು ಮಾತ್ರವಲ್ಲದೆ, ಆದರಲ್ಲಿರಬಹುದಾದ ಯಾವದಾದರೂ ಜಂತುವು, ಜಂತುಶರೀರ, ಮಾಂಸಾಹಾರ, ಯಾವದಾದರೂ ಕೋಳಿಗಳು, ಬೇಟೆ ಮಾಂಸ, (ಸಾಧಾರಣ) ಮಾಂಸ, ಮೀನುಗಳು, ಹಣ್ಣುಗಳು ಯಾ ತರಕಾರಿಗಳು ಇಂಥಾವುಗಳನ್ನು ತನಖೀ ಮಾಡಬಹುದು; ಮತ್ತು ಯಾವದಾದರೂ ಜಂತುಶರೀರ, ಮಾಂಸಾಹಾರ, ಯಾವದಾದರೂ ಕೋಳಿಗಳು, ಬೇಟೆಮಾಂಸ, (ಸಾಧಾರಣ) ಮಾಂಸ, ಮೀನುಗಳು, ಹಣ್ಣುಗಳು ಯಾ ತರಕಾರಿಗಳು ಇವು ಮನುಷ್ಯಾಹಾರಕೋಸ್ಕರ ಉದ್ದೇಶಿಸಲ್ಪಟ್ಟವಾಗಿಯೂ ಅಂಥಾ ಆಹಾರಕ್ಕೆ ಅಯೋಗ್ಯವಾಗಿಯೂ ಕಾಣಬರುವ ಸಂಗತಿಯಲ್ಲಿ ಅವುಗಳನ್ನು ಹಿಡಿದುಕೊಂಡು, ಅವುಗಳನ್ನು ನಾಶ ಮಾಡಿಬಿಡುವಂತೆಯಾಗಲಿ, ವಿಕ್ರಯಿಸುವ ಬಗ್ಗೆ ಕಾಣಿಸಿದಂತೆಯಾಗಲಿ ಆಹಾರದಬಗ್ಗೆ ಉಪಯೋಗಿಸಲ್ಪಡದಂತೆಯಾಗಲಿ ವಿನಿಯೋಗಿಸಿಬಿಡುವಂತೆ ಹುಕುಂ ಮಾಡಬಹುದು. ಮತ್ತು ಯುಕ್ತವಾದ ಮನುಷ್ಯನ ಸಾಕ್ಷ್ಯದ ಮೇಲೆ ಅಂಥಾ ಜಂತುವು, ಶರೀರ, ಮಾಂಸಾಹಾರ, ಕೋಳಿಗಳು, ಬೇಟೆಮಾಂಸ, (ಸಾಧಾರಣ) ಮಾಂಸ, ಮೀನುಗಳು, ಹಣ್ಣುಗಳು, ಯಾ ತರಕಾರಿಗಳು ಇವು ಮನುಷ್ಯನ ಆಹಾರಕ್ಕೆ ಅಯೋಗ್ಯವಾಗಿತ್ತೆಂತ ಬಗ್ಗೆ ಮಾಜಿಸ್ಟ್ರೇಟರಿಗೆ ಕಾಣಬಂದ ಪಕ್ಷಕ್ಕೆ, ಅವುಗಳ ಮಾಲೀಕನಾಗಲಿ, ಅವು ಯಾರ ಸ್ವಾಧೀನದಲ್ಲಿ ಕಾಣಬಂದವೋ ಆ ಮನುಷ್ಯನಾಗಲಿ ಇಂಡಿಯನ್ ಪೆನಲ್‌ಕೋಡಿನ 273ನೇ ಸೆಕ್ಷನ್‌ನಿಂದ ವಿಧಿಸಲ್ಪಟ್ಟ ದಂಡನೆಗೆ ಗುರಿಯಾಗತಕ್ಕದ್ದು. ಆ ಮೇರೆ ನಾಶ ಮಾಡಲ್ಪಟ್ಟ ವಸ್ತುವು ಮನುಷ್ಯಾಹಾರಕ್ಕೆ ಯೋಗ್ಯವಾಗಿತ್ತೆಂತ ಮಾಜಿಸ್ಟ್ರೇಟರು ಅಭಿಪ್ರಾಯಪಟ್ಟ ಪಕ್ಷಕ್ಕೆ ಸದರೀ ವಸ್ತುವಿನ ನ್ಯಾಯವಾದ ಕಿಮ್ಮತ್ತುಎಂತ ಮಾಜಿಸ್ಟ್ರೇಟರಿಗೆ ತೋರುವ ಹಣಗಳನ್ನು ಸದರೀ ಮಾಲೀಕನಿಗೆ ಸಲ್ಲಿಸುವಂತೆ ಕಮ್ಮಿಷನರಗಳಿಗೆ ಹುಕುಂ ಮಾಡತಕ್ಕದ್ದು.

ಈ ಕಾನೂನು ಹುಟ್ಟುವದಕ್ಕೆ ಪೂರ್ವ ಇರುತಿದ್ದ ಬಾಧಕವಾದ ಮತ್ತು ಅಪಾಯಕರವಾದ ವ್ಯಾಪಾರಗಳು ಕೋಠಿಗಳು ಇಂತಾವುಗಳನ್ನು ರಿಜಿಸ್ಟರ ಮಾಡಿಸತಕ್ಕದ್ದು.

185. ಈ ಕಾನೂನು ಜಾರೀಲಿ ಬರುವ ಕಾಲದಲ್ಲಿ ಬೆಂಗಳೂರು ಷಹರ ಸರಹದ್ದುಗಳೊಳಗೆ ಈ ಕೆಳಗೆ ಕಾಣಿಸಲ್ಪಡುವ ಕಾರ್ಯಗಳ ಪೈಕಿ ಯಾವ ಕಾರ್ಯಗಳಿಗೋಸ್ಕರವಾಗಲಿ ಅಂದರೆ, ಕೊಬ್ಬು ಕರಗಿಸುವದು, ಕರಳು ಮುಂತಾದ ಸತ್ತ ಜಂತುವಿನ ಮಾಂಸ, ರಕ್ತ ಇಂದಾದ್ದನ್ನು ಕಾಯಿಸುವದು, ಈ ಬಗ್ಗಾಗಲಿ ಸಬ್ಬು, ಕರ್ಪೂರ, ಯೆಣ್ಣೆ ಇಂತಾದ್ದನ್ನು ಕಾಯಿಸುವ ಮನೆಯಾಗಿ, ಗಾಣಿಗೆ ಯಾಯೆಂಣೆ ತೆಗಿಯುವ ಯಂತ್ರ ಆಡುವಸ್ಥಳವಾಗಿ, ರಂಗಾರೀ ಮನೆಯಾಗಿ ಯಾ ಅಂಗಳವಾಗಿ, ತೊಗಲು ಹದಮಾಡುವ ಸ್ಥಳವಾಗಿ, ಇಟ್ಟಿಗೆಯ, ಕುಂಬಾರಸೂಳೆಯಾಗಿ ಯಾ ಸುಣ್ಣದ ಗೂಡಾಗಿ, ಕಾಗದ ಕಾರಖಾನೆಯಾಗಿ ಅಸಹ್ಯಕರವಾದ ಮತ್ತು ಅನಾರೋಗ್ಯಕರವಾದ ಯಾವದಾದರೂ ಕೆಲಸ ನಡೆಯುವ ಕಾರಖಾನೆಯಾಗಿ ಅಥವಾ ಬಾಣಬಿರಸು ತಯಾರೀಕೋಠಿಯಾಗಿ, ಹಾರತಕ್ಕ ದಹ್ಯವಸ್ತುಗಳನ್ನು ಜಮಾಯಿಸಿಡತಕ್ಕ ಸ್ಥಳವಾಗಿ ಅಥವಾ ಪ್ರಾಣ, ಆರೋಗ್ಯ ಅಥವಾ ಸ್ವತ್ತು ಇವುಗಳಿಗೆ ಅಪಾಯವನ್ನುಂಟುಮಾಡುವಂತೆ ತೋರುವ ಯಾವ ಕೆಲಸಗಳಾಗಲಿ ಉಪಯೋಗಿಸಲ್ಪಡುವ ಯಾವದಾದರೂ ಸ್ಥಳವಾಗಿ ಯಾ ಕೆಲಸಮಾಡುವ ಪ್ರದೇಶವಾಗಿ ಅಥವಾ ಬಣಗರಿಕೆ, ಹುಲ್ಲು, ಮರದ ಸಾಮಾನುಗಳು, ಸೌದೆ, ಕರಿ ಯಾ ಕಟ್ಟಿಗೆ ಇಂತಾದ್ದನ್ನು ಇಡುವ ದೊಡ್ಡಿ ಯಾ ಕೋಠಿಯಾಗಿ ಉಪಯೋಗಿಸಿಕೊಳ್ಳಲ್ಪಟ್ಟ ಪ್ರತಿ ಸ್ಥಳದ ಮಾಲೀಕ ಯಾ ಅನುಭವದಾರನು, ಅವು ವಿಕ್ರಯದಬಗ್ಗೆ ಇಟ್ಟುಕೊಳ್ಳಲ್ಪಟ್ಟಿದ್ದಾಗ್ಯೂ ಸರಿ ಮತ್ತೊಂದು ಕಾರ್ಯಕ್ಕಾಗಿ ಇಟ್ಟುಕೊಳ್ಳಲ್ಪಟ್ಟಿದ್ದಾಗ್ಯೂ ಸರಿ ಈ ಕಾನೂನು ಜಾರೀಲಿ ಬಂದ ತರುವಾಯ ಮೂರು ತಿಂಗಳೊಳಗಾಗಿ ಆ ಬಗ್ಗೆ ಕಮ್ಮಿಷನರಗಳ ದೆಶೆಯಿಂದ ಇಡಲ್ಪಡತಕ್ಕ ಒಂದು ಪುಸ್ತಕದಲ್ಲಿ ರಿಜಿಸ್ಟರು ಮಾಡಿಸತಕ್ಕದ್ದು. ಮತ್ತು ಸದರೀ ಮೂರುತಿಂಗಳು ಕಳೆದ ತರುವಾಯ ಪ್ರೆಸಿಡೆಂಟರವರ ಆಫೀಸಿನಲ್ಲಿ ರಿಜಿಸ್ಟರು ನೋಟೀಸ ಕೊಟ್ಟ ಯೆಂಟು ದಿನಗಳಿಗೆ ತರುವಾಯ ಯಾರಾದರೂ, ಅಂತಾ ಯಾವ ಸ್ಥಳವನ್ನಾಗಲಿ ರಿಜಿಸ್ಟರ ಮಾಡಿಸಿಕೊಳ್ಳದೆ ಉಪಯೋಗಿಸಿಕೊಂಡಲ್ಲಿ ಆ ತಕ್ಸೀರ ನಡಿಸಲ್ಪಡುತ್ತಾ ಇರುವ ಪ್ರತಿ ದಿನಕ್ಕೂ ನೂರು ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಜನಗಳಿಗೆ ಬಾಧಕವಾದ ಅಸಹ್ಯವಾಗಿ ಇರುವ ಕಸಬ್‌ಗಳು ಜರಿಗಿಸಲ್ಪಡುತ್ತಾ ಇರುವ ಸ್ಥಳ ವಿಷಯವಾಗಿ ಪ್ರೆಸಿಡೆಂಟರ ಅಧಿಕಾರ.

186. ಇದಕ್ಕೆ ಹಿಂದಿನ ಸೆಕ್ಷನ್ ಅನುಸರಿಸಿ ರಿಜಿಸ್ಟರ್ ಮಾಡಲ್ಪಟ್ಟ ಯಾವ ಸ್ಥಳವಾಗಲಿ ನೆರೆ ಹೊರೆ ಜನಗಳಿಗೆ ಬಾಧಕವಾಗಿ ಯಾ ಅನಾರೋಗ್ಯಕರವಾಗಿ ಇರುತ್ತೆಂತ ಪ್ರೆಸಿಡೆಂಟರಿಗೆ ತೃಪ್ತಿಕರವಾಗಿ ತೋರಿಸಲ್ಪಟ್ಟ ಪಕ್ಷಕ್ಕೆ, ಅವರು ಒಂದು ತಿಂಗಳೊಳಗೆ ಆ ಸ್ಥಳವನ್ನು ವುಪಯೋಗಿಸಿಕೊಳ್ಳದೆ ಬಿಟ್ಟುಬಿಡುವಂತೆಯಾಗಲಿ ಪ್ರೆಸಿಡೆಂಟರು ಲಿಖಿತರೂಪವಾದ ಹುಕ್ಕುಂ ಮಾಡುವ ರೀತಿಯಾಗಿ ಮಾತ್ರ ಅದನ್ನು ವುಪಯೋಗಿಸಿಕೊಳ್ಳತಕ್ಕದ್ದೆಂತಲಾಗಲಿ ಅದರ ಅನುಭವದಾರನಿಗೆ ನೋಟಿಸ್ ಕೊಡಬಹುದು. ಮತ್ತು ಆ ಪ್ರಕಾರ ನಿರ್ಣಯಿಸೋಣಾದ ಕಾಲ ಕಳೆದು ಹೋದ ತರುವಾಯ ಯಾವ ಮನುಷ್ಯನಾಗಲಿ ಆ ನೋಟಿಸಿನ ಷರತ್ತುಗಳಿಗೆ ವಿರುದ್ಧವಾಗಿ ಅಂತಾ ಸ್ಥಳವನ್ನು ವುಪಯೋಗಿಸಿದ ಪಕ್ಷಕ್ಕೆ ಅಥವಾ ಅದು ವುಪಯೋಗಿಸಲ್ಪಡುವಂತೆ ನಿಯಮಿಸಿದ ಪಕ್ಷಕ್ಕೆ ಅದು ಆ ಪ್ರಕಾರ ವುಪಯೋಗಿಸಲ್ಪಡುವ ಪ್ರತಿದಿನಕ್ಕೂ ಇನ್ನೂರು ರೂಪಾಯಿಗೆ ಮೀರದ ಜುರ್ಮಾನೆಗೆ ಗುರಿಯಾಗತಕ್ಕದ್ದು.

ಲೈಸೆನ್ಸ್ ಇಲ್ಲದೆ ಅಂತಾ ವ್ಯಾಪಾರಗಳನ್ನಾಗಲಿ, ಕೋಠಿಗಳನ್ನಾಗಲಿ ಹೊಸದಾಗಿ ಏರ್ಪಾಡು ಮಾಡಿದರೆ ದಂಡನೆ.

187. ಪ್ರೆಸಿಡೆಂಟರಿಂದ ಲೈಸೆನ್ಸ್ ಪಡೆದಿದ್ದರೇಯೇ ಹೊರತು 185ನೇ ಸೆಕ್ಷನ್‌ನಲ್ಲಿ ನಮೂದಿರುವ ಕಾರ್ಯಗಳಪೈಕಿ ಯಾವದಕ್ಕಾಗಲಿ ಯಾವ ಸ್ಥಳವು, ಬೆಂಗಳೂರು ಷಹರ್ ಸರಹದ್ದುಗಳೊಳಗೆ ಹೊಸದಾಗಿ ವುಪಯೋಗಿಸಲ್ಪಡಕೂಡದು, ಪ್ರೆಸಿಡೆಂಟರು ಅಂತಾ ಲೈಸೆನ್ಸನ್ನು ತಮ್ಮ ಇಷ್ಟಪ್ರಕಾರ ಆಗಿಂದಾಗ್ಯೆ ಕೊಡಲಿಕ್ಕೆ, ವಾಪಸ ತೆಗದುಕೊಳ್ಳಲಿಕ್ಕೆ ಯಾ ರದ್ದು ಮಾಡಲಿಕ್ಕೆ ಇದರ ದೆಸೆಯಿಂದ ಅಧಿಕಾರ ಕೊಡಲ್ಪಟ್ಟಿರುತ್ತಾರೆ. ಮತ್ತು ಯಾವ ಮನುಷ್ಯನಾಗಲಿ ಒಂದು ಲೈಸೆನ್ಸ್ ಇಲ್ಲದೆಯಾಗಲಿ, ವಾಪಸ್ ತೆಗದುಕೊಂಡ ತರುವಾಯವಾಗಲಿ, ರದ್ದುಮಾಡಿದ ತರುವಾಯವಾಗಲಿ ಈ ಸೆಕ್ಷನ್ನಿಗೆ ವಿರುದ್ಧವಾಗಿ ಅಂತಾ ಕೆಲಸಕ್ಕೋಸ್ಕರ ಯಾವದಾದರೂ ಅಂತಾ ಸ್ಥಳವನ್ನು ಉಪಯೋಗಪಡಿಸಿದ ಪಕ್ಷಕ್ಕೆ ಐನೂರು ರೂಪಾಯಿಗೆ ಮೀರದ ಒಂದು ಜುರ್ಮಾನೆಗೂ ಅಂತಾ ತಕ್ಸೀರು ಸ್ಥಾಪನೆ ಆದಮೇಲೆ ಸದರೀ ತಕ್ಸೀರ್ ಜರಿಗಿಸಲ್ಪಡುತ್ತಾ ಇರುವ ಪ್ರತಿದಿನಕ್ಕೂ ಐವತ್ತು ರೂಪಾಯಿಗೆ ಮೀರದ ಜುರ್ಮಾನೆಗೂ ಗುರಿಯಾಗತಕ್ಕದ್ದು.

ದಫನ್ ವ ಜಲ್ನ ಮಾಡುವ ಸ್ಮಶಾನಘಟ್ಟಗಳನ್ನು ರಿಜಿಸ್ಟರ್ ಮಾಡಿಸತಕ್ಕದ್ದು.

188. ಕಮಿಷನರ್‌ಗಳು ತಮಗೆ ಯುಕ್ತ ತೋರಿದರೆ, ದಫನ್ ಮಾಡುವ ಪ್ರತಿ ಸ್ಥಳವನ್ನೂ ಆ ಬಗ್ಯೆ ವುಪಯೋಗಿಸಲ್ಪಡುವ ಪ್ರತಿ ಸ್ಥಳವನ್ನೂ ಸರ್ವೆ ವ ಮೋಜಣಿ ಮಾಡಿಸಬಹುದು ಮತ್ತು ಅಂತಾ ಪ್ರತಿ ಸ್ಥಳವೂ, ಹಾಲೀ ಇರುವ ಜಲ್ನ ಮಾಡುವ ಪ್ರತಿಸ್ಥಳವೂ, ಆ ಬಗ್ಯೆ ಅವರುಗಳಿಂದ ಯಿಡಲ್ಪಡತಕ್ಕ ಒಂದು ಬುಕ್ಕಿನಲ್ಲಿ ಅದರ ಮಾಲೀಕನಿಂದಾಗಲಿ ಅದರ ಮೇಲೆ ಅಧಿಕಾರವುಳ್ಳ ಮನುಷ್ಯನಿಂದಾಗಲಿ ಅಥವಾ ಮಾಲೀಕ ಯಾ ಅದರ ಮೇಲೆ ಅಧಿಕಾರ ಸಲ್ಲಿಸುವಬಗ್ಯೆ ನಿಯಮಿಸಲ್ಪಟ್ಟ ಮನುಷ್ಯನು ಯಿಲ್ಲದೇಯಿದ್ದ ಪಕ್ಷಕ್ಕೆ ಕಮಿಷನರ್‌ಗಳ ಹುಕುಂನಿಂದಾಗಲಿ ರಿಜಿಸ್ಟರ್ ಮಾಡಿಸಲ್ಪಡತಕ್ಕದ್ದು. ಮತ್ತು ಸದರೀ ವಾಯಿದೆ ಪೂರೈಸಿದ ತರುವಾಯ, ಸದರೀ ಮೇರ ದಫನ್ ಮಾಡುವ ಯಾ ಜಲ್ನ ಮಾಡುವ ಸ್ಥಳವಾಗಿ ರಿಜಿಸ್ಟರ್ ಮಾಡಿಸಲ್ಪಡದೇ ಯಿರುವ ಯಾವ ಜಮೀನಿನಲ್ಲಾಗಲಿ ಯಾವ ಮುರ್ದೆಯನ್ನಾಗಲಿ ಬುದ್ಧಿ ಪೂರ್ವಕ ದಫನ್ ಮಾಡುತ್ತಾನೋ ಯಾ ಜಲ್ನ ಮಾಡುತ್ತಾನೋ ಅಥವಾ ದಫನ್ ಯಾ ಜಲ್ನ ಮಾಡಿಸುತ್ತಾನೋ, ಮಾಡಿಸಿಕೊಡುತ್ತಾನೋ ಯಾ ಮಾಡಗೊಡಿಸುತ್ತಾನೋ, ಅಂತಾ ಮನುಷ್ಯನು ನೂರು ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಇನ್ನುಮೇಲೆ ಪ್ರೆಸಿಡೆಂಟರ ಅಪ್ಪಣೆ ಇಲ್ಲದೆ ಯಾವ ನೆಲಮಾಳಿಗೆಯಾಗಲಿ ದಫನ್ ಯಾ ಜಲ್ನ ಮಾಡುವ ಸ್ಥಳವಾಗಲಿ ಕಟ್ಟಲ್ಪಡತಕ್ಕದ್ದಲ್ಲವು.

189. ಈ ಕಾನೂನ್ ಜಾರೀಲಿ ಬಂದ ತರುವಾಯ ಬೆಂಗಳೂರು ಷಹರ್ ಸರಹದ್ದುಗಳೊಳಗೆ ಕಟ್ಟಲ್ಪಟ್ಟ ಯಾವದಾದರೂ ಕ್ರಿಸ್ತರ್‌ವಗೈರೇರ ಗುಡಿ ಅಥವಾ ಪಬ್ಲಿಕ್ ದೇವಾರಾಧನೆ ನಡೆಯುವ ಯಾವದಾದರೂ ಜಾಗಾ ಯಿಂತಾದ್ದರ ಗೋಡೆಗಳಿಗೆ ಒಳಪಟ್ಟು ಅಥವಾ ಕೆಳಗೆ ಯಾವ ನೆಲಮಾಳಿಗೆಯನ್ನಾಗಲಿ ಸಮಾಧಿಯನ್ನಾಗಲಿ ಕಲ್ಪಿಸತಕ್ಕದ್ದಲ್ಲವು ಮತ್ತು ಪಬ್ಲಿಕಾದಾಗ್ಯೂ ಸರಿ, ಪ್ರೈವೇಟ್ ಆದಾಗ್ಯೂ ಸರಿ; ಪರಂತು ಯಾವ ದಫನ್ ಯಾ ಜಲ್ನ ಮಾಡುವ ಯಾವ ಸ್ಥಳವನ್ನೂ, ಸದರೀ ಸರಹದ್ದುಗಳೊಳಗೆ ಈ ಕಾನೂನ್ ಜಾರೀಲಿ ಬಂದ ಬಳಿಕ ಮೈಸೂರು ಮಹಾರಾಜಾ ಸರ್ಕಾರದವರ ಅಧಿಕಾರದಿಂದ ಯಾ ಅಧಿಕಾರ ಅನುಸರಿಸಿ ಹೊರ್ತು ಅನ್ಯಥಾ ಸದರೀ ಜಮೀನಿನ ವಿಸ್ತೀರ್ಣ, ಸರಹದ್ದುಗಳು ಇವುಗಳ ತಪಶೀಲ್ ನಿಶೀ ಲೈಸೆನ್ಸ್‌ಗಳನ್ನು ಆಗಿಂದಾಗ್ಯೆ ತಮ್ಮ ಯಿಖ್ತ್ಯಾರೀಮೇಲೆ ಕೊಡಲಿಕ್ಕೆ ಇದರ ದೆಸೆಯಿಂದ ಅಧಿಕಾರ ಹೊಂದಿರುವ ಪ್ರೆಸಿಡೆಂ

ಟರಿಂದ ಮೊದಲು ಲೈಸೆನ್ಸ್ ಪಡಕೊಳ್ಳದೇ ಉಂಟುಮಾಡಕೂಡದು ಯಾ ಮಾಡಕೂಡದು ಯಾ ಏರ್ಪಾಡು ಮಾಡಕೂಡದು; ಮತ್ತು ಯಾವನು ಅಂಥಾ ಲೈಸೆನ್ಸ್ ಇಲ್ಲದೆಯಾಗಲಿ ಅದರಲ್ಲಿಯ ಷರತ್ತುಗಳಿಗೆ ವಿರುದ್ಧವಾಗಿಯಾಗಲಿ ಉಂಟುಮಾಡೋಣಾದ ಯಾ ಕಟ್ಟೋಣಾದ ಯಾ ಏರ್ಪಾಟುಮಾಡೋಣಾದ ಯಾವದಾದರೂ ನೆಲಮಾಳಿಗೆಯಲ್ಲಿ, ಸಮಾಧಿಯಲ್ಲಿ, ದರ್ಫ ಯಾ ಜರ್ಲ ಮಾಡುವ ಸ್ಥಳದಲ್ಲಿ ಅಥವಾ ಯಾವದಾದರೂ ಪಬ್ಲಿಕ್ ಯಾ ಪ್ರೈವೇಟ್ ಸ್ಥಳದಲ್ಲಿ ಯಾವದಾದರೂ ಮುರ್ದೆಯನ್ನು ದರ್ಫಮಾಡುತ್ತಾನೋ ಯಾ ಜರ್ಲ ಮಾಡುತ್ತಾನೋ ಯಾ ದರ್ಫ ಯಾ ಜರ್ಲ ಮಾಡಿಸುತ್ತಾನೋ ಯಾ ನಿಯಮಿಸುತ್ತಾನೋ ಯಾ ಅದನ್ನು ಒಪ್ಪುತ್ತಾನೋ ಅಂಥಾ ಮನುಷ್ಯನು ಐನೂರು ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಅಕ್ರಮವಾದ ದರ್ಫ ವ ಜರ್ಲ ಮಾಡುವ ಸ್ಥಳಗಳನ್ನು ಉಪಯೋಗಿಸತಕ್ಕದ್ದನ್ನು ನಿಷೇಧಿಸುವ ಬಗ್ಗೆ ಪ್ರೆಸಿಡೆಂಟರು ಸರಟಿಫಿಕೇಟಗಳನ್ನು ಕೊಡತಕ್ಕದ್ದು.

190. ಮೈಸೂರು ಮಹಾರಾಜಾ ಸರ್ಕಾರದವರ ಮಂಜೂರಾತಿನಿಶೀ ಪ್ರೆಸಿಡೆಂಟರು, ಯುಕ್ತವಾದ ಮನುಷ್ಯನ ಸಾಕ್ಷ್ಯದ ಮೇಲೆ, ಬೆಂಗಳೂರು ಷಹರ ಸರಹದ್ದುಗಳೊಳಗೆ ಇರುವ ಯಾವದಾದರೂ ದರ್ಫ ಮಾಡುವ ಸ್ಮಶಾನ ಅಥವಾ ದರ್ಫ ಮಾಡುವ ಸ್ಥಳ ಯಾ ಮುರ್ದೆ ಜರ್ಲ ಬಗ್ಗೆ ಉಪಯೋಗಿಸಲ್ಪಡುವ ಯಾವದಾದರೂ ಸ್ಥಳ ಇಂಥಾದ್ದು ಆ ನೆರೆ ಹೊರೆಯಲ್ಲಿ ವಾಸ ಮಾಡುವ ಜನಗಳ ಆರೋಗ್ಯಕ್ಕೆ ಅಪಾಯಕರವಾದ ಸ್ಥಿತಿಯಲ್ಲಿದೆ ಯೆಂತಲಾಗಲಿ ಸದರೀ ಸರಹದ್ದುಗಳೊಳಗಿರುವ ಯಾವದಾದರೂ ಕ್ರಿಸ್ತರ್ ವಗೈರೇರ ಗುಡಿಯಾಗಲಿ ಸರ್ವ ಜನಗಳಿಗೂ ಪೂಜಾಸ್ಥಾನವಾಗಿರುವ ಇತರ ಸ್ಥಳವಾಗಲಿ ಸದರೀ ಗುಡಿ ವಗೈರೆಯ ಗೋಡೆಗಳೊಳಗೆ ಯಾ ಕೆಳಗೆ ಅಥವಾ ಅದರ ನೆರೆ ಹೊರೆಯಲ್ಲಿ ಇರುವ ಯಾವದಾದರೂ ಗುಡಿಯ ಅಂಗಳದಲ್ಲಿ ಯಾ ದರ್ಫ ಮಾಡುವ ಸ್ಥಳದಲ್ಲಿ ಇರುವ ಯಾವದಾದರೂ ನೆಲಮಾಳಿಗೆಗಳ ಯಾ ಗೋರಿಗಳ ಸ್ಥಿತಿಯ ದೆಶೆಯಿಂದ ಅಲ್ಲಿಗೆ ಹೋಗಿ ಬರುತ್ತಿರುವ ಜನಗಳ ಆರೋಗ್ಯಕ್ಕೆ ಅಪಾಯಕರವಾಗಿದೆ ಯೆಂತಲಾಗಲಿ ಇದರಲ್ಲಿ ಮುಂದೆ ವಿಧಿಸಲ್ಪಟ್ಟ ಮೇರೆ ಸರ್ಟಿಫಿಕೇಟ ದ್ವಾರಾ ತಿಳಿಸುವದಲ್ಲದೆ ಆಯಾ ಸಂಗತಿಗೆ ತಕ್ಕಂತೆ ದರ್ಫ ಮಾಡಲಿಕ್ಕೆ ಯಾ ಜರ್ಲ ಮಾಡಲಿಕ್ಕೆ ಯುಕ್ತವಾದ ಸ್ಥಳವು ನ್ಯಾಯವಾದಷ್ಟು ದೂರದಲ್ಲಿರುತ್ತೆಂತಲೂ ಉಪಯೋಗಿಸಿಕೊಳ್ಳಬಹುದೆಂತಲೂ ಸಹ ಸರ್ಟಿಫಿಕೇಟ ದ್ವಾರಾ ತಿಳಿಸಿದ ಪಕ್ಷಕ್ಕೆ ಅಂಥಾ ಸರ್ಟಿಫಿಕೇಟನಲ್ಲಿ ನಮೂದಿಸಲ್ಪಡತಕ್ಕ ಯೆರಡು ತಿಂಗಳಿಗೆ ಕಡಮೆ ಇಲ್ಲದ ಕಾಲಕ್ಕೆ ತರುವಾಯ ಅಂಥಾ ಸರ್ಟಿಫಿಕೇಟ ದೆಶೆಯಿಂದ ನಿಯಮಿಸಲ್ಪಟ್ಟ ಮಟ್ಟಿಗೆ ಹೊರ್ತು ಆ ಸರ್ಟಿಫಿಕೇಟಿಗೆ ಸಂಬಂಧಪಟ್ಟ ಭೂಮಿ, ಗುಡಿ, ಪೂಜಾಸ್ಥಾನ ಇವುಗಳಲ್ಲಿಯಾಗಲಿ ಇವುಗಳ ಮೇಲಾಗಲಿ, ಇವುಗಳ ಕೆಳಗಾಗಲಿ ಯಾವದಾದರೂ ಮುರ್ದೆ ದರ್ಫಮಾಡುವದು ಯಾ ಜರ್ಲ ಮಾಡುವದು ಯಾ ದರ್ಫ ಯಾ ಜರ್ಲ ಮಾಡುವಂತೆ ಅಪ್ಪಣೆ ಮಾಡುವದು ಯಾ ಒಪ್ಪುವದು ನ್ಯಾಯವಾಗಿರತಕ್ಕದ್ದಲ್ಲವು. ಮತ್ತು ಇದರಲ್ಲಿ ಮುಂದೆ ವಿಧಿಸಲ್ಪಡುವ ರೀತಿಯಾಗಿ ಅಂಥಾ ಸರ್ಟಿಫಿಕೇಟ ಕ್ರಮವಾಗಿ ಘಾಯಿಷ ಮಾಡಲ್ಪಟ್ಟ ತರುವಾಯ ಯಾವನು ಈ ನಿಬಂಧನೆಗೆ ವಿರುದ್ಧವಾಗಿ ಯಾವ ಮುರ್ದೆಯನ್ನಾಗಲಿ ದರ್ಫ ಮಾಡುತ್ತಾನೋ ಯಾ ಜರ್ಲ ಮಾಡುತ್ತಾನೋ ಯಾ ದರ್ಫ ಯಾ ಜರ್ಲ ಮಾಡಿಸುತ್ತಾನೋ ಯಾ ಆಬಗ್ಗೆ ಅಪ್ಪಣೆ ಕೊಡುತ್ತಾನೋ ಯಾ ಒಪ್ಪುತ್ತಾನೋ ಅಂಥಾವನು ಇನ್ನೂರು ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು. ಪರಂತು ಅಂಥಾ ಪ್ರತಿ ಸರಟಿಫಿಕೇಟ ಮೈಸೂರು ಗೆಜೆಟಿನಲ್ಲಿ ಪ್ರಕಟಿಸಲ್ಪಟ್ಟು ದರ್ಫ ಯಾ ಜರ್ಲ ಮಾಡುವ ಸ್ಥಳದ ವಿಷಯದಲ್ಲಿ ಮುಖ್ಯವಾಗಿ ಬಳಕೆಯಲ್ಲಿರುವ ದೇಶಭಾಷೆಯೊಳಗೆ ಅದರ ತರ್ಜುಮೆಯು, ಸದರೀ ಸ್ಥಳದ ಯಾವದಾದರೂ ಒಂದು ಕಡೆಯಲ್ಲಿ ಚನ್ನಾಗಿ ಕಾಣುವಂತೆ ಚಿಕಟಾಯಿಸತಕ್ಕದ್ದು.

ನಿಯಮ.

ದರ್ಫ ಯಾ ಜರ್ಲ ಭೂಮಿಗಳಾಗಿ ಉಪಯೋಗಿಸಲ್ಪಡತಕ್ಕ ಪ್ರದೇಶಗಳನ್ನು ಕಮ್ಮಿಷನರಗಳು ಯೇರ್ಪಡಿಸತಕ್ಕದ್ದು.

191. ಕಮ್ಮಿಷನರಗಳು, ಮೈಸೂರು ಮಹಾರಾಜಾ ಸರ್ಕಾರದವರ ಮಂಜೂರಾತೀನಿಶಿ ಆಗಿಂದಾಗ್ಯೆ ಮ್ಯುನಿಸಿಪಲ್‌ಫಂಡ ದೆಶೆಯಿಂದ ದರ್ಫ ಯಾ ಜರ್ಲ ಮಾಡತಕ್ಕ ಸ್ಮಶಾನಗಳಾಗಿ ಉಪಯೋಗಿಸಲ್ಪಡತಕ್ಕ ಬಗ್ಗೆ ಯುಕ್ತಗಳಾದ ಜಾಗಾಗಳನ್ನು ಒದಗಿಸತಕ್ಕದ್ದು.

(ಕಟ್ಟಡ ವಗೈರೆಯಲ್ಲಿ) ಪ್ರವೇಶಿಸಲಿಕ್ಕೆ ಬಾಧ್ಯತೆ ಮತ್ತು ಕಾಮಗಾರಿಗಳ ವಿಷಯದಲ್ಲಿ ಅಧಿಕಾರ.

ಈ ಕಾನೂನಿನ ಕಾರ್ಯಗಳಿಗೋಸ್ಕರ ಜಮೀನುಗಳಲ್ಲಿ ಪ್ರವೇಶಿಸಲಿಕ್ಕೆ ಅಧಿಕಾರ.

192. ಕಮ್ಮಿಷನರಗಳು, ಈ ಕಾನೂನಿನ ಕಾರ್ಯಗಳಿಗೋಸ್ಕರ, ಸೂರ್ಯೋದಯಕ್ಕೂ ಸೂರ್ಯಾಸ್ತಮಯಕ್ಕೂ ಮಧ್ಯೆ, ತಮ್ಮಿಂದ ನೆರವೇರಿಸಲ್ಪಡತಕ್ಕದ್ದಾಗಿ ಈ ಕಾನೂನಿನಿಂದ ನಿಯಮಿಸಲ್ಪಟ್ಟ ಯಾವ ಕಾಮಗಾರಿಯನ್ನಾಗಲಿ ನೆರವೇರಿಸುವದಕ್ಕೋಸ್ಕರವಾದರೆ ಹ್ಯಾಂಗೋ ಹಾಂಗೆ, ತಾವು ಮಾಡಲಿಕ್ಕೆ ಹಕ್ಕುಂಟಾಗಿರುವ

951-

ಯಾವ ಮಷಾಹತ್ ಯಾ ತನಿಖಿಯನ್ನು ಮಾಡುವದಕ್ಕೋಸ್ಕರವಾಗಲಿ, ಯಾವದಾದರೂ ಕಟ್ಟೆ ಯಾ ಜಮೀನಿನಲ್ಲಾಗಲಿ, ಅದರ ಮೇಲಾಗಲಿ ಪ್ರವೇಶಿಸಲಿಕ್ಕೆ ಅಧಿಕಾರ ಪಡದಿರತಕ್ಕದ್ದು. ಹಾಗೆ ಪ್ರವೇಶಿಸುವದಕ್ಕೋಸ್ಕರವಾಗಲಿ, ಈ ಕಾನೂನ್ ಅನುಸರಿಸಿ ಅಂತಾ ಕಟ್ಟೆ ಯಾ ಜಮೀನಿನ ಯಾವ ಭಾಗದಲ್ಲಾಗಲಿ ಮಾಡಲ್ಪಟ್ಟ ಯಾವ ಅಂಶಕ್ಕೋಸ್ಕರವಾಗಲಿ, ಯಾವದಾದರೂ ನ್ಯಾಯನಡವಳಿತಕ್ಕು ಯಾ ತೊಂದರೆಗೂ ಪಾತ್ರರಾಗಬೇಕಾದ್ದಿಲ್ಲವು ;

ನಿಯಮ

ಪರಂತು ಕಮ್ಮಿಷನರಗಳು ಯಾ ಅವರ ಆಫಿಸರಗಳು, ಇದರಲ್ಲಿ ಅನ್ಯಥಾ ವಿಧಿಸಲ್ಪಟ್ಟದ್ದ ಹೊರ್ತು ತತ್ಕಾಲದಲ್ಲಿ ಒಬ್ಬರ ಅನುಭವದಲ್ಲಿರುವ ಯಾವ ಕಟ್ಟೆ ಯಾ ಜಮೀನನಲ್ಲಿ ಅದರ ಅನುಭವದಾರನ ಸಮ್ಮತಿ ವಿನಾ ಆ ಮೇರೆ ಪ್ರವೇಶಿಸಲಿಕ್ಕೆ ತಮ್ಮ ಇರಾದೆಯನ್ನು ಕುರಿತು ಇಪ್ಪತ್ತುನಾಲ್ಕು ಘಂಟೆಯ ಹೊತ್ತಿಗೆ ಮುಂದಾಗಿ ಸದರೀ ಅನುಭವದಾರನಿಗೆ ನೋಟಿಸ ಕೊಡದೆ ಪ್ರವೇಶಿಸಕೂಡದು.

ಕಾಮಗಾರಿ ನಡೆಯತಕ್ಕ ಸ್ಥಳಕ್ಕೆ ಸೇರಿದ ಹಾಗೆ ಇರುವ ಜಮೀನಗಳಲ್ಲಿ ಪ್ರವೇಶಿಸಲಿಕ್ಕೆ ಕಮ್ಮಿಷನರಗಳಿಗೆ ಅಧಿಕಾರ.

193. ಕಮ್ಮಿಷನರಗಳಾಗಲಿ, ಅವರ ಆಫಿಸರಗಳಾಗಲಿ, ನವುಕರರಾಗಲಿ, ನಿರ್ಮಿಸಲ್ಪಡತಕ್ಕದ್ದೆಂತ ಈ ಕಾನೂನಿಂದ ಅಧಿಕಾರ ವುಂಟುಮಾಡಲ್ಪಟ್ಟ ಯಾವ ಕಾಮಗಾರಿಗಳಿಗೆ ನೆರೆ ಹೊರೆ ಯಲ್ಲಾಗಲಿ ನೂರು ಗಜಗಳ ದೂರದೊಳಗಾಗಲಿ ಇರುವ ಯಾವ ಮನುಷ್ಯನ ಭೂಮಿಯಲ್ಲಾಗಲಿ ಯಾವದಾದರೂ ಮಣ್ಣು, ನುರುಜು, ಮರಳು, ಸುಣ್ಣ, ಇಟ್ಟಿಗೆ, ಕಲ್ಲು ಯಾ ಇತರ ಸಾಮಾನುಗಳು ಯಿಂತಾವು ಅಂತಾ ಭೂಮಿಯಮೇಲೆ ಇಟ್ಟಿರುವ ಬಗ್ಗ್ಯಾಗಲಿ, ಸದರೀ ಕಾಮಗಾರಿ ಮಾಡಿಸತಕ್ಕದ್ದಕ್ಕೆ ಸಂಬಂಧಪಟ್ಟ ಯಾವದಾದರೂ ಇತರ ಕೆಲಸಗಳಿಗೋಸ್ಕರವಾಗಲಿ ತಮಗೆ ಇದರ ದೆಸೆಯಿಂದ ಉಂಟುಮಾಡಲ್ಪಟ್ಟ ಆಯಾ ಅಧಿಕಾರಗಳನ್ನು ನಡಿಸುವದರಲ್ಲಿ ಯಾವ ನುಕ್ಸಾನನ್ನೂ ಉಂಟುಮಾಡದೇನೇ ಮುಂದಾಗಿ ಮೊಬಲಗು ಯಾವದೂ ಪಾವತಿಮಾಡದೇ ಯಾ ದರಖಾಸ್ತು ಮಾಡದೆ ಯಾ ಮೊಬಲಗು ಅಮಾನತ್ ಯಿಡದೆಯೂ ಸದರೀಜಮೀನನ್ನು ಹಂಗಾಮಿ ತರೀಕ ತಮ್ಮ ಸುಪರ್ದಿನಲ್ಲಿ ತೆಗದುಕೊಳ್ಳಲಿಕ್ಕೋಸ್ಕರವಾಗಲಿ ಅದಕ್ಕುಂಟಾದ ಹಂಗಾಮಿ ನಷ್ಟವನ್ನು ಕುರಿತಾಗಲಿ ಅದರ ಮಾಲೀಕನಿಗೂ, ಅನುಭವದಾರನಿಗೂ ಆಗಿಂದಾಗ್ಯೆ ಮತ್ತು ಹಾಗೆ ಹಂಗಾಮಿಯಾಗಿ ಸುಪರ್ದಿಗೆ ತೆಗೆದುಕೊಳ್ಳಲ್ಪಡುವ ಯಾ ನುಕ್ಸಾನ ಉಂಟಾಗುವಾಗಲೆಲ್ಲಾ ಈಡು ಮೊಬಲಗು ಕೊಟ್ಟು, ಮತ್ತು ಅಂತಾ ಭೂಮಿಗೆ ಶಾಶ್ವತವಾದ ಹಾನಿ (ಯಾವದಾದರೂ) ಉಂಟಾದಲ್ಲಿ, ಮಾಲೀಕನಿಗೆ ಈಡು ಮೊಬಲಗು ಕೊಟ್ಟು ಪ್ರವೇಶಿಸಬಹುದು; ಮತ್ತು ಅಂತಾ ಈಡು ಮೊಬಲಗನ್ನು ಕುರಿತಾಗಲಿ, ಅದರ ಹಂಚಿಕೆಯನ್ನು ಕುರಿತಾಗಲಿ ಯಾವದಾದರೂ ತಕರಾರ ಹುಟ್ಟಿದ ಪಕ್ಷಕ್ಕೆ ಅದು, ನುಕ್ಸಾನಗಳನ್ನೂ ಲಾಗವಮುಗಳನ್ನೂ ಕುರಿತ ವಿವಾದಗಳನ್ನು ಪರಿಷ್ಕರಿಸುವಬಗ್ಯೆ ಇದರಲ್ಲಿ ಮುಂದೆ ವಿಧಿಸಲ್ಪಟ್ಟಿರುವ ರೀತಿಯಾಗಿ ವ್ಯವಸ್ಥೆಯಾಗತಕ್ಕದ್ದು ;

ನಿಯಮ.

ಪರಂತು ಕಮ್ಮಿಷನರಗಳು ಮೇಲೆ ಕಂಡ ಮೇರೆ ಸದರೀ ಕಾಮಗಾರೀಗೆ ಆಸಪಾಸಿನಲ್ಲಿರುವ ಯಾ ಸಮೀಪದಲ್ಲಿರುವ ಭೂಮಿಯನ್ನು ಹಾಗೆ ಹಂಗಾಮಿಯಾಗಿ ಉಪಯೋಗಿಸಲಿಕ್ಕೆ, ಅವರು ಅಂತಾ ಭೂಮಿಯ ಮಾಲೀಕರಿಗೂ, ಅನುಭವದಾರರಿಗೂ ಅಂತಾ ತಮ್ಮ ಉದ್ದೇಶ್ಯವನ್ನು ಕುರಿತು ಯೇಳು ದಿನಗಳಿಗೆ ಮುಂಚಿತವಾಗಿ ನೋಟಿಸ ಕೊಡುವದಲ್ಲದೆ ಜರೂರಿದ್ದ ಪಕ್ಷಕ್ಕೆ ಮೇಲೆ ಕಂಡಮೇರೆ ಉಪಯೋಗಿಸಲ್ಪಡುವ ಬಗ್ಯೆ ಅವಶ್ಯಕವಾದಷ್ಟು ಜಮೀನನ್ನು ಅದರೊಡನೆ ಸೇರಿರುವ ಯಿತರ ಭೂಮಿಗೆ, ಸಾಕಾದಷ್ಟು ಮಟ್ಟಿಗೆ ಅಡ್ಡಕಟ್ಟಿಸಿ ಪ್ರತ್ಯೇಕಪಡಿಸಿ ಯಿಡತಕ್ಕದ್ದು:

ಕಮ್ಮಿಷನರಗಳ ನೌಕರೀ ಯಲ್ಲಿರುವ ಮನುಷ್ಯರು ತಮ್ಮ ಕೆಲಸಗಳನ್ನು ನಡಿಸುತ್ತಾ ಇರುವಲ್ಲಿ ಅಭ್ಯಂತರ ಪಡಿಸಿದರೆ ದಂಡನೆ.

194. ಕಮ್ಮಿಷನರಗಳನ್ನಾಗಲಿ, ಅವರು ನವುಕರಿಯಲ್ಲಿಟ್ಟುಕೊಂಡಿರುವ ಯಾವ ಮನುಷ್ಯನನ್ನಾಗಲಿ, ಈ ಕಾನೂನ್ ನಿಬಂಧನೆಗಳನುಸರಿಸಿ ಅವರು ಅಥವಾ ಆತನ ಕೆಲಸವನ್ನು ಮಾಡುವ ಯಾ ನೆರವೇರಿಸುವ ವಿಷಯದಲ್ಲಿ ಅವರು ಯಾರ ಸಂಗಡ ಗುತ್ತಿಗೇಮಾಡಿಕೊಂಡಿರುತ್ತಾರೋ ಅಂಥಾ ಯಾವ ಮನುಷ್ಯನನ್ನಾಗಲಿ, ಈ ಕಾನೂನ್ ಬಲವನ್ನು ಅವಲಂಬಿಸಿಯಾಗಲಿ, ಯಿದಕ್ಕೋಸ್ಕರವಾಗಲಿ ಅವರು ನಡಿಸತಕ್ಕದ್ದೆಂತ ಪ್ರತ್ಯೇಕವಾಗಿ ಅಧಿಕಾರ ಕೊಡಲ್ಪಟ್ಟ ಯಾ ಕೋರಲ್ಪಟ್ಟ ಯಾವ ಕೆಲಸವನ್ನಾಗಲಿ ನಡಿಸುತ್ತಾ ಇರುವಲ್ಲಿಯೂ, ನೆರವೇರಿಸುತ್ತಾಯಿರುವಲ್ಲಿಯೂ ಯಾವ ಕಾಲದೊಳಗಾಗಲಿ ಅಟಂಕಪಡಿಸುವ ಅಥವಾ ತೊಂದರೆಪಡಿಸುವ ಅಥವಾ ಈ ಕಾನೂನಿನಿಂದ ನಿಯಮಿಸಲ್ಪಟ್ಟ ಯಾವ ಕಾಮಗಾರಿಯನ್ನಾಗಲಿ ನೆರವೇರಿಸಲಿಕ್ಕೆ ಜರೂರಾದ ಯಾವದಾದರೂ ಮಟ್ಟ ಯಾ ದಿಕ್ಕು ಇಂಥಾದ್ದನ್ನು ತಿಳಿಸುವ ಬಗ್ಯೆ ಇಡಲ್ಪಾದ ಯಾವದಾದರೂ ಗುರ್ತನ್ನು ತೊಲಗಿಸುವ ಯಾವ ಮನುಷ್ಯನಾಗಲಿ ಐನ್ನೂರು ರೂಪಾಯಿಗೆ ಮೀರದ ಒಂದು ಜುರ್ಮಾನೆಗಾಗಲಿ,

ಯಾವನ ಮುಂದೆ ಆತನು ತಕ್ಕೀರ್ ಸ್ಥಾಪನೆ ಮಾಡಲ್ಪಡುತ್ತಾನೋ ಆ ಮಾಜಿಸ್ಟ್ರೇಟರಿಗೆ ಯುಕ್ತ ತೋರುವ ಪ್ರಕಾರ ಯೆರಡು ತಿಂಗಳಿಗೆ ಮೀರದೆ ಯಾವ ವಾಯಿದೇ ಪರ್ಯಂತವಾಗಲಿ ಕಠಿನ ಯಾ ಸಾಧಾರಣ ಖೈದು ಸಜಾಕ್ಕಾಗಲಿ ಗುರಿಯಾಗತಕ್ಕದ್ದು.

ಷಹರಿಗೆ ಹೊರಗೆ ಚರಂಡಿಗಳನ್ನೂ ಮೊಹರೀ ವಗೈರೆಗಳನ್ನೂ ಕಟ್ಟಿಸುತ್ತಾ ಇರುವಲ್ಲಿ ಕಮ್ಮಿಷನರ್‌ಗಳಿಂದ ನೆರವೇರಿಸಲ್ಪಡತಕ್ಕ ಅಧಿಕಾರ.

195. ಬೆಂಗಳೂರು ಷಹರ್‌ನೊಳಗೆ ಅವುಗಳ ಸರಹದ್ದುಗಳಿಗೆ ಹೊರಗೆ ಯಾವ ಸ್ಥಳದಿಂದಾಗಲಿ ನೀರು ತರುವಬಗ್ಯೆ ಬೇಕಾದ ನಲ್ಲೀಗಳನ್ನು ಇಡುವದಕ್ಕಾಗಲಿ, ಮೊಹರೀಗಳನ್ನು ಕಟ್ಟುವದಕ್ಕಾಗಲಿ, ಸದರೀ ಸರಹದ್ದುಗಳಿಗೆ ಹೊರಗೆ ಇರುವ ಯಾವದಾದರೂ ಪಬ್ಲಿಕ್ ಬಚ್ಚಲು, ತಟಾಕ, ಸಣ್ಣಹೊಳೆ, ಕಾಲುವೆ, ಯಾ ನೀರು ಹರಿಯುವ (ಇತರ) ಕಾಲುವೆ ಇಂತಾದ್ದು ಯಾವದರೊಂದಿಗಾಗಲಿ ಸೇರುವ ಯಾ ಯಾವದರಲ್ಲಾಗಲಿ ಬಂದು ಬೀಳುವ ಕಟ್ಟೆಗಳು, ಬಚ್ಚಲುಗಳು, ಯಾ ಚರಂಡಿಗಳು ಇಂತಾದ್ದನ್ನು ಕಟ್ಟಿಸುವ ಬಗ್ಯಾಗಲಿ, ಅಂತಾ ಯಾವ ನಲ್ಲೀಗಳನ್ನಾದರೂ ಇಡಿಸಲಿಕ್ಕೋಸ್ಕರ, ಅಂತಾ ಕಟ್ಟೆ, ಮೊಹರಿ, ಬಚ್ಚಲು, ಯಾ ಚರಂಡಿ ಇಂತಾದ್ದನ್ನು ಕಟ್ಟಿಸಲಿಕ್ಕೋಸ್ಕರ ತಯಾರ್ ಮಾಡೋಣಾದ ನಕಷೆಯನ್ನು ಮೈಸೂರು ಮಹಾರಾಜಾ ಸರ್ಕಾರದವರು ಅಂಗೀಕರಿಸಿದಾಗ, ಕಮ್ಮಿಷನರ್‌ಗಳೂ ಅವರ ಅಫಿಸರ್‌ಗಳೂ ತಮಗೆ ಅವಶ್ಯಕವಿರುವ ಕುಮ್ಮಕ್ಕೀದಾರ್ರನಿಶೀ ಯಾವದರ ಮಾರ್ಗವಾಗಿ ಸದರಿ ನಲ್ಲೀಗಳು, ಕಾಲ್ವೆ, ಬಚ್ಚಲು, ಚರಂಡಿ ಇಂತಾದ್ದು ಕಲ್ಪಿಸಲ್ಪಡಬೇಕಾಗಿರುತ್ತೋ ಅಂತಾ ಪ್ರದೇಶದ ಕಡೆಗೂ ಅಂತಾ ನಲ್ಲೀಗಳನ್ನು ಇಡುವದರಲ್ಲಿಯೂ, ಅಂತಾ ಕಟ್ಟೇ, ಕಾಲ್ವೇ ಬಚ್ಚಲು, ಚರಂಡಿ ಇಂತಾದ್ದು ನಿರ್ಮಿಸುವದರಲ್ಲಿಯೂ ಸದರೀ ಷಹರ್ ಸರಹದ್ದುಗಳೊಳಗೆ ಅವರು ಚಲಾಯಿಸುವಬಗ್ಯೆ ಈ ಕಾನೂನು ದೆಶೆಯಿಂದ ನ್ಯಾಯವಾಗಿರುವ ಮತ್ತು ಅಂತಾ ನಲ್ಲೀಗಳನ್ನು ಇಡಲಿಕ್ಕಾಗಲಿ ಅಂತಾ ಕಟ್ಟೆ ಕಾಲ್ವೆ, ಬಚ್ಚಲು, ಯಾ ಚರಂಡಿ, ಇಂತಾದ್ದದನ್ನು ನಿರ್ಮಿಸುವದಕ್ಕಾಗಲಿ, ಹಾಗೆ ಮಾಡುವದರಿಂದ ಯಾವ ವ್ಯಾಜ್ಯಕ್ಕಾದರೂ ತೊಂದರೆಗಾದರೂ ಒಳಪಡದೇ ಜರೂರಾದ ದರೋಬಸ್ತು ಅಧಿಕಾರಗಳನ್ನು ನಡಿಸುವದು ಸದರೀ ಕಮ್ಮಿಷನರ್‌ಗಳು ವಗೈರೇರಿಗೆ ನ್ಯಾಯವಾಗಿರತಕ್ಕದ್ದು; ಮತ್ತು ಯಾವದರ ಮಾರ್ಗವಾಗಿ ಸದರೀ ನಲ್ಲೀಗಳು ಕಾಲ್ವೆಗಳು, ಬಚ್ಚಲುಗಳು, ಚರಂಡಿಗಳು, ಕಲ್ಪಿಸಲ್ಪಡಬೇಕಾಗಿರುತ್ತೋ ಆ ಡಿಸ್ಟ್ರಿಕ್ಟಿನ ಮಾಜಿಸ್ಟ್ರೇಟರು ಅಂತಾದ್ದರ ವಿಷಯವಾಗಿ ತಮ್ಮ ಡಿಸ್ಟ್ರಿಕ್ಟಿನ ಸರಹದ್ದುಗಳೊಳಗೆ, ಮೇಲೆ ಕಂಡಂತೆ ಷಹರ ಸರಹದ್ದುಗಳಲ್ಲಿ ಕಮ್ಮಿಷನರ್‌ಗಳಿಂದ ನೆರವೇರಿಸಲ್ಪಡತಕ್ಕ ಯಾವ ಕಾಮಗಾರಿಗಳ ವಿಷಯದೊಳಗಾಗಲಿ ನೆರವೇರಿಸಲಿಕ್ಕೆ ಮಾಜಿಸ್ಟ್ರೇಟರಿಗೆ ಈ ಕಾನೂನಿಂದ ನ್ಯಾಯವಾಗಿರುವ ಅಧಿಕಾರ ವ ಹುಕುಮನ್ನು ನಡಿಸುವದು ಸಹ ಮ್ಯಾಜಿಸ್ಟ್ರೇಟರಿಗೆ ನ್ಯಾಯವಾಗಿರತಕ್ಕದ್ದು.

ದೀಪಗಳು ಇಡುವಿಕೆ ಮತ್ತು ನೀರು ಒದಗಿಸುವಿಕೆ.

ದೀಪ ಹಚ್ಚುವದಕ್ಕೋಸ್ಕರ ತೆರಿಗೆ ಕಟ್ಟುವಿಕೆ.

196. ಈ ಕಾನೂನಿನ ಅಧಿಕಾರ ಸರಹದ್ದುಗಳೊಳಗೆ ಇರತಕ್ಕ ದರೋಬಸ್ತು ಕಟ್ಟಗಳು, ಮನೆಗಳು, ನಿವೇಶನಗಳು ಇಂತಾವುಗಳ ಅನುಭವದಾರ್ರಿಗೆ ಅವುಗಳ ಸಾಲೀಯಾನಾ ಕಿಮ್ಮತ್ತಿನ ಮೇಲೆ ಸೇಕಡಾ ಒಂದಕ್ಕೆ ಜಾಸ್ತಿಯಿಲ್ಲದಂತೆ, ದೀಪಗಳಿಡುವದರ ಬಾಬತು ಒಂದು ಸಾಲಿಯಾನಾ ತೆರಿಗೇ ಮೊಕರರ್ ಮಾಡುವದು ಕಮ್ಮಿಷನರ್‌ಗಳಿಗೆ ನ್ಯಾಯವಾಗಿರತಕ್ಕದ್ದು.

ನೀರು ಸರಬರಾಯಿ ಮಾಡುವದು.

197. ಕಮ್ಮಿಷನರ್‌ಗಳು ಬೆಂಗಳೂರು ಷಹರ ಬಾಬತು ಪ್ರತಿ ಬೀದಿಯಲ್ಲಿ, ಗಲ್ಲಿಯಲ್ಲಿ ವ ಅಡ್ಡದಾರಿಯಲ್ಲಾಗಲಿ ಅವುಗಳ ಬಾಬತು ಯಾವ ತುಕಡಿ ಯಾ ಭಾಗದಲ್ಲಿಯಾಗಲಿ, ನೀರು ಸರಬರಾಯಿ ಮಾಡಲಿಕ್ಕೋಸ್ಕರ ಸಾಕಾದಷ್ಟು ಮುಖ್ಯ ನಲ್ಲಿಗಳನ್ನೂ, ಸಾಧಾರಣ ನಲ್ಲಿಗಳನ್ನೂ, ಅಂತಾ ಪ್ರತಿ ಬೀದಿಯಲ್ಲಿ, ಗಲ್ಲಿಯಲ್ಲಿ, ವ ಅಡ್ಡದಾರಿಯಲ್ಲಿ ಇಡಿಸಬಹುದು. ಮತ್ತು ಅಂತಾ ಪ್ರತಿ ಬೀದಿಯಲ್ಲಿಯೂ, ಗಲ್ಲಿಯಲ್ಲಿಯೂ, ಅಡ್ಡದಾರಿಯೊಳಗೂ, ತೆರಿಗೇ ಕೊಡತಕ್ಕವರು ಮುಫತ್ತಾಗಿ ಉಪಯೋಗಿಸಲಿಕ್ಕೋಸ್ಕರ ಸಾಕಾದಷ್ಟು ಅನುಕೂಲಗಳಾದ ನಿಲುವು ನಲ್ಲಿಗಳನ್ನೂ ಇಡಿಸಬಹುದು. ಸದರೀ ನಿಲುವು ನಲ್ಲಿಗಳು ಒಂದಕ್ಕೊಂದು ಮಧ್ಯೆ ಅವಕಾಶ ನೂರು ಗಜಗಳ ಫಾಸಲೆಗೆ ಮೀರದೆ ಇರುವಂತೆ ಇಡಲ್ಪಟ್ಟು ಅಂತಾ ನಿಲುವು ನಲ್ಲಿಗಳಲ್ಲಿ ಯೆಲ್ಲಾ ಕಾಲದಲ್ಲಿಯೂ, ನೀರು ಭರ್ತಿಯಾಗಿರತಕ್ಕದ್ದು.

ನೀರು ಸರಬರಾಯಿ ಪೂರ್ತಿಯಾದ ಬಗ್ಯೆ ಇಸ್ತಿಹಾರ್ ಘೋಷಿಷ್ ಮಾಡೋಣ.

198. ಮೇಲೆ ಕಂಡಮೇರೆ ಅನುಕೂಲಗಳಾದ ಮುಖ್ಯ ನಲ್ಲಿಗಳೊಂದಿಗೂ ನಿಲುವು ನಲ್ಲೀಗಳೊಂದಿಗೂ, ಮೇಲೆ ಕಂಡಮೇರೆ ಷಹರಿಗೆ ಅಥವಾ ಅದರ ಯಾವದಾದರೂ ತುಕಡೀಗೆ ಯಾ ಭಾಗಕ್ಕೆ ನೀರು ಸರಬರಾಯಿ ಮಾಡಲಿಕ್ಕೋಸ್ಕರ ಒಂದು ಪದ್ಧತಿಯನ್ನು ಕಮ್ಮಿಷನರ್‌ಗಳು ನೆರವೇರಿಸಿದ ಪಕ್ಷಕ್ಕೆ ಮತ್ತು ಅಂತಾ ಪದ್ಧ

ತಿಯು ಕಮ್ಮಿಷನರಗಳ ಅಭಿಪ್ರಾಯದಲ್ಲಿ ಪೂರ್ತಿಯಾದ್ದೆಂತ ತೋರಬಂದಪಕ್ಷಕ್ಕೆ, ಸದರೀ ಕಮ್ಮಿಷನರಗಳು ಮೈಸೂರು ಮಹಾರಾಜಾ ಸರ್ಕಾರದವರ ಮಂಜೂರಾತಿನಿಶೀ, ಮೈಸೂರು ಗೆಜೆಟನಲ್ಲಿ, ಸದರೀ ಷಹರನಲ್ಲಾಗಲಿ ಅದರ ಬಾಬತು ಯಾವದಾದರೂ ತುಕಡಿ ಯಾ ಭಾಗ ಇಂತಾದ್ದರಲ್ಲಿ ನೀರು ಪೂರ್ತಿಯಾಗಿ ಒದಗಿಸಲ್ಪಟ್ಟಿರುತ್ತೆ ಯೆಂತ ಇಸ್ತಿಹಾರಮೂಲಕ ಘಾಯಿಷ ಮಾಡತಕ್ಕದ್ದು.

ನೀರು ಮೊದಗಿಸತಕ್ಕ ಬಗ್ಯೆ ತೆರಿಗೆ ಕಟ್ಟತಕ್ಕದ್ದು.

199. ಮೇಲೆ ನಮೂದಿಸಿದ ಪ್ರಕಾರ, ಯಾವ ತುಕಡಿಯಲ್ಲಾಗಲಿ ನೀರಿನ ಸರಬರಾಯಿ ಪೂರ್ತಿಯಾಗಿರುತ್ತೆಂತ ಘಾಯಿಷ ಮಾಡಲ್ಪಟ್ಟ ತರುವಾಯು, ಅಂತಾ ತುಕಡಿಯೊಳಗೆ ಯಿರತಕ್ಕ (ಜನಗಳ) ಅನುಭವದಲ್ಲಿರತಕ್ಕ ದರೋಬಸ್ತು ಕಟ್ಟಗಳಮೇಲೂ ನಿವೇಶನಗಳಮೇಲೂ ಒಂದು ತೆರಿಗೇ ರಿವಾಜನ್ನು ಮೊಕರರ ಮಾಡುವದು ಸದರೀ ಕಮ್ಮಿಷನರಗಳಿಗೆ ನ್ಯಾಯುವಾಗಿರತಕ್ಕದ್ದು. ಸದರೀ ರಿವಾಜು ಸದರೀ ಕಟ್ಟಗಳು ನಿವೇಶನಗಳು ಯಿವುಗಳ ಸಾಲಿಯಾನಾ ಕಿಮ್ಮತ್ತಿನಮೇಲೆ ಸೇಕಡಾ ಯೆರಡಕ್ಕೆ ಜಾಸ್ತಿಯಾಗಿರಕೂಡದು.

ಮನೇ ವಾಸಸ್ಥನು ಗೃಹಕೃತ್ಯಕ್ಕೆ ಬಳಸಿಕೊಳ್ಳಲಿಕ್ಕೋಸ್ಕರ ನೀರು ಒದಗಿಸಲ್ಪಡಲಿಕ್ಕೆ ಅರ್ಹನಾಗಿರುವಿಕೆ.

200. ತೆರಿಗೆ ಕಟ್ಟಲ್ಪಟ್ಟ ಮತ್ತು ನೀರು ರಿವಾಜ ತೆರುತ್ತಾ ಯಿರುವ ಪ್ರತಿ ಮನೇ ವಾಸಸ್ಥನೂ ಆ ವಿಷಯದಲ್ಲಿ ಮತ್ತೇನೂ ಜಾಸ್ತೀ ಖರ್ಚು ಯಾ ತೆರಿಗೆ ಯಿಲ್ಲದೆ ಮಾಫಾಗಿ ಕಮ್ಮಿಷನರಗಳ ಮುಖ್ಯ ನಲ್ಲಿಗಳಿಂದಲೂ, (ಯಿತರ) ನಲ್ಲಿಗಳಿಂದಲೂ ತನ್ನ ಗೃಹಕೃತ್ಯ ಕೆಲಸಗಳಿಗೂ, ತನ್ನ ಮನೇಜನಗಳ ಉಪಯೋಗಕ್ಕೂ ಬಳಸಿಕೊಳ್ಳಲಿಕ್ಕೆ ಅರ್ಹನಾಗಿರತಕ್ಕದ್ದು.

ಮನೆಗೆ ನೀರು ಬಿಟ್ಟುಕೊಳ್ಳಲಿಕ್ಕೋಸ್ಕರ ಇಡಲ್ಪಡುವ ನಲ್ಲಿಗಳು ವಗೈರೇ ನಿರ್ಣಯಿಸಲ್ಪಟ್ಟ ಪರಿಮಾಣ ವುಳ್ಳವಾಗಿಯೂ ಮನೇ ವಾಸಸ್ಥನ ಖರ್ಚಿನಿಂದಲೂ ನಿರ್ಮಿಸಲ್ಪಡತಕ್ಕದ್ದು.

201. ತೆರಿಗೆ ಮೊಕರರ ಮಾಡಲ್ಪಟ್ಟ ಮತ್ತು ನೀರು ರಿವಾಜ ತೆರುತ್ತಾ ಇರುವ ಪ್ರತಿ ಮನುಷ್ಯನೂ ತನ್ನ ಮನೆಗೆ ಗೃಹಕೃತ್ಯ ಉಪಯೋಗಕ್ಕಾಗಿ ಯುಕ್ತವಾಗಿಯೂ ಸಾಕಾಗಿಯೂ ಯಿರುವಷ್ಟು ನೀರನ್ನು ತರಲಿಕ್ಕೋಸ್ಕರ ಕಮಿಷನರಗಳ ಬಾಬತು ಮುಖ್ಯ ನಲ್ಲಿಗಳಿಂದಲೂ, ಇತರ ನಲ್ಲಿಗಳಿಂದಲೂ, ಫೂಟನಲ್ಲಿಗಳನ್ನು ಯಿಡಲಿಕ್ಕೆ ಅರ್ಹನಾಗಿರತಕ್ಕದ್ದು. ಕಮ್ಮಿಷನರಗಳ ಬಾಬತು ಮುಖ್ಯನಲ್ಲಿಗಳಿಂದಲೂ, ಯಿತರ ನಲ್ಲಿಗಳಿಂದಲೂ, ಯಾವ ತೆರಿಗೆ ರಿವಾಜ ಕೊಡತಕ್ಕವನ ಮನೆಗಾಗಲಿ ನೀರುಬರುವಂತಾ ಫೂಟ ನಲ್ಲಿಗಳೂ, ಅದಕ್ಕೆಸಂಬಂಧಪಟ್ಟ ಮನೆಯೊಳಗೆ ಯಿರತಕ್ಕ ನಲ್ಲಿಗಳೂ ವ ಕಾಮಗಾರಿಗಳೂ ಸಹ, ಸದರೀ ಕಮ್ಮಿಷನರಗಳೂ, ಅವರ ತರಫಿನಲ್ಲಿರತಕ್ಕ ಅವರ ಆಫಿಸರರೂ ನಿಷ್ಕರ್ಷೆಮಾಡಿ ಮಂಜೂರಮಾಡುವ ತರಹೇಯಾಗಿಯೂ, ಪರಿಮಾಣದಿಂದಲೂ, ಸಾಮಾನುಗಳಿಂದಲೂ ಇರತಕ್ಕದ್ದಲ್ಲದೆ ಸದರೀ ಫೂಟ ನಲ್ಲಿಗಳನ್ನು ಅಪೇಕ್ಷಿಸುವ ಮನುಷ್ಯನ ಲಾಗವಡಿನಿಂದ ಮಾಡಿಸಲ್ಪಡತಕ್ಕದ್ದು ಮತ್ತು ಕಟ್ಟಿಸಲ್ಪಡತಕ್ಕದ್ದು.

ಗೃಹಕೃತ್ಯ ಕೆಲಸಗಳು ಯಾವವು.

202. ಗೃಹಕೃತ್ಯ ಕೆಲಸಗಳಿಗೆ ನೀರು ಬಿಟ್ಟುಕೊಳ್ಳುವದರಲ್ಲಿ ಕುದುರೆಗಳಾಗಲಿ ಬಂಡಿಗಳಾಗಲಿ ವಿಕ್ರಯುಕ್ಕಾದರೂ ಬಾಡಿಗ್ಯಾದರೂ ಯಿಡಲ್ಪಟ್ಟಿದ್ದ ಪಕ್ಷಕ್ಕೆ ಅಂಥಾ ಕುದುರೆಗಳಿಗೋಸ್ಕರವಾಗಲಿ, ಬಂಡಿಗಳು ತೊಳೆಯುವ ಬಗ್ಯಾಗಲಿ ನೀರು ಉಪಯೋಗಿಸಿ ಕೊಳ್ಳೋಣ, ಅಥವಾ ಯಾವದಾದರೂ ವ್ಯಾಪಾರ, ಕಾರಖಾನೆ ಯಾ (ಯಿತರ) ಕೆಲಸ, ಯಾ ಕಾರಂಜಿಗಳು, ಅಲಂಕಾರಾರ್ಥವಾಗಿ ಅಥವಾ ಶಿಲ್ಪಕಾರ್ಯಗಳಿಗೋಸ್ಕರ ನೀರು ಉಪಯೋಗಿಸಿಕ್ಕೊಳ್ಳುವದು ಯಿಂತಾ ಅಂಶ ಸೇರತಕ್ಕದ್ದಲ್ಲವು.

ವ್ಯಾಪಾರದ ಕೆಲಸಗಳಿಗಾಗಿ ನೀರು ಮೊದಗಿಸೋಣ.

203. ಗೃಹಕೃತ್ಯ ಕೆಲಸಗಳಗಲ್ಲದೆ ಯಿತರವಾದ ಕೆಲಸಗಳಿಗೂ, ಕಸಬ್‌ದಾರೀ ಕೆಲಸಗಳು, ಕಾರ್‌ಖಾನೇ ಕೆಲಸಗಳು, ವ್ಯಾಪಾರಗಳು ಅಲಂಕಾರಾರ್ಥವಾದ (ಕಾರಂಜಿ ವಗೈರೆ,) ಕೆಲಸಗಳು ಅಥವಾ ಶಿಲ್ಪಕಾರ್ಯಗಳು ಯಿವುಗಳಿಗೂ ಪ್ರತಿ ಯೆರಡು ಸಾವಿರ ಗ್ಯಾಲನ್ನಿಗೆ ವೊಂದು ರೂಪಾಯಿಗೆ ಮೀರದೆ ವೊಂದು ರಿವಾಜ್ ಪ್ರಕಾರ ನೀರು ವೊದಗಿಸುವದು ಕಮ್ಮಿಷನರಗಳಿಗೆ ನ್ಯಾಯವಾಗಿರತಕ್ಕದ್ದು. ಪರಂತು ಅಂತಾ ನೀರು ಖಾಯಿಷ ಮಾಡುವ ಮನುಷ್ಯನು ಯಾವ ಬಗ್ಯೆ ಅಂಥಾ ನೀರು ಬೇಕಾಗಿರುತ್ತೋ ಆ ವಿಷಯವನ್ನು ಪ್ರಾಯಶಃ ಯೆಷ್ಟರ

ನೀರು ಖರ್ಚು ಯಿರುತ್ತೋ ಆ ಪರಿಮಾಣವನ್ನು ನಮೂದಿಸಿ ಕಮ್ಮಿಷನರಗಳಿಗೆ ಬರವಣಿಗೆಯಿಂದ ದರಖಾಸು ಕೊಡತಕ್ಕದ್ದು. ಆದರ ಮೇಲೆ ಕಮ್ಮಿಷನರಗಳು ಮೇಲೆ ಕಂಡ ರಿವಾಜಿಗೆ ವಿರೋಧವಿ ಲ್ಲವು ಆ ಮೇರೆ ನೀರಿಗೆ ದರ ಖಾಸ್ತು ಮಾಡಿದ ಮನುಷ್ಯನೂ ಒಪ್ಪಂಬಡಿಕೆ ಮಾಡಿಕೊಳ್ಳುವ ಲಾಗವಡುಗಳಿಗೆ ಅಥವಾ. ರಿವಾಜಗಳಿಗೆ ಒಳಪ ಟ್ಟು ಕಮ್ಮಿಷನರಗಳೂ ನೀರಿನ ಬಗ್ಯೆ ದರಖಾಸ್ತು ಮಾಡುವ ಮನುಷ್ಯನೂ ಕರಾರ್ ಮಾಡಿಕೊಳ್ಳುವ ಅಥವಾ ಅಂ ಥಾ ಕರಾರ್ ನಡಿಯದೇ ಯಿದ್ದಲ್ಲಿ ಕಮಿಷನರಗಳಿಂದ ನಿರ್ಣಯಿಸಲ್ಪಡುವ ಪರಿಮಾಣವೂ, ತರಹೇದಾರಿಯೂ ಉಳ್ಳ ಜರೂರಾದ ಫ್ರೂಟ ನಲ್ಲಿಗಳನ್ನೂ ಕಾಮಗಾರಿಗಳನ್ನೂ ನಿರ್ಮಿಸಬಹುದು ಅಥವಾ ನಿರ್ಮಿಸುವಂತೆ ಅಪ್ಪಣೆ ಕೊಡ ಬಹುದು.

ಫ್ರೂಟನಲ್ಲಿಗಳು ವಗೈರೆಯೂ ಸರ್ವೆಯರು(ಅಂದರೆ) ಮಷಾಹತದಾರನಿಗೆ ತೃಪ್ತಿಕರವಾಗಿ ಕಲ್ಪಿಸಲ್ಪಡತಕ್ಕದ್ದು.

204. ಕಮ್ಮಿಷನರಗಳ ಬಾಬತು ಮುಖ್ಯ ನಲ್ಲಿಗಳಿಂದಲೂ, ಇತರ ನಲ್ಲಿಗಳಿಂದಲೂ ಯಾವದಾದರೂ ಕಟ್ಟಡದೊಳಗೆ ಯಾ ನಿವೇಶನದಲ್ಲಿ ನೀರು ಬರತಕ್ಕ ಫ್ರೂಟನಲ್ಲಿಗಳೂ ಇತರ ಕಾಮಗಾರಿಗಳೂ ಸದರೀ ಕಮ್ಮಿಷನರಗಳಿಂದ ಆ ಬಗ್ಯೆ ನೌಕರರ್ ಆಗತಕ್ಕ ಸರ್ವೆಯರಯಾನೆ ಮಷಾಹತದಾರನ ಅಥವಾ ಇತರ ಉದ್ಯೋಗಸ್ಥನ ತನಖೀಗೆ ಒಳಪಟ್ಟು ಅವರಿಗೆ ಸಮಾಧಾನಕರವಾಗಿಯೂ ದರೋಬಸ್ತು ಸಂಗತಿಗಳಲ್ಲಿಯೂ ಕಟ್ಟಿಸಲ್ಪಡತಕ್ಕದ್ದು ಅಂಥಾ ಫ್ರೂಟ ನಲ್ಲಿಗಳೂ ಕಾಮಗಾರಿಗಳೂ, ಕಮ್ಮಿಷನರ ಗಳಿಗೂ ನೀರಿಗೆ ದರಖಾಸ್ತು ಮಾಡುವ ಮನುಷ್ಯನೂ ಒಡಂಬಡಿಕೆ ಮಾಡಿಕೊಳ್ಳುವ ಷರತ್ತುಗಳ ಮೇಲೆ ಅಥವಾ ಕಮ್ಮಿಷನರಗಳಿಂದ ನಿರ್ಣಯಿಸಲ್ಪಡುವ ಲಾಗವಡುಗಳಿಗೆ ಒಳಪಟ್ಟು ಕಮ್ಮಿಷನರಗಳ ನವುಕರರಿಂದಲೂ ಕೆಲಸದವ ರಿಂದಲೂ ಕಲ್ಪಿಸಲ್ಪಡಬಹುದು; ಮತ್ತು ಅಂಥಾ ಕೆಲಸಮಾಡಲಿಕ್ಕೆ ಜರೂರಾಗಿರುವ ಮೊಬಲಗು ಅಂಥಾ ಕಾಮಗಾ ರೀ ಮಾಡಲಿಕ್ಕೆ ಪೂರ್ವವೇ ಸಲ್ಲಿಸುವಂತೆಯಾಗಲಿ, ಅಮಾನತಯಿಡಲ್ಪಡುವಂತೆಯಾಗಲಿ ನಿಯಮಿಸೋಣ ಕಮ್ಮಿ ಷನರಗಳಿಗೆ ನ್ಯಾಯವಾಗಿರತಕ್ಕದ್ದಲ್ಲದೆಅಂಥಾ ಖರ್ಚುಗಳೂ ಲಾಗವಡುಗಳೂ ನೀರಿನ ರಿವಾಜ ಹ್ಯಾಂಗೋ ಅದೇ ಮೇರೆ ವಸೂಲ ಮಾಡಲ್ಪಡತಕ್ಕದ್ದು.

ಸಾಕಾದಷ್ಟು ಒಳ್ಳೇ ನೀರನ್ನು ಇಟ್ಟಿರತಕ್ಕದ್ದು.

205. ಕಮ್ಮಿಷನರಗಳೂ ತೆರಿಗೆಯನ್ನು ಕೊಡುವವರ ಉಪಯೋಗಾರ್ಥವೂ ಅಂತಾ ನೀರನ್ನು ಬೇಕಾಗಿರುವ ಯಿತರ ಕೆಲಸಗಳಿಗೋಸ್ಕರವೂ ಸಾಕಾದಷ್ಟು ಪ್ರಮಾಣವುಳ್ಳ ಒಳ್ಳೇ ನೀರನ್ನು ತಮ್ಮ ಕೊಳವಿಗಳಲ್ಲಿಯೂ, ಮುಖ್ಯವಾದ ಕೊಳವಿಗಳಲ್ಲಿಯೂ ಸರ್ವದಾ ಯಿಟ್ಟು ಸಂರಕ್ಷಿಸತಕ್ಕದ್ದು. ಇದು ಅಲ್ಲದೇ ಮಧ್ಯಾಹ್ನಾತ್ಪೂರ್ವ ಐದು ಘಂಟೆಗಳಿಗೂ ಮಧ್ಯಾಹ್ನಾತ್ಪರ ಎಂಟು ಘಂಟೆಗಳಿಗೂ ಮಧ್ಯದಲ್ಲಿ ಯಲ್ಲಾ ಕಾಲಗಳಲ್ಲಿ ನೀರು ತರಲ್ಪಟ್ಟಿರುವ ಯಲ್ಲಾ ಮನೆಗಳಲ್ಲಿಯೂ ಸ್ಥಳಗಳಲ್ಲಿಯೂ ನೀರು ಉಕ್ಕುವದಕ್ಕೆ ಸಾಕಾದಷ್ಟು ಪ್ರಮಾಣ ವುಳ್ಳ ನೀರನ್ನು ಕೊಳವಿಗಳಲ್ಲಿಯೂ ಮುಖ್ಯವಾದ ಕೊಳವಿಗಳಲ್ಲಿಯೂ ಯಿಟ್ಟು ಸಂರಕ್ಷಣೇ ಮಾಡತಕ್ಕದ್ದು.

ತೆರಿಗೆಯನ್ನು ಸಲ್ಲಿಸದೆ ಅಶ್ರದ್ಧೆ ಮಾಡಿದ ಪಕ್ಷದಲ್ಲಿ ನೀರು ನಿಲ್ಲಿಸಲ್ಪಡಬಹುದು.

206. ನೀರು ಕೊಡಲ್ಪಟ್ಟಯಾವ ಮನುಷ್ಯನಾಗಲಿ ನೀರಿನ ತೆರಿಗೆ ಸಲ್ಲಿಸಬೇಕಾದ ಯಾವದಾದರೂ ಕಾಲ ದಲ್ಲಿ ಅದನ್ನು ಸಲ್ಲಿಸದೆ ಅಶ್ರದ್ಧೆ ಮಾಡಿದ ಪಕ್ಷದಲ್ಲಿ ಅಥವಾ ತನಗೆ ಕೊಡಲ್ಪಟ್ಟ ನೀರನ್ನು ವ್ಯರ್ಥವಾಗುವಂತೆ ಯಾ ದುರ್ವಿನಿಯೋಗವಾಗುವಂತೆ ಮಾಡಿದ ಪಕ್ಷದಲ್ಲಿ ಕಮ್ಮಿಷನರುಗಳು ಅಂತಾ ತೆರಿಗೆ ಯಾವದರ ವಿಷಯ ದಲ್ಲಿ ಸಲ್ಲಿಸಲ್ಪಡಬೇಕಾಗಿದೆಯೋ ಅಥವಾ ಯಾವದರಲ್ಲಿ ಅಂಥಾ ವ್ಯರ್ಥ ಅಥವಾ ದುರ್ವಿನಿಯೋಗ ಸಂಭವಿಸಿ ಯಿರು ತ್ತೋ ಆ ಮನೆಯ ಒಳಕ್ಕೆ ಹಾಯದಂತೆ ಅಂಥಾ ಮನೆಯ ಒಳಕ್ಕೆ ಹೋಗುವ ಕೊಳವಿಯನ್ನು ಕತ್ತರಿಸಿಬಿಡು ವದರ ದೆಶೆಯಿಂದಲಾಗಲಿ ಕಮ್ಮಿಷನರುಗಳಿಗೆ ಯುಕ್ತವೆಂದು ತೋರುವ ಯಿತರ ತರಹಾದಿಂದಲಾಗಲಿ ನೀರನ್ನು ನಿಲ್ಲಿ ಸಿಬಿಟ್ಟು ನೀರುಹಾಯದಂತೆ ನಿಲ್ಲಿಸುವಿಕೆಯನ್ನು ಕುರಿತು ಖರ್ಚುಗಳನ್ನ ಅಂತಾ ಮನುಷ್ಯನಿಂದ ಬರಮಾಡಿಕೊಳ್ಳ ಬಹುದು.

ಕಟ್ಟುಗಲಸಗಳಿಗೆ ಕೆಡುಕುಮಾಡುವಿಕೆ ಅಥವಾ ನೀರು ಹಾಯದಂತೆ, ಆಟಂಕ ಪಡಿಸುವಿಕೆ ಅಥವಾ ಹಿಂದಿರಿಗಿಸುವಿಕೆ.

207. ಕಮ್ಮಿಷನರುಗಳದಾಗಿರುವಂತಾ ಅಥವಾ ಅವರ ವಿಚಾರಣೆ ಕೆಳಗೆ ಅಥವಾ ಅಧಿಕಾರದ ಕೆಳಗೆ ಇರುವ ಅಥವಾ ಈ ಕಾನೂನನ್ನು ಅನುಸರಿಸಿ ಕಟ್ಟಲ್ಪಟ್ಟ ಅಥವಾ ಯಿರುತ್ತಿರುವ ಅಥವಾ ಸಂರಕ್ಷಿಸಲ್ಪಟ್ಟ ಯಾವದಾದರೂ ದ್ವಾರಯಂತ್ರವು ಬಿರಡೆ ಮುಖ್ಯವಾದ ಕೊಳವಿಅಥವಾ ಕೊಳವಿ ಯಿವುಗಳನ್ನು ಬುದ್ಧಿಪೂರ್ವಕವಾಗಿಯಾ ಗಲಿ ಅಜಾಗ್ರತೆಯಾಗಿಯಾಗಲಿ ಮುರದು ಹಾಕುವ ನಷ್ಟಪಡಿಸುವ ಅಥವಾ ತೆರಿಯುವ ಅಥವಾ ಕಮ್ಮಿಷನರುಗಳಿಗೆ ಶೇರಿರುವ ಅಥವಾ ಅವರ ವಿಚಾರಣೆ ಕೆಳಗೆ ಅಥವಾ ಅವರ ಅಧಿಕಾರದ ಕೆಳಗೆ ಯಿರುವ ಯಾವದಾದರೂ ನೀರಿನ ಎಂತ್ರದೊಳಗಿನಿಂದಲಾದರೂ ಅಥವಾ ಅಂಥಾ ನೀರಿನ ಯಂತ್ರಗಳಿಗೆ ಯಾವದರ ಒಳಗಣಯಿಂದ ನೀರು ಬರುತ್ತವೆಯೋ

ಯಾವದಾದರೂ ಅಂತಾ ನೀರಿನ ಒಳಗಿನಿಂದ ಅಥವಾ ಕಾಲಿವೆಯೊಳಗಿನಿಂದಲಾಗಲಿ ನೀನು ಅನ್ಯಾಯವಾಗಿ ಹಾಯುವ ಹಾಗೆ ಮಾಡುವ ತೆಗೆದುಕೊಂಡು ಹೋಗುವ ಹಿಂದಿರಿಗಿಸುವ ಅಥವಾ ತೆಗೆದುಕೊಳ್ಳುವ ಯಾವ ಮನುಷ್ಯನಾದರೂ ಅಂತಾ ಪ್ರತಿ ತಪ್ಪಿತಕ್ಕೂ ಐವತ್ತು ರೂಪಾಯಿಗಳಿಗೆ ಮೀರದ ಮೊಬಲಗನ್ನೂ ಲಿಖಿತರೂಪಕವಾಗಿ ಅದರ ಕುರಿತು ನೋಟಿಸ ಕೊಡಲ್ಪಟ್ಟ ತರುವಾಯ ಆ ತಪ್ಪಿತ ನಡಿಸಲ್ಪಡುತ್ತಿರುವ ಪ್ರತಿದಿನಕ್ಕೂ ಇಪ್ಪತ್ತು ರೂಪಾಯಿಗಳಿಗೆ ಮೀರದ ಹೆಚ್ಚು ಜುಲ್ಮಾನೆಯನ್ನು ದಂಡವಾಗಿ ತೆತ್ತುಕೊಡತಕ್ಕದ್ದು.

ನೀರಿನ ತೆರಿಗೆಗಳನ್ನು ನೀರನ್ನು ಸರಬರಾಯಿ ಮಾಡುವ ದೆಸೆಯಿಂದ ತೆಗೆದುಕೊಳ್ಳಲ್ಪಡುವ ಹಣವನ್ನು ವಿನಿಯೋಗ ಪಡಿಸುವಿಕೆ.

208. ನೀರನ್ನು ಸರಬರಾಯಿ ಮಾಡುವದಕ್ಕೋಸ್ಕರ ಅಥವಾ ಕೆಲಸಗಳನ್ನು ಮಾಡುವದಕ್ಕೋಸ್ಕರ ಜಮಾಯಿಸಲ್ಪಟ್ಟು ತೆಗೆದುಕೊಳ್ಳಲ್ಪಟ್ಟ ಅಥವಾ ಬರಮಾಡಿಕೊಳ್ಳಲ್ಪಟ್ಟ ದರೋಬಸ್ತು ತೆರಿಗೆಗಳನ್ನು ಹಣಗಳನ್ನು ಅವುಗಳಿಗೆ ಸಂಬಂಧಪಟ್ಟ ಅಥವಾ ನೀರಿನ ಸರಬರಾಯಿ ಮಾಡುವದಕ್ಕೆ ಸಂಬಂಧಪಟ್ಟ ಯಾವದಾದರೂ ವಿಷಯವಾದ ದರೋಬಸ್ತು ಜುರ್ಮಾನೆಗಳು ಅಥವಾ ದಂಡಗಳನ್ನು ಸದರೀ ನೀರಿನ ಯಂತ್ರಗಳನ್ನು ಮಾಡುವದನ್ನು ಕುರಿತಂತಾ ಮತ್ತು ಸಂರಕ್ಷಿಸುವದನ್ನು ಕುರಿತಂತಾ ಖರ್ಚುಗಳನ್ನು ಸಲ್ಲಿಸುವದರಲ್ಲಿಯೂ ಸದರೀ ನೀರಿನ ಯಂತ್ರಗಳಗೋಸ್ಕರ ಸಾಲವಾಗಿ ತೆಗೆದುಕೊಳ್ಳಲ್ಪಟ್ಟ ಹಣವಿಗೆ ಬಡ್ಡಿ ಸಲ್ಲಿಸುವದರಲ್ಲಿಯೂ, ಆ ಬಗ್ಯೆ ಆದ ಸಾಲಗಳನ್ನು ತೀರಿಸುವದರಲ್ಲಿಯೂ ಅಥವಾ ನೀರನ್ನು ಸರಬರಾಯಿ ಮಾಡುವದಕ್ಕೆ ಸಂಬಂಧಪಟ್ಟ ಯಾವದೋ ಬೇರೆ ಮತ್ತೊಂದು ಕಾರ್ಯಕ್ಕೋಸ್ಕರವೂ ವಿನಿಯೋಗಿಸಲ್ಪಡತಕ್ಕದ್ದು. ಮತ್ತು ಆ ತರುವಾಯ ಹೆಚ್ಚಾಗಿ ಏನಾದರೂ ಸ್ವತ್ತು ಇದ್ದ ಪಕ್ಷದಲ್ಲಿ ಅದನ್ನು ನೀರಿನ ಸರಬರಾಯಿ ಮಾಡುವದಕ್ಕೋಸ್ಕರವಾಗಿ ಹಾಕಲ್ಪಟ್ಟ ರಿವಾಜುಗಳನ್ನು ತಗ್ಗಿಸುವದರಲ್ಲಿಯೂ ವಿನಿಯೋಗ ಪಡಿಸತಕ್ಕದ್ದು.

ಕೆಲವು ಸಂಗತಿಗಳಲ್ಲಿ ಸ್ವತ್ತುಕರ್ತನಮೇಲೆ ತೆರಿಗೆ ದಾಖಲ್ಮಾಡುವಿಕೆ.

209. ಯಾವದಾದರೂ ಗೃಹ ಅಥವಾ ಮನೆ ಪ್ರತ್ಯೇಕವಾದ ವಗೆತನದವರ ಅನುಭವದಲ್ಲಿರುವ ಅಂತಸ್ತುಗಳಾಗಿ ಕೊಠಡಿಗಳಾಗಿ ಅಥವಾ ಭಾಗಗಳಾಗಿ ವಿಭಾಗಿಸಲ್ಪಟ್ಟು ಇದ್ದ ಪಕ್ಷದಲ್ಲಿಯೂ ಯಾವುಗಳ ಸಾಲೀಯಾನಾ ಕಿಮ್ಮತ್ತು ನೂರು ರೂಪಾಯಿಗಳಿಗಿಂತಾ ಕಮ್ಮಿಯೂ ಇರುತ್ತದೋ ಅಂತಾ ದರೋಬಸ್ತು ಗೃಹಗಳ ಸಂಗತಿಗಳಲ್ಲಿ ಅಥವಾ ಮನೆಗಳ ಸಂಗತಿಗಳಲ್ಲಿಯೂ ಅಂತಾ ಗೃಹದ ಅಥವಾ ಮನೆಯ ಸ್ವತ್ತುಕರ್ತ ಅಥವಾ ಅದರ ಸ್ವಾಧೀನಗಾರನು ಅವುಗಳಲ್ಲಿ ವಾಸ ಮಾಡದೆ ಇದ್ದಾಗ್ಯೂ ಆತನಮೇಲೆ ತೆರಿಗೆ ದಾಖಲ್ಮಾಡುವದಕ್ಕೂ, ದೀವಿಗೆಗಳನ್ನು ಬೆಳಗಿಸುವದಕ್ಕೋಸ್ಕರವೂ ನೀರಿಗೋಸ್ಕರವೂ ಅವುಗಳಮೇಲೆ ದಾಖಲ್ಮಾಡಿದ ತೆರಿಗೆಗಳನ್ನು ಆತನ ಬಳಿಯಿಂದ ಬರಮಾಡಿಕೊಳ್ಳುವದಕ್ಕೂ ಕಮ್ಮಿಷನರಗಳು ಅಧಿಕಾರವುಳ್ಳವರಾಗಿರತಕ್ಕದ್ದು.

ದೀವಿಗೆಗಳನ್ನು ಬೆಳಗಿಸುವದಕ್ಕೂ ನೀರನ್ನು ಸರಬರಾಯಿ ಮಾಡುವದಕ್ಕೂ ತೆರಿಗೆಗಳು.

210. ದೀವಿಗೆಗಳನ್ನು ಬೆಳಗಿಸುವದಕ್ಕೂ ನೀರನ್ನು ಸರಬರಾಯಿ, ಮಾಡುವದಕ್ಕೂ ತೆರಿಗೆಗಳು ಈ ಕಾನೂನಿನ 63ರ ಲಾಗಾಯಿತು 90ರ ವರಿಗೆ ಯರಡನ್ನು ಸೇರಿಸಿಕೊಂಡು ಮಧ್ಯದಲ್ಲಿರುವ ಸೆಕ್ಷನ್‌ಗಳ ದೆಸೆಯಿಂದ ವಿಧಿಸಲ್ಪಟ್ಟ ಪ್ರಕಾರ ನಿಶ್ಚೈಸಲ್ಪಡತಕ್ಕದ್ದು. ನಿರ್ಣಯಿಸಲ್ಪಡತಕ್ಕದ್ದು ಮತ್ತು ಬರಮಾಡಿಕೊಳ್ಳಲ್ಪಡತಕ್ಕದ್ದು. ಆ ಸೆಕ್ಷನ್‌ಗಳ ದೆಸೆಯಿಂದ ನಿರ್ಣಯಿಸಲ್ಪಟ್ಟ ಕಲಂಗಳಲ್ಲಿ ಸಲ್ಲಿಸಲ್ಪಡತಕ್ಕದ್ದು.

ಜನನ ಮರಣಗಳನ್ನು ರಿಜಿಸ್ಟರ್ ಮಾಡುವಿಕೆ, ಮತ್ತು ಜನಸಂಖ್ಯೆಯ ಲೆಖ್ಖವನ್ನು ಯೇರ್ಪಾಡು ಮಾಡುವಿಕೆ.

ಕಮ್ಮಿಷನರಗಳು ಜನನಮರಣಗಳ ರಿಜಿಸ್ಟರನ್ನು ಇರಿಸತಕ್ಕದ್ದು, ಮತ್ತು ರಿಜಿಸ್ಟ್ರಾಗಳನ್ನು ಮೊಕರರು ಮಾಡತಕ್ಕದ್ದು.

211 ಕಮ್ಮಿಷನರುಗಳು ಬೆಂಗಳೂರು ಷಹರ ಸರಹದ್ದುಗಳೊಳಗೆ ಸಂಭವಿಸುವ ಜನನ ಮರಣಗಳ ಒಂದು ರಿಜಿಸ್ಟರನ್ನು ತಮ್ಮ ಆಫೀಸಿನಲ್ಲಿ ಇರಿಸತಕ್ಕದ್ದು. ಮತ್ತು ಇದಕ್ಕಾಗಿ ತಮಗೆ ಯುಕ್ತವೆಂದು ತೋರುವಂಥಾ ಡಿಸ್ಟ್ರಿಕ್ಟುಗಳಾಗಿಯೂ, ತಮಗೆ ಯುಕ್ತವೆಂದು ತೋರುವಷ್ಟು ಡಿಸ್ಟ್ರಿಕ್ಟುಗಳಾಗಿಯೂ, ಸದರೀ ಷಹರನ್ನು ವಿಭಾಗಿಸತಕ್ಕದ್ದು ಮೇಲಾಗಿ ಅಂಥಾ ಪ್ರತಿ ಡಿಸ್ಟ್ರಿಕ್ಟಿಗೂ, ಅಂಥಾ ಡಿಸ್ಟ್ರಿಕ್ಟಿನ ಒಳಗೆ ಸಂಭವಿಸುವ ಜನನ ಮರಣಗಳ ರಿಜಿಸ್ಟ್ರಗಿರತಕ್ಕದ್ದಕ್ಕೆ ಒಬ್ಬ ಮನುಷ್ಯನನ್ನು ಮೊಕರರ್ಮಾಡತಕ್ಕದ್ದು.

ಪ್ರತಿ ರಿಜಿಸ್ಟ್ರಾರನ್ನು ತನ್ನ ಡಿಸ್ಟ್ರಿಕ್ಟಿನ ಒಳಗೆ ವಾಸವಾಗಿ ಯಿರತಕ್ಕದ್ದು. ರಿಜಿಸ್ಟ್ರಾರುಗಳ ಪಟ್ಟಿಯನ್ನು ಪ್ರಸಿದ್ಧ ಪಡಿಸತಕ್ಕದ್ದು ವಗೈರೆ.

212. ಪ್ರತಿ ರಿಜಿಸ್ಟ್ರಾರನ್ನು ತಾನು ಯಾವ ಡಿಸ್ಟ್ರಿಕ್ಟಿಗೆ ರಿಜಿಸ್ಟ್ರಾರಾಗಿ ಇರುತ್ತಾನೋ ಅಂಥಾ ಡಿಸ್ಟ್ರಿಕ್ಟಿನ ಒಳಗೆ ವಾಸವಾಗಿ ಇರತಕ್ಕದ್ದು. ಮತ್ತು ತಾನು ಮೊಕರರ್ಮಾಡಲ್ಪಟ್ಟ ಫಲಾನೆ ಡಿಸ್ಟ್ರಿಕ್ಟಿನ "ಜನನಮರಣಗಳ ರಿಜಿಸ್ಟ್ರಾರು" ಯೆಂಬ ಮಾತುಗಳ ಸಹಿತ ತನ್ನ ಹೆಸರನ್ನು ತನ್ನ ಸ್ವಂತ ವಾಸದ ಮನೆಯ ಹೊರಗಿನ ಬಾಗಲಿನ ಮೇಲಾಗಲಿ ಅದರ ಸಮೀಪದಲ್ಲಾಗಲಿ ಬಾದು ಬಹಿರಂಗವಾದ ಸ್ಥಳದಲ್ಲಿ ಅಂಟಿಸಲ್ಪಡುವಂತೆ ಮಾಡಿಸತಕ್ಕದ್ದು. ಮೇಲಾಗಿ ಕಮಿಷ್ನರುಗಳು, ಷಹರ್‌ನಲ್ಲಿರುವ ಜನನ ಮರಣಗಳ ಪ್ರತಿ ರಿಜಿಸ್ಟ್ರಾರಿನ ಹೆಸರನ್ನೂ ವಾಸಸ್ಥಳವನ್ನೂ ನಮೂದಿಸಿರುವ ಒಂದು ಪಟ್ಟಿಯೂ ಛಾಪೆ ಹಾಕಲ್ಪಡುವಂತೆಯೂ ಪ್ರಸಿದ್ಧ ಗಡಿಸಲ್ಪಡುವಂತೆಯೂ ಮಾಡತಕ್ಕದ್ದು.

ಕಮಿಷನರಗಳು ರಿಜಿಸ್ಟರ್ ಪುಸ್ತಕಗಳನ್ನು ತಯಾರುಮಾಡಿಸಿ ನಂಬರುಗಳನ್ನು ಹಾಕಿಸಿ ಇರಿಸಿಕೊಳ್ಳತಕ್ಕದ್ದು.

213. ಕಮಿಷನರಗಳು ಷಹರಿನಲ್ಲಿ ಸಂಭವಿಸುವ ಯೆಲ್ಲಾ ಜನನಮರಣಗಳನ್ನು ದಾಖಲ್ಮಾಡುವದಕ್ಕಾಗಿ ಈ ಕಾನೂನಿಗೆ ಶೇರಿಸಲ್ಪಟ್ಟಿರುವ (K) (L) ಗುರ್ತುಗಳುಳ್ಳ ಷೆಡ್ಯೂಲ್ ಪಟ್ಟಿಗಳಲ್ಲಿ ವಿಧಿಸಲ್ಪಟ್ಟಿರುವ ನಮೂನೆಗಳ ಪ್ರಕಾರ ಸಾಕಾದಷ್ಟು ಸಂಖ್ಯೆವುಳ್ಳ ರಿಜಿಸ್ಟರ್ ಪುಸ್ತಕಗಳನ್ನು ತಯಾರು ಮಾಡುವಂತೆಯೂ, ಛಾಪೆ ಹಾಕುವಂತೆಯೂ ಮಾಡಿಸತಕ್ಕದ್ದು. ಮತ್ತು ಅಂಥಾ ಪುಸ್ತಗಳ ಪುಟಗಳಿಗೆ, ಆರಂಭ ಮೊದಲು ಅಂತ್ಯದವರಿಗೆ ಕ್ರಮವಾಗಿ ನಂಬರುಗಳನ್ನು ಹಾಕಿಸತಕ್ಕದ್ದು.

ರಿಜಿಸ್ಟ್ರಾರು ಜನನ ಮರಣಗಳನ್ನು ಕುರಿತು ತಾವು ತಿಳಿದುಕೊಂಡು ರಿಜಿಸ್ಟರ್ ಮಾಡತಕ್ಕದ್ದು.

214. ಪ್ರತಿ ರಿಜಿಸ್ಟ್ರಾರನ್ನೂ ಈ ಕಾನೂನು ಜಾರೀಲಿ ಬಂದನಂತರ ತಮ್ಮ ಡಿಸ್ಟ್ರಿಕ್ಟಿನಲ್ಲಿ ಸಂಭವಿಸುವ ಪ್ರತಿ ಜನನವನ್ನು ಕುರಿತನ್ನೂ ಪ್ರತಿ ಮರಣವನ್ನು ಕುರಿತನ್ನೂ ಜಾಗರೂಕತೆಯಿಂದ ತಿಳಿದುಕೊಂಡು ಆಯಾಯ ಸಂಗತಿಗಳಿಗೆ ತಕ್ಕಹಾಗೆ ಅದಕ್ಕೆ ಮುಂಚೆ ರಿಜಿಸ್ಟರ್ ಮಾಡಲ್ಪಡದೇ ಇರುವ ಪ್ರತಿ ಜನನವನ್ನು ಕುರಿತನ್ನೂ ಪ್ರತಿ ಮರಣವನ್ನು ಕುರಿತನ್ನೂ ಸದರೀ (K) (L) ಗುರ್ತುಗಳುಳ್ಳ ಷೆಡ್ಯೂಲ್ ಪಟ್ಟಿಗಳಲ್ಲಿ ಇರುವ ನಮೂನೆಗಳ ಪ್ರಕಾರ ರಿಜಿಸ್ಟರ್ ಮಾಡಲ್ಪಡತಕ್ಕ ವಿವರಗಳು ರುಸುಮಾಗಲೀ ಬಹುಮಾನವಾಗಲೀ ಯಿಲ್ಲದೆ, ಆ ಜನನ ಮರಣಗಳು ಸಂಭವಿಸಿದ ತರುವಾಯ ಅನುಕೂಲವಾದಷ್ಟು ತ್ವರೆಯಲ್ಲಿ ಅವುಗಳನ್ನು ಕುರಿತು ತಿಳಿದುಕೊಂಡು ರಿಜಿಸ್ಟರ್ ಮಾಡತಕ್ಕದ್ದು. ಅಂತಾ ಪ್ರತಿ ದಾಖಲನ್ನು ಆ ಪುಸ್ತಕದ ಆದಿ ಮೊದಲು ಕೊನೆಯವರಿಗುನ್ನೂ ಕ್ರಮವಾಗಿ ಮಾಡಲ್ಪಡತಕ್ಕದ್ದು.

ಜನನಗಳನ್ನು ಕುರಿತ ವರ್ತಮಾನವನ್ನು ಒಂದು ವಾರದ ಒಳಗಾಗಿ ತಿಳಿಯಪಡಿಸತಕ್ಕದ್ದು.

215. ಬೆಂಗಳೂರು ಷಹರಿನ ಸರಹದ್ದುಗಳೊಳಗೆ ಹುಟ್ಟಿದ ಪ್ರತಿ ಮಗುವಿನ ತಂದೆಯಾಗಲೀ ತಾಯಿಯಾಗಲೀ ತಂದೆಯುನ್ನೂ ತಾಯಿಯುನ್ನೂ ಸತ್ತುಹೋದ, ಕಾಯಿಲೆಯಾಗಿದ್ದ, ಗೈರು ಹಾಜರಾಗಿದ್ದ, ಅಥವಾ ಅಶಕ್ತರಾಗಿದ್ದ ಸಂಗತಿಗಳಲ್ಲಿ ಆ ಮಗುವು ಹುಟ್ಟಿದಾಗ ಹಾಜರಾಗಿದ್ದ ಅಥವಾ ಹಾಜರುಬಾಷೀ ಮಾಡಿದ ಯಾರಾದರೂ ಒಬ್ಬ ಮನುಷ್ಯನು ಅಂತಾ ಪ್ರತಿ ಜನನವೂ ಸಂಭವಿಸಿದ ದಿನದ ತರುವಾಯ ಒಂದು ವಾರದ ಒಳಗಾಗಿ ಅಂತಾ ಮಗುವಿನ ಜನನ ವಿಷಯವನ್ನು ತಿಳಿದುಕೊಳ್ಳುವಂತೆಯೂ ರಿಜಿಸ್ಟರ್ ಮಾಡಲ್ಪಡುವಂತೆಯೂ ಇದರ ದೆಶೆಯಿಂದ ಕೋರಲ್ಪಟ್ಟ ಆಯಾಯ ವಿವರಗಳನ್ನು ಕುರಿತು ಆತನಾಗಲಿ ಆಕೆಯಾಗಲಿ ಅರಿತು ಇರುವ ಮಟ್ಟಿಗೂ ನಂಬುವ ಮಟ್ಟಿಗೂ ಆ ಡಿಸ್ಟ್ರಿಕ್ಟಿನ ರಿಜಿಸ್ಟ್ರಾರ್ ಯವರಿಗೆ ವರ್ತಮಾನವನ್ನು ತಿಳಯಪಡಿಸತಕ್ಕದ್ದು. ಈ ಸೆಕ್ಷನ್ ಮೇರಿಗೆ ಒಬ್ಬ ರಿಜಿಸ್ಟ್ರಾರ್‌ಯವರಿಗೆ ವರ್ತಮಾನವನ್ನು ತಿಳಿಯಪಡಿಸುವದು ತನ್ನ ಕೆಲಸವಾಗಿ ಇರುವಂತಾ ಮತ್ತು ಅಂತಾ ವರ್ತಮಾನವನ್ನು ತಿಳಿಯಪಡಿಸುವದು ಇಲ್ಲವೆಂದು ನಿರಾಕರಿಸುವ ಅಥವಾ ತಿಳಿಯಪಡಿಸದೆ ಅಶ್ರದ್ಧೆ ಮಾಡುವಂತಾ ಯಾವ ಮನುಷ್ಯನಾದರೂ ಪ್ರತಿ ತಕ್ಸೀರಿಗೂ ಐವತ್ತು ರೂಪಾಯಿಗಳಿಗೆ ಮೀರದ ಜುಲ್ಮಾನೆಗೆ ಪಾತ್ರನಾಗತಕ್ಕದ್ದು.

ಮರಣವನ್ನು ಕುರಿತ ವರ್ತಮಾನವು ಯಾವ ಪ್ರಕಾರ ತಿಳಿಸಲ್ಪಡತಕ್ಕದ್ದು.

216. ಸದರೀ ಷಹರಿನ ಸರಹದ್ದುಗಳೊಳಗೆ ಮೃತಪಟ್ಟ ಪ್ರತಿ ಮನುಷ್ಯನ ಮರಣ ಕಾಲದಲ್ಲಿ ಹಾಜರಾಗಿದ್ದ ಅಥವಾ ಆತನು ಕಾಯಿಲೆಯಾಗಿದ್ದು ಮೃತಪಡುವದಕ್ಕೆ ಮುಂಚೆ ಹಾಜರುಬಾಷೀ ಮಾಡಿದ ಮನುಷ್ಯರಲ್ಲಿ ಯಾರಾದರೂ ಒಬ್ಬನಾಗಲೀ ಅಂಥಾ ಮನುಷ್ಯರೆಲ್ಲರೂ ಸತ್ತುಹೋದ ಕಾಯಿಲೆ ಆಗಿದ್ದ, ಅಶಕ್ತರಾಗಿದ್ದ ಅಥವಾ ವರ್ತಮಾನವನ್ನು ತಿಳಿಯಪಡಿಸದೇ ತಪ್ಪಿಹೋದ ಸಂಗತಿಗಳಲ್ಲಿ ಆ ಗೃಹದ ಯಾ ಮನೆಯ ಸ್ವಾಧೀನಗಾರನಾಗಲಿ ಮೃತಪಟ್ಟ ಮನುಷ್ಯನು ಸ್ವಾಧೀನಗಾರನಾಗಿದ್ದ ಸಂಗತಿಯಲ್ಲಿ ಅಂಥಾ ಮರಣ ಸಂಭವಿಸಿದ ಗೃಹದಲ್ಲಿ

ಯಾ ಮನೆಯಲ್ಲಿ ವಾಸವಾಗಿರುವವರಲ್ಲಿ ಯಾರಾದರೂ ಒಬ್ಬರಾಲಿ ಅಂತಾ ಮರಣವು ಸಂಭವಿಸಿದ ದಿನದ ತರುವಾಯ ಯೆಂಟು ದಿನಗಳೊಳಗಾಗಿ ಅಂತಾ ಮನುಷ್ಯನ ಮರಣದ ವಿಷಯುವಾಗಿ ತಿಳಿಯಪಡಿಸುವಂತೆಯೂ, ರಿಜಿಸ್ಟರ ಮಾ ಡಲ್ಪಡುವಂತೆಯೂ, ಇವರಿಂದ ಕೋರಲ್ಪಟ್ಟ ಆಯಾಯ ವಿವರಗಳನ್ನು ಕುರಿತು ಆತನಾಗಲೀ ಆಕೆಯಾಗಲೀ ಅರಿತು ಇರುವ ಮಟ್ಟಿಗೆ ಅಥವಾ ನಂಬುವ ಮಟ್ಟಿಗೆ ಆ ಡಿಸ್ಟ್ರಿಕ್ಟು ರಿಜಿಸ್ಟರ್‌ದಾರರಿಗೆ ವರ್ತಮಾನವನ್ನು ತಿಳಿಯಪಡಿಸತಕ್ಕದ್ದು. ಸದರೀ ಷಹರಿನ ಸರಹದ್ದುಗಳೊಳಗೆ ಮೃತಪಟ್ಟ ಯಾವ ಮನುಷ್ಯನಿಗಾದರೂ ಅಪರ ಕ್ರಿಯೆಗಳನ್ನು ನಡಿಸುವ ಅಥವಾ ನೋಡುವ ಪ್ರತಿ ಮನುಷ್ಯನನ್ನೂ ನಡಿಸುವ ಸದರೀ ಆಯಾಯ ವಿವರಗಳ ವಿಷಯುವಾಗಿ ತನಗೆ ತಿಳಿದು ಇರುವ ವರ್ತಮಾನವನ್ನು ಕೋರಲ್ಪಟ್ಟಾಗ ರಿಜಿಸ್ಟ್ರಾರರವರಿಗಾಗಲಿ, ಅವರಿಂದ ಅಧಿಕಾರ ಪಡೆದ ಯಾವ ಮನುಷ್ಯನಿಗಾಗಲಿ ತಿಳಿಯ ಪಡಿಸುವದು ಆತನ ಕೆಲಸವಾಗಿ ಇರತಕ್ಕದ್ದು. ಯಾವ ಮನುಷ್ಯನಾದರೂ ಅಂತಾ ವರ್ತಮಾನವನ್ನು ತಿಳಿಯಪಡಿಸದೆ ಅಶ್ರದ್ಧೆ ಮಾಡಿದರೂ ಅಥವಾ ನಿರಾಕರಿಸಿದರೂ ಐವತ್ತು ರೂಪಾಯಿಗಳಿಗೆ ಮೀರದ ಜುಲ್ಮಾನೆಗೆ ಪಾತ್ರನಾಗತಕ್ಕದ್ದು.

ವರ್ತಮಾನವನ್ನು ತಿಳಿಯ ಪಡಿಸುವ ಮನುಷ್ಯನು ರಿಜಿಸ್ಟರ ಪುಸ್ತಕದಲ್ಲಿ ದಸ್ಕತ್ತು ಮಾಡತಕ್ಕದ್ದು.

217. ಈ ಕಾನೂನಿನ ಪ್ರಕಾರ ಜನನಗಳ ಅಥವಾ ಮರಣಗಳ ಯಾವದಾದರೂ ರಿಜಿಸ್ಟರ ಪುಸ್ತಕದಲ್ಲಿ ಇರುವ ವರ್ತಮಾನವು ಯಾರಿಂದ ತಿಳಿಸಲ್ಪಟ್ಟಿದೆಯೋ ಅಂಥಾ ಪ್ರತಿ ಮನುಷ್ಯನನ್ನೂ ಆತನು ಬರಿಯುವದಕ್ಕೆ ಕಲಿತವನಾದರೆ ತನ್ನ ಹೆಸರನ್ನು ತರಹೇದಾರಿಯನ್ನು ವಾಸಸ್ಥಳವನ್ನೂ ಆ ರಿಜಿಸ್ಟರ ಪುಸ್ತಕದಲ್ಲಿ ಬರೆದು ದಸ್ಕತು ಮಾಡತಕ್ಕದ್ದು. ಆತನು ಬರಿಯಲಾರದವನಾದರೆ, ತನ್ನ ಹೆಸರನ್ನೂ, ತರಹೇದಾರಿಯನ್ನೂ, ವಾಸಸ್ಥಳವನ್ನೂ ಆ ರಿಜಿಸ್ಟರ ಪುಸ್ತಕದಲ್ಲಿ ಬರೆಸಿ ತನ್ನ ನಿಶಾನಿ ಮಾಡತಕ್ಕದ್ದು. ಮೇಲಾಗಿ ಹಾಗೆ ರಿಜಿಸ್ಟರ್ ಮಾಡಲ್ಪಟ್ಟದ್ದು ಯಾವದೂ ಅಂತಾ ಮನುಷ್ಯನು ಹಾಗೆ ಅದರಲ್ಲಿ ದಸ್ಕತು ಮಾಡುವವರಿಗೂ ಅಥವಾ ಅದರಲ್ಲಿ ತನ್ನ ನಿಶಾನಿ ಮಾಡುವವರಿಗೂ ಪೂರ್ಣವಾದ್ದಾಗಿಯಾಗಲಿ ಯಾವದಾದರೂ ಪ್ರಯೋಜನವುಳ್ಳದ್ದಾಗಿಯಾಗಲಿ ಯೆಣಿಸಲ್ಪಡಕೂಡದು.

ವಾಸಸ್ಥರ ಗಣತಿ.

218. ಗವರ್ನಮೆಂಟಿನವರ ಅನುಮತಿಯೊಡನೆ ಕಮ್ಮಿಷನರ್‌ಗಳಿಂದ ಆಗಾಗ್ಯೆ ಹುಕುಂ ಮಾಡಲ್ಪಡುವ ಕಾಲದಲ್ಲಿಯೂ ತರಹೇದಲ್ಲಿಯೂ ಗಣತಿ ಮಾಡಲ್ಪಡುವ ಕಾಲದಲ್ಲಿ ಬೆಂಗಳೂರು ಷಹರಿನ ಸರಹದ್ದುಗಳಲ್ಲಿ ಇರುವ ಮನುಷ್ಯರ ಗಣತಿ ಮಾಡಲ್ಪಡಬೇಕು. ಆದರೆ ಅಂತಾ ಗಣತಿ ಮಾಡುವದಕ್ಕೆ ಪ್ರಾರಂಭಿಸುವದಕ್ಕೆ ಪೂರಾ ಒಂದು ತಿಂಗಳು ಮುಂಚೆ ಅದನ್ನು ಮಾಡಬೇಕೆಂಬ ಉದ್ದೇಶ್ಯವನ್ನು ಕುರಿತುನ್ನೂ ಅದು ಯಾವ ತಾರೀಖಿನಲ್ಲಿ ಅಥವಾ ತಾರೀಖುಗಳಲ್ಲಿ ಅಥವಾ ಯಾವ ತಾರೀಖಿಗೆ ಅಥವಾ ತಾರೀಖುಗಳಿಗೆ ವಳಗಾಗಿ ಮಾಡಬೇಕೆಂದು ಉದ್ದೇಶಿಸಿ ಇರುವದನ್ನು ಕುರಿತುನ್ನೂ ಆವಶ್ಯಕವಾಗಿ ಇರುವ ಸಮಸ್ತ ಇತರ ವಿವರಗಳನ್ನು ಕುರಿತುನ್ನೂ ಒಂದು ನೋಟೀಸು ಮೈಸೂರು ಗೆಜೆಟನಲ್ಲಿಯೂ ಮೈಸೂರು ಮಹಾರಾಜಾ ಸರ್ಕಾರದವರಿಗೆ ಯುಕ್ತವೆಂದು ತೋರುವ ಬೆಂಗಳೂರಿನಲ್ಲಿಯೂ ಇಂಗ್ಲೀಷ ಸಮಾಚಾರ ಪತ್ರಿಕೆಗಳಲ್ಲಿಯೂ ದೇಶಭಾಷೆಯ ಪತ್ರಿಕೆಗಳಲ್ಲಿಯೂ ಪ್ರಸಿದ್ಧ ಪಡಿಸಲ್ಪಡತಕ್ಕದ್ದು.

ಕಮ್ಮಿಷನರಗಳು ಗಣತಿಯನ್ನು ಕುರಿತು ಮೇಲು ವಿಚಾರಣೆ ಮಾಡತಕ್ಕದ್ದು.

219. ಕಮ್ಮಿಷನರುಗಳು, ಅಂತಾ ಗಣತಿ ಮಾಡುವದನ್ನು ಕುರಿತು ಮೇಲ್‌ವಿಚಾರಣೆ ಮಾಡುವದೇ ಅಲ್ಲದೆ ಅಂಥಾ ಗಣತಿ ಮಾಡುವದಕ್ಕೆ ಆವಶ್ಯಕವೆಂದು ತಮಗೆ ತೋರುವ ಗಣತಿದಾರರನ್ನು ಮೊಕರರ್ ಮಾಡಿ, ಸಾಧಾರಣವಾಗಿ ಆವಶ್ಯಕವಾದ ಯೇರ್ಪಾಡುಗಳನ್ನು ಮಾಡತಕ್ಕದ್ದು. ಮೇಲಾಗಿ ಅಂತಾ ಗಣತಿ ವಿಷಯವಾಗಿ ಮುಟ್ಟುವಳಿಯಾದ ವಿಶಿಷ್ಟ ಖರ್ಚುಗಳು ಮ್ಯುನಿಸಿಪಲ್ ಹಣದಿಂದ ಸಲ್ಲಿಸಲ್ಪಡತಕ್ಕದ್ದು.

ಪಟ್ಟಿಗಳನ್ನು ಲೆಖ್ಖಗಳನ್ನು ಸ್ಟೋಪಿ ಸೋಣ.

220. ಈ ಕಾನೂನಿನ ಮೇರಿಗೆ ಮೊಕರರ್ ಮಾಡಲ್ಪಟ್ಟ ಪ್ರತಿ ಗಣತಿದಾರನು ಅಥವಾ ಇತರ ಸಬಾರ್ಡಿನೇಟ ಆಫೀಸರನು ತನಿಗೆ ಮಾಡಲ್ಪಟ್ಟ ಹುಕುಂಗಳ ಮೇರಿಗೆ ಮೈಸೂರು ಮಹಾರಾಜಾ ಸರ್ಕಾರದವರು ಮಂಜೂರು ಮಾಡುವ ನಮೂನೆ ಪ್ರಕಾರವೂ ವಿವರಗಳು ವುಂಟಾಗಿಯೂ ಸದರೀ ಗೃಹದ ಅಥವಾ ವಾಸಸ್ಥಳದ ಶಾವಂದನಿಂದ, ವಾಸಸ್ಥನಿಂದ ಅಥವಾ ಮುಖ್ಯವಾದ ಅನುಭವದಾರನಿಂದ ಕ್ರಮವಾಗಿ ಭರ್ತಿ ಮಾಡಲ್ಪಟ್ಟು ದಸ್ಕತ್ತು ಮಾಡಲ್ಪಡತಕ್ಕ ಒಂದು ಖಾಲೀ ಪಟ್ಟಿಯನ್ನು ಅಥವಾ ಲೆಖ್ಖವನ್ನು ಭರ್ತಿ ಮಾಡಲ್ಪಟ್ಟ ಲೆಖ್ಖಗಳು ಅಥವಾ ಜನಸಂಖ್ಯೆ ಲೆಖ್ಖಗಳನ್ನು ಜಮೆ ಮಾಡುವದಕ್ಕಾಗಿ ನಿರ್ಣಯಿಸಲ್ಪಟ್ಟ ಕಾಲಕ್ಕೆ ಅಥವಾ ನಾಲ್ಕು ದಿನಗಳ ಮುಂಚೆ ತನ್ನ ಡಿವಿಷನಿನ ವಳಗೆ ಇರುವ ಪ್ರತಿ ಗೃಹದಲ್ಲಿ ಅಥವಾ ವಾಸಸ್ಥಳದಲ್ಲಿ ಕೊಡತಕ್ಕದ್ದು.

221. ಆ ಮೇರಿಗೆ ತನ್ನ ವಾಸಸ್ಥಳದಲ್ಲಿ ಇಟ್ಟು ಬಿಡಲ್ಪಟ್ಟ ಯಾವದಾದರು ಅಂತಾ ಪಟ್ಟಿಯನ್ನು ಅಥವಾ ಲೆಕ್ಕವನ್ನು ಸರಿಯಾಗಿ ಭರ್ತಿ ಮಾಡದೆಯೂ ಅದರಲ್ಲಿ ದಸ್ಕತ್ತಾಗಲಿ ನಿಷಾನಿಯಾಗಲಿ ಮಾಡದೆ ಬುದ್ಧಿಪೂರ್ವಕವಾಗಿ ಅಶ್ರದ್ಧೆ ಮಾಡುವ ಅಥವಾ ನಿರಾಕರಿಸುವಂಥಾ, ಆ ಮೇರಿಗೆ ಮಾಡುವಂತೆ ಕೋರಲ್ಪಟ್ಟಾಗ ಗಣಿತಿದಾರನಿಗೆ ಅಥವಾ ಇತರ ಆಫೀಸರಿಗೆ ಅದನ್ನು ವಾಪಸ ಮಾಡದೇ ಅಥವಾ ಅವನಿಗೆ ಬರಿಯಲಿಕ್ಕೆ ತಿಳಿಯದ ಪಕ್ಷಕ್ಕೆ ಆತನಿಗಾಗಿ ಗಣಿತಿದಾರನು ಅದನ್ನು ಭರ್ತಿ ಮಾಡುವದಕ್ಕೆ ಅವಶ್ಯಕವಾಗಿ ಇರುವ ವರ್ತಮಾನವನ್ನು ತಿಳಿಯ ಮಾಡದೆ ಅಶ್ರದ್ಧೆ ಮಾಡುವ ಅಥವಾ ನಿರಾಕರಿಸುವಂಥಾ ಯಾವ ಮನುಷ್ಯನಾದರೂ ೫೦೦ ರೂಪಾಯಿಗೆ ಮೀರದ ಜುರ್ಮಾನೆಗೆ ಪಾತ್ರನಾಗಿ ಇರುವದಲ್ಲದೆ ಸದರೀ ಪಟ್ಟಿಯನ್ನು ಅಥವಾ ಲೆಕ್ಕವನ್ನು ಆತನು ಸರಿಯಾಗಿ ಭರ್ತಿ ಮಾಡಿ ಅದರಲ್ಲಿ ದಸ್ಕತು ಅಥವಾ ನಿಶಾನಿ ಮಾಡುವವರಿಗೂ ಕೈದಿನಲ್ಲಿ ಸಹಿತ ಇಡಲ್ಪಡಬಹುದು, ಆದರೆ ಕೋರಲ್ಪಟ್ಟ ಪಕ್ಷಕ್ಕೆ ಬರಿಯಬಾರದವನಿಗಾಗಿ ದರೋಬಸ್ತು ಪಟ್ಟಿಗಳೂ ಅಥವಾ ಲೆಕ್ಕಗಳೂ ಭರ್ತಿ ಮಾಡುವದು ಗಣಿತಿದಾರನ ಕೆಲಸವಾಗಿ ಇರತಕ್ಕದ್ದು.

ಗೃಹದ ಅನುಭವದಾರನು ವಗೈರೇರು ಕೋರಲ್ಪಟ್ಟ ಸಮಾಚಾರವನ್ನು ತಿಳಿಯಪಡಿಸತಕ್ಕದ್ದು.

ನಿಬಂಧನೆ:

222. ಅಂತಾ ಪಟ್ಟಿಗಳನ್ನು ಅಥವಾ ಲೆಕ್ಕಗಳನ್ನು ಜಮೆ ಮಾಡುವದರಲ್ಲಿ ನಿರ್ಣಯಿಸಲ್ಪಟ್ಟ ಯಾರಾದರೂ ಗಣಿತಿದಾರನು ಅಥವಾ ಇತರ ಸಬಾರ್ಡಿನೇಟ್ ಆಫಿಸರು ಅವುಗಳಲ್ಲಿ ಯಾವದಾದರು ತಪ್ಪಿತವಾಗಿ ಇರುವ ಹಾಗೆಯಾಗಲಿ ಅಥವಾ ಅಯುಕ್ತವಾಗಿ ಭರ್ತಿ ಮಾಡಲ್ಪಟ್ಟ ಹಾಗೆಯಾಗಲೀ ತನಗೆ ಕಾಣಬಂದರೆ ಇಪ್ಪತ್ತು ನಾಲ್ಕು ಘಂಟೆಗಳಿಗಿಂತ ಕಮ್ಮಿ ಆಗದಂತೆಯೂ ನಾಲ್ವತ್ತೆಂಟು ಘಂಟೆಗಳಿಗೆ ಹೆಚ್ಚಾಗದಂತೆಯೂ ನಿರ್ಣಯಿಸಲ್ಪಟ್ಟ ಒಂದು ಕಾಲದ ಒಳಗಾಗಿ ಅದು ಕ್ರಮವಾಗಿ ಭರ್ತಿ ಮಾಡಲ್ಪಡತಕ್ಕದ್ದು. ಅಥವಾ ಸರಿಮಾಡಲ್ಪಡತಕ್ಕದ್ದು, ಯಂಬದಾಗಿ ಕೋರುವ ಲಿಖಿತರೂಪವಾದ ಅಥವಾ ಛಾಪೆ ಹಾಕಲ್ಪಟ್ಟ ಒಂದು ನೋಟೀಸು ಸಮೇತ ಅದು ಯಾವದರೊಂದಿಗೆ ಸಂಬಂಧ ಪಟ್ಟಿರುತ್ತದೋ ಆ ಗೃಹದ ಅಥವಾ ವಾಸಸ್ಥಳದ ಅನುಭವದಾರನಿಗೆ ಅದನ್ನು ವಾಪಸ ಮಾಡತಕ್ಕದ್ದು. ಮೇಲಾಗಿ ಅಂಥಾ ಅನುಭವದಾರನು ಯಾವದಾದರೂ ಅಂತಾ ಪಟ್ಟಿಯನ್ನು ಅಥವಾ ಲೆಕ್ಕವನ್ನು ಆ ಪ್ರಕಾರ ಭರ್ತಿ ಮಾಡದೆ ಅಥವಾ ಸರಿಮಾಡದೆ ಅನಂತರ ತಪ್ಪಿಹೋದ ಪಕ್ಷಕ್ಕೆ ಆತನು ತಕ್ಸೀರು ಸ್ಥಾಪನೆ ಮಾಡಲ್ಪಟ್ಟ ತರುವಾಯ ಇನ್ನೂರು ರೂಪಾಯಿಗಳಿಗೆ ಮೀರದ ಜುರ್ಮಾನೆಗೆ ಪಾತ್ರನಾಗುವದೆ ಅಲ್ಲದೆ ಸದರೀ ಪಟ್ಟಿಯನ್ನು ಅಥವಾ ಲೆಕ್ಕವನ್ನು ಆತನು ಕ್ರಮವಾಗಿ ಭರ್ತಿ ಮಾಡುವವರಿಗೆ ಅಥವಾ ಸರಿಮಾಡುವವರಿಗೆ ಕೈದಿನಲ್ಲಿ ಸಹಿತ ಇಡಲ್ಪಡಬಹುದು.

ಅನುಭವದಾರನು ಲೆಕ್ಕಗಳಲ್ಲಿ ತಪ್ಪು ಇರುವಂತೆ ಕಾಣಬಂದರೆ ಅವುಗಳನ್ನು ತಿದ್ದತಕ್ಕದ್ದು.

223. ದಂಡು ಸಂಬಂಧವಾದ ಯಾವ ಆಫಿಸರಾಗಲೀ, ಹುಚ್ಚರ ಸಂರಕ್ಷಣೆ ಸ್ಥಾನ, ಆಸಪತ್ರಿ, ಯಾ ಬಂದಿ ಖಾನೆ, ಅಥವಾ ಸರ್ವಜನೋಪಯೋಗವಾದ ಯಾ ಖಾನಗೀದಾದ, ಧರ್ಮಾರ್ಥವಾದ ಅಥವಾ ಶಾಸ್ತ್ರ ಸಂಬಂಧವಾದ ಸಂಸ್ಥಾಪನೆಶಾಲೆಯನ್ನು ತನ್ನ ವಶದಲ್ಲಿಟ್ಟುಕೊಂಡಿರುವ ಯಾವ ಮನುಷ್ಯನಾದರೂ, ಹೊಟೇಲಗಳು ಬಾಡಿಗೆಗೆ ಇರುವ ಮನೆಗಳನ್ನು ಇಟ್ಟುಕೊಂಡಿರುವ ಯಾವ ಮನುಷ್ಯರಾದರೂ ಕೋರಲ್ಪಟ್ಟರೆ ತಮ್ಮ ಅಧಿಕಾರದಲ್ಲಿಯಾಗಲಿ ಸ್ವಾಧೀನದಲ್ಲಿಯಾಗಲಿ ಇರುವ ಅಥವಾ ಅಂತಾ ಗಣಿತೀ ಮಾಡುವದಕ್ಕಾಗಿ ನಿರ್ಣಯಿಸಲ್ಪಡುವದಿನಕ್ಕೆ ಅವ್ಯವಹಿತವಾದ ಮುಂದಿನ ದಿನರಾತ್ರಿ ತಮ್ಮ ಮನೆಗಳಲ್ಲಿ ವಾಸಮಾಡುವ ಮನುಷ್ಯರನ್ನು ಲೆಕ್ಕಮಾಡುವದಕ್ಕಾಗಿ ಗಣಿತಿದಾರರಾಗಿ ಕೆಲಸಮಾಡತಕ್ಕದ್ದು. ಗಣಿತಿದಾರನಾಗಿ ಆ ಪ್ರಕಾರ ಕೆಲಸ ಮಾಡುವಂತೆ ಕೋರಲ್ಪಟ್ಟ ಪ್ರತಿ ಮನುಷ್ಯನನ್ನು ಅದಕ್ಕಾಗಿ ಕಮ್ಮಿಷನರಗಳಿಂದ ಲಿಖಿತ ರೂಪಕವಾಗಿ ತನಗೆ ಸಾದರ ಮಾಡಲ್ಪಡುವ ದರೋಬಸ್ತು ಹುಕುಂಗಳನ್ನು ಬರಮಾಡಿಕೊಂಡು ಅವುಗಳ ಮೇರಿಗೆ ನಡದುಕೊಳ್ಳತಕ್ಕದ್ದು.

ಕೋರಲ್ಪಟ್ಟ ಪಕ್ಷದಲ್ಲಿ ದಂಡು ಸಂಬಂಧವಾದಂಥಾ ಆಫಿಸರುನ್ನೂ ಮತ್ತು ಕೆಲವು ಇತರರುನ್ನೂ ಗಣಿತಿದಾರರಾಗಿ ಕೆಲಸಮಾಡತಕ್ಕದ್ದು.

224. ಕಮ್ಮಿಷನರುಗಳು ಅದಕ್ಕಾಗಿ ಸರ್ವೋತ್ಕೃಷ್ಟವೆಂದು ತೋರುವಂತಾ ಮತ್ತು ಗವರ್ನಮೆಂಟಿನವರಿಂದ ಮಂಜೂರು ಆಗುವಂತಾ ಪದ್ಧತಿಗಳ ಮೇರಿಗೂ ತರಹೆಯಲ್ಲಿಯೂ ಮನೆಗಳಿಲ್ಲದ ದರೋಬಸ್ತು ಮನುಷ್ಯರನ್ನೂ ಮತ್ತು ಅಂತಾ ಗಣಿತೀ ಮಾಡುವದಕ್ಕಾಗಿ ನಿರ್ಣಯಿಸಲ್ಪಡುವ ದಿನಕ್ಕೆ ಅವ್ಯವಹಿತವಾದ ಸದರೀ ಮುಂದಿನ ರಾತ್ರೆಯಲ್ಲಿ ರಾತ್ರಿಕೆಲಸದ ಮೇಲೆ ಹೊರಗೆ ಹೋಗಿ ಇದ್ದ ಅಥವಾ ಮತ್ಯಾವ ಇತರ ಕಾರಣಗಳಿಂದ ಆಗಲೀ ಗಣಿತಿದಾರರಿಂದ ಲೆಕ್ಕವಾ

ಮನೆಗಳು ಇಲ್ಲದ ಮನುಷ್ಯರ ಲೆಕ್ಕಗಳು.

ಡಲ್ಪತಕ್ಕ ಯಾವ ಮನೆಯಲ್ಲಾದರೂ ವಾಸಮಾಡದೆ ಇದ್ದ ದರೋಬಸ್ತು ಮನುಷ್ಯರನ್ನೂ ಕುರಿತುನ್ನೂ ಈ ಕಾನೂನುಗಳಂವ ಕೋರಲ್ಪಟ್ಟ ವಿವರಗಳುಳ್ಳ ಲೆಖ್ಖಗಳು ಯೇರ್ಪಾಡಾಗೆ.ವಂತೆ ಮಾಡತಕ್ಕದ್ದು.

ಬೈಲಾಸ್ ಯೆಂಬ ಉಪ ನಿಬಂಧನೆಗಳನ್ನು ಮಾಡತಕ್ಕದ್ದಕ್ಕೆ ಅಧಿಕಾರ.

ಬೈಲಾಸ್ ಯಂಬ ಉಪ ನಿಬಂಧನೆಗಳನ್ನು ಮಾಡುವದಕ್ಕೆ ಕಮ್ಮಿಷನರ್‌ಗಳಿಗೆ ಅಧಿಕಾರ ಉಂಟುಮಾಡಲ್ಪಟ್ಟಿದೆ.

225. ಕಮ್ಮಿಷನರ್‌ಗಳು ತಮ್ಮಿಂದ ನವುಕರಿಯಲ್ಲಿ ಯಿಟ್ಟುಕೊಳ್ಳಲ್ಪಟ್ಟ ಮನುಷ್ಯರು ನಡದುಕೊಳ್ಳುವದನ್ನು ಕುರಿತುನ್ನೂ ಅವರ ಮೇಲೆ ಅಧಿಕಾರವನ್ನು ಚಲಾಯಿಸುವದನ್ನು ಕುರಿತುನ್ನೂ ೧೩೭—೧೭೫—೧೯೪—೧೯೬ ಮತ್ತು ೧೯೧ ಈ ಸೆಕ್ಷನ್‌ಗಳಲ್ಲಿ ವಿವರಿಸಲ್ಪಟ್ಟ ಸ್ಥಳಗಳ ನಿರ್ವಾಹಕವನ್ನು ಕುರಿತುನ್ನೂ ನಡವಳಿಕೆಯನ್ನು ಕುರಿತುನ್ನೂ ಷಹರಿನಲ್ಲಿ ಕ್ರಮವನ್ನು ಮತ್ತು ಪರಿಶುದ್ಧತೆಯನ್ನು ಕಾಪಾಡುವದನ್ನು ಕುರಿತುನ್ನೂ ಈ ಕಾನೂನಿನ ವುದ್ದೇಶ್ಯಗಳಲ್ಲಿ ಯಾವದನ್ನಾದರೂ ನೆರವೇರಿಸುವದನ್ನು ಕುರಿತುನ್ನೂ ಯಿದರಲ್ಲಿ ಯಿನ್ನೂ ಮುಂದೆ ನಮೂದು ಮಾಡಲ್ಪಟ್ಟಿರುವಂತೆ ಕಾಯಂ ಪಡಿಸಲ್ಪಡುವದಕ್ಕೆ ಒಳಪಟ್ಟು ಆಗಿಂದಾಗ್ಯೆ ಬೈಲಾಸ್ ಯೆಂಬ ಉಪ ನಿಬಂಧನೆಗಳನ್ನು ಮಾಡುವದಕ್ಕೂ ಅವುಗಳನ್ನು ರದ್ದು ಮಾಡುವದಕ್ಕೂ ಬದಲಾಯಿಸುವದಕ್ಕೂ ಮತ್ತು ತಿದ್ದುಪಾಟು ಮಾಡುವದಕ್ಕೂ ಅಧಿಕಾರ ವುಂಟಾಗಿರತಕ್ಕದ್ದು. ಆದರೆ ಅಂತಾ ಯಾವ ಉಪ ನಿಬಂಧನೆಯನ್ನೂ ಜಾರಿಯಲ್ಲಿರುವ ಯಾವದಾದರೂ ಕಾನೂನಿಗೆ ವಿರೋಧವಾಗಿರಕೂಡದು. ಅಂಥಾ ಉಪ ನಿಬಂಧನೆಗೆ ಯಾವದಾದರೂ ಒಂದು ಭಂಗವನ್ನು ಉಂಟುಮಾಡಿದ್ದಕ್ಕೆ ವಿಧಿಸಲ್ಪಡುವ ಯಾವ ಜುರ್ಮಾನೆಯೂ ಯಿಪ್ಪತ್ತು ರೂಪಾಯಿಗಳಿಗೆ ಹೆಚ್ಚಾಗಕೂಡದು. ಮತ್ತು ನಿರಂತರ ಭಂಗವನ್ನು ಉಂಟುಮಾಡುತ್ತಾ ಯಿದ್ದ ಪಕ್ಷದಲ್ಲಿ ಅದಕ್ಕಾಗಿ ವಿಧಿಸಲ್ಪಡುವ ಜುರ್ಮಾನೆಯು ಅಂಥಾ ಭಂಗವನ್ನು ಕುರಿತು ಪ್ರೆಸಿಡೆಂಟರವರಿಂದ ನೋಟಿಸ ಮಾಡಲ್ಪಟ್ಟ ತರುವಾಯ ಪ್ರತಿದಿನಕ್ಕೂ ಹತ್ತು ರೂಪಾಯಿಗಳಿಗೆ ಮಿಂಚಕೂಡದು.

ಉಪ ನಿಬಂಧನೆಗಳು ಖಾಯಂ ಮಾಡಲ್ಪಡತಕ್ಕದ್ದು.

226. ಉಪ ನಿಬಂಧನೆಯಾಗಲಿ ಉಪ ನಿಬಂಧನೆಯಲ್ಲಿ ಮಾಡಲ್ಪಡುವ ಬದಲಾವಣೆಯಾಗಲಿ ಅದು ಮೈಸೂರ್ ಮಹಾರಾಜಾ ಸರ್ಕಾರದವರಿಂದ ಕಾಯಂ ಮಾಡಲ್ಪಡುವವರಿಗೂ ಜಾರೀಲಿ ಬರಕೂಡದು.

ಕಾಯಂ ಪಡಿಸುವದನ್ನು ಕುರಿತು ನೋಟಿಸು.

227. ಯಾವ ಉಪ ನಿಬಂಧನೆಯಾದರೂ ಉಪ ನಿಬಂಧನೆಯಲ್ಲಿ ಮಾಡಲ್ಪಡುವ ಬದಲಾವಣೆಯಾದರೂ ಅದು ಮೈಸೂರ್ ಗೆಜೆಟ ಪತ್ರಿಕೆಯಲ್ಲಿ ಅಥವಪಕ್ಷ ಐದುಸಾರಿ ಪ್ರಚುರ ಮಾಡಲ್ಪಡುವವರಿಗಾಗಲಿ ಮೊದಲ್ ಸಾರಿ ಅದು ಪ್ರಸಿದ್ಧಪಡಿಸಲ್ಪಡುವ ತಾರೀಖು ಲಾಗಾಯತು ಒಂದು ತಿಂಗಳು ಗತಿಸುವವರಿಗಾಗಲಿ ಕಾಯಂ ಮಾಡಲ್ಪಡಕೂಡದು. ಅಂಥಾ ಕಾಲದಲ್ಲಿ ಅಂಥಾ ಉದ್ದೇಶಿಸಲ್ಪಟ್ಟ ಉಪ ನಿಬಂಧನೆಯ ಒಂದು ನಕಲು ಕಮ್ಮಿಷನರ್‌ಗಳ ಆಫಿಸಿನಲ್ಲಿ ಯಿಡಲ್ಪಡತಕ್ಕದ್ದೇ ಅಲ್ಲದೆ ದರೋಬಸ್ತು ಜನರನ್ನೂ ರುಸುಮು ಆಗಲಿ ಯಿನಾಮು ಆಗಲಿ ಕೊಡದೇಲೇ ಅಂಥಾ ನಕಲನ್ನು ಬೆಳಗ್ಯೆ ಹನ್ನೊಂದುಘಂಟೆ ಲಾಗಾಯತು ಸಾಯಂಕಾಲ ಐದು ಘಂಟೆಗಳ ವಳಗಾಗಿ ಯಾವ ಕಾಲದಲ್ಲಾದರೂ ವೋದಿ ನೋಡಿಕೊಳ್ಳಬಹುದು.

ಉಪ ನಿಬಂಧನೆಗಳನ್ನು ಪ್ರಚುರಪಡಿಸುವಿಕೆ.

228. ಅಂಥಾ ಉಪ ನಿಬಂಧನೆಗಳು ಕಾಯಂ ಪಡಿಸಲ್ಪಟ್ಟ ನಂತರ ಇಂಗ್ಲೀಷು, ಕನ್ನಡ, ಅರವ ಮತ್ತು ಹಿಂದುಸ್ತಾನೀ ಈ ಭಾಷೆಗಳಲ್ಲಿ ಮೈಸೂರು ಗೆಜೆಟ ಪತ್ರಿಕೆಯಲ್ಲಿ ಪ್ರಚುರ ಮಾಡಲ್ಪಡತಕ್ಕದ್ದು. ಮತ್ತು ಅವುಗಳ ನಕಲುಗಳು ಹಲಿಗೆಗಳ ಮೇಲೆ ರಂಗಿನಿಂದ ಬರಿಸಲ್ಪಟ್ಟು ಕಮ್ಮಿಷನರ್‌ಗಳ ಆಫಿಸಿನಲ್ಲಿ ಯಲ್ಲರಿಗೂ ಬಹಿರಂಗವಾಗಿ ಕಾಣಿಸುವ ಯಾವದಾದರೂ ವೊಂದು ಭಾಗದಲ್ಲಿ ನೇತಾಡ ಕಟ್ಟಲ್ಪಡತಕ್ಕದ್ದು.

ಉಪ ನಿಬಂಧನೆಗಳು ನ್ಯಾಯಶಾಸ್ತ್ರ ಸಂಬಂಧವಾದವುಗಳಾಗಿರುವಂತೆ ಅಂಗೀಕರಿಸಲ್ಪಡತಕ್ಕದ್ದು.

229. ದರೋಬಸ್ತು ಕೋರ್ಟುಗಳವರುನ್ನೂ ಮಾಜಿಸ್ಟ್ರೇಟರುನ್ನೂ ಅಂತಾ ಉಪ ನಿಬಂಧನೆಗಳು ಮೇಲೆ ಹೇಳಲ್ಪಟ್ಟ ಪ್ರಕಾರ ಕಾಯಂ ಮಾಡಲ್ಪಟ್ಟು ಪ್ರಚುರ ಮಾಡಲ್ಪಟ್ಟ ನಂತರ ಅವು ನ್ಯಾಯಶಾಸ್ತ್ರ ಸಂಬಂಧವಾದ ಅಧಿಕಾರ ವುಂಟಾಗಿರುವವುಗಳಾಗಿ ಅಂಗೀಕರಿಸತಕ್ಕದ್ದು.

230. ಈ ಕಾನೂನಿನ ಮೇರಿಗೆ ಮಾಡಲ್ಪಟ್ಟ ದರೋಬಸ್ತು ಉಪ ನಿಬಂಧನೆಗಳನ್ನೂ ಮತ್ತು ಈ ಕಾನೂನು ಅಮಲ್‌ನಲ್ಲಿ ಬರುವ ಕಾಲದಲ್ಲಿ ಜಾರೀಲಿರುವ ದರೋಬಸ್ತು ನಿಬಂಧನೆಗಳನ್ನೂ ಈ ಕಾನೂನನ್ನು ಅನುಸರಿಸಿ ಮಾಡಲ್ಪಟ್ಟಂತೆ ಭಾವಿಸಲ್ಪಡತಕ್ಕದ್ದು.

ಹಾಲೀಯಿರುವ ಉಪನಿಬಂಧನೆಗಳು ರದ್ದು ಮಾಡುವ ವರಿವಿಗೂ ಜಾರೀಲಿ ಯಿದ್ದು ಕೊಂಡಿರತಕ್ಕದ್ದು.

ಸಾಧಾರಣ ನಿಬಂಧನೆಗಳು.

231. ಕಮ್ಮಿಷನರುಗಳು, ಯಾವ ತಕ್ಸೀರುಗಳನ್ನು ಕುರಿತು ಈ ಕಾನೂನಿನ ಮೇರಿಗೆ ಯಾಗಲಿ ಈ ಕಾನೂನನ್ನು ಅನುಸರಿಸಿ ಮಾಡಲ್ಪಡುವ ಯಾವದಾದರೂ ಉಪ ನಿಬಂಧನೆಗಳ ಮೇರಿಗೆ ಯಾಗಲಿ ಯಾವದಾದರೂ ಜುರ್ಮಾನೆ ವಿಧಿಸಲ್ಪಡುತದೋ ಅಂತಾ ಆಯಾಯ ತಕ್ಸೀರುಗಳನ್ನೂ ಕುರಿತುನ್ನೂ ಅಂಥಾ ಪ್ರತಿ ಜುರ್ಮಾನೆಯ ಮೊಬಲಗನ್ನೂ ಕುರಿತುನ್ನೂ ಸಂಕ್ಷೇಪವಾದ ವಿವರಗಳನ್ನು ಪ್ರಚುರಮಾಡಿ ಅಂಥಾ ವಿವರಗಳನ್ನು ಇಂಗ್ಲೀಷು, ಅರವ, ಕನ್ನಡ, ಹಿಂದುಸ್ತಾನಿ ಈ ಭಾಷೆಗಳಲ್ಲಿ ಹಲಿಗೆಗಳ ಮೇಲೆ ರಂಗಿನಿಂದ ಬರೆಶಿ ಅಥವಾ (ಕಾಗದಗಳಲ್ಲಿ ಬರೆಶಿ) ಅಂಟಿಶಿ ಅವುಗಳು ಕಮ್ಮಿಷನರುಗಳ ಆಫೀಸಿನಲ್ಲಿ ಸಕಲರಿಗೂ ಬಹಿರಂಗವಾಗಿ ಕಾಣಿಸುವ ಯವಾವದಾದರೂ ಒಂದು ಭಾಗದಲ್ಲಿ ನೇತಾಡಕಟ್ಟಿಸಲ್ಪಡತಕ್ಕದ್ದು.

ಜುರ್ಮಾನೆಗಳನ್ನು ಕುರಿತು ಪ್ರಕಟನೆ.

232. ಕಮ್ಮಿಷನರಗಳು ತೆರಿಗೆ ಹಾಕಲ್ಪಡುವದಕ್ಕಾಗಲಿ ರಿಜಿಸ್ಟರ್ಮಾಡಲ್ಪಡುವದಕ್ಕಾಗಲಿ ತನಿಖೀ ಮಾಡಲ್ಪಡುವದಕ್ಕಾಗಲಿ ಅರ್ಹವಾದಂಥಾ ಅಥವಾ ಈ ಕಾನೂನುಗಳನ್ನು ಅನುಸರಿಸಿ ಲೈಸೆನ್ಸ್ ಎಂಬ ಅಪ್ಪಣೆ ಕೊಡಲ್ಪಡಬೇಕಾದಂಥಾ ಅಥವಾ ಯಾವದರ ವಿಷಯವಾಗಿ ಯೇನಾದಗೂ ಕೆಲಸ ಮಾಡುವದಕ್ಕೆ ಯಾ ಯಾವದಾದರೂ ಹುಕ್ಕುಂ ಮಾಡುವದಕ್ಕೆ ಅವರಿಗೆ ಅಧಿಕಾರ ಉಂಟುಮಾಡಲ್ಪಟ್ಟಿರುವಂಥಾ ಯಾವದಾದರೂ ಸ್ಥಳದ ಸ್ವಾಂತಗಾರನು ಯಾ ಸ್ವಾಧೀನಗಾರನನ್ನಾಗಲಿ, ತೆರಿಗೆ ಹಾಕಲ್ಪಡುವದಕ್ಕೆ ಯಾ ರಿಜಿಸ್ಟರ್ ಮಾಡಲ್ಪಡುವದಕ್ಕೆ ಅರ್ಹವಾದ ಯಾವದಾದರೂ ವಸ್ತುವಿನ ಅಥವಾ ಜಂತುವಿನ ಸ್ವಾಂತಗಾರನನ್ನಾಗಲಿ ಅಂಥಾ ಸ್ವಾಂತಗಾರನ ಯಾ ಸ್ವಾಧೀನಗಾರನ ಯೇಜಂಟ ಯೆಂಬ ಗುಮಾಸ್ತನನ್ನು ಅಥವಾ ನವುಕರನನ್ನಾಗಲಿ ಸರ್ವ್ಮ ಮಾಡುವದಕ್ಕುನ್ನೂ ಆತನನ್ನು ತನಿಖೀ ಮಾಡುವದಕ್ಕುನ್ನೂ ಅಥವಾ ಈ ಕಾನೂನುಗಳ ಕಾರ್ಯಗಳಗಾಗಿ ಯಾವದನ್ನು ಕುರಿತು ವರ್ತಮಾನವನ್ನು ತಿಳಿದುಕೊಳ್ಳಬೇಕೆಂದು ಅವರು ಕೋರುತ್ತಾರೋ ಅಂತಾ ಸ್ಥಳದೊಂದಿಗೆ ಯಾ ವಸ್ತುವಿನೊಂದಿಗೆ ಯಾ ಜಂತುವಿನೊಂದಿಗೆ ಸಂಬಂಧಪಟ್ಟ ಯಾವದಾದರೂ ಒಂದು ವಿಷಯವಾಗಿ ಒಂದು ಸಂಗತಿಯನ್ನು ಬರಹದಲ್ಲಿ ತಯಾರು ಮಾಡಿಕೊಡುವಂತೆ ಆತನನ್ನು ಅಪೇಕ್ಷಿಸುವದಕ್ಕುನ್ನೂ ಅಧಿಕಾರ ವುಂಟಾಗಿ ಇರತಕ್ಕದ್ದು.

ತೆರಿಗೆ ಹಾಕಲ್ಪಡುವದು ವಗೈರೇದಕ್ಕೆ ಅರ್ಹವಾದ ಮನುಷ್ಯರನ್ನು ಸರ್ಮ ಮಾಡುವದಕ್ಕೆ ಅಧಿಕಾರ.

233. ಕಮ್ಮಿಷನರುಗಳುನ್ನೂ ಅವರ ವುದ್ಯೋಗಸ್ಥರುನ್ನೂ ಮತ್ತು ನವುಕರರುನ್ನೂ ತೆರಿಗೆ ಹಾಕಲ್ಪಡುವದಕ್ಕೆ ಯಾ ರಿಜಿಸ್ಟರ್ ಮಾಡಲ್ಪವದಕ್ಕೆ ಯಾ ತನಿಖೀ ಮಾಡಲ್ಪಡುವದಕ್ಕೆ ಅರ್ಹವಾದಂಥಾ ಅಥವಾ ಈ ಕಾನೂನನುಸರಿಸಿ ಲೈಸೆನ್ಸ್ ಯೆಂಬ ಅಪ್ಪಣೆ ಕೊಡಲ್ಪಡಬೇಕಾದಂಥಾ ಯಾವದಾದರೂ ಸ್ಥಳವನ್ನು, ಜಂತುವನ್ನು, ಅಥವಾ ವಸ್ತುವನ್ನಾದರೂ, ಕಮ್ಮಿಷನರುಗಳಿಂದ ನೀರಾಗಲಿ ಅಥವಾ ಗ್ಯಾಸ್ ಯೆಂಬ ಹೊಗೆಯಾಗಲಿ ಸರಬರಾಯಿ ಮಾಡಲ್ಪಟ್ಟಿರುವ ಅಥವಾ ಯಾವದರ ಮಾರ್ಗವಾಗಿ ನೀರು ಅಥವಾ ಗ್ಯಾಸ್ ಯೆಂಬ ಹೊಗೆಯ ನಲ್ಲಿಗಳು (ಕೊಳವಿ)ಗಳು ಹಾದಿವಿಯೋ ಅಂತಾ ಯಾವ ಸ್ಥಳವನ್ನಾದರೂ ತನಿಖೀ ಮಾಡುವದಕ್ಕಾಗಲಿ ಯಾವದಾದರೂ ಆಳತೆಮಾಡುವದಕ್ಕಾಗಲಿ ಅಥವಾ ಯಾವದಾದರೂ ಕಾಮಗಾರಿಯನ್ನು ನಡಿಸುವದಕ್ಕೆ ಯಾ ದುರಸ್ತು ಮಾಡುವದಕ್ಕೆ ಯಾ ತನಿಖೀ ಮಾಡುವದಕ್ಕಾಗಲಿ ಕಮ್ಮಿಷನರುಗಳಿಂದ ಮಾಡಲ್ಪಡತಕ್ಕದ್ದೆಂದು ಈ ಕಾನೂನಿನ ದೆಶೆಯಿಂದ ಅಧಿಕಾರ ಕೊಡಲ್ಪಟ್ಟ ಇತರ ಯಾವ ಕಾರ್ಯವನ್ನಾದರೂ ಮಾಡುವದಕ್ಕಾಗಲಿ ಯಾವದಾದರೂ ಜಮೀನಿನ ಅಥವಾ ಕಟ್ಟಣದ ಮೇಲೆ ಯಾ ಒಳಕ್ಕೆ ಸೂರ್ಯೋದಯಕ್ಕುನ್ನೂ ಸೂರ್ಯಾಸ್ತಮಯಕ್ಕುನ್ನೂ ಮಧ್ಯೆ ಯಾವ ಕಾಲದಲ್ಲಾದರೂ ಪ್ರವೇಶಿಸುವದಕ್ಕೆ ಅಧಿಕಾರ ವುಂಟಾಗಿರತಕ್ಕದ್ದು. ಆದರೆ ಕಮ್ಮಿಷನರುಗಳುನ್ನೂ ಅವರ ವುದ್ಯೋಗಸ್ಥರುನ್ನೂ ನವುಕರರುನ್ನೂ ಮನೆಯ ಒಳಕ್ಕೆ ಪ್ರವೇಶ ಮಾಡಬೇಕೆಂಬ ತಮ್ಮ ವುದ್ದೇಶ್ಯವನ್ನು ಮನೆಯ ಸ್ವಾಧೀನಗಾರನಿಗೆ ಆರು ಘಂಟೆಗಳಿಗೆ ಮುಂಚೆ ತಿಳಿಸದೆ ಅವರು ಯಾರಾದರೂ ಹೆಂಗಸು ವಾಸವಾಗಿ ಇರುವ ಯಾವದಾದರೂ ಕೊಠಡೀ ಒಳಕ್ಕೆ ಆ ಹೆಂಗಸಿನ ಸಮ್ಮತೀ ವಿನಹ ಪ್ರವೇಶಿಸಕೂಡದು.

ಸ್ಥಳಗಳು, ವಸ್ತುಗಳು, ಅಥವಾ ಜಂತುವುಗಳು, ಇವುಗಳನ್ನು ತನಿಖೀ ಮಾಡುವದಕ್ಕೆ ಅಧಿಕಾರ.

ಮ್ಯುನಿಸಿಪೆಲ್ ಆಫೀಸರಗಳು ತಮ್ಮ ಕೆಲಸವನ್ನು ನಡಸುವದರಲ್ಲಿ ಆಟಂಕ ಮಾಡಿದರೆ ಜುರ್ಮಾನೆ.

234. ಯಾರಾದರೂ ನ್ಯಾಯವಾದ ಸಬಬು ಯಿಲ್ಲದೆ ಕಮ್ಮಿಷನರುಗಳನ್ನಾಗಲಿ ಅವರ ತರಫ್ ಉದ್ಯೋಗಸ್ಥರ ಪೈಕಿ ಯಾ ಇಂಡಿಯನ್ ಪೆನೆಲ್ ಕೋಡಿನ 21ನೇ ಸೆಕ್ಷನಿನ ಭಾವಕ್ಕೆ ಅನುಸರಿಸಿ ಪಬ್ಲಿಕ್ ಸರ್ವೆಂಟಗಳಲ್ಲದ ನವುಕರರ ಪೈಕಿ ಯಾರನ್ನಾಗಲಿ ಕಮ್ಮಿಷನರಗಳಿಂದ ಮಾಡಲ್ಪಡತಕ್ಕದ್ದೆಂದು ಈ ಕಾನೂನಿನಿಂದ ಅಧಿಕಾರ ಕೊಡಲ್ಪಟ್ಟ ಯಾವದಾದರೂ ಕಾರ್ಯವನ್ನು ನಡಿಸುವದರಲ್ಲಿ ಆಟಂಕ ಮಾಡಿದರೂ ತೊಂದರೆ ಮಾಡಿದರೂ ಅಡ್ಡಿಮಾಡಿದಗೂ ಇನ್ನೂರು ರೂಪಾಯಿಗಳಿಗೆ ಮೀರದ ಜುರ್ಮಾನೆಗೆ ಪಾತ್ರನಾಗತಕ್ಕದ್ದು.

ಸಮನ್ಸ ವಗೈರೆಗಳ ಸಾದರಾತಿ.

235. ಯಾವ ಮನುಷ್ಯನಿಗಾಗಲಿ ಸಾದರು ಮಾಡಲ್ಪಡತಕ್ಕದ್ದೆಂದು ಈ ಕಾನೂನುಗಳ ದೆಶೆಯಿಂದ ಅಪೇಕ್ಷಿಸಲ್ಪಟ್ಟ ಯಾ ಅಧಿಕಾರ ಕೊಡಲ್ಪಟ್ಟ ಪ್ರತಿ ಬಿಲ್‌ಯೆಂಬ ಲೆಕ್ಕದ ಚೀಟಿ ಷೆಡ್ಯೂಲ್ ಯೆಂಬ ಪಟ್ಟಿ, ನೋಟಿಸ್ ಅಥವಾ ಸಮನು ಯಾರ ಹೆಸರಿಗೆ ಅದು ಬರೆಯಲ್ಪಟ್ಟಿಧೆಯೋ ಅಂಥಾ ಮನುಷ್ಯನಿಗೆ ಸಾಧ್ಯವಾದರೆ ಖುದ್ದಾಗಿ ಸಾದರ್ಮಾಡಲ್ಪಡತಕ್ಕದ್ದು. ಆ ಮನುಷ್ಯನು ಶಿಕ್ಕದೇ ಹೋದರೆ ಅದು ಅವನ ಸಂಗಡ ವಾಸಮಾಡುವ ಅವನ ಕುಟುಂಬದ ಪೈಕಿ ಪ್ರಾಯಸ್ಥನಾದ ಯಾರಾದರೂ ಗಂಡಸಿಗೆ ಸಾದರ್ಮಾಡಬಹುದು. ಆದರೆ ಅವನ ಕುಟುಂಬದ ಪೈಕಿ ಅಂತಾವನು ಶಿಕ್ಕದೆ ಯಿದ್ದರೆ ಅಂಥಾ ಬಿಲ್, ಷೆಡ್ಯೂಲ್ ಯೆಂಬ ಪಟ್ಟಿ, ನೋಟಿಸ್ ಅಥವಾ ಸಮ್ಮನು ಅಂಥಾ ಮನುಷ್ಯನು ಕಡೇಸಾರಿ ವಾಸವಾಗಿದ್ದ ಮನೆಯ ಯಾವದಾದರೂ ಬಹಿರಂಗವಾದ ವೊಂದು ಭಾಗದಲ್ಲಿ ಅಂಟಿಸಲ್ಪಟ್ಟರೆ ಅದು ಕ್ರಮವಾಗಿ ಸಾದರ್ ಮಾಡಲ್ಪಟ್ಟಿತೆಂದು ಯೆಣಿಸಲ್ಪಡತಕ್ಕದ್ದು. ಆದರೆ ಅಂಥಾ ಮನುಷ್ಯನು ವಾಸವಾಗಿರುವ ಸ್ಥಳವು ಪ್ರೆಸಿಡೆಂಟರಿಗೆ ತಿಳಿದು ಇದ್ದು ಅದು ಮ್ಯುನಿಸಿಪೆಲ್ ಸರಹದ್ದುಗಳಿಗೆ ಹೊರಗೆ ಇದ್ದರೆ ಪ್ರೆಸಿಡೆಂಟರು ಅಂಥಾ ಬಿಲ್ಲಿನ ಷೆಡ್ಯೂಲ್ ಯೆಂಬ ಪಟ್ಟಿಯ, ನೋಟೀಸಿನ ಅಥವಾ ಸಮನಿನ ಒಂದು ನಕಲನ್ನು ಅಂತಾ ಮನುಷ್ಯನಿಗೆ ಅಂತಾ ಸ್ಥಳಕ್ಕೆ ಅಂಚೆ ಮೂಲಕ ಕಳುಹಿಸತಕ್ಕದ್ದು. ಹಾಗೆ ಅಂಚೆ ಮೂಲಕ ಕಳುಹಿಸಲ್ಪಟ್ಟ ಯಾವದಾದರೂ ಬಿಲ್, ಷೆಡ್ಯೂಲ್‌ಪಟ್ಟಿ, ನೋಟಿಸ ಅಥವಾ ಸಮನು ಕ್ರಮವಾಗಿ ಜಾರೀ ಆದ ಹಾಗೆ ಯೆಣಿಸಲ್ಪಡತಕ್ಕದ್ದು.

ಕಮ್ಮಿಷನರಗಳು ಫಿರ್ಯಾದುಗಳನ್ನು ನಡಿಸುವಂತೆ ಮಾಡಬಹುದು.

236. ಕಮ್ಮಿಷನರಗಳು ಜನೋಪದ್ರವಕರವಾಗಿರುವ ಯಾವ ಕಾರ್ಯವನ್ನ ಕುರಿತಾದರೂ ಫಿರ್ಯಾದು ನಡಿಸಲ್ಪಡುವಂತೆ ಮಾಡುವದೇ ಅಲ್ಲದೆ ಯಾವದಾದರೂ ಜುರ್ಮಾನೆಗಳನ್ನು ವಸೂಲ್ ಮಾಡುವದಕ್ಕನ್ನೂ ಈ ಕಾನೂನಿನನಿ ಬಂಧನೆಗಳಿಗೆ ವಿರೋಧವಾಗಿ ತಪ್ಪಿತ ಮಾಡುವ ಯಾವ ಮನುಷ್ಯರನ್ನಾದರೂ ಶಿಕ್ಷಿಸುವದಕ್ಕನ್ನೂ ನಡವಳಿತಗಳು ನಡಿಸಲ್ಪಡುವಂತೆ ಹುಕ್ಕುಂ ಮಾಡಬಹುದು. ಮೇಲಾಗಿ ಪ್ರತಿವಾದಿಗೆ ವಿರೋಧವಾಗಿ ಫೈಸಲ್ ಮಾಡ್ಲಪಟ್ಟ ಪಕ್ಷವಲ್ಲಿ ಮಾಜೆಸ್ಟ್ರೇಟರು ಕಮ್ಮಿಷನರುಗಳ ಖರ್ಚುಗಳು ಪೂರಾವಾಗಿ ಅವರಿಗೆ ಕೊಡಿಸುವಂತೆ ಫೈಸಲ್ ಮಾಡಬಹುದು, ಆದರೆ, ತಪ್ಪಿತ ಸ್ಥಾಪನೆ ಆಗದೆ ಹೋದ ಪಕ್ಷದಲ್ಲಿ ಮಾಜೆಸ್ಟ್ರೇಟರು ಪ್ರತಿವಾದಿಗೆ ಕೊಡಲ್ಪಡುವಂತೆ ಫೈಸಲ್ ಮಾಡುವ ದಣವನ್ನೂ ಅಂತಾ ಫಿರ್ಯಾದಿನ ನಡವಳಿತದ ಅಥವಾ ಯಿತರ ನಡವಳಿತದ ಖರ್ಚುಗಳುನ್ನೂ ಮ್ಯುನಿಸಿಪೆಲ್ ಹಣದಿಂದ ಸಲ್ಲಿಸಲ್ಪಡತಕ್ಕದ್ದು ಆದರೆ ಈ ಸೆಕ್ಷನಿನಲ್ಲಿ ಯಿರುವ ಯಾವದನ್ನೂ ಯಾವ ಮನುಷ್ಯನಾದರೂ ಯೇನಾದರೂ ವುಪದ್ರವವನ್ನು ಕುರಿತು ಮತ್ತೊಬ್ಬ ಮನುಷ್ಯನ ಮೇಲೆ ಬಾಹಾಟವಾಗಿ ವ್ಯಾಜ್ಯವನ್ನು ತಾರದೆ ಆಟಂಕ ಪಡಿಸುವ ಹಾಗೆ ಗ್ರಹಿಸಲ್ಪಡಕೂಡದು.

ಕಾಮನ್ ಲಾ ಯೆಂಬ ಸಾಧಾರಣ ಧರ್ಮ ಶಾಸ್ತ್ರ ಪ್ರಕಾರ ವುಪದ್ರವಕಾರಿಯಾಗಿ ಇರುವಂತೆ ಭಾವಿಸಲ್ಪಡತಕ್ಕದ್ದಾಗಿ ಯಿರುವ ಯಾವದಕ್ಕನ್ನೂ ಈ ಕಾನೂನು ಹಾನಿಕರವಾಗಿ ಯಿರಕೂಡದು.

237. ಈ ಕಾನೂನಿನಲ್ಲಿ ಯಿರುವದು ಯಾವದನ್ನೂ ವುಪದ್ರಕರವಾಗಿ ಯಿರುವ ಅಥವಾ ಈ ಕಾನೂನು ಹುಟ್ಟದ ಪಕ್ಷದಲ್ಲಿ ಧರ್ಮ ಶಾಸ್ತ್ರದ ಮೇರಿಗೆ ವುಪದ್ರಕರವಾಗಿ ಯಿರುವಂತೆ ಯೆಣಿಸಲ್ಪಡುವಂಥಾದ್ದಾಗಿಯೂ ಮತ್ತು ಯಾವ ಮನುಷ್ಯನಾದರೂ ಮಾಡಿದಂಥಾದ್ದಾಗಿಯೂ ಯಿರುವ ಯಾವದಾದರೂ ಕಾರ್ಯವನ್ನು ಅಥವಾ ಮಾಡದೆ ತಪ್ಪಿ ಹೋದದ್ದುನ್ನೂ ನ್ಯಾಯಪಡಿಸುವಹಾಗಾಗಲಿ ವುಪದ್ರವಕರವಾದ ಕಾರ್ಯವನ್ನು ಮಾಡಿದಂತೆ (ಭಾವಿಸಲ್ಪಡತಕ್ಕ) ಯಾವ ಮನುಷ್ಯನ ಮೇಲಾದರೂ ಅದನ್ನು ಕುರಿತ ದಾವೆಯು ವಿಚಾರಣೆ ಮಾಡಲ್ಪಡದೇ ಅಥವಾ ವ್ಯಾಜ್ಯ ತರಲ್ಪಡದೇ ವಿನಾಯಿತಿ ಮಾಡುವದಾಗಿಯಾಗಲಿ ಗ್ರಹಿಸಲ್ಪಡಕೂಡದು.

ವ್ಯಾಜ್ಯವನ್ನು ತರುವದಕ್ಕಾಗಿ ಇರುವ ಕಾರಣವನ್ನು ಕುರಿತು ನೋಟಿಸ ಕೊಟ್ಟ ನಂತರ

238. ಕಮ್ಮಿಷನರುಗಳ ಮೇಲಾಗಲಿ ಅವರ ಆಫೀಸರಗಳಲ್ಲಿ ಯಾವ ಮನುಷ್ಯನ ಮೇಲಾಗಲಿ ಕಮ್ಮಿಷನರುಗಳ ಹುಕುಂ ಪ್ರಕಾರ ಪ್ರವರ್ತಿಸುತ್ತಿರುವ ಯಾವ ಮನುಷ್ಯನ ಮೇಲಾಗಲಿ ಈ ಕಾನೂನಿನ ದೆಶೆಯಿಂದ ಉಂಟು ಮಾಡಲ್ಪಟ್ಟ ಅಧಿಕಾರ

ವೊಂದು ತಿಂಗಳು ಆಗುವವರಿವಿಗೂ ಕಮ್ಮಿಷನರಗಳ ಮೇಲಾಗಲಿ ಅವರ ಆಫಿಸರಗಳ ಮೇಲಾಗಲಿ ವ್ಯಾಜ್ಯ ತರಲ್ಪಡಕೂಡದು.

ಗಳನ್ನು ಅನುಸರಿಸಿ ಮಾಡಲ್ಪಡುವಂತೆ ವುದ್ದೇಶಿಸಲ್ಪಟ್ಟ ಯಾವದನ್ನು ಕುರಿತಾದಾದರೂ ವ್ಯಾಜ್ಯಕಾರಣವು ವಾದಿಯಾಗಹೋಗುವ ಮನುಷ್ಯನ ಮತ್ತು ಆ ವ್ಯಾಜ್ಯದಲ್ಲಿ ಆತನ ಅಟರ್ನಿಯ ಅಥವಾ ಯೇಜಂಟಿನ ಹೆಸರೂ ವಾಸಸ್ಥಳವೂ ಸ್ಪಷ್ಟವಾಗಿ ಬರಿಯಲ್ಪಟ್ಟಿರುವ ಲಿಖಿತರೂಪಕವಾದ ನೋಟಿಸು ಕಮ್ಮಿಷರುಗಳ ಆಫಿಸಿನಲ್ಲಾಗಲಿ ಅಂಥಾ ಮನುಷ್ಯನ ವಾಸಸ್ಥಳದಲ್ಲಿಯಾಗಲಿ ವೊಪ್ಪಿಸಲ್ಪಟ್ಟ ಅಥವಾ ಯಿಟ್ಟು ಬಿಡಲ್ಪಟ್ಟ ನಂತರ ವೊಂದು ತಿಂಗಳು ಕಳೆಯುವ ವರಿಗೂ ಯಾವ ವ್ಯಾಜ್ಯವನ್ನೂ ತರಲ್ಪಡಕೂಡದು, ಮೇಲಾಗಿ, ಅಂಥಾ ವ್ಯಾಜ್ಯವು ವಿಚಾರಣೆ ಮಾಡಲ್ಪಡುವ ಕಾಲದಲ್ಲಿ ಹಾಗೆ ವೊಪ್ಪಿಸಲ್ಪಟ್ಟ ನೋಟಿಸಿನಲ್ಲಿ ನಮೂದು ಮಾಡಲ್ಪಟ್ಟಿರುವ ವ್ಯಾಜ್ಯ ಕಾರಣ ವಿನಾ ಯಾವ ವಾಜ್ಯ ಕಾರಣವನ್ನು ಕುರಿತಾಗಲಿ ವಾದಿಯು ಸಾಕ್ಷ್ಯವನ್ನು ತರುವದಕ್ಕೆ ಅಪ್ಪಣೆ ಕೊಡಲ್ಪಡಕೂಡದು. ಮತ್ತು ಅಂಥಾ ನೋಟಿಸಿನಲ್ಲಿಯು ಸಂಗತಿಗಳನ್ನು ಕುರಿತು ರುಜಾ ಆಗದೇ ಹೋದರೆ ಕೋರ್ಟಿನವರು ಪ್ರತಿವಾದಿ ಪಕ್ಷವಾಗಿ ತೀರ್ಪು ಮಾಡತಕ್ಕದ್ದು. ಅಂಥಾ ಪ್ರತಿ ವ್ಯಾಜ್ಯವನ್ನೂ ವ್ಯಾಜ್ಯ ಕಾರಣ ಹುಟ್ಟಿದ ತರುವಾಯ ಆ ಮೇಲೆ ಬರುವ ಮೂರು ತಿಂಗಳಗೆ ವಳಗಾಗಿ ಪ್ರಾರಂಭಿಸಲ್ಪಡತಕ್ಕದ್ದೇ ಹೊರ್ತು ಆ ತರುವಾಯ ಕೂಡದು ಯಿದಲ್ಲದೆ ಅಂಥಾ ವ್ಯಾಜ್ಯ ಕಾರಣವನ್ನು ಕುರಿತ ನೋಟಿಸ ಕೊಡಲ್ಪಟ್ಟ ಯಾವ ಮನುಷ್ಯನಾದರೂ ವ್ಯಾಜ್ಯವು ತರಲ್ಪಡುವದಕ್ಕೆ ಮುಂಚಿತವಾಗಿಯೇ ವಾದಿಗೆ ಸಾಕಾದಷ್ಟು ಪರಿಹಾರಗಳು ವುಂಟುಮಾಡುತ್ತೇನೆಂದು ಹೇಳದ ಪಕ್ಷದಲ್ಲಿ ಅಂಥಾ ವಾದಿಯು ಅಂಥಾ ವ್ಯಾಜ್ಯವನ್ನು ತಂದ ಮೇಲೆ ಅದರಲ್ಲಿ ಯಾಪದನ್ನೂ ಬರಮಾಡಿಕೊಳ್ಳಲಾರನು. ಹಾಗೆ ವುಂಟುಮಾಡುತ್ತೇನೆಂದು ಹೇಳಲ್ಪಡದ ಪಕ್ಷದಲ್ಲಿ ಅಂಥಾ ವ್ಯಾಜ್ಯದಲ್ಲಿ ಪ್ರತಿವಾದಿಯು ಅಂಥಾ ವ್ಯಾಜ್ಯವು ಜರಗುತ್ತಿರುವ ಕೋರ್ಟಿನವರ ಅಪ್ಪಣೆ ಮೇಲೆ ವಿಚಾರಣೆಯ ಆರಂಭಕ್ಕೆ ಮುಂಚೆ ತನಗೆ ಯುಕ್ತವೆಂದು ತೋರುವಷ್ಟು ಹಣದ ಮೊಬಲಗನ್ನು ಕೋರ್ಟಿನಲ್ಲಿ ಸಲ್ಲಿಸುವದು ನ್ಯಾಯ ಶಾಸ್ತ್ರ ಸಮ್ಮತವಾಗಿರತಕ್ಕದ್ದು, ಆ ಮೇಲೆ ಪ್ರತಿವಾದಿಗಳು ಕೋರ್ಟಿನಲ್ಲಿ ಹಣವನ್ನು ಸಲ್ಲಿಸುವಂತೆ ಅಪ್ಪಣೆ ಕೊಡಲ್ಪಡುವ ಯಿತರ ಸಂಗತಿಗಳಲ್ಲಿ ಹ್ಯಾಗೋ ಅದೇ ನಡವಳಿತ ನಡಿಸಲ್ಪಡತಕ್ಕದ್ದು.

ಮ್ಯುನಿಸಿಪಲ್ ಸ್ವತ್ತಿನ ವಳಗಿನಿಂದ ಕಂಪೆನ್ಸೇಷನ್ ಎಂಬ ಪರಿಹಾರ ದ್ರವ್ಯವನ್ನು ಕೊಡುವದಕ್ಕೆ ಅಧಿಕಾರ.

239. ಈ ಕಾನೂನಿನ ಆಧಾರದ ಮೇಲೂ, ಅಧಿಕಾರದ ಮೇಲೂ ಕಮ್ಮಿಷನರಗಳು ಅವರ ಆಫಿಸರಗಳು ಅಥವಾ ನವುಕರರು ಇವರುಗಳಲ್ಲಿ ಇಡಲ್ಪಟ್ಟ ಯಾವದಾದರೂ ಅಧಿಕಾರಗಳನ್ನು ಚಲಾಯಿಸುವದರ ದೆಶೆಯಿಂದ ಯೇನಾದರೂ ನಷ್ಟವನ್ನು ಹೊಂದುವ ದರೋಬಸ್ತು ಮನುಷ್ಯರಿಗೂ ಮ್ಯುನಿಸಿಪಲ್ ಸ್ವತ್ತಿನೊಳಗಿನಿಂದ ಕಮ್ಮಿಷನರಗಳು ವೊಂದು ಸಭೆಯಲ್ಲಿ ತಮ್ಮಿಂಗ ಆ ಅಭಿಪ್ರಾಯಕ್ಕೆ ತೀರ್ಮಾನಿಸಲ್ಪಟ್ಟದ್ದರ ಮೇಲೆ, ಕಂಪೆನ್ಸೇಷನ್ ಯೆಂಬ ಪರಿಹಾರ ದ್ರವ್ಯವನ್ನು ಕೊಡಬಹುದು.

ಲೈಸೆನ್ಸ್ ವಗೈರೇಗಳನ್ನು ಕೊಡುವದಕ್ಕೆ ರುಸುಮುಗಳು.

240. ಈ ಕಾನೂನಿನ 137, 179, 185, ಅಥವಾ 191, ಈ ಸೆಕ್ಷನ್‌ಗಳ ನಿಬಂಧನೆಗಳನ್ನನುಸರಿಸಿ ಅವುಗಳಲ್ಲಿ ವಿವರಿಸಲ್ಪಟ್ಟಿರುವ ಕಾರ್ಯಗಳಲ್ಲಿ ಯಾವ ಬಗ್ಯಾದರೂ ಯಾವದಾದರೂ ಸ್ಥಳವನ್ನು ಉಪಯೋಗಿಸಿಕೊಳ್ಳುವ ಹಾಗೆ ಅಧಿಕಾರವನ್ನುಂಟು ಮಾಡುವ ಯಾವದಾದರೂ ಲೈಸೆನ್ಸ್ ಕೊಡುವ ಕಾಲದಲ್ಲಿ ಅಥವಾ ರಿಜಿಸ್ಟರ ಮಾಡುವ ಕಾಲದಲ್ಲಿ ಅಥವಾ ಯಾವದಾದರೂ ಹಂಗಾಮಿಯಾಗಿ ಕಟ್ಟುವ ನಿಮಿತ್ಯ 113ನೇ ಸೆಕ್ಷನ್ನನುಸರಿಸಿಯಾಗಲಿ ಯಾವದಾದರೂ ಮುಂದಕ್ಕೆ ದಬಾಯಿಸಿ ಬರುವ ಹಾಗೆ ಕಟ್ಟುವ ನಿಮಿತ್ಯ 128ನೇ ಸೆಕ್ಷನ್ನನುಸರಿಸಿಯಾಗಲಿ ಅಪ್ಪಣೆಯನ್ನು ಕೊಡುವ ಕಾಲದಲ್ಲಿ, ಕಮ್ಮಿಷನರಗಳು ಅಂಥಾ ಲೈಸೆನ್ಸಿಗೋಸ್ಕರವಾಗಿಯಾಗಲಿ ರಿಜಿಸ್ಟರ್ ಮಾಡುವದಕ್ಕೆಯಾಗಲಿ ಅಪ್ಪಣೆ ಕೊಡುವದಕ್ಕೋಸ್ಕರವಾಗಿಯಾಗಲಿ ರುಸುಂ ತೆಗದುಕೊಳ್ಳಬಹುದು. ಈ ಪ್ರಕಾರ ತೆಗದುಕೊಳ್ಳಲ್ಪಡಬೇಕಾದ ರುಸುಂಗಳ ದರಗಳು ಮೈಸೂರು ಮಹಾರಾಜಾ ಸರ್ಕಾರದವರ ಅಂಗೀಕಾರವನ್ನು ಹೊಂದಿ ಕಮ್ಮಿಷನರಗಳ ದೆಶೆಯಿಂದ ಆಗಿಂದಾಗ್ಯೆ ಫೈಸಲ್ಮಾಡತಕ್ಕದ್ದು. ಆದರೆ ಅಂತಾ ರುಸುಮು ನೂರು ರೂಪಾಯಿಗಳಗೆ ಮೀರಕೂಡದು. 175 ಮತ್ತು 177 ಈ ಸೆಕ್ಷನುಗಳನುಸರಿಸಿ ಕಮ್ಮಿಷನರುಗಳ ಇಲಾಖಾ ಯಾವದಾದಗೂ ಭೂಮಿಯನ್ನು ಹಂಗಾಮಿಯಾಗಿ ಇಟ್ಟುಕೊಳ್ಳುವದಕ್ಕೆ, ಅಪ್ಪಣೆಯನ್ನಾಗಲಿ ಲೈಸೆನ್ಸನ್ನಾಗಲಿ ಕೊಡುವ ಕಾಲದಲ್ಲಿ ಅದು ಎಷ್ಟು ಕಾಲದವರಿಗೆ ಸ್ವಾಧೀನದಲ್ಲಿಟ್ಟುಕೊಳ್ಳಲ್ಪಡುತ್ತದೆಯೋ ಅಷ್ಟಕ್ಕೆ ತಕ್ಕಹಾಗೆ ಅಂತಾ ಭೂಮಿಗೆ ಕಮ್ಮಿಷನರುಗಳು ಬಾಡಿಗೆಯನ್ನು ತೆಗದುಕೋಬಹುದು. ಇದರಿಂದ ರದ್ದು ಮಾಡಲ್ಪಟ್ಟ ಯಾವ ಕಾನೂನನ್ನಾಗಲಿ ಅನುಸರಿಸಿ ಕೊಡಲ್ಪಟ್ಟ ಯೆಲ್ಲಾ ಲೈಸೆನ್ಸಗಳೂ ಅಪ್ಪಣೆಗಳು ಅಥವಾ ರಿಜಿಸ್ಟ್ರೇಷನ್‌ಗಳೂ ವೂರ್ಜಿತವಾಗತಕ್ಕದ್ದು. ಮತ್ತು ಈ ಕಾನೂನಿನ ಕಾರ್ಯಗಳಿಗೋಸ್ಕರ ಜಾರಿಯಲ್ಲಿರತಕ್ಕದ್ದು.

ನಷ್ಟಗಳನ್ನು ಖರ್ಚುಗಳನ್ನು ಯಾವ ಪ್ರಕಾರ ನಿಶ್ಚಯಿಸತಕ್ಕದ್ದು.

241. ಯಾವದಾದರೂ ನಷ್ಟಗಳು ಅಥವಾ ಖರ್ಚುಗಳು ಈ ಕಾನೂನನುಸರಿಸಿ ಸಲ್ಲಿಸಲ್ಪಡುವ ಹಾಗೆ ನಿಶ್ಚಯಿಸಲ್ಪಟ್ಟು ದರೋಬಸ್ತು ಸಂಗತಿಗಳಲ್ಲಿಯೂ ಅವುಗಳ ಮೊಬಲಗು, ವಿವಾದ ಸಂಭವಿಸಿದ ಪಕ್ಷದಲ್ಲಿ ಸಿವಿಲ ಕೋರ್ಟಿನವರ ದೆಸೆಯಿಂದ ವಿಚಾರಿಸಲ್ಪಟ್ಟು ನಿಶ್ಚಯಿಸಲ್ಪಡತಕ್ಕದ್ದು.

ಸಿವಿಲ ಕೋರ್ಟಿನ ಮುಂದೆ ನಡವಳಿತ ನಡಿಸತಕ್ಕ ಪದ್ಧತಿ.

242. ಇದಕ್ಕೆ ಪೂರ್ವದ ಸೆಕ್ಷನಿನ ನಿಬಂಧನೆಗಳನ್ನನುಸರಿಸಿ ಸಿವಿಲ ಕೋರ್ಟಿಗೆ (ವಿಚಾರಣೆ ಬಗ್ಗೆ) ಕಳುಹಿಸಲ್ಪಟ್ಟ ಯಾವ ಸಂಗತಿಯಲ್ಲಾದರೂ ಯಾವ ಕಕ್ಷಿಗಾರನೇ ಆಗಲಿ ಹೇಳಿಕೊಂಡನಂತರ ಸಮನುಗಳಲ್ಲಿ ನಮೂದ್ಮಾಡಲ್ಪಡುವ ಕಾಲದಲ್ಲಿಯೂ ಸ್ಥಳದಲ್ಲಿಯೂ ಎದುರು ಕಕ್ಷಿಗಾರನು ತಮ್ಮ ಮುಂದೆ ಹಾಜರಾಗುವ ಹಾಗೆ ಸಮನು ಮಾಡುವದಕ್ಕೆ ಸದರೀ ಕೋರ್ಟಿನವರಿಗೆ ಅಧಿಕಾರ ವುಂಟಾಗಿರತಕ್ಕದ್ದು. ಅಂತಾ ಪ್ರತಿ ಸಮನನ್ನೂ ಸಮ್ಮನು ಮಾಡಲ್ಪಡುವ ಮಷ್ಯನಿಗೆ ಅಸಲಾಗಲಿ, ಅದರ ನಕಲಾಗಲಿ ಪಾವತಿ ಮಾಡುವದರ ದೆಸೆಯಿಂದಲಾಗಲಿ ಅದನ್ನು ಆ ಮನುಷ್ಯನು ಸಾಧಾರಣವಾಗಿ ವಾಸ ಮಾಡುವ ಅಥವಾ ಆಖೈರಿಗೆ ವಾಸ ಮಾಡಿದ ಹಾಗೆ ತಿಳಿಯಲ್ಪಡುವ ಸ್ಥಳದಲ್ಲಿರುವ ಆ ಮನುಷ್ಯನ ಕುಟುಂಬದ ಇಲಾಖಾ ವಯಸ್ಸು ಬಂದ ಮನುಷ್ಯನ ಬಳೀಲಿ ಅಥವಾ ನವುಕರನ ಬಳೀಲಿ ಇಟ್ಟು ಬಿಡುವದರ ದೆಸೆಯಿಂದಲಾಗಲಿ ಪಾವತಿ ಮಾಡತಕ್ಕದ್ದು. ಕಕ್ಷಿಗಾರರು ಹಾಜರಾದ ಮೇಲಾಗಲಿ ಅವರಲ್ಲಿ ಯಾರಾದರೂ ಗೈರಹಾಜರಾದ ಪಕ್ಷದಲ್ಲಿ ಸಮ್ಮನ್ ಕ್ರಮವಾಗಿ ಜಾರೀ ಮಾಡಲ್ಪಟ್ಟ ಹಾಗೆ ರುಜು ಮಾಡಲ್ಪಟ್ಟ ಮೇಲಾಗಲಿ ಅಂತಾ ಕೋರ್ಟಿನವರು ಆ ಸಂಗತಿ ವಿಮರ್ಶೆ ಮಾಡಿ ನಿಶ್ಚಯಿಸುವದಕ್ಕೆ ಅಥವಾ ಆ ಬಗ್ಗೆ ಆ ಕಕ್ಷಿಗಾರರನ್ನು ಅಥವಾ ಅವರುಗಳಲ್ಲಿ ಯಾರನ್ನಾದರುನ್ನು ಅವರ ಸಾಕ್ಷಿಗಳನ್ನು ಪ್ರಮಾಣದ ಮೇಲೆ ವಿಮರ್ಶೆ ಮಾಡುವದಕ್ಕೆ ಅಧಿಕಾರ ಉಂಟಾಗಿರತಕ್ಕದ್ದು. ಇದಲ್ಲದೆ ಅಂತಾ ಪ್ರತಿ ವಿಚಾರಣೆಯ ಬಾಬತು ಖರ್ಚುಗಳನ್ನು ಕುರಿತು ಸದರೀ ಕೋರ್ಟಿಗೆ ಯುಕ್ತವೆಂದು ತೋರುವ ಪ್ರಕಾರ ಆ ಬಾಬತು ಮೊಬಲಗು ಇಷು ಮಾತ್ರವೆಂದು ಆ ಕೋರ್ಟಿನವರು ನಿಶ್ಚಯಿಸತಕ್ಕದ್ದು.

ಜಫ್ತಿ ಮಾಡುವದರ ದೆಸೆಯಿಂದ ನಷ್ಟವನ್ನು ಬರೆಮಾಡಿಕೊಳ್ಳುವಿಕೆ.

243. ಮೇಲೆ ವಿವರಿಸುವ ಪ್ರಕಾರ ವಿಚಾರಣೆ ಮಾಡಿ ಗೊತ್ತು ಮಾಡಲ್ಪಟ್ಟ ನಷ್ಟಗಳು ಮುಟ್ಟುವಳಿಗಳು ಅಥವಾ ಖರ್ಚುಗಳು ಈ ಬಾಬತು ಮೊಬಲಗನ್ನು ಕೊಡಬೇಕಾದ ಕಕ್ಷಿಗಾರನು ಕೇಳಲ್ಪಟ್ಟ ತರುವಾಯ ಏಳು ದಿನಗಳೊಳಗೆ ಸಲ್ಲಿಸದ ಪಕ್ಷದಲ್ಲಿ ಅಂತಾ ಮೊಬಲಗು ಅಂತಾ ಮಾಜಿಸ್ಟ್ರೇಟರುಗಳಲ್ಲಿ ಒಬ್ಬರ ವಾರಂಟಿನ ಮೇಲೆ ಅಂತಾ ಕಕ್ಷಿಗಾರನ ಸಾಮಾನುಗಳು ಅಥವಾ ಅಜಬಾಬುಗಳು ಜಫ್ತಿ ಮಾಡಿ ವಿಕ್ರಯಿಸುವದರ ದೆಸೆಯಿಂದ ವಸೂಲ್ಮಾಡಿಕೊಳ್ಳಲ್ಪಡಬಹುದು. ಇದಲ್ಲದೆ ಅವುಗಳನ್ನು ವಿಕ್ರಯಿಸುವದರ ದೆಸೆಯಿಂದ ಬಂದ ಹಣ ಅಂತಾ ಮೊಬಲಗಿಗೆ ಅಥವಾ ಜಫ್ತಿ ಮಾಡಿ ವಿಕ್ರಯಿಸುವದಕ್ಕೆ ಮುಟ್ಟುವಳಿ ಆದ ಖರ್ಚುಗಳಿಗೆ ಸಹ ಪಾವತಿ ಆದ ತರುವಾಯ ಮಿಕ್ಕ ಪಕ್ಷದಲ್ಲಿ ಯಾರ ಸಾಮಾನುಗಳು ಜಫ್ತಿ ಮಾಡಲ್ಪಟ್ಟವೋ ಆ ಕಕ್ಷಿಗಾರನು ಹನ್ನೆರಡು ತಿಂಗಳುಗಳೊಳಗೆ ಕೇಳಿದ ಪಕ್ಷದಲ್ಲಿ ಮಾತ್ರ ಅವನಿಗೆ ವಾಪಸು ಮಾಡಲ್ಪಡತಕ್ಕದ್ದೇ ಹೊರ್ತು ಅನ್ಯಥಾ ಕೂಡದು.

ಕಮ್ಮಿಷನರುಗಳು ಜಫ್ತಿ ದೆಸೆಯಿಂದ ಹಣವನ್ನು ಬರಮಾಡಿಕೊಳ್ಳುವದಕ್ಕೆ ಬದಲಾಗಿಯಾಗಲಿ ಜಫ್ತಿ ದೆಸೆಯಿಂದ ಹಣ ಬಾರದ ಪಕ್ಷದಲ್ಲಿಯಾಗಲಿ ಯುಕ್ತವಾದ ಯಾವ ಕೋರ್ಟಿನಲ್ಲಿಯಾದರೂ ದಾವೇ ತರಬಹುದು.

244. ಕಮ್ಮಿಷನರಗಳು ಈ ಕಾನೂನಿನ ನಿಬಂಧನೆಗಳನ್ನನುಸರಿಸಿ ವಿಧಿಸಲ್ಪಟ್ಟ ಯಾವದಾದರೂ ಖರ್ಚುಗಳು ಅಥವಾ ಮುಟ್ಟುವಳಿಗಳು ಅಥವಾ ನಷ್ಟಗಳು ಇವುಗಳು ಪೂರಾನೇ ಆಗಲಿ ಇವುಗಳಲ್ಲಿ ಯಾವದಾದರೂ ಭಾಗವಾಗಲಿ ಜಫ್ತಿ ಮೂಲಕವೂ ವಿಕ್ರಯದ ಮೂಲಕವೂ ನಡವಳಿತ ನಡಿಸುವದಕ್ಕೆ ಬದಲಾಗಿಯಾಗಲಿ ಜಫ್ತಿ ಮಾಡುವದರ ಮೂಲಕ ಬರಮಾಡಿಕೊಳ್ಳುವದಕ್ಕೆ ತಪ್ಪಿಹೋದ ಪಕ್ಷದಲ್ಲಿಯಾಗಲಿ ಅವುಗಳನ್ನು ಕೊಡುವದಕ್ಕೆ ಅರ್ಹನಾಗಿರುವ ಮನುಷ್ಯನ ಮೇಲೆ ಯುಕ್ತವಾದ ಅಧಿಕಾರವುಳ್ಳ ಯಾವ ಕೋರ್ಟಿನಲ್ಲಾಗಲಿ ದಾವೇ ದಾಖಲ್ ಮಾಡಬಹುದು.

ಜುರ್ಮಾನೆಗಳನ್ನು ಅಪರಾಧಗಳನ್ನು ಬರಮಾಡಿ ಕೊಳ್ಳುವಿಕೆ.

245. ಈ ಕಾನೂನಿಗೆ ಅನುಸಾರವಾಗಿ (ತರಲ್ಪಡುವ) ಪ್ರತಿ ಫಿರ್ಯಾದುನ್ನೂ ಇತರ ವಿಧವಾಗಿ ನಿಬಂಧಿಸಲ್ಪಡದ ಸಂಗತಿಗಳಲ್ಲಿ, ತಪ್ಪಿತವು ಮಾಡಲ್ಪಟ್ಟ ಸ್ಥಳದಲ್ಲಿ ಅಧಿಕಾರವುಳ್ಳಂಥಾ ಮತ್ತು ಪೂರಾ ಅಧಿಕಾರವುಳ್ಳಂಥಾ ಮಾಜಿಸ್ಟ್ರೇಟರ ಮುಂದೆ ತರಲ್ಪಡತಕ್ಕದ್ದು. ಈ ಕಾನೂನಿನ ಮೇರಿಗೆಯಾಗಲಿ ಜಾರೀಲಿರುವ ಯಾವದಾದರೂ ಬೈಲಾಸ ಯೆಂಬ ಉಪನಿಬಂಧನೆಗಳ ಮೇರಿಗೆಯಾಗಲಿ ವಿಧಿಸಲ್ಪಡಬಹುದಾದ ಯಾವದಾ

ದರೂ ಜುರ್ಮಾನೆ ಯಾ ಅಪರಾಧವು ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 307ನೇ ಸೆಕಷನಿನಿಂದ ನಿಬಂಧನೆ ಮಾಡಲ್ಪಟ್ಟ ರೀತಿಯಲ್ಲಿ ವಸೂಲ್ಮಾಡಲ್ಪಡಬಹುದು.

ಜುರ್ಮಾನೆಗಳನ್ನೂ ಅಪರಾಧಗಳನ್ನೂ ಹ್ಯಾಗೆ ವಿನಿಯೋಗಪಡಿಸತಕ್ಕದ್ದು.

246. ಈ ಕಾನೂನಿನ ಬಲವನ್ನು ಹಿಡಿದು ಯಾವದಾದರೂ ಜುರ್ಮಾನೆ ಅಥವಾ ಅಪರಾಧವನ್ನು ವಿಧಿಸಿದ ಮಾಜಿಸ್ಟ್ರೇಟರು ಅದರಲ್ಲಿ ಅರ್ಧಕ್ಕಿಂತ ಹೆಚ್ಚಾಗಿ ಯಿರದ ಯಾವ ಭಾಗವನ್ನಾಗಲಿ ವರ್ತಮಾನವನ್ನು ತಿಳಿಯಮಾಡಿದ ಮನುಷ್ಯನಿಗೆ ಕೊಡಿಸಿ ಶೇಷಿಸಿರುವ ಭಾಗವನ್ನಾಗಲಿ ವರ್ತಮಾನವನ್ನು ತಿಳಿಯಮಾಡಿದ ಮನುಷ್ಯನಿಗೆ ಯೇನನ್ನೂ ಕೊಡಿಸದ ಪಕ್ಷದಲ್ಲಿ ಅಂತಾ ಜುರ್ಮಾನೆ ಯಾ ಅಪರಾಧ ಪೂರಾವಾಗಿಯಾಗಲಿ ಈ ಕಾನೂನಿನ ಸಂಬಂಧವಾದ ಕಾರ್ಯಗಳಿಗೋಸ್ಕರ ಕಮಿಷನರ್‌ಗಳ ದೆಸೆಯಿಂದ ವಿನಿಯೋಗಪಡಿಸಲ್ಪಡತಕ್ಕದ್ದಕ್ಕೆ ಅವರುಗಳಿಗೆ ಸಲ್ಲಿಸಲ್ಪಡುವಹಾಗೆ ಹುಕುಂ ಮಾಡತಕ್ಕದ್ದು.

ತಕ್ಕೀರು ಮಾಡಲ್ಪಟ್ಟ ಮೇಲೆ 3 ತಿಂಗಳೊಳಗೆ ಫಿರ್ಯಾದನ್ನು ಮಾಡದ ಪಕ್ಷದಲ್ಲಿ ಯಾವ ಮನುಷ್ಯನಾದರೂ ಜುರ್ಮಾನೆಗೆ ಆಗಲಿ ಅಪರಾಧಕ್ಕೆ ಆಗಲಿ ಪಾತ್ರನಾಗಕೂಡದು.

247. ಯಾವ ಮನುಷ್ಯನಾಗಲಿ ಯಾವದಾದರೂ ತಕ್ಕೀರನ್ನು ಕುರಿತ ಫಿರ್ಯಾದ್ ಅಂತಾ ತಕ್ಕೀರು ನಡಿಸಲ್ಪಟ್ಟ ಮೇಲೆ ಅವ್ಯವಹಿತವಾಗಿ ಬರುವ ಮೂರು ತಿಂಗಳುಗಳವಳಗಾಗಿ ಒಬ್ಬ ಮಾಜಿಸ್ಟ್ರೇಟರ ಮುಂದೆ ಮಾಡಲ್ಪಡದ ಪಕ್ಷದಲ್ಲಿ ಮಾಜಿಸ್ಟ್ರೇಟರ ಮುಂದೆ ವಿಚಾರಿಸಲ್ಪಡತಕ್ಕದ್ದಾಗಿರುವ ಅಂತಾ ತಕ್ಕೀರಿಗೋಸ್ಕರ ಈ ಕಾನೂನನ್ನನುಸರಿಸಿ ಜುರ್ಮಾನೆಗಾಗಲಿ ಅಪರಾಧಕ್ಕಾಗಲಿ ಪಾತ್ರನಾಗಕೂಡದು.

ಕಮಿಷನರುಗಳ ಸ್ವತ್ತಿಗೆ (ವುಂಟುಮಾಡಿದ) ನಷ್ಟವನ್ನು ಜುರ್ಮಾನೆಯು ಕೂಡಾ ಭರ್ತೀ ಮಾಡಲ್ಪಡತಕ್ಕದ್ದು.

